ರಂಜನೆ ಬೋಧನೆ ಪ್ರಚೋದನೆ

ಲಂಕೇಶ್

13 ಮೇ 2015 ಪುಟ 20 ರೂ. 15/-



ಮಧು ಲಿಂಗಾಂತರಿ ಮೇಯರ್


BBMP



ಜಾಹಿರಾತು ಮಾಫಿಯಾದ ಅಟ್ಟಹಾಸ

ಯೋಗೇಂದ್ರ ಯಾದವ್

ರವಸೆ ಬಿತ್ತುವಿಕೆ ಂದು ದುರಂತ



ಾಯಚೂರು

ಪೀಡೆ ೊಲಗಿತು

ಕುಮಟಾ

ಟಿಕೆಟ್ ತುರುಸು

ಬೆಳಗಾವಿ

ಭ್ರಷ್ಟನಿಗೆ ಭಡ್ತಿ ಗಿಫ್ಟ್!



ರಂಗಣ್ಣನಿಗೆ ಕಿಮ್ಮನೆ ಪತ್ರ



2015ರ ಮೇ ದಿನ: ಕಾರ್ಮಿಕರು ಹಿಂದೆ ಬೀಳುತ್ತಿದ್ದಾರ




ಇದನ್ನು ಬರೆಯುತ್ತಿರುವುದು ಏಪ್ರಿಲ್ 30ರಂದು. ಇದಕ್ಕೆ ಒಂದು ದಿನ ಹಿಂದೆ ಬೆಂಗಳೂರಿನಲ್ಲಿ ಸ್ವರಾಜ್ ಸಂವಾದ ನಡೆದಿದೆ. ರೈತ ಹಾಗೂ ಪ್ರಗತಿಪರ ಸಂಘಟನೆಗಳು ಭಾಗವಹಿಸಿದ್ದರೂ, ಪ್ರಧಾನವಾಗಿ ಮಧ್ಯಮ ವರ್ಗದ ಹಿನ್ನೆಲೆಯ, ದೇಶದ ಬಗ್ಗೆ ಕಾಳಜಿ ಹೊಂದಿರುವ ಕ್ರಿಯಾಶೀಲ ಕಾರ್ಯಕರ್ತರು ಅದರ ಮುಂಚೂಣಿಯಲ್ಲಿದ್ದರು. ಅದಕ್ಕೂ ಒಂದು ದಿನ ಹಿಂದೆ ಭೂಸ್ವಾಧೀನ ಕಾಯ್ದೆಯ ವಿರುದ್ಧ ಬೆಂಗಳೂರಿನಲ್ಲಿ ಭಾರೀ ದೊಡ್ಡ ರ‍್ಯಾಲಿ ಮತ್ತು ಸಮಾವೇಶ ನಡೆದಿದೆ. ಅದರಲ್ಲೂ ರೈತಸಂಘ ಹಾಗೂ ದಲಿತ ಸಂಘಟನೆಗಳು ಪಾಲ್ಗೊಂಡಿದ್ದವು. ಆದರೆ, ಮುಖ್ಯವಾದ ಪಾತ್ರ ಸಿಪಿಎಂ ಪಕ್ಷದ್ದಾಗಿತ್ತು. ಹಾಗಾಗಿ ಅದು ಸಂಘಟಿಸುತ್ತಿರುವ ಕಾರ್ಮಿಕ ಸಮುದಾಯವೂ ಒಂದು ಮಟ್ಟಿಗೆ ಪಾಲ್ಗೊಂಡಿರುವ ಸಾಧ್ಯತೆ ಇದೆ. ಆದರೂ, ಅದು ಪ್ರಧಾನವಾಗಿ ರೈತಾಪಿ ಸಮುದಾಯದ ಕಾರ್ಯಕ್ರಮವಾಗಿತ್ತು. ಎರಡೂ ಕಾರ್ಯಕ್ರಮಗಳೂ ಅಪಾರವಾದ ಯಶಸ್ಸನ್ನು ಗಳಿಸಿದ ಕಾರ್ಯಕ್ರಮಗಳು.

ಈ ಲೇಖನ ಬರೆಯುತ್ತಿರುವ ಮರುದಿನ ಕಾರ್ಮಿಕ ದಿನವಾಗಿದೆ. ಮೇ 1ರಂದು ಪ್ರಪಂಚದಾದ್ಯಂತ ಆಚರಿಸಲ್ಪಡುವ ಮೇ ದಿನದ ಕಾರ್ಯಕ್ರಮವು ಕರ್ನಾಟಕದಲ್ಲೂ ಸಾಕಷ್ಟು ಕಡೆ ನಡೆಯುವುದು ನಿಶ್ಚಿತ. ಹಲವೆಡೆ ಮಾಮೂಲಿನ ವಾರ್ಷಿಕ ಕಾರ್ಯಕ್ರಮವಾಗಿ, ಕೆಲವೆಡೆ ವಿಶಿಷ್ಟವಾದ ರೀತಿಯಲ್ಲಿ ನಡೆಯಬಹುದು. ಒಟ್ಟಾರೆ ರಾಜ್ಯದೆಲ್ಲೆಡೆ ನಡೆಯುವ ಕಾರ್ಮಿಕ ದಿನಾಚರಣೆ ಕಾರ್ಯಕ್ರಮಗಳನ್ನು ಗಮನಿಸಿದ ನಂತರ ಇವೆಲ್ಲದರ ಪರಿಣಾಮದ ಕುರಿತು ಅಂತಿಮ ಅಭಿಪ್ರಾಯಕ್ಕೆ ಬರಬಹುದು. ಹಾಗಿದ್ದೂ ಈ ಹಂತದಲ್ಲಿಯೇ ಒಂದು ಮುಂದಂದಾಜು ಮಾಡುವುದು ಕಷ್ಟವಲ್ಲ. ಈ ವರ್ಷದ ಮೇ ದಿನವು ಹೊಸ ಶತಮಾನದ ಕಾರ್ಮಿಕ ಚಳವಳಿಯ ದೃಷ್ಟಿಯಿಂದ ತಿರುವು ಬಿಂದುವೇನೂ ಆಗಲಾರದು!

ಒಂದು ನಿರ್ದಿಷ್ಟ ವಿದ್ಯಮಾನದ ಹಿನ್ನೆಲೆಯಲ್ಲಿ ಈ ಮಾತನ್ನು ಹೇಳಬೇಕಿದೆ. 'ಅಚ್ಛೇ ದಿನ್'ನ ಕೆಟ್ಟ ಕಾಲದಲ್ಲಿರುವ ಈ ಸಂದರ್ಭದಲ್ಲಿಯೇ ದೇಶಾದ್ಯಂತ ಜನರು (ಯುವಕರನ್ನೂ ಒಳಗೊಂಡಂತೆ) ಹೆಚ್ಚೆಚ್ಚು ಸಾಮಾಜಿಕವಾಗಿ ಕ್ರಿಯಾಶೀಲರಾಗುವುದೂ ನಡೆಯುತ್ತಿದೆ. ವಿವಿಧ ಧಾರೆಗಳ ಸಂಘಟನೆಗಳ ಕಾರ್ಯಕ್ರಮಗಳು (ಸಾಪೇಕ್ಷವಾಗಿ) ಸುಲಭವಾಗಿ ಯಶಸ್ವಿಯಾಗುತ್ತಿವೆ. ಪಾದಯಾತ್ರೆಗಳು, ಜಾಥಾಗಳು ಯಶಸ್ವಿಯಾಗುತ್ತಿವೆ. ಬಂಡವಾಳಶಾಹಿ ಜಾಗತೀಕರಣವು ಜನರನ್ನು, ಯುವಜನರನ್ನು ಬಿಡಿ ಬಿಡಿ ಲಾಲಸಿ ವ್ಯಕ್ತಿಗಳನ್ನಾಗಿ ಪರಿವರ್ತಿಸಿದೆ ಎಂಬುದು ಸುಳ್ಳೇನೂ ಅಲ್ಲ, ಅದೇ ಪ್ರಧಾನವಾದ ಪ್ರವಾಹವಾಗಿದೆ. ಅದರ ಜೊತೆಗೆ ಇದೇ ಸಮುದಾಯ ಹೆಚ್ಚೆಚ್ಚು ಕೋಮುವಾದಿಯೂ ಆಗುತ್ತಿದೆ. ಆದರೆ, ಇದಕ್ಕೆ ವಿರುದ್ಧವಾದ, ಸಕಾರಾತ್ಮಕ ಚೈತನ್ಯವನ್ನು ಹೊಂದಿರುವ ಕಿರು ಧಾರೆಯೂ ಆರಂಭವಾಗಿದೆ. ಅದರ ಪರಿಣಾಮವಾಗಿ ಸಾಮಾಜಿಕ ಮತ್ತು ರಾಜಕೀಯ ಕ್ರಿಯಾಶೀಲತೆಯ ಕಾರ್ಯಕ್ರಮಗಳೂ ಹೆಚ್ಚಾಗುತ್ತಿವೆ. ಸಾಂದರ್ಭಿಕ ಯಶಸ್ಸನ್ನೂ ಪಡೆಯುತ್ತಿವೆ.

ಇದರ ಪ್ರತ್ಯಕ್ಷ ಮತ್ತು ಪರೋಕ್ಷ ಪರಿಣಾಮ ವಿವಿಧ ಜನಪರ ಸಂಘಟನೆಗಳ ನಾಯಕತ್ವದ ಮೇಲೂ ಆಗುತ್ತಿದೆ. ಎಲ್ಲರೂ ಪರಸ್ಪರ ಬೆರೆಯುವುದು ಹೆಚ್ಚಾಗುತ್ತಿದೆ; ಪರಸ್ಪರ ಕಾಲೆಳೆಯುವುದು ಕಡಿಮೆಯಾಗುತ್ತಿದೆ. ಐಕ್ಯ ಕಾರ್ಯಕ್ರಮಗಳು ಹೆಚ್ಚಾಗುತ್ತಿವೆ. ವಿಷಯಾಧಾರಿತ ಒಕ್ಕೂಟಗಳು ಮಾತ್ರವಲ್ಲದೇ, 'ಒಂದಾಗುವ ನಿಟ್ಟಿನಲ್ಲಿ' ಕೆಲಸ ಮಾಡುವ ಆಶಯದೊಂದಿಗೆ ಸಂಘಟನೆಗಳೂ ಜೊತೆ ಸೇರುತ್ತಿವೆ. ಐದು ದೊಡ್ಡ ದಲಿತ ಸಂಘಟನೆಗಳು ಕೆಲವು ದಿನಗಳ ಹಿಂದೆ ರಚಿಸಿಕೊಂಡ 'ದಲಿತ ಸಂಘಟನೆಗಳ ಒಕ್ಕೂಟ' ಅಂತಹದೊಂದು ಸಕಾರಾತ್ಮಕ ಬೆಳವಣಿಗೆ. ದೇಶ ಮಟ್ಟದಲ್ಲೂ ವಿವಿಧ ಸಣ್ಣ ಪುಟ್ಟ ಎಡಪಂಥೀಯ ಪಕ್ಷಗಳು ಒಂದಾಗುವ ಮಾತುಕತೆ ನಡೆಸಿದೆ. ಬದನವಾಳು ಸತ್ಯಾಗ್ರಹ ಮತ್ತು ಸ್ವರಾಜ್ ಸಂವಾದದಲ್ಲಿ ವಿವಿಧ ಧಾರೆಗಳ ಪ್ರಗತಿಪರರು ಒಟ್ಟಿಗೆ ಕೂತು ಚರ್ಚಿಸಿದ್ದಾರೆ. ಏಪ್ರಿಲ್ 28ರ ಭೂಸ್ವಾಧೀನ ಕಾಯ್ದೆಯ ವಿರುದ್ಧದ ಬೆಂಗಳೂರಿನ ಬೃಹತ್ ಕಾರ್ಯಕ್ರಮವೂ ಹಲವು ಸಂಘಟನೆಗಳ ಜಂಟಿ ಬ್ಯಾನರ್‌ನಡಿಯೇ ನಡೆಯಿತು.

ಈಗಲೇ ಇದನ್ನು ಈ ಕಾಲಧರ್ಮವೆಂದು ಷರಾ ಬರೆಯುವುದು ಆತುರವಾಗಬಹುದಾದರೂ, 'ಟ್ರೆಂಡ್' ಈ ಕಡೆಗೇ ಇದೆ. ಆದರೆ ಕಾರ್ಮಿಕ ಸಂಘಟನೆಗಳಲ್ಲಿ ಹೊಸ ಟ್ರೆಂಡ್ ಏನೂ ಕಾಣುತ್ತಿಲ್ಲ. ಹಾಗೆ ನೋಡಿದರೆ, ವಿಷಯಾಧಾರಿತವಾಗಿ ಒಂದಾಗಿ ಹೋರಾಡುವ ಪರಂಪರೆ ಕಾರ್ಮಿಕ ಸಂಘಟನೆಗಳ ವಿಚಾರದಲ್ಲಿ ಹಳೆಯದು. ಎಲ್ಲಾ ಕಾರ್ಮಿಕ ಸಂಘಟನೆಗಳೂ ಒಟ್ಟು ಸೇರಿ ಸಾರ್ವತ್ರಿಕ ಮುಷ್ಕರಕ್ಕೆ ಕರೆ ನೀಡುವುದು ಹೊಸತೇನಲ್ಲ. ವಿಶೇಷವಾಗಿ ಕೆಎಸ್‌ಆರ್‌ಟಿಸಿ ಕಾರ್ಮಿಕರು ಕೆಲ ಕಾಲದ ಹಿಂದೆ ಅಭೂತಪೂರ್ವ ಐಕ್ಯತೆ ಪ್ರದರ್ಶಿಸಿ ಮುಷ್ಕರವನ್ನು ಯಶಸ್ವಿಗೊಳಿಸಿದ್ದು ಇನ್ನೂ ಹಸಿರಾಗಿದೆ. ಆಟೋ ಚಾಲಕರ ಮುಷ್ಕರದ ಸಂದರ್ಭದಲ್ಲೂ ಹೀಗೆಯೇ ಆಗಿತ್ತು. ಕೆಲವೊಮ್ಮೆ ಆರೆಸ್ಸೆಸ್‌ನ ಅಂಗಸಂಘಟನೆಯಾದ ಬಿಎಂಎಸ್ ಸಹಾ ಉಳಿದ ಎಡಪಂಥೀಯ ಕಾರ್ಮಿಕ ಸಂಘಟನೆಗಳ ಜೊತೆ ಸೇರಿ ಹೋರಾಟ ಮಾಡಿರುವುದು ಇದೆ. ತೀರಾ ಈಚೆಗೆ ಕಾರ್ಮಿಕ ಕಾಯ್ದೆ ತಿದ್ದುಪಡಿಗಳ ವಿರುದ್ಧವೂ ಹೆಚ್ಚಿನ ಸಂಘಟನೆಗಳು ಒಟ್ಟಾಗಿ ಕಾರ್ಯಕ್ರಮ ರೂಪಿಸಿದ್ದವು.





ಆದರೆ ಈ ಎಲ್ಲಾ ಐಕ್ಯತೆಯನ್ನು ನಾವು, ವಿಶೇಷವಾದ ಬೆಳವಣಿಗೆ ಎಂದು ಕರೆಯಲಾಗದು. ಏಕೆಂದರೆ, ಇದು ಹಿಂದಿಗಿಂತ ಮಿಗಿಲಾದ ಬೆಳವಣಿಗೆಯಲ್ಲ ಮತ್ತು ಪ್ರಸ್ತುತ ಇತರ ಜನವರ್ಗಗಳಲ್ಲಿ ಕಾಣುತ್ತಿರುವ ವಿಶಿಷ್ಟವಾದ ಗುಣಾತ್ಮಕ ಬೆಳವಣಿಗೆಯ ರೀತಿಯದ್ದೂ ಅಲ್ಲ. ಇತರ ಜನವರ್ಗಗಳಂತೆಯೇ ಕಾರ್ಮಿಕರಲ್ಲೂ 'ಸಂಘಟಿತರಾಗಲೇಬೇಕೆಂಬ ಟ್ರೆಂಡ್' ಹೆಚ್ಚಾಗಿರುವುದು ವಾಸ್ತವ. ಆದರೂ ಅದು, 'ತಮಗೆ ಕೆಲಸದ ಭದ್ರತೆ'ಯನ್ನು ಪಡೆದುಕೊಳ್ಳುವ ಅಥವಾ ಇನ್ನಿತರ ಸವಲತ್ತುಗಳನ್ನು ಪಡೆಯುವ ಹೋರಾಟವಾಗಿ ಆರಂಭವಾಗಿ, ಅಲ್ಲಿಯೇ ಮುಗಿದುಬಿಡುತ್ತಿರುವುದು ದುರಂತ. ಕಬ್ಬು ಬೆಳೆಗಾರರ ಹೋರಾಟವೂ ಇಷ್ಟಕ್ಕೇ ಸೀಮಿತವಾಗಿದೆಯಲ್ಲವೇ ಎಂದು ಯಾರಾದರೂ ಕೇಳಿದರೆ, ಅದನ್ನು ನಿರಾಕರಿಸಲಾಗದು. ಆದರೆ ಹಳೆಯ ರೈತ ಕಾರ್ಯಕರ್ತರ ಗುಂಪುಗಳು ಅಷ್ಟಕ್ಕೇ ಸೀಮಿತವಾಗಿಲ್ಲ, ಅವರುಗಳು ಬದಲಾವಣೆಯನ್ನು ಬಯಸುತ್ತಿದ್ದಾರೆ; ಸಾಧ್ಯವಾಗದಿದ್ದಾಗ, ಸಂಘಟನೆಯನ್ನೇ ಪ್ರತ್ಯೇಕ ಮಾಡಿಕೊಳ್ಳುವ ಟ್ರೆಂಡ್ ಕರ್ನಾಟಕದ ಕನಿಷ್ಠ 3-4 ಜಿಲ್ಲೆಗಳಲ್ಲಿ ಕಾಣಬಹುದಾಗಿದೆ.

> ಮೋದಿ ಸರ್ಕಾರದ ಅಪ್ಪಟ ಕಾರ್ಮಿಕ ವಿರೋಧಿ, ಕಾರ್ಪೋರೇಟ್ ಪರ ನೀತಿಯು ದಿನೇ ದಿನೇ ಬಲಗೊಳ್ಳುತ್ತಿದೆ. ಈ ಸಂದರ್ಭದಲ್ಲಿ ದೇಶಾದ್ಯಂತ ಬೃಹತ್ತಾದ ಕಾರ್ಮಿಕ ಪ್ರತಿರೋಧವು ಹುರಿಗಟ್ಟಬೇಕಿದೆ. ಅದಕ್ಕೆ ವಿವಿಧ ನೆಲೆಗಳ ಕಾರ್ಮಿಕ ಚಳವಳಿಯ ಐಕ್ಯತೆಯ ಅಗತ್ಯ ಹಿಂದೆಂದಿಗಿಂತಲೂ ಹೆಚ್ಚಾಗಿದೆ. ಆದರೆ, ಅದು ಆ ಪ್ರಮಾಣಕ್ಕೆ ಹೆಚ್ಚಾಗುತ್ತಿಲ್ಲ, ಹೆಚ್ಚಾಗುವ ಸಾಧ್ಯತೆಯೂ ಕಾಣುತ್ತಿಲ್ಲ.

ಕಾರ್ಮಿಕ ವರ್ಗದಿಂದ ಇನ್ನೂ ಹೆಚ್ಚಿನ ನಿರೀಕ್ಷೆ ಇರುವುದರಿಂದಲೂ, ಕಾರ್ಮಿಕರು ಮತ್ತು ಕಾರ್ಮಿಕ ಸಂಘಟನೆಗಳು ಉಳಿದವರಿಗಿಂತ ಹಿಂದೆ ಬಿದ್ದಿದ್ದಾರೆ ಎನ್ನಿಸಲು ಕಾರಣವಾಗಿರಬಹುದು. ಮಾಧ್ಯಮಗಳಲ್ಲಿ ಕಾರ್ಮಿಕ ಚಳವಳಿಗೆ ಸಿಗುವ ಕಡಿಮೆ ಪ್ರಾಧಾನ್ಯತೆಯೂ ಹೀಗನ್ನಿಸಲು ಕಾರಣವಾಗಿರಬಹುದು. ಫೇಸ್‌ಬುಕ್ ಇತ್ಯಾದಿ ಸಾಮಾಜಿಕ ಜಾಲತಾಣಗಳಲ್ಲಿ ಕಾರ್ಮಿಕ ಚಳವಳಿಯ ಭಾಗವಾಗಿ ನಡೆಯುವ ಪ್ರಚಾರ ಕಡಿಮೆ ಇರುವುದೂ ಒಂದು ಕಾರಣವಿರಬಹುದು. ನಮ್ಮ 'ಮುಖ್ಯವಾಹಿನಿ' ಮಾಧ್ಯಮಗಳಂತೂ ಮಿಕ್ಕ ಯಾವುದನ್ನು ಬೇಕಾದರೂ ಪ್ರಸಾರ ಮಾಡುತ್ತಾರೆ. ಕಾರ್ಮಿಕರ ದುಸ್ಥಿತಿ, ಕಾರ್ಮಿಕರ ಹೋರಾಟಕ್ಕೆ ಸಂಬಂಧಿಸಿದ ಸುದ್ದಿಗಳನ್ನು ಪ್ರಸಾರ ಮಾಡುವುದಿಲ್ಲ. ದೊಡ್ಡ ಪತ್ರಿಕೆ ಮತ್ತು ಚಾನೆಲ್‌ಗಳಿಗೆ ತಮ್ಮ ಸಂಸ್ಥೆಯಲ್ಲೇ ಸಿಬ್ಬಂದಿಯನ್ನು ಅಭದ್ರತೆಯ ಸ್ಥಿತಿಯಲ್ಲಿ ಇಟ್ಟಿರುವ ವಾಸ್ತವದ ಅರಿವಿರುವುದರಿಂದಲೂ, ಕಾರ್ಮಿಕ ಹೋರಾಟಗಳಿಗೆ ಹೆಚ್ಚು ಪ್ರಾಧಾನ್ಯತೆ ಕೊಟ್ಟರೆ ಅದರ ಪರಿಣಾಮ ತಮ್ಮ ಮೇಲೂ ಆಗಬಹುದೆಂಬ ಭಯವಿರುವುದರಿಂದಲೂ ಹೀಗಾಗುತ್ತಿರಬಹುದು. ಪ್ರಚಾರದ ಕೊರತೆಯಿಂದಲೂ ಕಾರ್ಮಿಕರು ಮಾತ್ರ ಹಿಂದೆ ಬೀಳುತ್ತಿದ್ದಾರೆ ಎಂದು ಅನ್ನಿಸಬಹುದು.

ಹಾಗೆಂದು ಕಾರ್ಮಿಕ ಚಳವಳಿಯ ಕ್ಷೇತ್ರದಲ್ಲಿ ಇತರ ಕ್ಷೇತ್ರಗಳಿಗಿಂತ ಕಡಿಮೆ ಚಲನೆ ಕಾಣುತ್ತಿದೆ ಎಂಬುದು ಕೇವಲ 'ಗಟ್ ಫೀಲಿಂಗ್' ಅಲ್ಲ. ಸರ್ಕಾರೀ ಇಲಾಖೆಗಳ ದಿನಗೂಲಿ, ಗುತ್ತಿಗೆ ಕಾರ್ಮಿಕರು ಹೆಚ್ಚೆಚ್ಚು ಸಂಘಟಿತರಾಗುತ್ತಿದ್ದಾರೆ. ವಿಶೇಷವಾಗಿ ಮಹಿಳೆಯರೇ ಹೆಚ್ಚಾಗಿರುವ ಕ್ಷೇತ್ರಗಳಲ್ಲಿ ಇದು ಇನ್ನೂ ಹೆಚ್ಚಾಗಿದೆ. ಸರ್ಕಾರದ ನೀತಿಯೇ ಗುತ್ತಿಗೆ ಮತ್ತು ಇನ್ನಿತರ ಅಭದ್ರ ನೌಕರಿಗಳನ್ನು ಹೆಚ್ಚು ಮಾಡುವುದಾಗಿದೆ. ಹೀಗಿದ್ದೂ, ಎಲ್ಲಾ ಬಗೆಯ ಗುತ್ತಿಗೆ ಕಾರ್ಮಿಕರನ್ನು ಒಂದು ಕಡೆಗೆ ಸೇರಿಸುವುದು ಆಗುತ್ತಿಲ್ಲ, ಕನಿಷ್ಠ ಇಲಾಖಾವಾರು ಗುತ್ತಿಗೆ ಕಾರ್ಮಿಕ ಸಂಘಟನೆಗಳ ಒಕ್ಕೂಟಗಳೂ ರಚಿತವಾಗುತ್ತಿಲ್ಲ. ಉದಾಹರಣೆಗೆ ವೈದ್ಯಕೀಯ ಇಲಾಖೆಯಲ್ಲಿ 108 ಆಂಬ್ಯುಲೆನ್ಸ್, ಎನ್‌ಆರ್‌ಎಚ್‌ಎಂ ನರ್ಸ್‌ಗಳು, ಆರ್‌ಎನ್‌ಟಿಸಿಪಿ ಸಿಬ್ಬಂದಿ, ವಿವಿಧ ಬಗೆಯ ಗುತ್ತಿಗೆ ಕಚೇರಿ ಸಿಬ್ಬಂದಿ, ನಾನ್ ಕ್ಲಿನಿಕಲ್ (ಕ್ಲೀನಿಂಗ್) ಸಿಬ್ಬಂದಿ, ಆಸ್ಪತ್ರೆಗಳ ಸೆಕ್ಯುರಿಟಿಗಳು ಹೀಗೆ ಇನ್ನೂ ಹತ್ತು ಬಗೆಯ ಅಭದ್ರ ನೌಕರರಿದ್ದಾರೆ. ಆದರೆ ಇವರೆಲ್ಲರಿಗೂ ಪ್ರತ್ಯೇಕ ಯೂನಿಯನ್‌ಗಳಿವೆ. ಕೆಲವು ವಿಭಾಗಗಳಲ್ಲಿ ಜಿಲ್ಲಾವಾರು ಪ್ರತ್ಯೇಕ ಯೂನಿಯನ್‌ಗಳಿವೆ.

ಇನ್ನು ಕಾರ್ಖಾನೆಗಳ ಕಾರ್ಮಿಕರ ವಿಚಾರಕ್ಕೆ ಬರುವುದಾದರೆ, ಅದರಲ್ಲಿ ಇನ್ನೂ ಒಂದು ದುರಂತದ ಸಂಗತಿಯಿದೆ. ಗುತ್ತಿಗೆ ಕಾರ್ಮಿಕರಿಗೆ ಬೇರೆ ಸಂಘಟನೆ, ಖಾಯಂ ಕಾರ್ಮಿಕರಿಗೆ ಬೇರೆ ಸಂಘಟನೆ. ಕೆಲವು ಸಾರಿ ಎರಡೂ ಬಗೆಯ ಕಾರ್ಮಿಕರನ್ನು ಒಂದೇ ಕೇಂದ್ರೀಯ ಯೂನಿಯನ್ ಸಂಘಟಿಸಿದರೂ, ಕಾರ್ಖಾನೆಯ ಮಟ್ಟದಲ್ಲಿ ಮಾತ್ರ ಬೇರೆ ಬೇರೆ ಯೂನಿಯನ್‌ಗಳು. ಎಡಪಕ್ಷಗಳ ದೊಡ್ಡ ಯೂನಿಯನ್‌ಗಳು ಈಗಲೂ ದೊಡ್ಡ ಉದ್ದಿಮೆಗಳ ಖಾಯಂ ಕಾರ್ಮಿಕರ ಮೇಲೆಯೇ ಹೆಚ್ಚು ಕೇಂದ್ರೀಕರಿಸುತ್ತವೆ ಎನ್ನುವ ಆಪಾದನೆಯಿಂದ ಸಂಪೂರ್ಣ ಮುಕ್ತವಾಗಿಲ್ಲ.

ಮೋದಿ ಸರ್ಕಾರದ ಅಪ್ಪಟ ಕಾರ್ಮಿಕ ವಿರೋಧಿ, ಕಾರ್ಪೋರೇಟ್ ಪರ ನೀತಿಯು ದಿನೇ ದಿನೇ ಬಲಗೊಳ್ಳುತ್ತಿದೆ. ಈ ಸಂದರ್ಭದಲ್ಲಿ ದೇಶಾದ್ಯಂತ ಬೃಹತ್ತಾದ ಕಾರ್ಮಿಕ ಪ್ರತಿರೋಧವು ಹುರಿಗಟ್ಟಬೇಕಿದೆ. ಅದಕ್ಕೆ ವಿವಿಧ ನೆಲೆಗಳ ಕಾರ್ಮಿಕ ಚಳವಳಿಯ ಐಕ್ಯತೆಯ ಅಗತ್ಯ ಹಿಂದೆಂದಿಗಿಂತಲೂ ಹೆಚ್ಚಾಗಿದೆ. ಆದರೆ, ಅದು ಆ ಪ್ರಮಾಣಕ್ಕೆ ಹೆಚ್ಚಾಗುತ್ತಿಲ್ಲ, ಹೆಚ್ಚಾಗುವ ಸಾಧ್ಯತೆಯೂ ಕಾಣುತ್ತಿಲ್ಲ.

> ಒಂದಾಗುವ ಥಿಯರಿ
> ಅಂತರ್ಗತವಾಗಿ ಹೊಂದಿರ
> ಒಂದಾಗದ ರೀತಿಯಲ್ಲಿ ರ
> ಮತ್ತು ಸಂಘಟನಾ ಸಂಸ
> ಹೊಂದಿರುವ ವಿಭಾಗವೆಂ
> ಕಾರ್ಮಿಕ ಚಳವಳಿಯ
> ಆಗಿದೆ.

ಒಂದಾಗುವ ಥಿಯರಿಯನ್ನು
ಹೊಂದಿರುವ ಆದರೆ ಒಂದಾಗದ ರೀತಿ
ಮತ್ತು ಸಂಘಟನಾ ಸಂಸ್ಕೃತಿಯನ್ನು
ವಿಭಾಗವೆಂದರೆ, ಅದು ಕಾರ್ಮಿಕ ಚಳ
ಆಗಿದೆ. ಇದಕ್ಕೆ ಟ್ರೇಡ್ ಯೂನಿಯನ್ನಿಸಂ
ಲಕ್ಷಣಗಳೂ ಕಾರಣವಿರಬಹುದು. ಕಳೆ
ಕರ್ನಾಟಕದ ರೈತ ಮತ್ತು ದಲಿತ ಚ
ಕೇಂದ್ರಿತ ಮಾಲೀಕತ್ವದೆಡೆಗೆ ಚಲಿಸಿರು
ಗೊತ್ತಿದೆ. ಟ್ರೇಡ್ ಯೂನಿಯನ್‌ಗಳಲ್ಲಿ
ಹಿಂದಿನ ವಿದ್ಯಮಾನ. ಏಕ ನಾಯಕ
ಯೂನಿಯನ್‌ಗಳು ಅತ್ಯಂತ ವ್ಯಾಪಕವಾ
ಜಿಂದಾಬಾದ್ ಕೂಗುವ ಸಂಸ್ಕೃತಿ ಇನ್ನೂ ನ
ಸಂಘಟನೆಗಳಲ್ಲಿ ಅಷ್ಟಾಗಿ ಬೇರೂರಿಲ್ಲ. ಕಾ
ವಿಷಯಕ್ಕೆ ಬರುವುದಾದರೆ ಎಡ ಸಂಘ
ಇತರರಿಗಿಂತ ಕಡಿಮೆ ಇರಬಹುದಾದರ
ಹೊರತಾಗಿಲ್ಲ. ಹೀಗಾಗಿ ಬೇರೆ ಬೇರೆ
ಒಂದಾಗಬೇಕಾದರೆ, ನಾಯಕತ್ವದ ಪ್ರಶ್ನೆ
ಒಂದೇ ಮಾತೃ ಸಂಘಟನೆಯ ವಿವಿಧ
ತಮ್ಮದೇ ಪ್ರತ್ಯೇಕ ಕೋಟೆಗಳನ್ನು ಕಟ್ಟಿ
ಒಂದೆರಡು ಕೇಂದ್ರೀಯ ಯೂನಿಯನ್‌ಗಳ
ಪರಿಸ್ಥಿತಿ ಇದೆಯೆಂದುಕೊಂಡಾಗಲೂ,
ಜಾತಿಯ ಗುಣ ಬಂದುಬಿಟ್ಟಿರುತ್ತದೆ. ಅದು
ಸುಲಭವಲ್ಲ ಏಕೆಂದರೆ, ಈ ಗುಣವನ್ನು ಪ್ರ
ದಶಕಗಟ್ಟಲೆ ಬೆಳೆಸಲಾಗಿರುತ್ತದೆ. ಒಂದೇ ಕೆ
ಮೀನು ಹಿಡಿಯಲು ಬರುವುದರಿಂದ
ಅನಾರೋಗ್ಯಕರ ಸ್ಪರ್ಧೆಯೂ ಇದಕ್ಕೆ ಕಾರ

ಇನ್ನು ಸರ್ಕಾರೀ ಇಲಾಖೆಗಳ ಕಾ
ಕೈಗಾರಿಕೆಗಳ ಕಾರ್ಮಿಕರಲ್ಲಿ ಇರ
ಮನೋಭಾವವೂ ಗಮನಾರ್ಹವಾಗಿದೆ.
ಕೆಲಸವಾದ್ರೆ ಸಾಕು; ಯಾವ ರಾಜಕೀಯ
ಬೇಕಾದರೂ ಕಾಲು ಕಟ್ಟೋಣ; ಸನ್ಮಾನ
ನಮ್ಮನ್ನು ಪರ್ಮನೆಂಟ್ ಮಾಡಿಕೊಂಡರೆ
ವೇಳೆ ಇವರು ಪರ್ಮನೆಂಟ್ ಆಗೋದ್ರೆ ವ
ಅವರ 'ವರ್ಗ' ಬದಲಾವಣೆ ಆದ ಹಾ
ಉಮಾದೇವಿ ವರ್ಸಸ್ ಸ್ಟೇಟ್ ಆಫ
ಮೊಕದ್ದಮೆಯಲ್ಲಿ ಮತ್ತು ಸ್ಟೀಲ್ ಅ
ಇಂಡಿಯಾ ಮೊಕದ್ದಮೆಯಲ್ಲಿ ಗುತ್ತಿಗೆ ಕಾಮಿ
ಕಾರ್ಮಿಕರಾಗುವ ಸಾಧ್ಯತೆಗಳಿಗೆ
ಸುಪ್ರೀಂಕೋರ್ಟ್ ತೀರ್ಪಿತ್ತಿದೆ. ಈಗ
ತಿದ್ದುಪಡಿಯೇ ಆಗಬೇಕು. ಅಂದರೆ ದೆ
ಬಗೆಯ ನೌಕರರು, ಕಾರ್ಮಿಕರು
ಹೋರಾಡಬೇಕು. ಆ ಸಾಧ್ಯತೆ ಸಮೀಪದಲ್ಲಿ

ಹಿಂದಿಗಿಂತ ಜಾತಿ ಸಂಘಟನೆಗಳ ಹೆ
ಹೆಚ್ಚೆಚ್ಚು ಸಂಘಟಿತರಾಗುತ್ತಿರುವುದು, 'ಹೊರ
ದೊಡ್ಡ ಕಾರ್ಮಿಕ ಸಂಘಟನೆಗಳಿಗಿಂತ ತ
ಸಂಘ ಮಾಡಿಕೊಳ್ಳಲು ಹೆಚ್ಚು ಆಸಕ್ತಿ ತೋ
ಸಹಾ ನಡೆಯುತ್ತಿದೆ. ಅಂದರೆ ಯಾರನ್ನು
'ಅತ್ಯಂತ ಆಧುನಿಕ ವರ್ಗ', 'ಮುಂಚೂಣಿ
ಕರೆಯುತ್ತದೋ, ಅವರು ಅಷ್ಟು
ಮನೋಭಾವವನ್ನು ತೋರುತ್ತಿ
ಮುಂಚೂಣಿಯಲ್ಲೂ ಇಲ್ಲ. ಹೀಗೇಕೆ ಆಗಿದ
ಚರ್ಚೆ ಇತರ ರಾಜ್ಯಗಳಲ್ಲಿ ವಿಶೇಷವಾಗಿ ಪ
ಉತ್ತರ ಪ್ರದೇಶ, ದೆಹಲಿ ರಾಜಧಾನಿ ಪ್ರ
ಮಹಾರಾಷ್ಟ್ರಗಳಲ್ಲಿ ಒಂದು ಮಟ್ಟಿಗೆ
ಕರ್ನಾಟಕದಂತಹ ರಾಜ್ಯಗಳಲ್ಲಿ ಚರ್ಚೆ
ಪ್ರಾಥಮಿಕ ಹಂತದಲ್ಲಿದೆ.

ಈ ಲೇಖನದಲ್ಲಿ ಹಲವು ಕಡೆ '
'ಹೀಗಾಗುತ್ತಿರಬಹುದು' ಎಂಬ ಪದಗಳಿವೆ.
ತೀರ್ಮಾನಗಳನ್ನು ಮಾಡುವಷ್ಟು ಅನುಭವ
ಕಾರಣದಿಂದ. ಜೊತೆಗೆ ಅನುಭವ ಇರುವವ
ಇದರಲ್ಲಿರುವ ಅಂಶಗಳನ್ನು ಸಾರಾಸಗಟಾಗಿ ನಿ
ಎಂಬ ಎಚ್ಚರಿಕೆಯಿಂದ. ಸೂಕ್ತ ಉದಾಹರಣೆ
ಯಾರಾದರೂ ಈ ಚರ್ಚೆಯನ್ನು ಮುಂದುವರೆ
ಕಾರ್ಮಿಕ ಚಳವಳಿಯನ್ನು ಮುಂಚೂಣಿಗೆ ಕೊ
• ನೆರವಾಗಬಹುದು ಎಂಬ ಆಶಯ ನನ್ನದು

ಸಲಿಂಗಕಾಮ ವಿಚಿತ್ರವೂ ಅಲ್ಲ, ವಿಕೃತವೂ ಅಲ್ಲ

ಇತ್ತೀಚೆಗೆ ದೆಹಲಿಯಲ್ಲಿ ಪ್ರಿಯಾ ವೇದಿ ಎಂಬ ವೈದ್ಯೆ ಆತ್ಮಹತ್ಯೆ ಮಾಡಿಕೊಂಡರು. ಕಾರಣ ಆಕೆ ಐದು ವರ್ಷಗಳ ಹಿಂದೆ ಮದುವೆಯಾಗಿದ್ದ ವೈದ್ಯ ಸಲಿಂಗಕಾಮಿಯಾಗಿದ್ದು ಆಕೆಗೆ ದೈಹಿಕ ಮತ್ತು ಮಾನಸಿಕ ಹಿಂಸೆ ಕೊಡುತ್ತಿದ್ದದ್ದು.

ಪ್ರಿಯಾಳ ಆತ್ಮಹತ್ಯೆ ಹಲವು ಪ್ರಶ್ನೆಗಳನ್ನು ಹುಟ್ಟುಹಾಕಿತು. ಮೊದಲನೆಯದಾಗಿ ವೈದ್ಯೆಯಾಗಿದ್ದ ಆಕೆಗೆ ಸಲಿಂಗಕಾಮ ಎಂಬುದು ಚಿಕಿತ್ಸೆ ಮೂಲಕ ನಿವಾರಿಸಬಲ್ಲ ರೋಗವಲ್ಲ ಎಂಬುದು ಗೊತ್ತಿದ್ದರೂ ಆಕೆ ಆದು ಹೇಗೆ ಆತ 'ನೆಟ್ಟಗಾಗುತ್ತಾನೆ' ಎಂದು ನಿರೀಕ್ಷಿಸಿದ್ದಳು? ಎರಡನೆಯದಾಗಿ, ವೈದ್ಯೆಯಾಗಿದ್ದ ಆಕೆ ತನ್ನ ಪ್ರಾಣವನ್ನೇ ತೆಗೆದುಕೊಳ್ಳುವ ಬದಲು ಯಾಕೆ ವಿಚ್ಛೇದನೆ ಪಡೆಯಲಿಲ್ಲ? ಮೂರನೆಯದಾಗಿ ಮತ್ತು ಮುಖ್ಯವಾಗಿ, ಆಕೆಯ ಗಂಡನಿಗೆ ತಾನು ಸಲಿಂಗಕಾಮಿ ಎಂದು ಗೊತ್ತಿದ್ದರೂ ಯಾಕೆ ಪ್ರಿಯಾಳನ್ನು ಮದುವೆಯಾಗಿದ್ದ?


ಪ್ರಿಯಾಳ ಸ್ಥಿತಿಯಲ್ಲೇ ಹಿಂದೊಮ್ಮೆ ನನ್ನ ಗೆಳತಿ ರಾಧಾ ಕೂಡ ಇದ್ದಳು. ಮಧ್ಯಮವರ್ಗ ಕುಟುಂಬದ ರಾಧಾ ಆಗಿನ್ನೂ ಯುವತಿ. ಆಕೆ ತುಮಕೂರಿನ ಕಾಲೇಜೊಂದರಲ್ಲಿ ಪಿಯುಸಿ ಓದುತ್ತಿದ್ದಾಗಲೆ ಆಕೆಯ ವಿಧವೆ ತಾಯಿಗೆ ಒಬ್ಬ ಸೂಕ್ತ ವರನ ಬಗ್ಗೆ ಗೊತ್ತಾಯಿತು. ಆತ ರಾಧಾಳ ಜಾತಿಯವನೇ ಆಗಿದ್ದು, ನೋಡಲೂ ಚೆಂದ ಇದ್ದ. ಜೊತೆಗೆ ಆತನದ್ದು ಬೆಂಗಳೂರಿನ ಶ್ರೀಮಂತ ಕುಟುಂಬ. ಅದಕ್ಕಿಂತ ತನ್ನ ಮಗಳಿಗೆ ಹೆಚ್ಚೇನು ಬೇಕು ಎಂದು ನಿರ್ಧರಿಸಿದ ತಾಯಿ ರಾಧಾಳನ್ನು ಆ ಯುವಕನಿಗೆ ಕೊಟ್ಟು ಮದುವೆ ಮಾಡಿದರು.

ಗಂಡನ ಜೊತೆ ವಾಸ ಮಾಡಲಾರಂಭಿಸಿದ ನಂತರವೇ ರಾಧಾಳಿಗೆ ತನ್ನ ಗಂಡನಲ್ಲಿ ಏನೋ 'ಐಬು' ಎಂಬ ಅರಿವಾಗಿದ್ದು. ಯಾಕೆಂದರೆ ರಾಧಾಳಿಗೆ ಆಗ ಈ ಜಗತ್ತಿನಲ್ಲಿ ಸಲಿಂಗಕಾಮಿಗಳೂ ಇದ್ದಾರೆ ಎಂಬುದು ಗೊತ್ತಿರಲಿಲ್ಲ. ತಾನು ಸಲಿಂಗಕಾಮಿ ಎಂಬುದು ರಾಧಾಳಿಗೆ ಗೊತ್ತಾದ ನಂತರ ಆತ ಆಕೆಯನ್ನು ವಿವಿಧ ರೀತಿಗಳಲ್ಲಿ ಹಿಂಸಿಸಲು ಶುರುಮಾಡಿದ. ಮೊದಮೊದಲು ರಾಧಾ ಆತನ ಮಾನಸಿಕ ಮತ್ತು ದೈಹಿಕ ಹಿಂಸೆಯನ್ನು ಸಹಿಸಿಕೊಂಡಳು. ಒಂದೆಡೆ ಕುಟುಂಬದ ಮರ್ಯಾದೆ, ಇನ್ನೊಂದೆಡೆ ಮಾವ ಮತ್ತು ಅತ್ತೆಯ ಒತ್ತಡ, ಮಗದೊಂದೆಡೆ ಓದು, ಪದವಿ ಇಲ್ಲದ್ದರಿಂದ ಭವಿಷ್ಯದ ಅನಿಶ್ಚಿತತೆ ಆಕೆಯನ್ನು ಕಟ್ಟಿಹಾಕಿದ್ದವು.

ಆದರೆ ರಾಧಾ ಎಂದೂ ಪ್ರಿಯಾಳಂತೆ ಧೃತಿಗೆಡಲಿಲ್ಲ, ಕನಸು ಕಾಣುವುದನ್ನು ನಿಲ್ಲಿಸಲಿಲ್ಲ. ಕೊನೆಗೊಂದು ದಿನ ರಾಧಾ ವಿಚ್ಛೇದನೆ ಪಡೆದು ಬದುಕನ್ನು ಧೈರ್ಯವಾಗಿ ಎದುರಿಸಲು ನಿರ್ಧರಿಸಿದಳು. ಗಂಡನಿಗೆ ಸೋಡಾಚೀಟಿ ಕೊಟ್ಟು ಕಾಲೇಜ್ ಸೇರಿಕೊಂಡು ಪತ್ರಿಕೋದ್ಯಮದಲ್ಲಿ ಪದವಿ ಪಡೆದಳು, ಬೆಂಗಳೂರಿನ ಪ್ರತಿಷ್ಠಿತ ಪತ್ರಿಕೆಯೊಂದರಲ್ಲಿ ವರದಿಗಾರ್ತಿಯಾದಳು. ಹಲವು ವರ್ಷಗಳ ನಂತರ ಮತ್ತೊಮ್ಮೆ ಮದುವೆಯಾಗಿ ತಾಯಿಯಾದಳು. ಈಗ ಒಂದು ಖಾಸಗಿ ವಿಶ್ವವಿದ್ಯಾಲಯದಲ್ಲಿ ಅಧ್ಯಾಪಕಿಯಾಗಿದ್ದಾಳೆ. ಎಲ್ಲರಂತೆ ರಾಧಾಳೂ ತನ್ನ ಬದುಕಿನಲ್ಲಿ ಸುಖ ಸಂತೋಷ, ಏಳುಬೀಳು, ಲಾಭ ನಷ್ಟಗಳನ್ನು ಕಂಡಿದ್ದಾಳೆ. ಪ್ರಿಯಾ ಕೂಡ ಒಂದಿಷ್ಟು ಧೈರ್ಯ ಮಾಡಿದ್ದರೆ ರಾಧಾಳಂತೆ ಜೀವನ ಎಂಬ ಸಂಕೀರ್ಣ ಸವಾಲನ್ನು ಜೀವಂತವಾಗಿ ಎದುರಿಸಬಹುದಿತ್ತು.

ಇನ್ನು ಪ್ರಿಯಾಳ ಮಾವ ಕೂಡ ಸೊಸೆಯ ಸಾವಿಗೆ ವಿಚಿತ್ರವಾಗಿ ಪ್ರತಿಕ್ರಿಯಿಸಿದ್ದಾರೆ. ತಮ್ಮ ಮಗ ಸಲಿಂಗಕಾಮಿಯಾಗಿದ್ದರಿಂದ ಪ್ರಿಯಾ ಆತ್ಮಹತ್ಯೆ ಮಾಡಿಕೊಂಡಿದ್ದಾಳೆ ಎಂದು ಗೊತ್ತಾದ ನಂತರ ಆ ಮಾವ "ಇಂತಹದ್ದೆಲ್ಲ ಈಗಿನ ಕಾಲದಲ್ಲಿ ಮಾಮೂಲು. ಆಕೆ ಸಂಪ್ರದಾಯಸ್ಥ ಹೆಣ್ಣಿನಂತೆ 'ಇದನ್ನೆಲ್ಲ ಸಹಿಸಿಕೊಂಡು ಹೋಗಬೇಕಿತ್ತು, ಅದ್ಯಾಕೆ ಆತ್ಮಹತ್ಯೆ ಮಾಡಿಕೊಂಡಳು ಎಂದು ಅರ್ಥವಾಗುತ್ತಿಲ್ಲ" ಎಂದಿದ್ದಾರೆ. ಅಂದರೆ ಅವರಿಗೆ ತಮ್ಮ ಮಗ ಸಲಿಂಗಕಾಮಿ ಎಂದು ಗೊತ್ತಿದ್ದರೂ ಅವರು ಆತನಿಗೆ ಮದುವೆ ಮಾಡಿದ್ದರು. ಇದರ ಅರ್ಥ ಏನೆಂದರೆ ನಮ್ಮ ಸಮಾಜ ಸಲಿಂಗಕಾಮಿಗಳನ್ನು ವಿಚಿತ್ರವಾಗಿ ನೋಡುವುದರಿಂದ ಮತ್ತು ಕಾನೂನು ಕೂಡ ಅವರನ್ನು ಅಪರಾಧಿ ಸ್ಥಾನದಲ್ಲಿ ಸಿಲ್ಲಿಸುವುದರಿಂದ ಅವರು ತಮ್ಮ ಲೈಂಗಿಕ ಪ್ರವೃತ್ತಿಯನ್ನು ಬಚ್ಚಿಟ್ಟುಕೊಂಡು 'ಇತರೆ ಸಾಮಾನ್ಯರಂತೆ' ಜೀವನ ಸಾಗಿಸಬೇಕು ಎಂಬುದೇ ಹೆತ್ತವರ ಹಂಬಲವಾಗಿರುತ್ತದೆ. ಅಂತಹ ಮೋಸಕ್ಕೆ ರಾಧಾಳಂತಹ ಅಮಾಯಕರಿಗೂ, ಪ್ರಿಯಾಳಂತಹ ಸುಶಿಕ್ಷಿತರಿಗೂ ಅನ್ಯಾಯವಾಗುತ್ತದೆ, ಮನ ನೋಯುತ್ತದೆ ಎಂದು ಗೊತ್ತಿದ್ದರೂ ಅದನ್ನು ಎಲ್ಲರೂ ಸಹಿಸಿಕೊಂಡಿರಬೇಕು; ಅಷ್ಟೇ ಅಲ್ಲ, ಇಂತಹ ಮೋಸದಾಟದಲ್ಲಿ ಸ್ವತಃ ಸಲಿಂಗಕಾಮಿಗಳಿಗೂ ಅಪಾರ ನೋವು ಮತ್ತು ಸಂಕಟವಾದರೂ ಅವರೂ ತೆಪ್ಪಗಿರಬೇಕು ಎಂದೇ ಹೆಚ್ಚು ಜನ ಭಾವಿಸುತ್ತಾರೆ. ಹೀಗೆ, ಸಲಿಂಗಕಾಮಿಗಳು ಮತ್ತು ಅವರನ್ನು ಹೆತ್ತವರು ಆತ್ಮವಂಚನೆ ಮಾಡಿಕೊಳ್ಳುತ್ತಾರೆ.

ಗೆಳತಿ ರಾಧಾಳಂತೆ ಸಲಿಗಂಕಾಮಿಯೊಬ್ಬನ ಸಾಮಾಜಿಕ ಅಸಹಾಯಕತೆಯಿಂದಾಗಿ ನೋವನ್ನು ಅನುಭವಿಸಿದ ಮತ್ತೊಬ್ಬ ಮಿತ್ರನ ಹೆಸರು ನಿಕ್ಕಿ. ಈತ ಮುಂಬೈನವನು. ತಾನು ಸಲಿಂಗಕಾಮಿ ಎಂಬುದನ್ನು ಮುಚ್ಚುಮರೆ ಮಾಡದ ನಿಕ್ಕಿ ಮುಂಬೈಯಲ್ಲಿ ಡಿಸೈನರ್ ಆಗಿದ್ದ. ಒಮ್ಮೆ ಆತ ಬೆಂಗಳೂರಿಗೆ ಬಂದಾಗ ಇಲ್ಲಿ ಒಬ್ಬ ಕಲಾವಿದನ ಪರಿಚಯವಾಯಿತು. ಕಲಾವಿದನೂ ಸಲಿಂಗಕಾಮಿಯಾದ್ದರಿಂದ ಅವರಿಬ್ಬರ ನಡುವೆ ಪ್ರೇಮಾಂಕುರವಾಯಿತು. ನಿಕ್ಕಿ ಕಲಾವಿದನನ್ನು ಅದೆಷ್ಟು ಹಚ್ಚಿಕೊಂಡನೆಂದರೆ ಆತ ಮುಂಬೈ ತೊರೆದು ಬೆಂಗಳೂರಿಗೆ



ಬಂದ. ಇಲ್ಲೇ ಒಂದು ಡಿಸೈನ್ ಸ್ಟುಡಿಯೋ ಶುರುಮಾಡಿದ. ಜೊತೆಯಾಗಿ ವಾಸಿಸೋಣ ಎಂದು ಕಲಾವಿದನನ್ನು ಬೇಡಿಕೊಂಡ. ಆದರೆ ಕಲಾವಿದನಿಗೆ ತಾನು ಸಲಿಂಗಕಾಮಿ ಎಂದು ಇತರರಿಗೆ ಗೊತ್ತಾಗುವುದು ಬೇಡವಾಗಿತ್ತು. 'ನಮ್ಮಿಬ್ಬರ ಸಂಬಂಧ ನಮ್ಮ ನಡುವೆ ಮಾತ್ರ ಇರಲಿ, ಬೇರೆಯವರಿಗೆ ಗೊತ್ತಾಗುವುದು ಬೇಡ' ಎಂದ ಕಲಾವಿದ ನಿಕ್ಕಿ ಜೊತೆ ಮನೆ ಮಾಡಲು ನಿರಾಕರಿಸಿದ. ನಿಕ್ಕಿ ಅದೆಷ್ಟೇ ಅಂಗಲಾಚಿದರೂ ಆತ ಜಪ್ಪಯ್ಯ ಅನ್ನಲಿಲ್ಲ. ಅದಕ್ಕೆ ಮುಖ್ಯಕಾರಣ ಕಲಾವಿದನ ತಂದೆತಾಯಿಗೆ ಮಗನ ಲೈಂಗಿಕ ಆದ್ಯತೆ ಗೊತ್ತಿಲ್ಲದಿದ್ದದ್ದು. ಸಹಜವಾಗಿಯೇ ನಿಕ್ಕಿ ಡಿಪ್ರೆಶನ್‌ಗೆ ಜಾರಿದ. ಸ್ನೇಹಿತರ ಮುಂದೆ ತನ್ನ ನಿರಾಶೆ ಮತ್ತು ದುಃಖವನ್ನು ತೋಡಿಕೊಂಡ, ಕಣ್ಣೀರಿಟ್ಟ. ಸ್ವಲ್ಪ ದಿನಗಳ ನಂತರ ಚೇತರಿಸಿಕೊಂಡ. ಮತ್ತೆ ಜೀವನವನ್ನು ಆನಂದಿಸುವಂತಾದ. ಕೆಲ ವರ್ಷಗಳ ಹಿಂದೆ ಇನ್ನೊಬ್ಬ ಸಲಿಂಗಕಾಮಿಯನ್ನು ತನ್ನ 'ಜೀವನ ಸಂಗಾತಿ' ಮಾಡಿಕೊಂಡ. ಅವರಿಬ್ಬರ 'ಮದುವೆ ಪಾರ್ಟಿಗೆ' ನಾವೆಲ್ಲ ಹಾಜರಾಗಿ, ಹೊಸ 'ದಂಪತಿ'ಗಳನ್ನು ಹಾರೈಸಿ ಬಂದೆವು.


ಅದೆಲ್ಲಾ ಇರಲಿ, ಸಮಾಜ ಸಲಿಂಗಕಾಮಿಗಳನ್ನು ವಿಕೃತರಂತೆ ನೋಡುವುದರಿಂದ ಅದೆಷ್ಟೋ ಜನ 'ಕ್ಲಾಸೆಟ್ ಗೇ'ಗಳಾಗಿರುತ್ತಾರೆ, ಅಂದರೆ ತಮಗೆ ಇಷ್ಟವಿಲ್ಲದಿದ್ದರೂ ಮಹಿಳೆಯರನ್ನು ಮದುವೆಯಾಗಿ, ತಂದೆಯಾಗಿ 'ಸಾಮಾನ್ಯರಂತೆ' ಇರುತ್ತಾರೆ, ಆದರೆ ಕದ್ದುಮುಚ್ಚಿ ತಮ್ಮ ಖಾಸಗಿ ಆಶೆಗಳನ್ನು ತೀರಿಸಿಕೊಳ್ಳುತ್ತಿರುತ್ತಾರೆ. ಅಂತಹ ಬದುಕು ಹಲವಾರು ತರಹದ ಅಪಾಯಗಳಿಂದ ಕೂಡಿರುತ್ತದೆ.

ಹಲವು ವರ್ಷಗಳ ಹಿಂದೆ ಗಾಂಧಿಬಜಾರ್‌ನಲ್ಲಿ ಒಂದು ಪ್ರಕರಣ ನಡೆಯಿತು. ಇಲ್ಲೊಬ್ಬ ಒಂದು ಔಷಧಿ ಅಂಗಡಿ ನಡೆಸುತ್ತಿದ್ದ. ಹೆಂಡತಿ ಮತ್ತು ಮಕ್ಕಳನ್ನು ಹೊಂದಿದ್ದ ಆ 'ಗೃಹಸ್ಥ' ಕೆಲವೊಮ್ಮೆ ರಾತ್ರಿಗಳನ್ನು ತನ್ನ ಔಷಧಿ ಅಂಗಡಿಯಲ್ಲೇ ಕಳೆಯುತ್ತಿದ್ದ. ಒಂದು ದಿನ ಆತ ಮನೆಗೆ ಬರಲೂ ಇಲ್ಲ, ಅಂಗಡಿಯನ್ನು ತೆರೆಯಲೂ ಇಲ್ಲ. ಏನಾಗಿತ್ತೆಂದರೆ ಆತನನ್ನು ಅಂಗಡಿಯಲ್ಲೇ ಕೊಲೆ ಮಾಡಲಾಗಿತ್ತು. ಪೊಲೀಸರ ತನಿಖೆಯಿಂದ ಗೊತ್ತಾಗಿದ್ದೇನೆಂದರೆ ಆತ ಸಲಿಂಗಕಾಮಿಯಾಗಿದ್ದು ಅಪರಿಚಿತರಾದರೂ ತನ್ನಂತಹ ಇತರೆ ಸಲಿಂಗಕಾಮಿಗಳೊಂದಿಗೆ ಆತ ಔಷಧಿ ಅಂಗಡಿಯಲ್ಲಿ ಜೊತೆಗೂಡುತ್ತಿದ್ದ. ಅದನ್ನೇ ದುರ್ಬಳಕೆ ಮಾಡಿಕೊಂಡ ಕ್ರಿಮಿನಲ್‌ಗಳು ಆತನನ್ನು ಕೊಂದು, ಅಂಗಡಿಯಲ್ಲಿದ್ದ ಹಣವನ್ನೆಲ್ಲ ದೋಚಿ ಪರಾರಿಯಾಗಿದ್ದರು. ಆ ಅಂಗಡಿ ಮಾಲೀಕ ಹೀಗೆ ಹೊರಗಡೆ ತೋರಿಕೆಗೆ ಒಂದು ತರಹದ ಜೀವನ, ಒಳಗೆ ಖಾಸಗಿ ಆಶೆಗಳಿಗೆ ಇನ್ನೊಂದು ತರಹದ ಜೀವನ ಸಾಗಿಸದಿದ್ದರೆ ಆತ ಇಂತಹ ಅಪಾಯಕ್ಕೆ ತನ್ನನ್ನು ತೆರೆದುಕೊಳ್ಳುವ ಅಗತ್ಯವೇ ಇರಲಿಲ್ಲ. ಇನ್ನು ಆತನ ಹೆಂಡತಿಗೆ, ಬೆಳೆದು ನಿಂತಿದ್ದ ಮಕ್ಕಳಿಗೆ ಆತ ಸಲಿಂಗಕಾಮಿಯಾಗಿದ್ದ ಎಂದು ಗೊತ್ತಾದಾಗ ಸಮಾಜದಲ್ಲಿ ಅವರ ಪರಿಸ್ಥಿತಿ ಹೇಗಿದ್ದಿರಬಹುದು ಎಂದು ಯೋಚಿಸಿ.


ಸಲಿಂಗಕಾಮ ವಿಚಿತ್ರವೂ ಅಲ್ಲ, ವಿಕೃತವೂ ಅಲ್ಲ, ಅದು ಮನೋವೈದ್ಯರಿಂದಲೋ, ಶಸ್ತ್ರಚಿಕಿತ್ಸೆಯಿಂದಲೋ ನಿವಾರಿಸಬಹುದಾದ ಕಾಯಿಲೆಯೂ ಅಲ್ಲ. ಅದು ಹಲವರಲ್ಲಿ ಪ್ರಕೃತಿಸಹಜವಾಗಿ ಮೂಡಿಬರುವ ಆಯ್ಕೆ. ಆ ಸರಳ ಸತ್ಯವನ್ನು ನಮ್ಮ ಸಮಾಜ ಒಪ್ಪಿಕೊಂಡರೆ ಹಲವಾರು ದುರಂತಗಳನ್ನು ತಪ್ಪಿಸಬಹುದು.

ಸಮಾಜದ ಮಾತು ಬದಿಗಿರಲಿ, ಸಲಿಂಗಕಾಮಿಯೊಬ್ಬ ಹೇಗೆ ತನ್ನ ತಂದೆ ತಾಯಿಯರನ್ನು ಒಪ್ಪಿಸಬಹುದು ಎಂದು ಮೊದಲು ನೋಡೋಣ. ಮಿತ್ರ ವಿಶ್ವಾಸ್ ಹೈಸ್ಕೂಲಿನಲ್ಲಿದ್ದಾಗಲೇ ತಾನು ಇತರರಂತಿಲ್ಲ ಎಂಬುದರ ಅರಿವಾಗಿತ್ತು. ಕಾಲೇಜಿಗೆ ಬರುವಷ್ಟರಲ್ಲಿ ತಾನೊಬ್ಬ ಸಲಿಂಗಕಾಮಿ ಎಂಬುದರ ಬಗ್ಗೆ ವಿಶ್ವಾಸನಿಗೆ ದೃಢವಾಗಿತ್ತು. ಆದರೆ ತನಗೂ, ತನ್ನವರಿಗೂ ಸುಳ್ಳು ಹೇಳುತ್ತಾ ಬದುಕುವುದು ಅವನಿಗೆ ಬೇಡವಾಗಿತ್ತು. ಆದ್ದರಿಂದ ಡಿಗ್ರಿ ಮುಗಿಸಿದ ಕೂಡಲೇ ತನ್ನ ಲೈಂಗಿಕ ಆಯ್ಕೆ ಎಂತಹದ್ದು ಎಂದೆಲ್ಲ ಒಂದು ಪತ್ರದಲ್ಲಿ ತನ್ನ ಅಪ್ಪ ಅಮ್ಮನಿಗೆ ವಿವರಿಸಿ ಮುಂಬೈಗೆ ಓಡಿ ಹೋದ. ಅಲ್ಲೇನು ಅವನಿಗೆ ನೆಮ್ಮದಿಯ ಬದುಕು ಕಾದಿರಲಿಲ್ಲ. ಕೆಲ ದಿನಗಳಲ್ಲೇ ಕೈಯಲ್ಲಿದ್ದ ಕಾಸೆಲ್ಲಾ ಕರಗಿಹೋಯಿತು. ಒಂದೆರೆಡು ದಿನ ರಸ್ತೆಬದಿ ರಾತ್ರಿಗಳನ್ನು ಕಳೆದಿದ್ದೂ ಆಯಿತು. ಬೆಂಗಳೂರಿಗೆ ವಾಪಸ್ ಬಂದ ವಿಶ್ವಾಸ್ ತನ್ನ ಸಂಬಂಧಿಕರೊಬ್ಬರ ಮನೆಯಲ್ಲಿ ಉಳಿದುಕೊಂಡಿದ್ದ. ಆ ಸಂಬಂಧಿ ವಿಶ್ವಾಸನ ತಂದೆ ಮತ್ತು ತಾಯಿಗೆ ಸಾಂತ್ವನ ಹೇಳಿ ಮಗನನ್ನು ಒಪ್ಪಿಕೊಂಡು ಅವನನ್ನು ವಾಪಸ್ ಮನೆಗೆ ಬಿಟ್ಟುಕೊಳ್ಳಬೇಕೆಂದು ಮನವೊಲಿಸಿದರು. ಮಗನ ನಾಪತ್ತೆಯಿಂದಾಗಿ ಚಿಂತಾಕ್ರಾಂತರಾಗಿದ್ದ ಅವರೂ "ಅದು ಹೇಗಿರುತ್ತೀಯೋ, ಇರು. ಆದರೆ ನಮ್ಮ ಜೊತೆಯೇ ಇರು" ಎಂದು ಮಗನನ್ನು ಮನೆಗೆ ಬರಮಾಡಿಕೊಂಡರು.

ವಿಶ್ವಾಸ್ ಅಲ್ಲಿಗೆ ಸುಮ್ಮನಾಗಲಿಲ್ಲ. ಸಾಮಾನ್ಯವಾಗಿ ಮಗ ಸಲಿಂಗಕಾಮಿ ಎಂದು ಗೊತ್ತಾದಕೂಡಲೇ ತಂದೆ ತಾಯಿ ಆತನನ್ನು ವೈದ್ಯರ ಬಳಿ ಕರೆದುಕೊಂಡು ಹೋಗಿ ಅವನ ಸಮಸ್ಯೆಗೆ 'ಚಿಕಿತ್ಸೆ' ಕೊಡಿಸಲು ಯತ್ನಿಸುತ್ತಾರೆ. ಆದರೆ ವಿಶ್ವಾಸನೇ ತನ್ನ ಹೆತ್ತವರನ್ನು ವೈದ್ಯರ ಹತ್ತಿರ ಕರೆದುಕೊಂಡು ಹೋದ. ಅಲ್ಲಿ ವೈದ್ಯರು "ನಿಮ್ಮ ಮಗನಿಗೆ ಏನೂ ಆಗಿಲ್ಲ, ಅವನಿಗೆ ಯಾವ ರೋಗವೂ ಇಲ್ಲ. ನೀವು ಹರಸಾಹಸ ಮಾಡಿದರೂ ಅವನ ಲೈಂಗಿಕ ಆಯ್ಕೆಯನ್ನು ಬದಲಾಯಿಸಲಾಗುವುದಿಲ್ಲ. ನಿಮ್ಮ ಮಗ ಬುದ್ಧಿವಂತ, ಪ್ರತಿಭೆ ಹೊಂದಿರುವವನು, ನಿಮ್ಮ ಮೇಲೆ ಪ್ರೀತಿ ಇಟ್ಟುಕೊಂಡಿರುವವನು. ಅವನು ಹೇಗಿದ್ದಾನೋ ಹಾಗೆ ಒಪ್ಪಿಕೊಂಡು ನಿಮ್ಮ ಇತರೆ ಮಕ್ಕಳನ್ನು ಹೇಗೆ ನೋಡಿಕೊಳ್ಳುತ್ತೀರೋ ಹಾಗೆಯೇ ಇವನನ್ನೂ ನೋಡಿಕೊಳ್ಳಿ" ಎಂದು ವಿವರಿಸಿದರು. ಮೊದಮೊದಲು ಆ ತಂದೆ ತಾಯಂದಿರಿಗೆ ಅದನ್ನು ಜೀರ್ಣಿಸಿಕೊಳ್ಳುವುದು ಕಷ್ಟವೇ ಆಗಿತ್ತು. ಆದರೆ ನಿಧಾನವಾಗಿ ಅವರ ಮಗನ ಬುದ್ಧಿವಂತಿಕೆ ಮತ್ತು ಪ್ರತಿಭೆಯನ್ನು ಮೆಚ್ಚಲಾರಂಭಿಸಿದರು.



ಕಂಡಹಾಗೆ




• ಗೌರಿ ಲಂಕೇಶ್
editorlankesh@gmail.com

ಆತ ಕೂಡ ಮಲ್ಟಿ ನ್ಯಾಷನಲ್ ಕಂಪನಿ ಸೇರಿ ಕೈತುಂಬ ದುಡಿಯಲಾರಂಭಿಸಿದನಲ್ಲದೆ, ಸಂತೋಷದಿಂದ, ನೆಮ್ಮದಿಯಿಂದ ಬದುಕುತ್ತಿದ್ದ ತಮ್ಮ ಲೈಂಗಿಕ ಆಯ್ಕೆಯ ಬಗ್ಗೆ ಮುಚ್ಚುಮರೆ ಮಾಡದ ಇತರೆ ಮಿತ್ರರನ್ನೂ ತನ್ನ ಕುಟುಂಬದವರಿಗೆ ಪರಿಚಯಿಸಿದ. ಕಾಲಕ್ರಮೇಣ ಆತನ ತಂದೆ, ತಾಯಿ, ಅಣ್ಣ ಮತ್ತು ಸಹೋದರಿಯರು ಮಾತ್ರವಲ್ಲ ಅವನ ಸಂಪ್ರದಾಯಸ್ಥ ಅಜ್ಜಿಯಂದಿರೂ ಅವನ ಜೀವನ ಶೈಲಿಯನ್ನು ಒಪ್ಪಿಕೊಂಡರು.

ಪ್ರಿಯಾ ವೇದಿಯ ಆತ್ಮಹತ್ಯೆಯ ಬಗ್ಗೆ ವಿಶ್ವಾಸನೊಂದಿಗೆ ಚರ್ಚಿಸಿದಾಗ ಆತ "ಸಲಿಂಗಕಾಮಿಗಳು ತಮ್ಮ ಹೆತ್ತವರಿಗೇ ಸುಳ್ಳು ಹೇಳಿ ಜೀವಿಸುತ್ತಿರುತ್ತಾರೆ. ಹಾಗೆ ಸುಳ್ಳು ಹೇಳುವ ಮೂಲಕ ಅವರು ಸಹಸ್ರಾರು ವರ್ಷಗಳಿಂದ ಸಲಿಂಗಕಾಮದ ಬಗ್ಗೆ ನಮ್ಮ ಸಮಾಜದಲ್ಲಿ ಮೂಡಿರುವ ಅಪಕಲ್ಪನೆಯನ್ನು ಮುಂದುವರೆಸುತ್ತಾರೆ. ಆ ತಪ್ಪು ಕಲ್ಪನೆಗಳನ್ನು ನಿವಾರಿಸುವ ಜವಾಬ್ದಾರಿ ಸಲಿಂಗಕಾಮಿಗಳ ಮೇಲಿದೆ. ಇವತ್ತು ಸೋಶಿಯಲ್ ಮೀಡಿಯಾಗಳಲ್ಲಿ, ಸಿನಿಮಾಗಳಲ್ಲೂ ಸಲಿಂಗಕಾಮದ ಬಗ್ಗೆ ಹೆಚ್ಚೆಚ್ಚು ಮಾಹಿತಿ ಲಭ್ಯವಿದೆ. ಉದಾಹರಣೆಗೆ ಕಳೆದ ವಾರ 'ಮಾರ್ಗರೀಟಾ ವಿತ್ ಅ ಸ್ಟ್ರಾ' ಎಂಬ ಹಿಂದಿ-ಇಂಗ್ಲಿಷ್ ಸಿನಿಮಾ ಬಿಡುಗಡೆಗೊಂಡಿದೆ. ಅಂಥವನ್ನೆಲ್ಲ ಹೆತ್ತವರಿಗೆ ಪರಿಚಯಿಸಿದರೆ ಅವರು ಸಲಿಂಗಕಾಮವನ್ನೂ ಸಹಜ ಎಂದು ಒಪ್ಪಿಕೊಳ್ಳುತ್ತಾರೆ. ಇಲ್ಲವೆಂದರೆ ಸಲಿಂಗಕಾಮಿಗಳು ತಮಗೆ ಮಾತ್ರವಲ್ಲ, ತಮ್ಮ ಸುತ್ತ ಇರುವ ಎಲ್ಲರಿಗೂ ವಂಚನೆ ಮಾಡಿದಂತಾಗುತ್ತದೆ. ಹಾಗಾಗಕೂಡದು" ಎಂದು ಹೇಳಿದ.

ರಾಧಾಳಿಗೆ ಇದ್ದ ಧೈರ್ಯ ಪ್ರಿಯಾಳಿಗೆ ಇದ್ದಿದ್ದರೆ, ಹಾಗೆಯೇ ವಿಶ್ವಾಸನಿಗೆ ಇರುವ ಸ್ಪಷ್ಟತೆ ಆಕೆಯ ಪತಿಗೆ ಇದ್ದಿದ್ದರೆ, ಆಕೆ ಸಾಯುತ್ತಿರಲ್ಲಿಲ್ಲ ಮತ್ತು ಆಕೆಯ ಗಂಡ ಈಗಿನಂತೆ ಕಂಬಿ ಎಣಿಸುತ್ತಿರಲಿಲ್ಲ. ■

ಈಗೋ! ತಗೋ! ಬುಲೆಟ್ ಟ್ರೇನು!



ಹಸಿದು ಹೊಟ್ಟೆ ಕೆರಿತಿದೆಯೇನು?
ಬಾ! ಉಣ್ಣು ಬುಲೆಟ್ ಟ್ರೇನು!

ನೆತ್ತಿ ಮೇಲೊಂದು ಸೂರಿಲ್ಲವೇನು?
ನಡುಗುತ್ತಿರುವೆಯಾ ಚಳಿ ಮಳೆಗೆ?
ಬಾ! ಜಿಗಿ ಬುಲೆಟ್ ಟ್ರೇನೊಳಗೆ!

ಕಟ್ಟಿಹರುಕ ಗೂಳಿಗಳು
ಕೆಂಪುನಾಮದ ಪೋಲಿಗಳು
ಪೊಲೀಸರ ಲಾಠಿಗಳು

ಬೆನ್ನು ಹತ್ತಿಕಾಡುವಾಗ
ದಮ್ಮು ಹತ್ತಿ ಓಡುತ್ತಿರುವೆಯೇನು?
ಕಣ್ತಪ್ಪಿಸು ಯಾಮಾರಿಸು ಹತ್ತಿಬಿಡು ಬುಲೆಟ್ ಟ್ರೇನು!


ಬುಲೆಟ್ ಟ್ರೇನು ಹಾಗೇನೋ!
ಎಂಥ ಸ್ಪೀಡೂ ಗೊತ್ತೇನೋ?
ಸಿರಿಯ ಗರಬಡಿದುಬಿಟ್ಟು
ಕೊಳಗೇರಿಯೂ ಕಣ್ಬಿಟ್ಟು!

ನೀನು ಒಬ್ಬ ರೈತನಾ?
ಉರುಳಿಗೆ ಕೊರಳು ಒಡ್ಡೋನಾ?
ಬುಲೆಟ್ ಟ್ರೇನಿಗೆ ತಲೆಕೊಟ್ಟುಬಿಡು!
ದೇಶ ಪ್ರೇಮಿ ಆಗಿಬಿಡು!

■ ಬದ್ರಿ ರೈನ
ಕನ್ನಡಕ್ಕೆ: ಕೆ.ಫಣಿರಾಜ್

(ಡಾ.ಬದ್ರಿ ರೈನ ನಾಲ್ಕು ದಶಕಗಳ ಕಾಲ ದೆಹಲಿ ವಿಶ್ವವಿದ್ಯಾಲಯದಲ್ಲಿ ಇಂಗ್ಲಿಷ್ ಪ್ರಾಧ್ಯಾಪಕರಾಗಿದ್ದವರು. ಸುರಿತ ಇಂಗ್ಲಿಷ್ ಕವಿಯೂ ಆಗಿರುವ ಅವರು, ಇಂದಿನ ದೇಶದ ಸ್ಥಿತಿಗತಿಯಲ್ಲಿ ನರೇಂದ್ರ ಮೋದಿಯ 'ಬುಲೆಟ್ ಟ್ರೇನ್' ಸೋಗಲಾಡಿತನವನ್ನು ಪರಿಹಾಸ್ಯ ಮಾಡಿ ಬರೆದಿರುವ ಇಂಗ್ಲೀಷ್ ಪದ್ಯದ ಅನುವಾದವಿದು)

ಇದೇ ಬುಧವಾರ ಬೆಂಗಳೂರಿನಲ್ಲಿ ಯೋಗೇಂದ್ರ ಯಾದವ್ ಅವರು 'ಸ್ವರಾಜ್ ಅಭಿಯಾನ'ದ ಪ್ರಥಮ ಸಭೆಯನ್ನು ಹಮ್ಮಿಕೊಂಡಿದ್ದರು. ಅದರಲ್ಲಿ ರೈತ ಸಂಘಗಳು, ದಲಿತ ಸಂಘಟನೆಗಳು, ಆಮ್ ಆದ್ಮಿ ಪಕ್ಷದ ಕಾರ್ಯಕರ್ತರು ಮತ್ತು ಇತರರೂ ಭಾಗವಹಿಸಿದ್ದರು. ಆ ಸಂದರ್ಭದಲ್ಲಿ ಯಾದವ್ ಅವರೊಂದಿಗೆ ನಡೆಸಿದ ಮಾತುಕತೆ ಇಲ್ಲಿದೆ.



ಯೋಗೇಂದ್ರ ಯಾದವ್

ಭರವಸೆ ಬತ್ತುವಿಕೆ ಒಂದು ದುರಂತ

ಪ್ರಶ್ನೆ: ಆಮ್ ಆದ್ಮಿ ಪಕ್ಷದಿಂದ ಹೊರಹಾಕಿದ್ದರ ಬಗ್ಗೆ ನಿಮ್ಮ ವೈಕ್ತಿಗತ ಅಭಿಪ್ರಾಯವೇನು?

ಯೋಗೇಂದ್ರ ಯಾದವ್ : ಮೊದಲನೆಯದಾಗಿ ಇದು ವ್ಯಕ್ತಿಗತ ವಿಚಾರವಲ್ಲ, ಅಥವಾ ಅಧಿಕಾರಕ್ಕಾಗಿ ನಡೆದ ಸಂಘರ್ಷವೂ ಅಲ್ಲ. ಇದು ಸ್ಪಷ್ಟವಾಗಿ ಸೈದ್ಧಾಂತಿಕ ವಿಚಾರಗಳಿಗೆ ಸಂಬಂಧಪಟ್ಟ ಸಂಘರ್ಷ. ಆದ್ದರಿಂದ ಇಲ್ಲಿ ವ್ಯಕ್ತಿಗತ ಅಭಿಪ್ರಾಯ, ಬೇಸರಗಳಿಗೆ ಹೆಚ್ಚಿನ ಮಹತ್ವವಿಲ್ಲ ಎಂಬುದು ನನ್ನ ಖಚಿತ ತಿಳುವಳಿಕೆ. ಈ ಬಗ್ಗೆ ಚರ್ಚೆ ಮಾಡುತ್ತಾ ನಾವು ನಮ್ಮ ಶಕ್ತಿಯನ್ನು ವೃಥಾ ವ್ಯಯ ಮಾಡಬಾರದೆಂದು ತೀರ್ಮಾನಿಸಿದ್ದೇವೆ.

ನಾವು ಕೆಲವು ಕನಸುಗಳು, ಆದರ್ಶಗಳನ್ನಿಟ್ಟುಕೊಂಡು ಪಕ್ಷ ಕಟ್ಟಿದ್ದೆವು. ಕೆಲವೊಂದು ನಿಯಮಗಳನ್ನು ಕೂಡ ರೂಪಿಸಿಕೊಂಡಿದ್ದೆವು. ಕೆಲವರು ಅವೆಲ್ಲಾ ಅಪ್ರಯೋಗಿಕವಾದುವು ಎಂಬ ತೀರ್ಮಾನಕ್ಕೆ ಬಂದರು. ತಮ್ಮ ಮೂಗಿನ ನೇರಕ್ಕೆ ನಿರ್ಣಯಗಳನ್ನು ತೆಗೆದುಕೊಳ್ಳುತ್ತಾ ಬಂದರು. ಮೂಲ ತತ್ವಗಳಿಗೆ ಮನ್ನಣೆ ಕೊಡದೆ ಪಕ್ಷ ದಾರಿ ತಪ್ಪುತ್ತಿದೆ ಎನಿಸಿದಾಗ ದನಿಯೆತ್ತುವುದು ನಮಗೆ ಅನಿವಾರ್ಯವಾಗಿತ್ತು, ಅದು ನಮ್ಮ ಕರ್ತವ್ಯವೂ ಆಗಿತ್ತು.

ಪ್ರಶ್ನೆ: ಭಿನ್ನಾಭಿಪ್ರಾಯಗಳನ್ನು ಬೀದಿಗೆ ತರಲು ಇಷ್ಟೊಂದು ಆತುರ ಯಾಕೆ ಬೇಕಿತ್ತು? ಹೊಸದಾಗಿ ಚುನಾಯಿತ ಸರ್ಕಾರ ಒಂದಷ್ಟು ಕಾಲ ಕೆಲಸ ಮಾಡಲು ಬಿಡಬಹುದಿತ್ತಲ್ಲ ಎಂಬ ಆರೋಪ ಕೇಳಿ ಬರ್ತಾ ಇದೆಯಲ್ಲಾ?

ಯೋಗೇಂದ್ರ ಯಾದವ್ : ವಾಸ್ತವದಲ್ಲಿ ಅರ್ಜೆಂಟು ಇದ್ದುದು ನಮಗಲ್ಲ, ಅಧಿಕಾರದ ಕೇಂದ್ರದಲ್ಲಿದ್ದವರಿಗೆ. ಅದಕ್ಕೆ ತಕ್ಕಂತೆ ಈ ಎಲ್ಲ ಬೆಳವಣಿಗೆಗಳಿಗೆ ಕಾರಣರಾಗಿದ್ದಾರೆ. ನಾವು ಎತ್ತಿದ ಯಾವ ಪ್ರಶ್ನೆಯೂ ವ್ಯಕ್ತಿಗತವಾದುದೋ ಅಥವಾ ಅಹಂಗೆ ಸಂಬಂಧಿಸಿದ್ದೋ ಆಗಿರಲಿಲ್ಲ. ಅವೆಲ್ಲವೂ ಪಕ್ಷದಲ್ಲಿ ಆಂತರಿಕ ಪ್ರಜಾತಂತ್ರವನ್ನು ಸ್ಥಾಪಿಸುವುದು, ಕಾರ್ಯಕರ್ತರ ಅಭಿಪ್ರಾಯಗಳಿಗೆ ಮನ್ನಣೆ ಕೊಡುವುದು, ಹಣಕಾಸು ವಿಚಾರದಲ್ಲಿ ಪಾರದರ್ಶಕತೆ ಕಾಪಾಡುವುದು, ಪಕ್ಷವನ್ನು ಆರ್‌ಟಿಐ ವ್ಯಾಪ್ತಿಗೆ ಒಳಪಡಿಸುವುದು ಇತ್ಯಾದಿ. ಇವೆಲ್ಲವನ್ನೂ ನಾವು ಆದ್ಯ ಕರ್ತವ್ಯವೆಂದು ಭಾವಿಸಿದ್ದೇವೆ.

ನಾವು ಈ ವಿಚಾರಗಳಲ್ಲಿ ರಾಜೀ ಮಾಡಿಕೊಳ್ಳಲು ಸುತರಾಂ ತಯಾರಿಲ್ಲ ಎಂಬುದನ್ನು ಸ್ಪಷ್ಟವಾಗಿ ಅರಿತಿದ್ದ ನಾಯಕತ್ವ ಕೂಟ ದೆಹಲಿ ಚುನಾವಣೆ ಮುಗಿಯುತ್ತಿದ್ದಂತೆ ಪೂರ್ವ ನಿಗದಿಯಂತೆ ನಮ್ಮನ್ನು ಹೊರಗೆ ಹಾಕುವ ಪ್ರಕ್ರಿಯೆಗೆ ಚಾಲನೆ ಕೊಟ್ಟರು. ಅದರಂತೆ ಎಲ್ಲವೂ ಈಗ ನಡೆದುಹೋಗಿದೆ.

ಪ್ರಶ್ನೆ: ಈಗ ನೀವು ಆರಂಭಿಸಿರುವ ಸ್ವರಾಜ್ ಅಭಿಯಾನದ ಬಗ್ಗೆ ವಿವರಿಸ್ತೀರಾ?


ಯೋಗೇಂದ್ರ ಯಾದವ್ : ಸ್ವರಾಜ್ ಅಭಿಯಾನ್ ಎಂದರೆ ಒಂದು ಚಳವಳಿ. ಇದು ಒಂದು ಸಾಮಾಜಿಕ ಚಳವಳಿಯೂ ಹೌದು, ರಾಜಕೀಯ ಚಳವಳಿಯೂ ಹೌದು. ರಾಜಕೀಯ ಎಂದರೆ ಕೇವಲ ಓಟು ಗಳಿಸಿ, ಅಧಿಕಾರ ಹಿಡಿಯುವುದು ಎಂಬ ಸೀಮಿತ ಅರ್ಥದಲ್ಲಲ್ಲ.

ಈ ಅಭಿಮಾನದ ಉದ್ದೇಶ ರಾಜಕಾರಣವನ್ನು ಸರಿಯಾದ ದಾರಿಗೆ ತರಬೇಕೆಂಬ ರಾಜಕಾರಣ. ಆ ಅರ್ಥದಲ್ಲಿ ಈ ದೇಶದ ಪ್ರಜಾತಂತ್ರದ ಸಮಸ್ಯೆಗಳನ್ನು ನಿವಾರಿಸಿ ಅದನ್ನು ಹೆಚ್ಚು ಪ್ರಜಾತಂತ್ರೀಕರಿಸುವ ರಾಜಕಾರಣ. ಕಳೆದ ಕೆಲವಾರು ದಶಕಗಳಿಂದಲೂ ವಿಭಿನ್ನ ಜನಸಮುದಾಯಗಳ ಬೇಡಿಕೆಗಳಿಗಾಗಿ, ಉನ್ನತ ಆದರ್ಶಗಳು ಮತ್ತು ಉತ್ತಮ ಸಮಾಜದ ಕನಸನ್ನು ಇಟ್ಟುಕೊಂಡು ನಡೆಯುತ್ತಿರುವ ಸಾಮಾಜಿಕ ಚಳವಳಿಗಳನ್ನು ರಾಜಕಾರಣದೊಂದಿಗೆ ಬೆಸೆಯಬೇಕಾದ ಪರ್ಯಾಯ ರಾಜಕಾರಣ ನಮ್ಮ ಸ್ವರಾಜ್ ಅಭಿಯಾನದ ಗುರಿ.

ಪ್ರಶ್ನೆ: ಪರ್ಯಾಯ ರಾಜಕಾರಣದ ಪರಿಕಲ್ಪನೆ ಬಗ್ಗೆ ಹೇಳಿ....

ಯೋಗೇಂದ್ರ ಯಾದವ್ : ಪರ್ಯಾಯ ರಾಜಕಾರಣದ ಒಂದು ಚಾರಿತ್ರಿಕ ಅವಕಾಶ ಇಂದು ಲಭ್ಯವಾಗಿದೆ. ಅಣ್ಣಾ ಚಳವಳಿಯ ಸಂದರ್ಭದಲ್ಲಿ ದೇಶಪ್ರೇಮದಿಂದ ಪ್ರೇರೇಪಿತರಾದ ಲಕ್ಷಾಂತರ ಯುವಕ ಯುವತಿಯರು ಈ ಚಳವಳಿಗೆ ಧುಮುಕಿದರು. ಎಷ್ಟೋ ಜನ ತಮ್ಮ ಉದ್ಯೋಗಗಳನ್ನು, ಮನೆ ಮಠಗಳನ್ನು ತೊರೆದು ಬಂದರು. ಅವರೆಲ್ಲರನ್ನು ಪ್ರೇರೇಪಿಸಿದ್ದು ದೇಶವನ್ನು ಭ್ರಷ್ಟಾಚಾರ ಮುಕ್ತಗೊಳಿಸುವುದು, ಈ ದೇಶದಲ್ಲಿ ಜನಪರವಾದ ಪರ್ಯಾಯ ರಾಜಕಾರಣವನ್ನು ಸ್ಥಾಪಿಸುವುದಾಗಿತ್ತು. ಇಂಥಾ ತಳಹದಿಯ ಮೇಲೆ ಎಎಪಿ ಪಕ್ಷ ರೂಪು ತಳೆದಿದ್ದನ್ನು ನಾವು ಕಂಡಿದ್ದೇವೆ.

ಆದರೆ ಇಂಥ ಆದರ್ಶಗಳು ಅಥವಾ ಮೌಲ್ಯಗಳು ಯಾವುದೇ ಒಂದು ಪಕ್ಷಕ್ಕಷ್ಟೆ ಸೀಮಿತವಾದುವಲ್ಲ, ಅಥವಾ ಯಾರೊಬ್ಬರ ವ್ಯಕ್ತಿಗತ ಆಸ್ತಿಯೂ ಅಲ್ಲ, ಅದು ಚಾರಿತ್ರಿಕವಾಗಿ



ಸೃಷ್ಟಿಯಾಗಿರುವ ನಮ್ಮ ರಾಷ್ಟ್ರೀಯ ಸಂಪತ್ತು. ಎಎಪಿ ಪ್ರಯೋಗ ಇಂಥಾ ಚಾರಿತ್ರಿಕ ಅವಕಾಶವನ್ನು ಭಾಗಶಃ ಮಾತ್ರ ಬಳಸಿಕೊಂಡಿದೆ. ಆದರ ಸಂಪೂರ್ಣ ಸದ್ವಿನಿಯೋಗ ಪಡಿಸಿಕೊಳ್ಳುವಲ್ಲಿ ವಿಫಲವಾಗಿದೆ. ಹೀಗಾಗಿ ನಾವು ಈ ರಾಷ್ಟ್ರೀಯ ಅಂತಸ್ಸತ್ವ ವ್ಯರ್ಥವಾಗಲು ಬಿಡಬಾರದು. ಅದನ್ನು ಬಳಸಿಕೊಂಡು ದೇಶದಲ್ಲಿ ಪರ್ಯಾಯ ರಾಜಕಾರಣವನ್ನು ಸ್ಥಾಪಿಸುವ ಕೆಲಸ ಮಾಡಬೇಕು.

ಪರ್ಯಾಯ ರಾಜಕಾರಣ ಎಂದರೆ ಒಂದು ಪಕ್ಷವನ್ನು ಅಧಿಕಾರದಿಂದ ಇಳಿಸಿ ಮತ್ತೊಂದು ಪಕ್ಷವನ್ನು ಅಧಿಕಾರದಲ್ಲಿ ಕೂರಿಸುವುದಲ್ಲ, ಕಾಂಗ್ರೆಸ್ ಬದಲಿಗೆ ಬಿಜೆಪಿಯೋ, ಬಿಎಸ್‌ಪಿ ಬದಲಿಗೆ ಎಸ್‌ಪಿಯೋ ಬರುವುದಲ್ಲ.

ನಮ್ಮ ದೇಶ ಎದುರಿಸುತ್ತಿರುವ ಸಮಸ್ಯೆಗಳಿಗೆ ದೀರ್ಘಕಾಲೀನ ಮತ್ತು ಸುಸ್ಥಿರ ಪರಿಹಾರಗಳನ್ನು ತರುವ ಕನಸಿನೊಂದಿಗೆ ಹೊಸ ಸಾಮಾಜಿಕ ಶಕ್ತಿಗಳು ರಾಜಕೀಯಕ್ಕೆ ಬರುವಂತಾಗಬೇಕು. ಅಂಥಾ ಸಕಾರಾತ್ಮಕ ಶಕ್ತಿಗಳ ಸಂಯೋಜನೆಯೊಂದಿಗೆ ಹೊಸ ರಾಜಕಾರಣ ರೂಪುಗೊಳ್ಳಬೇಕು.

ಪ್ರಶ್ನೆ: ಸಾಮಾಜಿಕ ಚಳವಳಿಗಳು ಮತ್ತು ರಾಜಕೀಯವನ್ನು ಪರಸ್ಪರ ಬೆಸೆಯಬೇಕು ಎಂಬ ನಿಮ್ಮ ವಿಚಾರದ ಬಗ್ಗೆ ಸ್ವಲ್ಪ ವಿವರಿಸ್ತೀರಾ?

ಯೋಗೇಂದ್ರ ಯಾದವ್ : ಕಳೆದ ಸುಮಾರು 30 ವರ್ಷಗಳಲ್ಲಿ ರಾಜಕೀಯ ಪಕ್ಷಗಳ ಹೆಚ್ಚಿನ ಶಕ್ತಿ ಬಂದಿರುವುದು ಸಾಮಾಜಿಕ ಚಳವಳಿಗಳಿಂದ ಅಥವಾ ಜನ ಚಳವಳಿಗಳಿಂದಲೇ ಹೊರತು ಮುಖ್ಯಧಾರೆಯ ರಾಜಕೀಯ ಪಕ್ಷಗಳಿಂದಲ್ಲ. ಈ ಅವಧಿಯಲ್ಲಿ ಪಾರಂಪರಿಕ ರಾಜಕೀಯ ಪಕ್ಷಗಳು ನಮ್ಮ ಸಮಾಜ ಎದುರಿಸುತ್ತಿರುವ ಯಾವುದೇ ಪ್ರಮುಖ ಸಮಸ್ಯೆಯನ್ನು ಪರಿಹರಿಸುವಲ್ಲಿ ಸಂಪೂರ್ಣ ವಿಫಲವಾಗಿವೆ.

ಈ ದಶಕಗಳಲ್ಲಿ ಈ ದೇಶದಲ್ಲಿ ಹೊಸ ಶಕ್ತಿ, ಹೊಸ ವಿಚಾರಗಳು, ಹೊಸ ಸಾಮಾಜಿಕ ನಾಯಕತ್ವ ರೂಪುಗೊಂಡಿರುವುದು ಸಾಮಾಜಿಕ ಹೋರಾಟಗಳಿಂದಲೇ ಹೊರತು ರಾಜಕೀಯ ಪಕ್ಷಗಳಿಂದಲ್ಲ. ಕೆಲವೊಂದು ಸಂದರ್ಭಗಳಲ್ಲಿ ಈ ಚಳವಳಿಗಳಿಂದ ಕೆಲವು ವ್ಯಕ್ತಿಗಳನ್ನು ಈ ಪಕ್ಷಗಳು ಸೆಳೆದುಕೊಂಡಿವೆ ನಿಜ. ಇದೇ ಅವಧಿಯಲ್ಲಿ ಹೊಸ ಪಕ್ಷಗಳು ಹುಟ್ಟಿಕೊಂಡಿವೆ ಎಂಬುದೂ ನಿಜ. ಜಾತಿ ರಾಜಕಾರಣ ಮುಂತಾದವುಗಳಿಗೆ ಹೊಸರೂಪ ಕೊಟ್ಟಿರುವುದನ್ನು ಬಿಟ್ಟರೆ ಅವುಗಳಲ್ಲಿ ಅಂಥಾ ಹೊಸದೇನೂ ಇಲ್ಲ ಎಂಬುದನ್ನು ನಾವು ಕಂಡಿದ್ದೇವೆ.

ಇದೇ ಅವಧಿಯಲ್ಲಿ ರೈತ ಚಳವಳಿ, ದಲಿತ ಚಳವಳಿ, ಮಹಿಳಾ ಚಳವಳಿ ಮುಂತಾದ ಜಲ್, ಜಂಗಲ್, ಜಮೀನ್ ವಿಚಾರಕ್ಕೆ ಸಂಬಂಧಿಸಿದ ನೂರಾರು ಚಳವಳಿಗಳನ್ನು ನಾವು ಕಂಡಿದ್ದೇವೆ. ಹೀಗೆ ಅಪಾರವಾಗಿ ಸಂಚಯಿತಗೊಂಡಿದ್ದ ಹೊಸ ಆಶಯಗಳನ್ನು, ಹೊಸ ಶಕ್ತಿಯನ್ನು ಮುಖ್ಯಧಾರೆಯ ರಾಜಕೀಯ ಒಳಗೊಳ್ಳಲು ವಿಫಲವಾಗಿವೆ. ಆ ಅರ್ಥದಲ್ಲಿ ಅವು ಅಪ್ರಸ್ತುತವಾಗಿ ಹೋಗಿವೆ.

ಸಾಮಾಜಿಕ ಚಳವಳಿಗಳೊಂದಿಗೆ ರಾಜಕೀಯದ ಜೋಡಣೆಯಲ್ಲಿ ಪರ್ಯಾಯ ರಾಜಕಾರಣದ ಸಾಧ್ಯತೆ ಅಡಗಿದೆ. ಆದ್ದರಿಂದ ಜನ ಚಳವಳಿಗಳೊಂದಿಗೆ (ಎನ್‌ಜಿಒಗಳ ಜೊತೆ ಅಲ್ಲ) ಬೆಸೆದುಕೊಳ್ಳುವುದು ಪರ್ಯಾಯ ರಾಜಕಾರಣದ

ಸಂದರ್ಶ

ಮುಂದಿರುವ ಬಹು ದೊಡ್ಡ ಸವ
ಬೆಸೆದುಕೊಂಡರೆ ಮಾತ್ರ ಪರ್ಯಾಯ ರಾಜಕಾರ
ಉಳಿದು ಬೆಳೆಯಬಲ್ಲುದು, ಸದೃಢೀಕರಣಗ

*ಪ್ರಶ್ನೆ: ಈ ನಿಟ್ಟಿನಲ್ಲಿ ನೀವು ಮಾಡಿದ
ಅನುಭವದ ಬಗ್ಗೆ....*

ಯೋಗೇಂದ್ರ ಯಾದವ್ : ಆಮ್
ಆರಂಭದ ದಿನಗಳಿಂದಲೂ ನಾನು
ಚಳವಳಿಗಳೊಂದಿಗೆ ಸಂವಾದ ನಡೆಸುತ್ತಾ
ಅದೃಷ್ಟವಶಾತ್ ಈ ಜವಾಬ್ದಾರಿಯನ್ನು ಪಕ್ಷ ನ
ಆದರೆ ಈ ವಿಷಯದಲ್ಲಿ ಹೆಚ್ಚಿನದೇನನ್ನು ಸಾ
ಆದಕ್ಕೆ ಹಲವು ಕಾರಣಗಳನ್ನು ಪಟ್ಟಿ ಮಾ

ಸಾಮಾಜಿಕ ಚಳವಳಿಗಳ ನಾಯ
ವಿದ್ಯಮಾನವನ್ನು ಗಂಭೀರವಾಗಿ ಪ
ಅದನ್ನೊಂದು ಸಾಂದರ್ಭಿಕ ವಿದ್ಯಮಾ
ಭಾವಿಸಿದರು. ಎಎಪಿಯ ಸೈದ್ಧಾಂತಿಕ ತಳ
ವಿಶ್ವಾಸವಿರಲಿಲ್ಲ.

ಲೋಕಸಭಾ ಚುನಾವಣೆಯ ಸಂದಭ
ಅರ್ಧದಷ್ಟು ಅಭ್ಯರ್ಥಿಗಳು ಇಂಥಾ
ಹಿನ್ನೆಲೆಯಿಂದ ಬಂದವರು ಎಂಬುದು ಸಂ
ಆದರೆ ಅದು ಇಂದಿನ ಪರಿಸ್ಥಿತಿಗೆ ಎಷ
ಸಾಕಾಗುವುದಿಲ್ಲ.

ಸ್ವರಾಜ್ ಅಭಿಯಾನ್ ಇಂದು ಎ
ನಿರ್ಬಂಧಗಳಿಂದ ಮುಕ್ತವಾಗಿದೆ, ನಾವು
ಚಳವಳಿಗಳ ಬಗ್ಗೆ ಮುಕ್ತ ನಿರೀಕ್ಷೆ ಇಟ್ಟು
ಎಎಪಿಯಿಂದ ಹೊರಬಂದ ಒಂದು ಸ
ಆಧರಿಸಿ ಪರ್ಯಾಯ ರಾಜಕಾರಣದ
ಚಳವಳಿಯನ್ನು, ಸ್ವರಾಜ್ ಅಭಿಯಾನವ
ಸಾಧ್ಯವಿಲ್ಲ. ಪರ್ಯಾಯ ರಾಜಕಾರಣದ ಭ
ಶಕ್ತಿ ತುಂಬಬೇಕೆಂದರೆ ಸಾಮಾಜಿಕ
ಭಾಗವಹಿಸುವಿಕೆ ಬಹಳ ಮಹತ್ವದ್ದು. ಇದ
ತಿಳುವಳಿಕೆ.

*ಪ್ರಶ್ನೆ: ಸಾಮಾಜಿಕ ಚಳವಳಿಗಳಲ್ಲಿರುವ
ಒಂದು ಗಂಭೀರ ಸಮಸ್ಯೆಯಾಗಿದ
ನಿವಾರಿಸಿಕೊಳ್ಳುವ ಬಗ್ಗೆ ನಿಮ್ಮ ವಿಚಾರವ*

ಯೋಗೇಂದ್ರ ಯಾದವ್ : ಸಾಮಾಜಿಕ
ಭ್ರಷ್ಟಾಚಾರ ಇದೆಯೋ ಇಲ್ಲವೋ ಅ
ಹೇಳಲಾರೆ. ಇಲ್ಲಿನ ಪರಿಸ್ಥಿತಿಯ ಬ
ತೀರ್ಮಾನಿಸಬೇಕು. ಆದರೆ ಚಳವಳಿಗಳು ನಿಂ
ಅದು ಕೊಳೆಯಲಿಕ್ಕೆ ಶುರುವಾಗುತ್ತದೆ. ವಾಸ್ತ
ವ್ಯಕ್ತಿಗಳು ಹೇಳಿಕೊಳ್ಳುವಂಥ ವಿ
ಮಾಡುತ್ತಿರುವುದಿಲ್ಲ ಅನಿಸುತ್ತದೆ.

ಬದಲಿಗೆ ಚಳವಳಿ ಸದಾ ಹರಿವ
ಪ್ರತಿಭಟನೆಗಳು, ಹೋರಾಟಗಳು ಕ್ರಿಯಾಶೀ
ಶಕ್ತಿಯುತವಾಗಿದ್ದಾಗ ಇಂಥಾ ಸಮ
ಕಂಡುಬರುವುದಿಲ್ಲ, ಆದ್ದರಿಂದ ಚ
ಕ್ರಿಯಾಶೀಲಗೊಳಿಸುವುದೊಂದೇ ಪರಿಹಾ

*ಪ್ರಶ್ನೆ: ಸ್ವರಾಜ್ ಚಳವಳಿಯಲ್ಲಿ
ತತ್ವಾದರ್ಶಗಳನ್ನು ಸರಿಯಾಗಿ ಆಚರಿಸ
ಭವಿಷ್ಯದಲ್ಲಿ ಎಎಪಿಯ ಸಮಸ್ಯೆಗಳು ಮ
ನೋಡಿಕೊಳ್ಳಲು ಯಾವ ರೀತಿಯ ಕ್ರಮ ಕೈ*

ಯೋಗೇಂದ್ರ ಯಾದವ್ : ಎಎಪಿಯ
ಸಂಪೂರ್ಣ ವೈಫಲ್ಯ ಎಂದು ನನಗನಿಸು
ಪ್ರಯೋಗ ದೊಡ್ಡ ಯಶಸ್ಸುಗಳನ್ನು ಸಾಧಿಸಿದೆ
ನಿಸ್ವಾರ್ಥ ಸೇವೆ ಮುಂತಾದ ಆದರ್ಶಗಳ
ತಂದಿದೆ. ಎಲ್ಲಕ್ಕಿಂತ ದೊಡ್ಡ ಸಾಧನೆಯೆಂ
ಸಣ್ಣ ಶಕ್ತಿ ಹಣಬಲ ತೋಳ್ಬಲ ಅಧಿಕಾರಬಲ
ಬಲಾಢ್ಯ ಶಕ್ತಿಗಳ ವಿರುದ್ಧ ಹೋರಾಡಲು ಸಾಧ
ಸಾಧಿಸಿ ತೋರಿಸಿದೆ. ಅದು ಹತಾಶೆಗೀಡಾ
ಹೊಸ ಭರವಸೆಯನ್ನು ಮೂಡಿಸಿದೆ.

ಆದರೆ ಇದೇ ಸಂದರ್ಭದಲ್ಲಿ ಅದು ಕೆಲ
ನಮ್ಮ ಮುಂದಿಟ್ಟಿದೆ. ಹೊಸ ರಾಜಕೀಯ
ಪಾರಂಪರಿಕ ಪಕ್ಷಗಳಲ್ಲಿ ಮನೆಮಾಡಿರುವ
ಹೈಕಮಾಂಡ್ ಸಂಸ್ಕೃತಿಯ ರೋಗ, ವ್ಯ
ರೋಗ, ಅಧಿಕಾರದ ಕೇಂದ್ರೀಕರಣ ಮುಂತಾ
ಸುಲಭವಾಗಿ ತುತ್ತಾಗಬಲ್ಲುದು ಎಂಬ ಪಾ
ತೋರಿಸಿಕೊಟ್ಟಿದೆ.

ಈ ತಪ್ಪುಗಳಿಂದ ಪಾಠ ಕಲಿತು
ಪ್ರಮುಖ ತೀರ್ಮಾನಗಳನ್ನು ತೆಗೆದುಕೊಂ

1) ಸ್ವರಾಜ್ ಅಭಿಯಾನ್ ಚಳವಳಿ



ಒಕ್ಕೂಟ ಸ್ವರೂಪದ ರಾಜಕೀಯ ಸಂಘಟನೆಯಾಗಿ ರೂಪಿಸುವುದು. ಅಂದರೆ ದೆಹಲಿ ಅಥವಾ ಇನ್ನಾವುದೇ ಕೇಂದ್ರ ಎಲ್ಲವನ್ನೂ ನಿಯಂತ್ರಿಸುವ ಸಂಸ್ಕೃತಿಯನ್ನು ಒಡೆದುಹಾಕಿ ಆಯಾ ರಾಜ್ಯ ಮಟ್ಟದಲ್ಲಿ ನಿರ್ಣಯಗಳನ್ನು ಕೈಗೊಳ್ಳುವುದು. ಈ ವಿಷಯದಲ್ಲಿ ಇತರೆ ಘಟಕಗಳೊಂದಿಗೆ ಅಥವಾ ಕೇಂದ್ರದೊಂದಿಗೆ ಅಗತ್ಯ ಸಮನ್ವಯವಿದ್ದರೆ ಸಾಗುತ್ತದೆ.

2) ವ್ಯಕ್ತಿಗತ ವೈಭವೀಕರಣಕ್ಕೆ ಕಡಿವಾಣ. ಯಾವುದೇ ಜೀವಂತ ವ್ಯಕ್ತಿಗಳ ಸುತ್ತ ಪ್ರಚಾರ, ವ್ಯಕ್ತಿ ಪೂಜೆಯನ್ನು ಕಟ್ಟುನಿಟ್ಟಾಗಿ ನಿರ್ಬಂಧಿಸುವುದು.

3) ಹಣಕಾಸು ಲೆಕ್ಕಾಚಾರ ಮುಂತಾದವುಗಳಲ್ಲಿ ಪಾರದರ್ಶಕತೆ ಪಾಲಿಸುವುದು. ಆರ್‌ಟಿಐನಡಿ ಬರುವುದು ತಾಂತ್ರಿಕವಾಗಿ ಅಗತ್ಯವಿಲ್ಲದಿದ್ದರೂ ನಾವು ಅದನ್ನು ಪಾಲಿಸಬೇಕು.

4) ತೀರ್ಮಾನಗಳನ್ನು ಕೈಗೊಳ್ಳುವ ಪ್ರಕ್ರಿಯೆಯಲ್ಲಿ ಸ್ವಯಂಸೇವಕರ ಕಾರ್ಯಕರ್ತರ ಅಭಿಪ್ರಾಯಗಳಿಗೆ ಹೆಚ್ಚಿನ ಮನ್ನಣೆ ಸಿಗುವಂತೆ ಒಂದು ಮೆಕಾನಿಸಂ ರೂಪಿಸುವುದು.

5) ಸರಿಯಾದ ಸಂಘಟನಾನೀತಿ ನಿಯಮಾವಳಿಗಳನ್ನು ರೂಪಿಸಿ, ನಾಯಕರಿಂದ ಹಿಡಿದು ಸಾಮಾನ್ಯ ಕಾರ್ಯಕರ್ತರವರೆಗೂ ಎಲ್ಲರಿಗೂ ಅದು ಸಮಾನವಾಗಿ ಅನ್ವಯವಾಗುವಂತೆ ನೋಡಿಕೊಳ್ಳುವುದು.

ಇವು ಈ ಸಧ್ಯದ ನಮ್ಮ ಪ್ರಸ್ತಾಪಗಳು. ಇವೆಲ್ಲ ಮುನ್ನೆಚ್ಚರಿಕೆಗಳು ಮಾತ್ರ. ಆದರೆ ಹಳೆಯ ತಪ್ಪುಗಳು ಪುನರಾವರ್ತನೆಯಾಗದಂತೆ ಚಳವಳಿಯಲ್ಲಿ ಜಾಗೃತಿ ಮೂಡಿಸಬೇಕಾದ್ದು ಅಗತ್ಯ.

ಪ್ರಶ್ನೆ: ಈಗ ಆಮ್ ಆದ್ಮಿ ಪಕ್ಷದೊಳಗೆ ತತ್ವ ಆದರ್ಶಗಳಿಗಾಗಿ ಹೋರಾಡುವ ವ್ಯಕ್ತಿಗಳು ಇಲ್ಲ ಎಂಬುದು ನಿಮ್ಮ ಅಭಿಪ್ರಾಯವೇ?

ಯೋಗೇಂದ್ರ ಯಾದವ್ : ಪ್ರಶಾಂತ್ ಮತ್ತು ನಾನು ಹೊರಗೆ ತಳ್ಳಲ್ಪಟ್ಟದ್ದರಿಂದ, ಪಕ್ಷದಲ್ಲೇ ಉಳಿದಿರುವ ಎಲ್ಲರೂ ರಾಜಿ ಮಾಡಿಕೊಂಡಿದ್ದಾರೆ ಅಂತ ಅರ್ಥವಲ್ಲ. ಪಕ್ಷದೊಳಗಿನಿಂದಲೇ ಹೋರಾಟ ನಡೆಸುವ ಉದ್ದೇಶವನ್ನು ಹೊಂದಿದ್ದಾರೆ. ಕೆಲವರು ತಮ್ಮ ಹೋರಾಟ ಮುಂದುವರೆಸಿದ್ದಾರೆ. ಅವರು ಯಶಸ್ವಿಯಾಗಲಿ ಎಂದು ಹಾರೈಸುತ್ತೇನೆ. ಆದರೆ ವಾಸ್ತವ ಪರಿಸ್ಥಿತಿಯನ್ನು ಗಮನಿಸುವುದಾದರೆ ಇಂಥಾ ಆದರ್ಶಗಳಿಗಾಗಿ ಆಂತರಿಕ ಹೋರಾಟ ನಡೆಸುವುದು ಅಸಾಧ್ಯ ಎನ್ನುವ ಸ್ಥಿತಿ ತಲುಪಿರುವುದು ನಿಜ. ಯಾಕೆಂದರೆ ಪಕ್ಷದ ಅಧಿಕಾರವನ್ನು ಅವರು ವಶಪಡಿಸಿಕೊಂಡ ರೀತಿ, ತಮ್ಮ ದಾರಿಗೆ ಅಡ್ಡಬರುತ್ತಾರೆಂದು ಪಕ್ಷದ ಲೋಕಪಾಲ್‌ರನ್ನೇ ಹೊರಗೆ ಹಾಕಿದ್ದು, ಪ್ರಶ್ನೆ ಎತ್ತಿದ ಪ್ರತಿಯೊಬ್ಬರನ್ನೂ ಪಕ್ಷದಿಂದ ಹೊರ ಅಟ್ಟಿದ್ದು, ಭಿನ್ನಾಭಿಪ್ರಾಯಗಳನ್ನು ಸಹಿಸಿಕೊಳ್ಳದೇ ಕೊನೆಯ ದಾಳಿಯ ಅಸ್ತ್ರವನ್ನೂ ಪ್ರಯೋಗಿಸಿದ್ದು ಇವೆಲ್ಲವನ್ನೂ ಗಮನಿಸಿದರೆ ಅದು ಅಸಾಧ್ಯ ಎಂದೇ ಅನಿಸುತ್ತದೆ. ಆದರೆ ಅಂಥಾ ಆಂತರಿಕ ಹೋರಾಟದಲ್ಲಿ ತೊಡಗುವವರನ್ನು ನಿರುತ್ತೇಜನಗೊಳಿಸುವ ಉದ್ದೇಶ ನಮಗಿಲ್ಲ, ಅವರ ಹೋರಾಟಕ್ಕೆ ಇನ್ನೂ ಹೆಚ್ಚಿನ ಶಕ್ತಿ ಬರಲಿ ಎಂಬುದು ನಮ್ಮ ಹಾರೈಕೆ.

ಪ್ರಶ್ನೆ: 67 ಮಂದಿ ಎಂಎಲ್‌ಎಗಳಲ್ಲಿ ನಿಮ್ಮ ಜೊತೆ ಬಂದಿದ್ದು ಪಂಕಜ್ ಪುಷ್ಕರ್ ಒಬ್ಬರು ಮಾತ್ರ. ಇದನ್ನು ಹೇಗೆ ವಿಶ್ಲೇಷಿಸುತ್ತೀರಿ?

ಯೋಗೇಂದ್ರ ಯಾದವ್ : ವಾಸ್ತವದಲ್ಲಿ ನಾವು ಈ ಸಂಖ್ಯೆಗೆ ಎಳ್ಳಷ್ಟೂ ಗಮನ ಹರಿಸಿಲ್ಲ. ಈ ವಿಷಯದಲ್ಲಿ ... ದು ಹೊಸ ಪ್ರಯತ್ನ, ಪ್ರಾಮಾಣಿಕವಾಗಿ ಹೇಳಬೇಕೆಂದರೆ ... ಎಎಪಿ ಸರ್ಕಾರಕ್ಕೆ ಅಡಚಣೆ ಉಂಟುಮಾಡುವ ... ಉದ್ದೇಶ ನಮಗಿಲ್ಲ, ದೆಹಲಿಯಲ್ಲಿ ಉತ್ತಮ ... ನಡೆಸಬೇಕು, ಜನರ ನಿರೀಕ್ಷೆಗಳನ್ನು ಈಡೇರಿಸಬೇಕು ಎಂಬುದು ನಮ್ಮ ನಿಲುವು.

ಪಂಕಜ್ ಪುಷ್ಕರ್ ಅವರ ವಿಚಾರಕ್ಕೆ ಬರುವುದಾದರೆ ನಾವು ಅವರನ್ನು ಸಂಪರ್ಕಿಸಿ ನಮ್ಮ ಜೊತೆ ಬರುವಂತೆ ಮನವೊಲಿಸಿದ್ದಲ್ಲ. ಅವರು ನ್ಯಾಷನಲ್ ಕೌನ್ಸಿಲ್ ಸಭೆಯಲ್ಲಿ ಭಾಗವಹಿಸಿದ್ದರು. ಪಕ್ಷದಲ್ಲಿ ನಡೆಯುತ್ತಿದ್ದ ಬೆಳವಣಿಗೆಗಳನ್ನು ಸಹಿಸಿಕೊಳ್ಳಲಾಗದೆ ನಮ್ಮ ಸಭೆಯಲ್ಲಿ ಭಾಗವಹಿಸಿದರು ಅಷ್ಟೆ.

ಎಲ್ಲಕ್ಕಿಂತ ಮುಖ್ಯವಾಗಿ ಚಳವಳಿಯ ತತ್ವ ಆದರ್ಶಗಳಿಗೆ ಮಹತ್ವವಿದೆಯೇ ಹೊರತು, ಸಂಖ್ಯಾಬಲದ ಆಟದಲ್ಲಿ ನಮಗೆ ನಂಬಿಕೆ ಇಲ್ಲ.

ಪ್ರಶ್ನೆ: ದೊಡ್ಡ ಸಂಖ್ಯೆಯ ಕಾರ್ಯಕರ್ತರು ಇನ್ನೂ ಎಎಪಿ ಜೊತೆಗೇ ಉಳಿದಿದ್ದಾರಲ್ಲಾ? ಸ್ವರಾಜ್ ಅಭಿಯಾನದಲ್ಲಿ ಅವರನ್ನು ಒಳಗೊಳ್ಳುವ ಬಗ್ಗೆ ನಿಮ್ಮ ಯೋಜನೆ ಏನು?

ಯೋಗೇಂದ್ರ ಯಾದವ್ : ಪಕ್ಷದಿಂದ ಹೊರಬರುವುದು ನಮ್ಮ ಆಯ್ಕೆಯಾಗಿರಲಿಲ್ಲ, ಹೊರಗೆ ಹಾಕಲ್ಪಟ್ಟೆವು. ನಮ್ಮ ಮುಂದೆ ಮೂರು ಸಾಧ್ಯತೆಗಳಿದ್ದವು. ಪಕ್ಷ ತೊರೆದು ನಾವಾಗಿಯೇ ಹೊರಬರುವುದು, ಪಕ್ಷದೊಳಗೆ ನಡೆಯುತ್ತಿದ್ದ ವಿದ್ಯಮಾನಗಳನ್ನು ಸಹಿಸಿಕೊಳ್ಳುವುದು, ಪಕ್ಷದೊಳಗೆ ಉಳಿದುಕೊಂಡು ಮೌಲಿಕ ಪ್ರಶ್ನೆಗಳಿಗಾಗಿ ಸಂಘರ್ಷ ನಡೆಸುವುದು. ನಾವು ಈ ಮೂರನೇ ಆಯ್ಕೆಯನ್ನೇ ಆರಿಸಿಕೊಂಡೆವು. ಆದರೆ ಪಕ್ಷದ ನಾಯಕರು ಎಂಥಾ ಸ್ಥಿತಿ ತಲುಪಿದ್ದರೆಂದರೆ ಅವರು ಯಾವುದೇ ಒಂದು ಪ್ರಶ್ನೆಯನ್ನು ಸಹಿಸಿಕೊಳ್ಳಲು ಸಿದ್ಧರಿರಲಿಲ್ಲ.

ಈಗ ನಾವು ಸ್ವರಾಜ್ ಚಳವಳಿಯನ್ನು ರೂಪಿಸುವುದರಲ್ಲಿ ಹೆಚ್ಚಿನ ಗಮನ ಕೇಂದ್ರೀಕರಿಸಿದ್ದೇವೆ. ಈ ಚಳವಳಿ ರಭಸ ಪಡೆದುಕೊಂಡಂತೆಲ್ಲ ಹೆಚ್ಚಿನ ಶಕ್ತಿ ಈ ಚಳವಳಿಗೆ ಸೇರಿಕೊಳ್ಳುವುದರಲ್ಲಿ ಸಂಶಯವಿಲ್ಲ, ಯಾಕೆಂದರೆ ಎಎಪಿಯ ಹುಟ್ಟು ಇಂಥಾ ಆದರ್ಶದ ಚಳವಳಿಯಿಂದಲೇ ಎಂಬುದನ್ನು ನಾವು ಮರೆಯಬಾರದು. ಎಎಪಿ ಜನರಲ್ಲಿ ಒಂದು ತರಹದ ಭರವಸೆಯನ್ನು ಹುಟ್ಟುಹಾಕಿತ್ತು, ಆ ಭರವಸೆ ಬತ್ತಿಹೋದರೆ, ಅದೊಂದು ದುರಂತವಾಗುತ್ತದೆ.

ಪ್ರಶ್ನೆ: 'ರಾಷ್ಟ್ರೀಯವಾದ'ದಿಂದ ಚಳವಳಿ ಸ್ಫೂರ್ತಿ ಪಡೆಯಬೇಕು ಎಂಬ ನಿಮ್ಮ ಮಾತಿನ ಅರ್ಥವೇನು?

ಯೋಗೇಂದ್ರ ಯಾದವ್ : ಇಲ್ಲಿ ಒಂದು ವ್ಯತ್ಯಾಸವನ್ನು ಸ್ಪಷ್ಟಪಡಿಸಬೇಕು. ನಾವು ಹೇಳುತ್ತಿರುವುದಕ್ಕೂ ಆರೆಸ್ಸೆಸ್ ಬಿಜೆಪಿಗಳು ಹೇಳುವ ರಾಷ್ಟ್ರೀಯವಾದಕ್ಕೂ ಬಹಳ ವ್ಯತ್ಯಾಸವಿದೆ. ಅವರದು ಜರ್ಮನಿಯಿಂದ ಸ್ಫೂರ್ತಿ ಪಡೆದ ರಾಷ್ಟ್ರೀಯವಾದ. ನಮ್ಮದು ಈ ದೇಶದ ಸ್ವಾತಂತ್ರ ಚಳವಳಿಯಲ್ಲಿ ರೂಪು ತಳೆದ ರಾಷ್ಟ್ರೀಯವಾದ ಅಥವಾ ದೇಶಪ್ರೇಮ.

ಹೀಗೆ ರಾಷ್ಟ್ರೀಯವಾದ ಮತ್ತು ದೇಶಪ್ರೇಮಗಳ ನಡುವೆ ವ್ಯತ್ಯಾಸ ಇದೆ.

ನಮ್ಮ ದೇಶ ಎಂಬ ಪದ ಭಾರತದ ಗಡಿರೇಖೆಗಳಿಗೆ ಸಂಬಂಧಿಸಿದ್ದಲ್ಲ, ಅದು ಈ ದೇಶದ ಜನರ ಜೀವನಕ್ಕೆ ನೇರವಾಗಿ ಸಂಬಂಧಿಸಿದ್ದು.

ದೇಶಭಕ್ತಿ/ ದೇಶಪ್ರೇಮ ಎಂಬ ವಿಷಯ ನಮಗೆ ವ್ಯಕ್ತಿಗತ ಹಿತಾಸಕ್ತಿಗಳಿಗಿಂತ ಹೆಚ್ಚಿನದನ್ನು ಮಾಡಲು ಸ್ಫೂರ್ತಿ ಒದಗಿಸುತ್ತದೆ. ಈ ದೇಶಕ್ಕಾಗಿ ಏನನ್ನಾದರೂ ತ್ಯಾಗ ಮಾಡಲು ಪ್ರೇರಣೆಯಾಗುತ್ತದೆ. ಆದರೆ ಈ ದೇಶಭಕ್ತಿಯ ವಿಚಾರವನ್ನು ಆರೆಸ್ಸೆಸ್- ಬಿಜೆಪಿಗಳು ಗುತ್ತಿಗೆ ಹಿಡಿಯಲು ಬಿಟ್ಟುಕೊಟ್ಟದ್ದು ಜನ ಚಳವಳಿಗಳು ಎಸಗಿದ ದೊಡ್ಡ ಪ್ರಮಾದಗಳಲ್ಲಿ ಒಂದು.

ನಮ್ಮ ಸಾಂಸ್ಕೃತಿಕ ಪರಂಪರೆಯನ್ನು ಆರೆಸ್ಸೆಸ್-ಬಿಜೆಪಿಗಳಿಗೆ ಬಿಟ್ಟುಕೊಟ್ಟು ಭಾರೀ ತಪ್ಪು ಎಸಗಿದ್ದೇವೆ.

ಸಂದರ್ಶನ: **ದೊಡ್ಡಿಪಾಳ್ಯ ನರಸಿಂಹಮೂರ್ತಿ**

ಅತ್ತ ಕುಮಾರಣ್ಣ ಇತ್ತ ಡಿ.ಕೆ. ಶಿವಣ್ಣ ಅಯ್ಯೋ ನಾರಾಯಣ!

ಥೂತ್ತೇರಿ

ಯಾಹೂ

ಸಿದ್ದರಾಮಯ್ಯನ 1 ರೂ. ಕೆ.ಜಿ ಅಕ್ಕಿ ದಾನವನ್ನು ಆಡಿಕೊಂಡು ನಗುತ್ತಿದ್ದವರು ಇನ್ನೂ ಅದನ್ನು ಮುಂದುವರಿಸುತ್ತಿದ್ದಾಗಲೇ "ಇನ್ನು ಮುಂದೆ ಬಡವರಿಗೆ ಬಿಟ್ಟಿ ಅಕ್ಕಿ ಕೊಡುತ್ತೇನೆ" ಎಂದು ಸಿದ್ದು ಹೇಳಿಬಿಟ್ಟಿದ್ದಾರಲ್ಲಾ, ಇದರಿಂದ ಹೌಹಾರಿದ ಹಸಿವೇ ಇಲ್ಲದ ಜನ "ಕರ್ನಾಟಕದ ಕತೆ ಮುಗಿಯಿತು ಬಿಡಿ. ಬಿಟ್ಟಿ ಅಕ್ಕಿ ತಿಂದ ಬಡವರನ್ನ ಇನ್ನ ಮುಂದೆ ಮಾತನಾಡಿಸಲು ಸಾಧ್ಯವೆ? ಈ ಮೊದಲು ಅಕ್ಕಿ ದುಡ್ಡು ಸಂಪಾದಿಸಲು ಒಂದಿಷ್ಟಾದರು ದುಡಿಯುತ್ತಿದ್ದರು. ಈಗ ಅದೂ ಇಲ್ಲ, ಈ ಸಿದ್ದರಾಮಯ್ಯನ ಮನೆಹಾಳ ಕೆಲಸದಿಂದ ಮಲೆನಾಡಿನಲ್ಲಿನ ಕಾಫಿ ತೋಟಕ್ಕೆ



ಕೂಲಿಕಾರರು ಬರುತ್ತಿಲ್ಲ, ಬಯಲು ಸೀಮೆಯ ಅಡಿಕೆ ತೋಟಕ್ಕೆ ಆಳುಗಳು ಬರುತ್ತಿಲ್ಲ. ಸಿದ್ದರಾಮಯ್ಯನ ಕಡೆಯವರಿಗೆ ಕಾಫಿ ತೋಟ, ಅಡಕೆ ತೋಟವಿದ್ದರೆ ಇಂತಹ ಕೆಲಸ ಮಾಡುತ್ತಿದ್ದನೆ?" ಎಂದರಂತಲ್ಲಾ. ಇದೆಲ್ಲಕ್ಕಿಂತ ಮುಖ್ಯವಾಗಿ ಅನ್ನಭಾಗ್ಯದ ಫಲಾನುಭವಿಗಳಿಂದ ಅಗ್ಗದ ರೇಟಿಗೆ ಅಕ್ಕಿ ಕೊಂಡು ಹತ್ತು ರೂ.ಗೆ ಒಂದು ಇಡ್ಲಿ, ನಲವತ್ತು ರೂ.ಗೊಂದು ಪ್ಲೇಟು ಮೊಸರನ್ನ ಮಾರುತ್ತಿದ್ದ ಹೈವೇ ಹೋಟೆಲುಗಳ ಮಾಲೀಕರೂ ಕೂಡ ಕಡಿತಗೊಂಡ ಅಕ್ಕಿ ಭಾಗ್ಯದ ಕಾರ್ಯಕ್ರಮದ ವಿರುದ್ಧ ಶಾನೆ ಸಿಟ್ಟಾದರಂತಲ್ಲಾ, ಅಕ್ಕಿ ಭಾಗ್ಯದ ಜನರಲ್ಲಿ ಹಲವರು "ಸಿದ್ದರಾಮಯ್ಯನವರು ಬರೀ ಅಕ್ಕಿ ಕೊಟ್ಟರೆ ಸಾಲದು, ಜೊತೆಗೆ ಬೇಳೆ, ಮೆಣಸಿನಕಾಯಿ, ಧಾನ್ಯ ಮತ್ತು ಉಪ್ಪನ್ನೂ ಕೊಡಬೇಕು. ಅನ್ನಭಾಗ್ಯದಿಂದ ನಾವು ಬರೀ ಗಂಜಿ ಕಾಯಿಸಿಕೊಂಡು ಕುಡಿಯಲಾಗುವುದಿಲ್ಲ." ಎನ್ನತೊಡಗಿದ್ದಾರಂತಲ್ಲಾ, ಥೂತ್ತೇರಿ!

* * *

ಸಿದ್ದರಾಮಯ್ಯನ ಮತ್ತೊಂದು ತೀರ್ಮಾನಕ್ಕೂ ಅನ್ನಭಾಗ್ಯದ ಯೋಜನೆಗೆ ಬಂದ ಟೀಕೆಯಂತಹ ಪ್ರತಿರೋಧಗಳು ಬರುತ್ತಿವೆಯಂತಲ್ಲಾ. "ನಿಮ್ಮ ಜಾತಿ ಮೀಸಲಾತಿಗೆ ಆಧಾರಗಳೇನು ಒಂದಿಷ್ಟು ಹೇಳಿ" ಎಂದು ಸುಪ್ರೀಂಕೋರ್ಟು ತರಾಟೆ ತೆಗೆದುಕೊಳ್ಳಲಾಗಿ, "ಇದಕ್ಕೆ ಆಧಾರ 1931ರ ಜನಗಣತಿ" ಎಂದು ಸರ್ಕಾರಗಳು ಹೇಳುತ್ತಲೇ ಬಂದ ಪರಿಣಾಮವಾಗಿ ಛೀಮಾರಿ ಹಾಕಿಸಿಕೊಂಡು, ಹೊಸದಾಗಿ ಗಣತಿ ಆರಂಭಿಸಿದರಂತಲ್ಲಾ. ಸಹಜವಾಗಿ ನಮ್ಮ ದೇಶದ ಕೋರ್ಟುಗಳಿಗೆ ಬೆಲೆ ಕೊಡದ ಚಡ್ಡಿಗಳು ಈ ಗಣತಿ ಕಾರ್ಯವನ್ನೇ ಗೇಲಿ ಮಾಡುವುದು ಹೋಗಲಿ, ಸಮಾನತೆಗಾಗಿ ರೂಪುಗೊಂಡ ಕೆಲ ಶರಣ ಮಠಗಳೂ ವಿರೋಧಿಸುವುದು ಅವುಗಳ ಮಂದಮತಿಗೆ ತಕ್ಕುದಾಗಿಯೇ ಇದೆಯಂತಲ್ಲಾ. ಜೊತೆಗೆ ಕೆಲ ಅಧಿಕಾರಿಗಳ ಅಪಸ್ವರ ಎತ್ತಿದ್ದಾರಂತಲ್ಲಾ, ಸಿದ್ದರಾಮಯ್ಯ ಬಿಟ್ಟಿ ಅಕ್ಕಿ ಕೊಡಬೇಕಾದರೆ ಮನೆಯಲ್ಲಿ ಅನ್ನ ತಿನ್ನುವ ಜನಗಳ ಸಂಖ್ಯೆ ಕೇಳುವಂತೆ, ಜಾತಿ ಆಧಾರಿತ ಮೀಸಲಾತಿಗೆ ಆಧಾರ ಕಂಡು ಹಿಡಿಯುವಂತಹ ಸಾಮಾಜಿಕ ಸಮೀಕ್ಷಾ ವರದಿಗಾಗಿ ಬಂದವರನ್ನು ದ.ಕ. ಜಿಲ್ಲೆಯ ಚಡ್ಡಿಗಳು ಶಾನೆ ಸತಾಯಿಸುತ್ತಿದ್ದಾರಂತಲ್ಲಾ, ಸರ್ಕಾರದ ಸಂಬಳ ಪಡೆದ ನೌಕರರನ್ನು ಭಿಕ್ಷುಕರಂತೆ ಪರಿಗಣಿಸಿರುವ, ತಲೆಯಲ್ಲಿ ಗುಬ ತುಂಬಿದ ಮನೆಯವರು, "ಮುಂದೆ ಹೋಗಿ", "ಇನ್ನೊಂದು ದಿನ ಬನ್ನಿ", "ಭಾನುವಾರ ರಜದ ದಿನ ಬನ್ನಿ" ಎಂದು ಭಿಕ್ಷುಕರನ್ನು ಗದರುವಂತೆ ಅಟ್ಟುತ್ತಿವೆಯಂತಲ್ಲಾ, ರೋಗಗ್ರಸ್ತ ಸಮಾಜ ನಿರ್ಮಾಣದ ರೂವಾರಿಗಳಾದ ಚಡ್ಡಿಗಳು ಅನಾದಿ ಕಾಲದಿಂದಲೂ ಸತ್ಯವನ್ನು ಎದುರಿಸಲಾಗದೆ ಪಲಾಯನ ಮಾಡುವುದು ಇದೇನು ಹೊಸದಲ್ಲ, ಹಳೆಯ ಸಂಗತಿ ಎಂದು ಸಮೀಕ್ಷಾ ಮಾಹಿತಿದಾರರು ಮುಂದೆ ಮುಂದೆ ಹೋಗುತ್ತಿದ್ದಾರಂತಲ್ಲಾ, ಇತ್ತ ಸಿದ್ದರಾಮಯ್ಯ "ಗಣತಿ ಕಾರ್ಯ ಸರಿಯಾಗಿ ಮತ್ತು ಅವಧಿಗೆ ಸರಿಯಾಗಿ ನಡೆಯದಿದ್ದರೆ ಜಿಲ್ಲಾಧಿಕಾರಿಗಳೇ ಹೊಣೆಗಾರರು" ಎಂದಿರುವುದರಿಂದ ಮೊದಲ ಬಾರಿಗೆ ಜಿಲ್ಲಾಧಿಕಾರಿಗಳ ತಲೆಕೆಟ್ಟು ಹೋಗಿದೆಯಂತಲ್ಲಾ, ಥೂತ್ತೇರಿ!!

* * *


ಒಂದು ಸಾವಿರದ ಇನ್ನೂರು ಮಠಗಳು ಮತ್ತು ಮಠಾಧೀಶರ ನಡುವೆ ಅಭಿಮನ್ಯುವಿನಂತೆ ಹೋರಾಡುತ್ತಿರುವ ವೀರಭದ್ರ ಚೆನ್ನಮಲ್ಲ ಸ್ವಾಮಿಗೆ ಬಸವ ರಾಷ್ಟ್ರೀಯ ಪುರಸ್ಕಾರ ದೊರೆತದ್ದು ನಾಡಿನ ಸಮಾನತೆಯ ಹರಿಕಾರರ ಆತ್ಮಗಳಿಗೆ ಸಂತಸವಾಗಿದೆಯಂತಲ್ಲಾ, ಪೇಜಾವರಶ್ರೀ ಎಂಬ ಪುರೋಹಿತಶಾಹಿ ಫಣೀ ರೂಪದ ಎದುರು ಪ್ರಶ್ನೆ ಮಾಡುತ್ತ ಹೋರಾಡುತ್ತ ತಮ್ಮ ನಿಗಿನಿಗಿ ಪ್ರಾಯವನ್ನು ಕಳೆದು ಸುಸ್ತಾಗಿರುವ ಚೆನ್ನಮಲ್ಲರಿಗೆ ಬಸವ ಪುರಸ್ಕಾರ ಹೇಳಿ ಮಾಡಿಸಿದ ಪ್ರಶಸ್ತಿ ಎಂಬುದು ಅವರನ್ನು ಕಂಡರಾಗದವರೂ ಒಪ್ಪಿಕೊಂಡರಂತಲ್ಲಾ, ಕರ್ನಾಟಕದಲ್ಲಿರುವ ಸಾವಿರದಿನ್ನೂರು ಮಠಗಳು ಮನಸ್ಸು ಮಾಡಿದರೆ, ಜಾತೀಯತೆ ತೊಲಗಿ, ಅಸಮಾನತೆ ಅಳಿದು, ಎಲ್ಲರು ತಮ್ಮ ತಮ್ಮ ಆವರಣ ಮೀರಿ ಹೆಣ್ಣು ಕೊಡುವುದು, ಗಂಡು ತರುವುದನ್ನು ಮಾಡುತ್ತ ಎಲ್ಲ ಜನರೂ ಒಂದೇ ಭಾವಿಯ ನೀರು ಕುಡಿಯುತ್ತ ಒಂದೇ ಸ್ಮಶಾನದಲ್ಲಿ ಅಂತ್ಯ ಕಾಣುತ್ತ, ಮೀಸಲಾತಿ ಎಂಬ ಪಾಲುಗಾರಿಕೆ ಕಾಣೆಯಾಗಿ, ಜಾತಿ ಜನಗಣತಿಯೇ ನಡೆಯದಂತೆ ಮಾಡಬಹುದಿತ್ತಲ್ಲವೆ. ಆದರೇನು, ಜಾತಿ ಸಂಘಟನೆಗಳಂತೆಯೇ ಬದುಕುತ್ತ ಬಂದ ಮಠಗಳು ಬದುಕಲೋಸ್ಕರ ಹೊಟ್ಟೆ ಹೊರೆಯುವಂತೆ ಬದುಕುತ್ತ ಕಾಲ ದೂಡುತ್ತಿರಬೇಕಾದರೆ, ಅವುಗಳ ಉದ್ಧಾರಕ್ಕೆಂದು ಅವತರಿಸಿ ಬಂದ ಯಡಿಯೂರಪ್ಪ ಎಲ್ಲರಿಗೂ ಅವರವರ ಶಕ್ತ್ಯಾನುಸಾರ ಭಿಕ್ಷೆ ನೀಡಲಾಗಿ, ಮುಂದೆ ಅಂತಹವನ ಆಗಮನಕ್ಕಾಗಿ ಅನ್ನ ದಂಡದ ಮಠಗಳು ಕಾಯುತ್ತಿವೆಯಂತಲ್ಲಾ, ಥೂತ್ತೇರಿ!!!


* * *

ಒಬ್ಬರಿಗೆ ಇಬ್ಬರು ಲೇಸು, ಇಬ್ಬರಿಗಿಂತ ಮೂವರು ಲೇಸು ಎಂಬ ಹಳೆಯ ಗಾದೆಯಂತೆ, ಒಂದು ಬೆಂಗಳೂರನ್ನ ಹೊಡೆದು ಮೂರು ಮಾಡಲು ಹೊರಟ ಸಿದ್ದು ಸರ್ಕಾರದ ವಿರುದ್ಧ, ಹಳೆಯ ಗದ್ದುಗೆ ಜನ ಶಾನೆ ಗದ್ದಲ ಎಬ್ಬಿಸಿದ್ದಾರಂತಲ್ಲಾ, ಕೆಂಪೇಗೌಡರ ಬೆಂಗಳೂರನ್ನ ಹೊಡೆಯಲು ಬಿಡುವುದಿಲ್ಲ ಎನ್ನುತ್ತಿರುವ ದೇವೇಗೌಡರು "ನಾನಿನ್ನೂ ಬದುಕಿದ್ದೇನೆ, ಬೇಕಿದ್ದರೆ ಬಂದು ನೋಡಿ" ಎನ್ನುತ್ತಿದ್ದಾರಂತಲ್ಲಾ, ಅತ್ತ ಅವರ ಮಗ ಕುಮಾರಣ್ಣ "ಮೂರು ಭಾಗ ಅಲ್ಲ, ಮೂವತ್ತು ಭಾಗ ಮಾಡಿ ನನಗೇನು? ಬರ್ತಿನಿ" ಅಲ್ಲಿ ರಾಧಿಕಾ ಕಾಯ್ತಾ ಇದ್ದಾಳೆ ಎನ್ನುವಂತೆ ಸದನದಿಂದಲೇ ಹೊರನಡೆದರಂತಲ್ಲಾ, ಸಿದ್ದು ಎದ್ದು "ಬೆಂಗಳೂರನ್ನ ಭಾಗ ಮಾಡಿ ಎಂಬುದು ನನ್ನ ಚಿಂತನೆಯಲ್ಲಾ, ಸದಾನಂದ ಗೌಡ ಮತ್ತು ಶೆಟ್ಟರ್ ಕೂಡ ಇದೇ ಮಾತನ್ನ ಹಿಂದೆ ಹೇಳಿದ್ದಾರೆ" ಎಂದು ಪತ್ರಿಕಾ ಪ್ರಕಟಣೆ ತೋರಿ ಸಕ್ಕಾಗ ಶೆಟ್ಟರು ನಿಜಕ್ಕೂ ಎಣ್ಣೆ ಕುಡಿದಂತಾದರಲ್ಲಾ, ಹೊಸ ತಾಲ್ಲೂಕುಗಳನ್ನು ಮಾಡುವಾಗ ಪಟೇಲರು ಹಟ ಹಿಡಿದರು. ಹೊಸ ಜಿಲ್ಲೆ ಮಾಡುವಾಗ ಕುಮಾರಣ್ಣ ಯಾರ ಮಾತನ್ನು ಕೇಳಲಿಲ್ಲ. ಬೆಳೆದಿರುವುದು ಬಗ್ಗುತ್ತೆ, ಊದಿಕೊಂಡದ್ದು ಹಿಸಿಯುತ್ತೆ ಎನ್ನುವಂತೆ ಭೂದೇವಿಯ ಅರ್ಬುದ ರೋಗದಂತೆ ಬೆಳೆದು ಬೆಂಗಳೂರಿಗರ ಬದುಕನ್ನ ಅಸಹನೀಯಗೊಳಿಸಿರುವ ಬೆಂಗಳೂರು ಮೂರಾಬಟ್ಟೆಯಾದರೆ, ಉದ್ಧಾರ ಸಾಧ್ಯವೇ. ಕಾಲವೇ ಹೇಳಬೇಕು. ಆದರೆ ಇವತ್ತಿಗೂ ಕೂಡ ಸುಲಲಿತವಾದ ಕನ್ನಡ ಮತ್ತು ವ್ಯಾಕರಣ ಕಲಿಯಲಾರದ ಕನ್ನಡದ ಹುಟ್ಟು ಹೋರಾಟಗಾರರ ಸಂಕಟ ಹೇಳತೀರದಾಗಿದೆಯಂತಲ್ಲಾ, "ಅತ್ತ ಕುಮಾರಣ್ಣನ ಮೇಲೆ ಅಭಿಮಾನ, ಇತ್ತ ಡಿ.ಕೆ. ಶಿವಕುಮಾರರ ಮೇಲೆ ಪ್ರೀತಿ, ಅಯ್ಯೋ ನಾರಾಯಣ, ಹೇಗೆ ಹೋರಾಡಲಿ?" ಎಂಬ ... ಬದ್ಧರಾದ ಮಾಜಿ ಆಟೋ ಡ್ರೈವರ್‌ಗಳ ... ನಗೆ ಪಾಟಲಾಗಿದೆಯೆಂದು ... ಕಡೆಯವರು ಕನ್ನಡದಲ್ಲೇ ನಗುತ್ತಿದ್ದಾರಂತಲ್ಲಾ, ಥೂತ್ತೇರಿ!!!

ಅಂತೂ ಪೀಡೆ ತೊಲಗಿತು!

ಹೊಸ ಎಸ್ಪಿ ಚೇತನ್ ಸಿಂಗ್ ರಾಥೋಡ್ ಎಸ್ಪಿ ನಾಗರಾಜನ ಹಾದಿ ತುಳಿಯದಿರಲಿ


ಎಸ್ಪಿ ಚೇತನ್ ಸಿಂಗ್ ರಾಥೋಡ್


ಎಸ್ಪಿ ನಾಗರಾಜ

ಅಂತೂ ರಾಯಚೂರಿನ ಪೊಲೀಸ್ ವರಿಷ್ಠಾಧಿಕಾರಿ ಎಂ.ಎಸ್.ನಾಗರಾಜ್ ರಾಯಚೂರಿನಿಂದ ವರ್ಗಾವಣೆಯಾಗಿದ್ದಾನೆ. ಆತ ಜಿಲ್ಲೆಯಿಂದ ಕಾಲ್ಕಿತ್ತಿದ್ದು ಜನರಿಗೆ ಒಂದಿಷ್ಟು ನೆಮ್ಮದಿ ಸಿಕ್ಕಂತಾಗಿದ್ದರೆ, ಇಸ್ಪೀಟು ಅಡ್ಡೆಗಳನ್ನು ನಡೆಸುವ ಜೂಜುಕೋರರಿಗೆ, ಅಕ್ರಮ ಮರಳು ಸಾಗಾಣಿಕೆ ಮರಳುಗಳ್ಳರಿಗೆ ದೊಡ್ಡ ನಷ್ಟವಾಗಿದೆ. ನಾಗರಾಜ್ ಅವರನ್ನು ರಾಯಚೂರಿನಿಂದ ಎತ್ತಂಗಡಿ ಮಾಡಿ ಬೆಂಗಳೂರಿನ ಆಂತರಿಕ ಭದ್ರತೆಯ ಎಸ್ಪಿಯ ಸೀಟನ್ನು ಕೊಡಲಾಗಿದೆ. ಅವರಿಗೆ ಈ ವರ್ಗಾವಣೆ ಎಂಬುದು ಒಂದು ದೊಡ್ಡ ಶಿಕ್ಷೆಯೆ. ಏಕೆಂದರೆ, ಅವರಿಗೆ ಕೊಟ್ಟಿರುವುದು ಆದಾಯವಿಲ್ಲದ ಆಯಕಟ್ಟಿನ ಜಾಗ! ಅದಕ್ಕೆ ಬೇರೆ ಯಾರೂ ಹೊಣೆಗಾರರಲ್ಲ, ಮಾಡಿದ ಪಾಪಕ್ಕೆ ತಕ್ಕ ಶಾಸ್ತಿಯಾಗಿದೆಯಷ್ಟೆ.

ವಾಸ್ತವದಲ್ಲಿ ನಾಗರಾಜ್ ಅವರ ಎತ್ತಂಗಡಿಯಿಂದಾಗಿ ಕರ್ತವ್ಯನಿಷ್ಠೆಯಿಂದ ದುಡಿಯುವ ಪ್ರಾಮಾಣಿಕ ಅಧಿಕಾರಿಗಳಿಗೆ, ನ್ಯಾಯಬದ್ಧವಾಗಿ ಕಾವಲುಗಾರರಂತೆ ನಡೆದುಕೊಳ್ಳುವ ಮಾಧ್ಯಮಗಳಿಗೆ ಹಾಗೂ ಸಾಮಾನ್ಯ ಜನರಿಗೆ ಸಿಕ್ಕ ದೊಡ್ಡ ಜಯ ಎಂದರೆ ತಪ್ಪಲ್ಲ. ಈ ಜಯದ ಅರ್ಧ ಪಾಲು ಕ್ರೆಡಿಟ್ಟಾದರೂ ನಮ್ಮ ಪತ್ರಿಕೆಗೆ ವಿಶೇಷವಾಗಿ ಸಲ್ಲಬೇಕು. ರಾಯಚೂರಿನ ಹೊರವಲಯದ ಡಿವಿಆರ್ ಕ್ಲಬ್ ಎಂಬ ಜೂಜು-ಮೋಜು ಅಡ್ಡೆಯ ಮೇಲೆ ಜಿಲ್ಲಾಧಿಕಾರಿ ಸುಕಾಂತ್ ಸೆಂಥಿಲ್ ಮತ್ತು ಸಹಾಯಕ ಆಯುಕ್ತ ಎಂ.ಪಿ.ಮಾರುತಿ ನೇತೃತ್ವದ ತಂಡ ಪೊಲೀಸರಿಗೆ ಮಾಹಿತಿ ನೀಡದೇ ದಾಳಿ ನಡೆಸಿದ ನಂತರ ಆ ಕ್ಲಬ್ಬಿನಿಂದ ದಿನಕ್ಕೆ ಒಂದು ಲಕ್ಷ ರೂಪಾಯಿಯಂತೆ ಲಂಚ ತಿಂದು ಅದಕ್ಕೆ ಬೆಂಗಾವಲಾಗಿ ನಿಂತಿದ್ದ ನಾಗರಾಜ್‌ನ ಬಣ್ಣವನ್ನು ನಮ್ಮ ಪತ್ರಿಕೆ ಧೈರ್ಯವಾಗಿ ಬಯಲು ಮಾಡಿತ್ತು. ನಾಗರಾಜನನ್ನು ಬಚಾವು ಮಾಡುವುದಕ್ಕೆ ಈಶಾನ್ಯ ವಲಯದ ಐಜಿಪಿ ಸುನೀಲ್ ಅಗರ್‌ವಾಲ್ ಕೆಳಹಂತದ ಅಧಿಕಾರಿಗಳನ್ನು ಸಸ್ಪೆಂಡ್ ಮಾಡಿ, ಮತ್ತೆ ರೀಇನ್‌ಸ್ಟೇಟ್ ಮಾಡಿದ್ದನ್ನೂ ಯಾವ ಅಳುಕೂ ಇಲ್ಲದೇ ಖಾರವಾಗಿ ಪ್ರಶ್ನಿಸಿತ್ತು. ನಮ್ಮ ಪತ್ರಿಕೆಯಲ್ಲಿ ಒಂದಾದ ಮೇಲೆ ಒಂದರಂತೆ ಎರಡು ಸಂಚಿಕೆಗಳಲ್ಲಿ ಪ್ರಕಟವಾದ ವಸ್ತುನಿಷ್ಠ ವರದಿಗಳು ರಾಜ್ಯ ಸರ್ಕಾರದಲ್ಲಿರುವ ಅನೇಕ ಮಂತ್ರಿಗಳ ಮತ್ತು ಪೊಲೀಸ್ ಇಲಾಖೆಯ ಉನ್ನತ ಅಧಿಕಾರಿಗಳ ಗಮನ ಸೆಳೆದ ಪರಿಣಾಮವಾಗಿ ಇಂದು ನಾಗರಾಜ್ ಎತ್ತಂಗಡಿಯಾಗಿದ್ದಾನೆ.


ನಾಗರಾಜ್ ಜಾಗಕ್ಕೆ ಈಗ ಬಳ್ಳಾರಿಯ ಪೊಲೀಸ್ ವರಿಷ್ಠಾಧಿಕಾರಿಯಾಗಿದ್ದ ಚೇತನ್ ಸಿಂಗ್ ರಾಥೋಡ್ ಅವರನ್ನು ರಾಯಚೂರಿನ ಎಸ್ಪಿಯಾಗಿ ವರ್ಗಾವಣೆ ಮಾಡಲಾಗಿದೆ. ಈತ ಬಹಳ ದಕ್ಷ, ಸ್ವಚ್ಛ ಮತ್ತು ಪ್ರಾಮಾಣಿಕ ಅಧಿಕಾರಿ ಎಂದು ಬಲ್ಲವರು ಹೇಳುತ್ತಾರೆ. ಅದು ನಿಜವೇ ಆಗಿದ್ದಲ್ಲಿ ರಾಯಚೂರು ಜಿಲ್ಲೆಗೆ ಆಡಳಿತಾತ್ಮಕವಾಗಿ ಹೊಸ ರೂಪು ಕೊಡಲು ಹೊರಟಿರುವ ಖಡಕ್ ಜಿಲ್ಲಾಧಿಕಾರಿ ಎಸ್.ಸುಕಾಂತ್ ಸೆಂಥಿಲ್‌ಗೆ ಒಳ್ಳೆಯ ಜೋಡಿಯಾಗುತ್ತಾರೆ. ಇಲ್ಲಿ ಕಾರ್ಯಾರಂಭ ಮಾಡುವ ಮುನ್ನ ಚೇತನ್ ಸಿಂಗ್ ರಾಥೋಡ್ ಕೆಲವು ಅಂಶಗಳನ್ನು ಗಮನಿಸುವ ಅವಶ್ಯಕತೆಯಿದೆ.

ಮೊದಲನೆಯದಾಗಿ, ಇಲ್ಲಿನ ಮರಳು ದಂಧೆ. ದಕ್ಷಿಣ ಭಾರತದ ಎರಡು ಬೃಹತ್ ನದಿಗಳಾದ ಕೃಷ್ಣಾ ಮತ್ತು ತುಂಗಭದ್ರಾಗಳ ನಡುವೆ ಮೈಚೆಲ್ಲಿ ಮಲಗಿರುವ ರಾಯಚೂರು ದೋಆಬ್ ನೀರು ಮತ್ತು ಮರಳುಗಳ ದೃಷ್ಟಿಯಿಂದ ಬಹಳ ಶ್ರೀಮಂತ ಜಿಲ್ಲೆ. ದೇವದುರ್ಗ, ಮಾನವಿ ಮತ್ತು ರಾಯಚೂರು ತಾಲೂಕುಗಳ ವಿವಿಧ ಪ್ರದೇಶಗಳಲ್ಲಿ ಕೃಷ್ಣಾ ಮತ್ತು ತುಂಗಭದ್ರಾ ನದಿಗಳಲ್ಲಿ ಯಥೇಚ್ಛ ಮರಳು ಸಂಪತ್ತಿದೆ. ಈ ಪ್ರಾಕೃತಿಕ ಸಂಪತ್ತೇ ಜಿಲ್ಲೆಗೆ ಶಾಪವೂ ಆಗಿ ಪರಿಣಮಿಸಿದೆ. ಅಕ್ರಮ ಮರಳು ಗಣಿಗಾರಿಕೆಯ ಮಾಫಿಯಾಗಳು ತಲೆಯೆತ್ತಿ ಹಗಲು, ಇರುಳು ಎನ್ನದೇ ನದಿಗಳ ಒಡಲನ್ನು ಬಗೆಯಲಾರಂಭಿಸಿಬಿಟ್ಟಿವೆ. ಈ ಎಲ್ಲಾ ಅಕ್ರಮ ಗಣಿಗಾರಿಕೆಗೆ ಇಲ್ಲಿನ ಪೊಲೀಸರೇ ಬೆಂಗಾವಲಾಗಿದ್ದಾರೆ. ಈಗ ಚೇತನ್ ಸಿಂಗ್ ರಾಥೋಡ್ ಅವರನ್ನೂ ಬುಟ್ಟಿಗೆ ಹಾಕಿಕೊಳ್ಳುವ ಪ್ರಯತ್ನವನ್ನು ಮರಳು ಮಾಫಿಯಾ ಮಾಡದಿರಲಾರದು. ಅದರ ಬಗ್ಗೆ ಅವರು ಎಚ್ಚರ ವಹಿಸಬೇಕಿದೆ.

ಒಂದು ಉದಾಹರಣೆ ನೋಡಿ. ಅಕ್ರಮ ಗಣಿಗಾರಿಕೆ ಎಂದರೆ ಪ್ರಭುತ್ವದ ಸಂಪತ್ತನ್ನು ಕದಿಯುವ ಕ್ರಿಮಿನಲ್ ಅಪರಾಧ ಎಂದು ಸುಪ್ರೀಂ ಕೋರ್ಟು ಕಳೆದ ವರ್ಷ ತನ್ನ ಆದೇಶವೊಂದರಲ್ಲಿ ವ್ಯಾಖ್ಯಾನಿಸಿದೆ. ಹಾಗಾಗಿ, ಭಾರತೀಯ ದಂಡ ಸಂಹಿತೆ ಸೆಕ್ಷನ್ 378 ಮತ್ತು 379ರ ಪ್ರಕಾರ (ಕಳ್ಳತನ ಮತ್ತು ಕಳ್ಳತನಕ್ಕೆ ಶಿಕ್ಷೆ) ಹಾಗೂ 447ರ ಪ್ರಕಾರ (ಸಾರ್ವಜನಿಕ ಆಸ್ತಿಗಳ ಅತಿಕ್ರಮಣ) ಆರೋಪಿಗಳ ವಿರುದ್ಧ ಪ್ರಕರಣ ದಾಖಲಿಸಬೇಕೆಂದು ಪೊಲೀಸರಿಗೆ ಮತ್ತು ಎಲ್ಲಾ ಕೆಳಹಂತದ ನ್ಯಾಯಾಲಯಗಳಿಗೂ ಸೂಚಿಸಿದೆ.

ಆದರೆ ಎಸ್ಪಿ ನಾಗರಾಜ ಖುದ್ದಾಗಿ ಎಲ್ಲಾ ಪೊಲೀಸ್ ಸ್ಟೇಷನ್‌ಗಳಿಗೆ ಫೋನ್ ಮಾಡಿ ಮರಳುಗಳ್ಳರ ವಿರುದ್ಧ ಭಾರತೀಯ ದಂಡ ಸಂಹಿತೆ ಸೆಕ್ಷನ್ 378 ಮತ್ತು 379ರ ಅಡಿಯಲ್ಲಿ ಪ್ರಕರಣ ದಾಖಲು ಮಾಡಬೇಡಿ ಎಂದು ಕಟ್ಟಾಜ್ಞೆ ವಿಧಿಸಿದ್ದ! ಈ ರೀತಿ ಕಳ್ಳತನದ ಕಲಮುಗಳಡಿ ಪ್ರಕರಣ ದಾಖಲಿಸಿಬಿಟ್ಟರೆ ಪ್ರಕರಣಗಳು ಕೋರ್ಟಿನ ಅಂಗಳಕ್ಕೆ ಬಿದ್ದುಬಿಡುತ್ತವೆ, ಆಗ ತನಗೆ ಮರಳುಗಳ್ಳರ ಜೊತೆ ನೆಗೋಶಿಯೇಷನ್ ಮಾಡಿ ಡೀಲು ಕುದುರಿಸಿ ಮೇಯುವುದಕ್ಕೆ ಅವಕಾಶವೇ ಸಿಗುವುದಿಲ್ಲ ಎಂಬುದು ಅದಕ್ಕೆ ಕಾರಣ. ಪರಿಣಾಮವಾಗಿ, ಪೊಲೀಸರು ಮರಳ ಲಾರಿಗಳನ್ನು, ಜೆಸಿಬಿಗಳನ್ನು, ಟ್ರ್ಯಾಕ್ಟರುಗಳನ್ನು ವಶಪಡಿಸಿಕೊಳ್ಳುತ್ತಿದ್ದರು, ಆಮೇಲೆ ಮರಳುಗಳ್ಳರು ನೇರವಾಗಿ ಎಸ್ಪಿಯ ಜೊತೆ ಮಾತುಕತೆ ನಡೆಸಿ ಡೀಲ್ ಕುದುರಿಸಿಕೊಂಡುಬಿಡುತ್ತಿದ್ದರು. ಕಪ್ಪಕಾಣಿಕೆ ಪಡೆದ ನಾಗರಾಜ ಸಣ್ಣಮಟ್ಟ ದಂಡ ಹಾಕಿ ಅವರನ್ನು ಬಿಟ್ಟುಬಿಡುತ್ತಿದ್ದರು. ಇದು ಪುನರಾವರ್ತನೆ ಆಗದಂತೆ ನೋಡಿಕೊಳ್ಳುವ ಜವಾಬ್ದಾರಿ ಚೇತನ್ ಸಿಂಗ್ ರಾಥೋಡ್ ಮೇಲಿದೆ.

ಇನ್ನೊಂದು ಉದಾಹರಣೆ ನೋಡಿ. ರಾಯಚೂರು ಜಿಲ್ಲೆ ಕೃಷ್ಣಾ ಮತ್ತು ತುಂಗಭದ್ರಾ ನದಿಹಾಸಿಗೆಯಲ್ಲಿ ಸಿಗುವ ಮರಳು ಗುಣಮಟ್ಟದಲ್ಲಿ ಉತ್ಕೃಷ್ಟವಾಗಿದ್ದರಿಂದ ಬೆಂಗಳೂರು ಮತ್ತು ಹೈದರಾಬಾದುಗಳಲ್ಲಿ ಅದಕ್ಕೆ ಭಾರೀ ಬೇಡಿಕೆಯಿದೆ. ರಾಯಚೂರು ಜಿಲ್ಲಾಧಿಕಾರಿ ಕಚೇರಿಯ ಮೊಹರು ಮತ್ತು ಸಹಿ ಇರುವ ಪರ್ಮಿಟ್ ಇದ್ದರೆ ಸಾಕು ಅದು ಕೃಷ್ಣಾ ಮತ್ತು ತುಂಗಭದ್ರಾ ನದಿಗಳಿಂದ ಬಂದ ಮರಳು ಎಂದು ಬೆಂಗಳೂರು ಮತ್ತು ಹೈದರಾಬಾದಿನ ಬಿಲ್ಡರ್‌ಗಳು ಅದಕ್ಕೆ ಹೆಚ್ಚು ದುಡ್ಡು ಕೊಟ್ಟು ಕೊಳ್ಳುತ್ತಾರೆ. ಈ ಸತ್ಯವನ್ನು ಅರಿತಿರುವ ಮರಳುಗಳ್ಳರು ಅಡ್ಡದಾರಿ ಹಿಡಿದು ಸಂಪಾದಿಸಿದ್ದೂ ಉಂಟು. ಕೊಪ್ಪಳ ಮೂಲದ ಒಬ್ಬ ವ್ಯಕ್ತಿ ರಾಯಚೂರು ಜಿಲ್ಲಾಧಿಕಾರಿಗಳ ಮೊಹರು ಮತ್ತು ಸಹಿಯನ್ನೇ ಫೋರ್ಜರಿ ಮಾಡಿ ನಕಲಿ ಪರ್ಮಿಟ್ಟುಗಳನ್ನು ಸೃಷ್ಟಿಸಿಕೊಂಡು ಬೆಂಗಳೂರು, ಹೈದರಾಬಾದುಗಳಲ್ಲಿ ಮರಳು ಮಾರುವ ದೊಡ್ಡ ಜಾಲವನ್ನು ಸೃಷ್ಟಿಸಿಕೊಂಡಿದ್ದ. ರಾಯಚೂರಿನಿಂದ ಹೊರಟ ಅವನ ಮರಳು ಲಾರಿಗಳನ್ನು ಈಗ್ಗೆ ಒಂದು ವರ್ಷದ ಹಿಂದೆ ಚಿತ್ರದುರ್ಗ-ತುಮಕೂರು ಬಳಿ ಪೊಲೀಸರು ತಪಾಸಣೆ ಮಾಡಿದಾಗ ಈ ನಕಲಿ ಪರ್ಮಿಟ್ಟುಗಳು ಸಿಕ್ಕಿಬಿದ್ದಿದ್ದವು. ಅಲ್ಲಿನ ಪೊಲೀಸರು ನೇರವಾಗಿ ರಾಯಚೂರಿನ ಅಂದಿನ ಜಿಲ್ಲಾಧಿಕಾರಿ ಎಸ್.ಎನ್.ನಾಗರಾಜು ಮತ್ತು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ.ಎಸ್.ನಾಗರಾಜ್ ಅವರಿಗೆ ವಿಷಯ ತಿಳಿಸಿದ್ದರು. ಜಿಲ್ಲಾಧಿಕಾರಿ ನಾಗರಾಜು ಅಂತೂ ರಾಯಚೂರಿನ ಪತ್ರಕರ್ತರ ಎದುರು ಅದೆಂಥಾ ಪೋಜು ಕೊಟ್ಟಿದ್ದರೆಂದರೆ "ನಕಲಿ ಪರ್ಮಿಟ್ಟುಗಳನ್ನು ಸೃಷ್ಟಿಸಿದ ವ್ಯಕ್ತಿ ಯಾರು ಎಂಬುದು ನಮಗೀಗಾಗಲೇ ಗೊತ್ತಾಗಿದೆ. ಎಫ್‌ಐಆರ್ ದಾಖಲಿಸಿ ಇನ್ನೊಂದೆರಡು ದಿನಗಳಲ್ಲಿ ಅರೆಸ್ಟ್ ಮಾಡುತ್ತೇವೆ" ಅಂತ ಘರ್ಜಿಸಿದ್ದ. ಪ್ರಾಯಶಃ ಈ ಮಾತು ಆ ನಕಲಿ ಪರ್ಮಿಟ್ ಸೃಷ್ಟಿಸಿದ ವ್ಯಕ್ತಿಗೆ ತಲುಪಲಿ ಎಂಬ ಕಾರಣದಿಂದಲೇ ಆತ ಅಷ್ಟೊಂದು ಜೋರಾಗಿ ಒದರಿದ್ದ.


ರಾಮರೆಡ್ಡಿಯವರ ಮ[illegible] ಪ್ರಮಾಣಪತ್ರ

GOVERNMENT OF KARNATAKA

Chief Registrar of Births and Deaths

DEATH CERTIFICATE

"Ensure registration of every birth and death"

ಆಮೇಲೇನಾಯಿತು? ಆ ನಕಲಿ ಪರ್ಮಿಟ್ ಸೃಷ್ಟಿಸಿದ ವ್ಯಕ್ತಿ ಪಿಡಬ್ಲ್ಯೂಡಿ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಪ್ರಕಾಶ್ ಜೊತೆಗೆ ನೇರವಾಗಿ ಜಿಲ್ಲಾಧಿಕಾರಿ ಮತ್ತು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಯನ್ನು ಭೇಟಿ ಮಾಡಿ ಡೀಲ್ ಕುದುರಿಸಿಕೊಂಡ. ಅದೆಷ್ಟು ಹಣ ಕೈಬದಲಾಯಿತೋ ಬಲ್ಲವರಿಲ್ಲ, ಆದರೆ ಆ ಪ್ರಕರಣವನ್ನು ಅಲ್ಲಿಗೆ ಸಮಾಪ್ತಿ ಮಾಡಲಾಯಿತು ಎಂಬುದಂತೂ ಎಲ್ಲರಿಗೂ ಗೊತ್ತಿರುವ ಸತ್ಯ.

ಈ ವಿಷಯದ ಬಗ್ಗೆ ಪತ್ರಿಕಾಗೋಷ್ಠಿಯೊಂದರಲ್ಲಿ ಪತ್ರಕರ್ತರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಶರಣಪ್ರಕಾಶ್ ಪಾಟೀಲರಿಗೆ ಕೇಳಿದಾಗ ಪಕ್ಕದಲ್ಲಿಯೇ ಇದ್ದ ಎಸ್ಪಿ ನಾಗರಾಜ ಸಚಿವರನ್ನೇ ದಾರಿ ತಪ್ಪಿಸಿದ್ದ. "ನಕಲಿ ಪರ್ಮಿಟ್ ಸೃಷ್ಟಿಸಿದವನು ಕೊಪ್ಪಳ ಜಿಲ್ಲೆಯವನಾದ್ದರಿಂದ ಪ್ರಕರಣವನ್ನು ಕೊಪ್ಪಳ ಪೊಲೀಸರಿಗೆ ವರ್ಗಾಯಿಸಿದ್ದೇವೆ" ಎಂದು ಎಸ್ಪಿ ನಾಗರಾಜ ತಿಪ್ಪೆ ಸಾರಿಸಿದ್ದ. ಅದು ಕಾನೂನಾತ್ಮಕವಾಗಿ ಸಾಧ್ಯವೇ ಇಲ್ಲ. ಅಪರಾಧ ಎಲ್ಲಿ ನಡೆಯುತ್ತೋ ಆ ಪ್ರದೇಶದ ಪೊಲೀಸರೇ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಬೇಕೇ ಹೊರತು ಅಪರಾಧ ಮಾಡಿದವನ ಸ್ವಂತ ಜಿಲ್ಲೆಗೆ ಅಥವಾ ರಾಜ್ಯಕ್ಕೆ ಪ್ರಕರಣವನ್ನು ವರ್ಗಾಯಿಸುವುದಕ್ಕೆ ಬರುವುದೇ ಇಲ್ಲ. ಉದಾಹರಣೆಗಾಗಿ, ದೆಹಲಿಯ ವ್ಯಕ್ತಿಯೊಬ್ಬ ಶಿವಮೊಗ್ಗದಲ್ಲಿ ಕೊಲೆ ಮಾಡಿದರೆ ಶಿವಮೊಗ್ಗ ಪೊಲೀಸರೇ ಪ್ರಕರಣ ದಾಖಲಿಸಿಕೊಂಡು, ತನಿಖೆ ಮಾಡಿ ಕೊಲೆ ಮಾಡಿದವನು ಯಾವ ರಾಜ್ಯದವನೇ ಆದರೂ ಹಿಡಿದುಕೊಂಡು ಬರಬೇಕೇ ವಿನಃ ಕೊಲೆಗಾರ ದೆಹಲಿಯವನು ಎಂಬ ಕಾರಣಕ್ಕೆ ಪ್ರಕರಣವನ್ನು ದ[illegible] ವರ್ಗಾಹಿಸುವುದಕ್ಕೆ ಬರುವುದೇ ಇಲ್ಲ. ಅದು [illegible] ಕಾಮನ್‌ಸೆನ್ಸ್ ವಿಷಯ. ಇಂತಹ ಸಾಮಾನ್ಯ ಜ್ಞಾನ [illegible] ಬುದ್ಧಿವಂತನಾದ ಎಸ್ಪಿ ನಾಗರಾಜನಿಗೆ ಇಲ್ಲ ಅಂ[illegible] ಆದರೆ, ಪತ್ರಿಕಾಗೋಷ್ಠಿಯಲ್ಲಿ ಪತ್ರಕರ್ತರ ಪ್ರ[illegible] ಬೀಸುದೊಣ್ಣೆಯಿಂದ ತಪ್ಪಿಸಿಕೊಳ್ಳುವುದಕ್ಕಾಗಿಯೇ [illegible] ಪ್ರಕರಣವನ್ನು ಕೊಪ್ಪಳಕ್ಕೆ ವರ್ಗಾಯಿಸಿದ್ದೇವೆ ಅಂತ ತಿ[illegible] ಸಚಿವರನ್ನು ದಾರಿತಪ್ಪಿಸಿದ್ದ.

ಮತ್ತೂ ಒಂದು ಉದಾಹರಣೆಯನ್ನು ನೋಡಿ. [illegible] ತಾಲೂಕಿನ ಅಕ್ರಮ ಮರಳು ಗಣಿಗಾರಿಕೆಯ ಮಾಫಿ[illegible] ಕಿಂಗ್‌ಪಿನ್ ಎಂದರೆ ಅದು ನಿಸ್ಸಂದೇಹವಾಗಿ ಕ[illegible] ಮುಖಂಡ ಅಲ್ದಾಳ್ ವೀರಭದ್ರಪ್ಪ, ಈತನ [illegible] ಜೇಸಿಬಿ ಯಂತ್ರಗಳು ತುಂಗಭದ್ರೆಯ ಒಡಲನ[illegible] ಒಂದಿಲ್ಲದೊಂದು ಕಡೆ ಬಗೆಯುತ್ತಿರುತ್ತವೆ. ನ[illegible] ಟಿಪ್ಪರ್‌ಗಳು ಹೈದರಾಬಾದಿಗೆ, ಬೆಂಗಳೂರಿಗೆ ಅಕ್ರ[illegible] ತೆಗೆದ ಮರಳನ್ನು ಸಾಗಿಸುತ್ತಲೇ ಇರುತ್ತವೆ. [illegible] ಪೊಲೀಸರೇ ಬೆಂಗಾವಲಾಗಿ ನಿಂತಿರುವುದು [illegible] ವಿಷಯವೇನಲ್ಲ. ಯಾವಾಗ ಡಿವಿಆರ್ ಕ್ಲಬ್ ದಾಳಿ [illegible] ಪೊಲೀಸರ, ಅದರಲ್ಲೂ ವಿಶೇಷವಾಗಿ ಎಸ್ಪಿ ನಾಗ[illegible] ಮಾನಮರ್ಯಾದೆಗಳನ್ನು ರಾಜ್ಯದಾದ್ಯಂತ ಹ[illegible] ಹಾಕಿತ್ತೋ, ಆಗ ತಾವು ಒಳ್ಳೆಯ ಕೆಲಸ[illegible] ಮಾಡುತ್ತಿದ್ದೇವೆಂದು ತೋರಿಸಿಕೊಳ್ಳುವ ಅನಿವಾ[illegible] ಪೊಲೀಸರಿಗೆ ಎದುರಾಯಿತು. ಅದರ ಭಾಗವ[illegible] ಮಾನ್ವಿಯ ಸಬ್‌ಇನ್ಸ್‌ಪೆಕ್ಟರ್ ದೀಪಕ್ ಬ[illegible] ಪಿಡಬ್ಲ್ಯೂಡಿ ಇಲಾಖೆಯ ಸಹಾಯಕ ಕಾಯ[illegible] ಎಂಜಿನಿಯರ್ ಸತ್ಯನಾರಾಯಣನ ಮತ್ತು [illegible] ಅಧಿಕಾರಿಗಳೊಂದಿಗೆ ಮಾನ್ವಿ ತಾಲೂಕಿನ ಯ[illegible] ಗ್ರಾಮಕ್ಕೆ ನುಗ್ಗಿ ವೀರೇಶ ಎಂಬ ರೈತನ ಹ[illegible] ಅಕ್ರಮವಾಗಿ ಸಂಗ್ರಹಿಸಲಾಗಿದ್ದ ಮರಳು ಗು[illegible] ವಶಪಡಿಸಿಕೊಂಡರು. ವಾಸ್ತವದಲ್ಲಿ ಅದು [illegible] ವೀರಭದ್ರಪ್ಪ ತುಂಗಭದ್ರಾ ನದಿಯಿಂದ ಅಕ್ರಮವಾಗಿ [illegible] ಸಂಗ್ರಹಿಸಿದ ಮರಳಾಗಿತ್ತು. ಏಪ್ರಿಲ್ 9ರಂದು [illegible] ಪಂಚನಾಮೆಯಲ್ಲಿ ಅದು ಅಲ್ದಾಳ್ ವೀರಭದ[illegible] ಮರಳು ಎಂದು ಊರಿನ ಜನ ಮತ್ತು ಹೊಲದ [illegible] ವೀರೇಶ್ ಹೇಳಿಕೆ ನೀಡಿರುವುದನ್ನು ಇದೇ ಸ[illegible] ಕಾರ್ಯಪಾಲಕ ಎಂಜಿನಿಯರ್ ಸತ್ಯನಾರ[illegible] ದಾಖಲಿಸಿದ್ದಾನೆ. ಆದರೆ, ಪೊಲೀಸರಿಗೆ ದೂರು ಕೊ[illegible] ಮಾತ್ರ ಆತ ಅಲ್ದಾಳ್ ವೀರಭದ್ರಪ್ಪನ ಹೆಸರನ್ನು ಕೈಬ[illegible] ಅಂತಿಮವಾಗಿ ನಿಜವಾದ ಅಪರಾಧಿ [illegible] ವೀರಭದ್ರಪ್ಪನನ್ನು ರಕ್ಷಿಸುವ ಸಲುವಾಗಿ ಸಬ್‌ಇನ[illegible] ದೀಪಕ್ ಬೂಸರೆಡ್ಡಿ ಮತ್ತು ಸಹಾಯಕ ಕಾಯ[illegible] ಎಂಜಿನಿಯರ್ ಸತ್ಯನಾರಾಯಣ ಸೇರಿಕೊಂಡು [illegible] ಮಾಲಿಕನಾದ ವೀರೇಶ್‌ನ ತಂದೆ ರಾಮರೆಡ್ಡಿಯ[illegible] ಕೇಸ್ ಜಡಿದರು.


ವಿಷಯ ಏನಪ್ಪಾ ಅಂದ್ರೆ, ಈ ರಾಮರೆಡ್[illegible] 2013ರ ಫೆಬ್ರವರಿ 28ನೇ ತಾರೀಖಿನಂದೆ ನಿಧನ[illegible] ಬದುಕಿರುವ ಅಪರಾಧಿ ಅಲ್ದಾಳ್ ವಿರಭದ[illegible] ರಕ್ಷಿಸುವುದಕ್ಕೆ ಈ ಇಬ್ಬರು ಅಧಿಕಾರಿಗಳು ಎರಡು [illegible] ಹಿಂದೆ ಸತ್ತಿರುವ ವ್ಯಕ್ತಿಯ ಮೇಲೆ ಮರಳು[illegible] ಕೇಸ್ ದಾಖಲಿಸಿದ್ದಾರೆ! ದಿವಂಗತ ರಾಮರೆಡ್ಡಿಯ[illegible] ವೀರೇಶ್ ಈ ಕುರಿತು ತಹಶೀಲ್ದಾರರಿಗೆ ಕ[illegible] ಕೂಡ ಕೊಟ್ಟಿದ್ದಾನೆ. (ರಾಮರೆಡ್ಡಿಯವರ [illegible] ಪ್ರಮಾಣಪತ್ರ, ಅವರ ಮಗ ತಹಶೀಲ್ದಾರರಿ[illegible] ಪತ್ರ, ಕಾರ್ಯಪಾಲಕ ಎಂಜಿನಿಯರ್ ಸತ್ಯನಾ[illegible] ಮಹಜರು ದಾಖಲೆ, ಆತ ಪೊಲೀಸರಿಗೆ ಕೊಟ್[illegible] ಪ್ರತಿ, ಪೊಲೀಸರು ದಾಖಲಿಸಿದ ಎಫ್‌ಐಆರ್ [illegible] ದಾಖಲೆಗಳು ನಮ್ಮ ಪತ್ರಿಕೆಯ ಬಳಿ ಇವೆ).

ಈ ಎಲ್ಲಾ ಅಂಶಗಳನ್ನು ಗಮನದಲ್ಲಿಟ್[illegible] ಹೊಸದಾಗಿ ಬಂದಿರುವ ಎಸ್ಪಿ ಚೇತನ್ ಸಿಂಗ್ ರ[illegible] ಹಿಂದಿನ ಎಸ್ಪಿ ನಾಗರಾಜನ ಹಾದಿ ತುಳಿ[illegible] ಎಂಬುದಷ್ಟೇ ರಾಯಚೂರಿನ ಜನರ ಅಭಿಲಾ[illegible]

■ ವರ[illegible]



ಕುಮಟಾ: ಕೇಸರಿ ಪಡೆಯಲ್ಲಿ ಅಕಾಲಿಕ ಟಿಕೆಟ್ ತುರುಸು!


ಶಾರದ ಶೆಟ್ಟಿ

ಕುಮಟಾ ವಿಧಾನಸಭಾ ಕ್ಷೇತ್ರ "ಪ್ರೀ-ಮೆಚೂರ್" ರಾಜಕಾರಣಕ್ಕೆ ಪ್ರಸಿದ್ಧ! ಇಲ್ಲಿರುವಷ್ಟು ಎಮ್ಮೆಲ್ಲೆ ಹಂಬಲಿಗಾರರು ಬೇರೆಲ್ಲೂ ಇರಲಿಕ್ಕಿಲ್ಲ. ಅಸೆಂಬ್ಲಿ ಎಲೆಕ್ಷನ್ ಮುಗಿದ ವಾರಗಳಿಗೆಯೇ ಮುಂದಿನ ಟಿಕೆಟ್ ಲೆಕ್ಕಾಚಾರಗಳು ಅಷ್ಟೂ ಪಾರ್ಟಿ ಪುಢಾರಿಗಳ ಮಧ್ಯೆ ಗರಿಗೆದರಿದ್ದು ಬಿಡುತ್ತದೆ! ನೋಡು-ನೋಡುತ್ತಿದ್ದಂತೆಯೇ ಟಿಕೆಟ್ ಚಟ ಅದೆಷ್ಟು ಜೋರಾಗುತ್ತದೆಂದರೆ, ಯಾವ ಪಾರ್ಟಿಗೆ ನೆಗೆದರೆ ಸ್ಪರ್ಧೆಯ ಅವಕಾಶ ಹೆಚ್ಚು, ಎದುರಾಳಿ ಯಾರಾಗಬಹುದೆಂಬ ಹುಚ್ಚು ದೂ(ದು)ರಾಲೋಚನೆ, ದುರಾಲೋಚನೆ ಶುರುವಾಗುತ್ತದೆ. ರಾಮಕೃಷ್ಣ ಹೆಗಡೆಜೀ ಪರ್ವದ ಕೊನೆಯಲ್ಲಿ ಕಂಡುಬಂದ ಈ ಅಕಾಲಿಕ ರಾಜಕಾರಣ ಸಂಸ್ಕೃತಿ ಈಗೀಗಂತೂ ವಿಕಾರವಾಗಿ ಹಬ್ಬಿಬಿಟ್ಟಿದೆ!

ಈಗ ಕುಮಟಾ ಕ್ಷೇತ್ರವನ್ನು ಆಳುತ್ತಿರುವುದು ಶಾರದಾ ಶೆಟ್ಟಿ ಯಾನೆ ಶೆಟ್ಟಿಯಮ್ಮ. ಈಕೆ ಹೆಸರಿಗಷ್ಟೇ ಶಾಸಕಿ. ದರ್ಬಾರೇನಿದ್ದರೂ ಯುವರಾಜ ರವಿಕುಮಾರ ಶೆಟ್ಟಿಯದು. ಮುಂದಿನ ಕಾಂಗ್ರೆಸ್ ಕ್ಯಾಂಡಿಡೇಟ್ ತಾನೇ ಎಂಬ ಲೆಕ್ಕಾಚಾರದಲ್ಲಿ ಕ್ಷೇತ್ರವನ್ನೀತ ಹದಗೊಳಿಸಿಕೊಳ್ಳ ಲಾರಂಭಿಸಿದ್ದಾನೆ. ಎಲೆಕ್ಷನ್‌ಗೆ ಬೇಕಾದ ಸಂಪನ್ಮೂಲ ಕ್ರೂಢೀಕರಿಸುವ ಭರದಲ್ಲಿ ಎಲ್ಲೆಲ್ಲಿಯೋ ಕೈ-ಬಾಯಿ ಹಾಕಿ ಹೆಸರು ಕೆಡಿಸಿಕೊಂಡಿದ್ದಾನೆ. ಹೀಗಾಗಿ ಈ ತಾಯಿ-ಮಗ ಯಾರೇ ಕಾಂಗ್ರೆಸ್‌ನಿಂದ ನಿಂತರೂ ಬಿಜೆಪಿಗೆ ಗೆಲುವು ಖಾತ್ರಿ ಎಂಬ ಭಾವನೆ ಚೆಡ್ಡಿ-ಕೇಸರಿ ಪಾಳೆಯದಲ್ಲಿ ಮೂಡಿದೆ.

ಕಳೆದ ವಿಧಾನಸಭಾ ಎಲೆಕ್ಷನ್‌ನಲ್ಲಿ ಬಿಜೆಪಿ ಕ್ಯಾಂಡಿಡೇಟಾಗಿ ಮೂರನೇ ಸ್ಥಾನಕ್ಕೆ ಹೀನಾಯವಾಗಿ ತಳ್ಳಲ್ಪಟ್ಟಿದ್ದ ದೀವರ ಹುಡುಗ ಸೂರಜ್ ಸೋನಿ ಮುಂದಿನ ಸಾರಿಯೂ ತನಗೇ ಟಿಕೆಟ್ ಎಂಬ ಧಿಮಾಕಲ್ಲಿ ಓಡಾಡುತ್ತಿದ್ದಾನೆ. ಜಿಲ್ಲಾ ಪಂಚಾಯ್ತಿ ಸದಸ್ಯೆಯಾದ ಮುದದಿಯನ್ನು ಕರೆವ ಫಂಕ್ಷನ್‌ಗಳಲ್ಲೆಲ್ಲ ತನಗೂ ಒಂದು ಕುರ್ಚಿ ಹಾಕಿಯೆಂದು ಸಂಘಟಕರಲ್ಲಿ ಅಂಗಲಾಚುವ ಈ ಬಡವಟ್ಟು ಪೋರನನ್ನು ಹಣಿಯಲು ಬಿಜೆಪಿಯ ಮೇಲು ವರ್ಗದ ಗ್ಯಾಂಗ್ ವ್ಯವಸ್ಥಿತವಾಗಿ ಕಾರ್ಯಾಚರಣೆ ನಡೆಸುತ್ತಿದೆ. ಬಿಜೆಪಿಯ ಗರ್ಭಗುಡಿ ಸಂಸ್ಕೃತಿಯಲ್ಲಿ ಒಂಥರಾ ಅಸ್ಪೃಶ್ಯನಂತಾಗಿರುವ ಸೋನಿಗೆ ಆತನ ದೀವರ ಬಳಗದ ಯುವಕರೇ ಕಾಡುತ್ತಿದ್ದಾರೆ.


ವಿಎಚ್‌ಪಿ, ಹಿಂಜಾವೆ, ಭಜರಂಗ ದಳದಲ್ಲಿರುವ ದೀವರ ಯುವಕರು ಸೋನಿ ಸೊಂಟ ಮುರಿಯಲು ಅವಕಾಶ ಕ್ಕಾಗೆಲ್ಲ ಪ್ರಯತ್ನ ಮಾಡುತ್ತಿದ್ದಾರೆ. 'ಬಂ'ರ ವಾರಸುದಾರ ನೆಂಬಂತೆ ಹಾರಾಡುವ ಸೋನಿಯ ಸೋಗಲಾಡಿತನ ತನವನ್ನು ಸ್ವ-ಜಾತಿ ದೀವರಿಂದ ದೂರಾಗಿಸಿ ಬಿಟ್ಟಿದೆ. 'ಬಂ'ಗೆ ದ್ರೋಹ ಮಾಡಿದವನೆಂಬ ಕಾರಣಕ್ಕೆ ದೀವರು ಈತನನ್ನು "ಕಾಫಿರ್" ಎಂದೇ ಪರಿಗಣಿಸಿದ್ದಾರೆ. ಬಿಜೆಪಿಯಲ್ಲಿ ಸೋನಿಗೆ ಬಂದಿರುವ ದುರ್ಗತಿ ಕೇಸರಿ-ಚೆಡ್ಡಿ ಪಾಳೆಯದ ಇನ್ನಿತರ ಟಿಕೆಟ್ ಆಕಾಂಕ್ಷಿಗಳ ಉಮೇದಿ ಹೆಚ್ಚಿಸಿಬಿಟ್ಟಿದೆ.


'ಉತ್ತರ ಕನ್ನಡದ ಕಲ್ಲಡ್ಕ' ಎಂಬ ಪ್ರಭಾವದ ಕೋಮುಪಾತಕಾರಿ ಚೆಡ್ಡಿ ಚತುರ ಹನುಮಂತ ಶಾನಭಾಗ್‌ನ ಪಾದ ಸೇವೆ ಮಾಡಿ ಸಂತೃಪ್ತಗೊಳಿಸಿದರೆ ಬಿಜೆಪಿ ಟಿಕೆಟ್ ಖಾತ್ರಿಯೆಂಬುದು ಸಾಮಾನ್ಯ ನಂಬಿಕೆ. ಆದರೆ ಗೇರು ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ವಿನೋದ್ ಪ್ರಭು ತಾನೇ ಕುಮಟಾ-ಹೊನ್ನಾವರ 'ಬಿಜೆಪಿಯ ಭೀಷ್ಮ [illegible] ಗುರ್ತಿಸಲ್ಪಟ್ಟಿದ್ದಾರೆ. ಒಮ್ಮೆ ಸ್ಥಳೀಯ ಸಂಸ್ಥೆಗಳಿಂದ [illegible] ಕ್ಷೇತ್ರಕ್ಕೆ ಸ್ಪರ್ಧಿಸಿ ಠೇವಣಿ ಕಳೆದುಕೊಂಡಿದ್ದ [illegible] ಚಾನ್ಸ್ ಕೊಡಲು ಹನ್ಮಂತಣ್ಣನಿಗೆ ಮನಸ್ಸಿಲ್ಲ. [illegible] ಗೊತ್ತು, ತಾನು ನಿಂತರೆ ಗೆಲ್ಲೋದಿಲ್ಲ. [illegible] ಹಣದ ಓಟು ಹಾಕೋದು ಕಷ್ಟವೆಂಬ [illegible] ಆಗಿದೆ. ಆದರೂ ಆತ ಟಿಕೆಟ್ [illegible] ಕೊಡುತ್ತಿರುವುದೇಕೆಂದರೆ, ಮುಂದೊಂದು ದಿನ


ಯಾವುದಾದರೂ ಗೂಟದ ಕಾರು ಕೇಳಲು ಇದೇ ಮೆರಿಟ್ ಆಗುತ್ತದೆಂಬ ವ್ಯಾಪಾರಿ ಪ್ಲಾನ್‌ನಿಂದಾಗಷ್ಟೇ.


'ಬಂ'ರ ಕೆಸಿಪಿಯಿಂದ ಸ್ಪರ್ಧಿಸಿ ಸೋತಿದ್ದ 'ಸಿಜರೀನ್ ಡಾಕ್ಟರ್' ಖ್ಯಾತಿಯ ಡಾ. ಜಿ.ಜಿ. ಹೆಗಡೆ ಆ ನಂತರ ಕಾಂಗ್ರೆಸ್ ಸೇರಿಕೊಂಡಿದ್ದರು. ಎಮ್ಮೆಲ್ಲೆಯಾಗಿ ಜೀವನದ ಕೊನೆಯಾಸೆ ಈಡೇರಿಸಿಕೊಳ್ಳಬೇಕೆಂಬ ದುರಾಸೆಗೆ ಬಿದ್ದಿರುವ ಈತ ರಾಮಚಂದ್ರಾಪುರ ಮಠದ ರೇಪಿಸ್ಟ್ ರಾಘುನ ನಿಷ್ಠಾವಂತ ಶಿಷ್ಯ. ಯಾರದಾದರೂ ಮೈ ತೊಳೆದಿಟ್ಟ ಆಕಳಿಗೆ ಆರತಿ ಎತ್ತಿ ಗೋಗ್ರಾಸ ಕೊಟ್ಟು ಫೋಟೋಕ್ಕೆ ಪೋಸು ಕೊಡುವ ಹೆಗಡೆ ಎಂದೂ ಆಕಳನ್ನು ಪ್ರೀತಿ-ಗೌರವದಿಂದ ಸಾಕುವ ಪೈಕಿಯಲ್ಲ. ಇಂಥ ಗುಣ-ಧರ್ಮದ ಹೆಗಡೆ ಡಾಕ್ಟ್ರು ಮ್ಯಾಗ್ಗಿಯಮ್ಮನ ಸೆರಗಿಡಿದೇ ಕಾಂಗ್ರೆಸ್ ರಾಜಕಾರಣ ಮಾಡಿದರು. ಆದರೆ ಅಲ್ಲೇನೂ ಗಿಟ್ಟಲೇ ಇಲ್ಲ.

ದೀವಗಿಯ ಬಸ್ ಫ್ಯಾಕ್ಟರಿಯ ಕ್ರಿಸ್ತನೊಬ್ಬನ ಜತೆಗೂಡಿ ಮ್ಯಾಗ್ಗಿ ರಾಜ್ಯಪಾಲೆಯಾಗಿದ್ದಾಗ ರಾಜಸ್ಥಾನದ ರಾಜಭವನಕ್ಕೆ ಈ ಹೆಗಡೆ ಎಡತಾಕಿದ್ದಕ್ಕೆ ಲೆಕ್ಕವೇ ಇಲ್ಲ. ಯಾವುದಾದರೂ ಒಂದು ಕಾರ್ಪೊರೇಷನ್ ಗೂಟದ ಕಾರು ದಯಪಾಲಿಸಿ ಎಂದು ಮ್ಯಾಗಿಗೆ ದುಂಬಾಲು ಬಿದ್ದಿದ್ದ ಹೆಗಡೆಗೆ ಆಕೆ "ನೀನು ಲ್ಯಾಂಡ್ ಟ್ರಿಬ್ಯೂನಲ್ ಮೆಂಬರಿಕೆಗೆ ಲಾಯಕ್ಕು..."


ದಿನಕರ ಶೆಟ್ಟಿ


ಸೋನಿ


ಸೂಲಿಬೆಲೆ


ವಿಶ್ವೇಶ್ವರ ಭಟ್ಟ

ಎಂದ್ಹೇಳಬೇಕಾ? ಅಕಟಕಟಾ... ಜಿ.ಜಿ. ಹೆಗಡೆ ಕಾಂಗ್ರೆಸ್‌ನಿಂದ ಕಾಲ್ಕಿತ್ತುಬಿಟ್ಟರು. ಸೀದ ಹುಬ್ಬಳ್ಳಿಗೆ ಹೋದ ಈ ಡಾಕ್ಟರ್ ಮಾಮ ಬ್ರಾಹ್ಮಣ ಲಾಬಿ ಮೂಲಕ ರಾಜ್ಯ ಬಿಜೆಪಿ ಅಧ್ಯಕ್ಷ ಪ್ರಹ್ಲಾದ ಜೋಷಿ ಚರಣ ಕಮಲಕ್ಕೆ ಹಣ ಇಟ್ಟು ಬೇಡಿಕೆ ಇಟ್ಟರು. ತಾನು ಹೊನ್ನಾವರ-ಕುಮಟಾದ ಸರ್ವಶಕ್ತಿ ಬ್ರಾಹ್ಮಣ ಮುಖಂಡಾಗ್ರೇಸನೆಂದು ತಾರೀಪು ಮಾಡಿಕೊಂಡ ಹೆಗಡೆ ಬಿಜೆಪಿ ಟಿಕೆಟ್ ಕೊಡುವಂತೆ ಬೇಡಿದರು. ಅದೇನು ಆಶ್ವಾಸನೆ ಸಿಕ್ಕಿದೆಯೋ ಏನೋ. ಡಾ. ಹೆಗಡೆ ತನ್ನ ಮನೋಧರ್ಮಕ್ಕೆ ಹೊಂದಿಕೆಯಾಗುವ ಬಿಜೆಪಿ ಸೇರಿಕೊಂಡು ಹಿಂದೂತ್ವ-ಗೋರಕ್ಷಣೆ-ಪಾಕಿಸ್ತಾನ, ಮೋದಿ ಮಹಾತ್ಮ... ಎಂದೆಲ್ಲ ಒರಿಜನಲ್ ಚೆಡ್ಡಿಗಿರಿ ಭಾಷಣ ಬಿಗಿಯುತ್ತಿದ್ದಾನೆ. ಕಂಡ-ಕಂಡವರ ಎದುರು ತಾನೇ ಮುಂದಿನ ಬಿಜೆಪಿ ಶಾಸಕಗಿರಿ ಅಭ್ಯರ್ಥಿ ಎಂದು ಬಡಾಯಿ ಕೊಚ್ಚುತ್ತಿದ್ದಾರೆ.

ಯಡ್ಡಿಯ ಕೆಜೆಪಿಯಿಂದ ಸ್ಪರ್ಧಿಸಿದ್ದ ಜಿಲ್ಲಾ ಪಂಚಾಯ್ತಿ ಮಾಜಿ ಅಧ್ಯಕ್ಷೆ ಗಾಯತ್ರಿ ಗೌಡ ಬಿಜೆಪಿಯಲ್ಲಿ ಅರ್ಹ ಹುರಿಯಾಳೆಂದರೆ ತಾನೊಬ್ಬಳೇ ಎಂಬ ಗೆಟಪ್‌ನಲ್ಲಿ ಗೌಜಿ ಎಬ್ಬಿಸಿದ್ದಾರೆ. ಮಹತ್ವಾಕಾಂಕ್ಷೆಯ ಈ ಲಲನಾಮಣಿ ಕಾಂಗ್ರೆಸ್‌ನಿಂದ ಹೊರಬಿದ್ದ ಕ್ಷಣವೇ ರಾಜಕೀಯವಾಗಿ ಆತ್ಮಹತ್ಯೆ ಮಾಡಿಕೊಂಡಿದ್ದಾಳೆಂದು ಬಂದ ಕಮೆಂಟುಗಳೇ ಹೆಚ್ಚು. ರಾಜಕೀಯ ಮಹತ್ವಾಕಾಂಕ್ಷೆಯಿಂದ ಗಂಡನಿಂದಲೂ ದೂರಾಗಿರುವ ಈ ಗ್ಲಾಮರಸ್ ಪುಢಾರಿಣಿ ಬಗ್ಗೆ ಸ್ವ-ಜಾತಿ ಹಾಲಕ್ಕಿ ಒಕ್ಕಲಿಗರೇ ಅಸಹ್ಯ ವ್ಯಕ್ತಪಡಿಸುತ್ತಾರೆ. ಅತ್ತ ಕುಮಟಾ ತಾಲ್ಲೂಕು ಬಿಜೆಪಿ ಅಧ್ಯಕ್ಷ "ಎಂಆರ್‌ಎಫ್ ಟೈರ್ ವೆಂಕಟೇಶ್" ಯಾನೆ ವೆಂಕಟೇಶ್ ನಾಯಕ್ ಎಂಬ ಸಂಭಾವಿತ ಚೆಡ್ಡಿ ತನಗೆ ಎಂಪಿ ಅನಂತಣ್ಣ ಟಿಕೆಟ್ ಕೊಡಿಸುತ್ತಾರೆಂದು ನಂಬಿಕೊಂಡಿದ್ದಾರೆ. ಜಿಪಂ ಸದಸ್ಯ ಮುಗ್ಧ ಮಂಜುನಾಥ ಗೌಡನ ಎಮ್ಮೆಲ್ಲೆ ಮಾಡಿಕೊಂಡರೆ ಬೇಳೆ ಬೇಯಿಸಿಕೊಳ್ಳಬಹುದೆಂಬುದು ಕುಮಟೆಯ ರೈಲ್ ಹೋಟೇಲಲ್ಲಿ ಅಡ್ಡೆ ಹಾಕುವ ಅಡ್ನಾಡಿಗಳ ಸ್ಕೆಚ್.

ಕುಮಟಾ-ಹೊನ್ನಾವರದ ಕಮಲ ಬಿಡಾರದಲ್ಲಿ ಎರಡು ಕುತೂಹಲಕರ ಹೆಸರುಗಳು ಸುತ್ತಿ ಸುಳಿದಾಡುತ್ತಿವೆ. ಒಂದು ಹಿಂದೂತ್ವದ ಪ್ರಖರ ಪತ್ರಕರ್ತನೂ ಬಿಜೆಪಿಯ ಆಯಕಟ್ಟಿನ ಮುಖಂಡ ಮಾಣಿಗಳ ಗೆಳೆಯನೂ ಆಗಿರುವ ವಿಶ್ವೇಶ್ವರ್ ಭಟ್ಟರದ್ದು; ಮತ್ತೊಂದು ಹೆಸರು ಸಂಘ ಪರಿವಾರದ ಪ್ರಚೋದನಕಾರಿ ಭಾಷಣಕಾರ ಸೂಲಿಬೆಲೆ ಚಕ್ರವರ್ತಿಯದ್ದು. ಈ ಸೂಲಿಬೆಲೆಯ ತಾಯಿ ಬೇರು ಹೊನ್ನಾವರ ನೆಲದಲ್ಲಿದ್ದರೆ, ವಿಶ್ವೇಶ್ವರ ಭಟ್ಟರ ಮೂಲ ಕುಮಟಾ ತಾಲ್ಲೂಕಿನ ಮೂರೂರು. ಚೆಡ್ಡಿ ಎಂಪಿ, ಎಮ್ಮೆಲ್ಲೆ, ಮಂತ್ರಿಗಳನ್ನು ತಯಾರು ಮಾಡುವ ತಾಕತ್ತಿನ ಭಟ್ಟರು ಶಾಸಕಗಿರಿಯಂಥ


ಜುಜುಬಿ ಸ್ಥಾನಕ್ಕೆ ಪ್ರಯತ್ನಿಸುತ್ತಾರೆಂದರೆ ಅದು ನಂಬಲಸಾಧ್ಯವೆಂದೇ ರಾಜಕೀಯ ಪಂಡಿತರು ತರ್ಕಿಸುತ್ತಾರೆ. ಆತ ಮನಸ್ಸು ಮಾಡಿದರೆ ಕೆನರಾ ಕ್ಷೇತ್ರದಿಂದಲೇ ಮುಂದೆ ಎಂಪಿಗಿರಿ ಟಿಕೆಟ್ ತರಬಲ್ಲ; ರಾಜ್ಯಸಭೆಯಲ್ಲಿ ಪ್ರತಿಷ್ಠಾಪಿತನಾಗಬಲ್ಲ. ಆತನ ಅರ್ಹತೆಗೆ ಕುಮಟೆಯ ಶಾಸಕಗಿರಿ ತೀರಾ ಸಣ್ಣದು. ಹೀಗಾಗಿ ಸೂಲಿಬೆಲೆ ಹೆಸರಿನ ಸುತ್ತಲೇ ಕುಮಟಾ-ಹೊನ್ನಾವರ ಚೆಡ್ಡಿ ಬಳಗ-ಕೇಸರಿ ಪಡೆ ಗಿರಕಿ ಹೊಡೆಯುತ್ತಿದೆ.

ಸೂಲಿಬೆಲೆಗೆ 'ಕೇಶವ ಕೃಪ'ದಲ್ಲಿ ಆಶ್ರಯದಾತರಿದ್ದಾರೆ. ಆತನ ಹಿಂದೂತ್ವದ ಭಾಷಣಕ್ಕೆ ಇಡೀ ಸಂಘ ಪರಿವಾರವೇ ತಲೆದೂಗುತ್ತದೆ. ಈ ಮಹಾಶಯನ ಹಿಂದೂವಾದವೆಂದರೆ, ಕ್ರಿಶ್ಚಿಯನ್, ಮುಸ್ಲಿಮರನ್ನು ಬಾಯಿಗೆ ಬಂದಂತೆ ಬೈದು ವಿಕೃತಾನಂದ ಅನುಭವಿಸುವುದು ಮತ್ತು ರೇಪಿಸ್ಟ್ ರಾಘು ಸ್ವಾಮಿಯನ್ನು ಬೆಂಬಲಿಸುವ ಭರದಲ್ಲಿ 'ಡಬ್ಬಲ್ ಎ' ಸರ್ಟಿಫಿಕೇಟ್ ಭಾಷಣ ಬಿಗಿಯೋದಷ್ಟೇ!! ಇಂಥ ಗಲೀಜು ಹಿಂದೂತ್ವದ ಹಿರೇಮಣಿ ಸೂಲಿಬೆಲೆಗೆ ತನ್ನ ಸಮಕಾಲೀನ ಅನೇಕ ಚೆಡ್ಡಿಗಳು ಶಾಸಕ-ಸಂಸದ-ಮಂತ್ರಿಯಾಗಿರುವುದು ಹೊಟ್ಟೆಯಲ್ಲಿ ಹಸಿ ಮೆಣಸು ಅರೆದಂತೆ ಹಿಂಸೆ ಕೊಡುತ್ತಿದೆ. ಜರೂರಾಗಿ ಶಾಸಕನಾಗುವ ತವಲು ಆತನ ನಿದ್ದೆ ಗೆಡಿಸುತ್ತಿದೆ. ಹೀಗಾಗಿ ಸೂಲಿಬೆಲೆ ಆಗಾಗ ಉತ್ತರ ಕರ್ನಾಟಕಕ್ಕೆ ಎಡತಾಕಿ

ಕ್ಷೇತ್ರ ಹಸನಗೊಳಿಸಿಕೊಳ್ಳಲು ರಹಸ್ಯ ತಂತ್ರಗಾರಿಕೆ ಮಾಡುತ್ತಿದ್ದಾನೆ.

ಯಾರೆಷ್ಟೇ ಮಂಡಿಗೆ ಮನಸ್ಸಿನಲ್ಲಿ ತಿಂದರೂ ಬಿಜೆಪಿಯ ವ್ಯಾಪಾರಿ ಲೆಕ್ಕಾಚಾರದ ಹೈಕಮಾಂಡಿನ ಯೋಚನೆಯೇ ಬೇರೆ. ಜೆಡಿಎಸ್‌ನ ಮಾಜಿ ಶಾಸಕ ದಿನಕರ ಶೆಟ್ಟಿಯಷ್ಟು ಗೆಲ್ಲುವ ತಾಕತ್ತು ತಮ್ಮ ಪಕ್ಷದಲ್ಲಿ ಯಾರಿಗೂ ಇಲ್ಲವೆಂಬುದು ಬೆಂಗಳೂರಿನ ದೊಡ್ಡ ನಾಯಕರಿಗೆ ಖಾತ್ರಿಯಾಗಿದೆ. ಇಂಥದೊಂದು ಚಿತ್ರಣವನ್ನು ಈಚೆಗೆ ಜೆಡಿಎಸ್ ಬಿಟ್ಟು ಬಿಜೆಪಿ ಸೇರಿರುವ ಹಳಿಯಾಳದ ಮಾಜಿ ಶಾಸಕ ಸುನಿಲ್ ಹೆಗಡೆ ಬಿಜೆಪಿ ಟಿಕೆಟ್ ದಾತರಿಗೆ ಮನದಟ್ಟು ಮಾಡಿದ್ದಾರೆ. ಹೀಗಾಗಿ ಬೆಂಗಳೂರು ಮಟ್ಟದಲ್ಲಿ ದಿನಕರ ಶೆಟ್ಟಿಯನ್ನು ಸೆಳೆಯಲು ಪ್ರಯತ್ನಗಳು ನಡೆದಿವೆ. ದಿನಕರ ಶೆಟ್ಟಿಯೂ ತಾನು ಜೆಡಿಎಸ್ ಬಿಡಲಾರೆ ಎನ್ನುತ್ತಲೇ ಚೆಡ್ಡಿ ಲೀಡರ್‌ಗಳ ಸಂಪರ್ಕದಲ್ಲಿದ್ದಾರೆ. ಜೆಡಿಎಸ್‌ನಿಂದ ಗೆಲ್ಲೋದು ಸಾಧ್ಯವೇ ಇಲ್ಲವೆಂಬ ತೀರ್ಮಾನಕ್ಕೆ ದಿನಕರ ಶೆಟ್ಟಿ ಬಂದು ಅದ್ಯಾವುದೋ ಕಾಲವಾಗಿ ಹೋಗಿದೆ!

ಆದರೆ ದಿನಕರ ಶೆಟ್ಟಿ ಬಿಜೆಪಿ ಸೇರಲು ಹವಣಿಸಿದಂತೆಲ್ಲ ಕುಮಟಾದ ಬಿಜೆಪಿಯ ಒಂದು ತಂಡ ಆತನ ಕಾಲು ಹಿಡಿದು ಎಳೆಯುತ್ತಿದೆ. ಆತ ಬಿಜೆಪಿಗೆ ಬಂದರೆ ನಾವೆಲ್ಲ ಕಾಂಗ್ರೆಸ್ ದಾರಿ ಹಿಡಿಯಬೇಕಾಗುತ್ತದೆಂದು ಸೂರಜ್


ರವಿಕುಮಾರ್ ಶೆಟ್ಟಿ

ಸೋನಿ ಅಂಡ್ ಕೋ ಬೆದರಿಸುತ್ತಿದೆ. ಹೀಗಾಗಿ ಶೆಟ್ಟಿ ಸಂದಿಗ್ಧಕ್ಕೆ ಬಿದ್ದಿದ್ದಾರೆ. ಸದ್ಯಕ್ಕೆ ಜೆಡಿಎಸ್ ಬಿಡಲಾರೆನೆಂಬಂತೆ ತೋರಿಕೊಂಡು ವೈಯಕ್ತಿಕ ಶಕ್ತಿ ವೃದ್ಧಿಸಿಕೊಳ್ಳುವ ತಂತ್ರ ಹೆಣೆದಿರುವ ಶೆಟ್ಟಿ ಎಲೆಕ್ಷನ್ ಹತ್ತಿರ ಬಂದಾಗ ಚೆಡ್ಡಿ ಧರಿಸುವ ದೃಢ ನಿರ್ಧಾರಕ್ಕೆ ಬಂದಿದ್ದಾರೆ. ಕೇಂದ್ರ ಕಾನೂನು ಮಂತ್ರಿ ಸದಾನಂದ ಗೌಡರ ಆತ್ಮಾಪ್ತರಾಗಿರುವ ಶೆಟ್ಟಿ ಕೊನೇ ಗಳಿಗೆಯಲ್ಲಿ ಬಿಜೆಪಿ ಸೇರಿ ಕ್ಯಾಂಡಿಡೇಟಾಗುವ ಧೈರ್ಯದಲ್ಲಿದ್ದಾರೆ.


ಸದಾನಂದ ಗೌಡ ಸಿಎಂ ಆಗಿದ್ದಾಗ ಶಾಸಕನಾಗಿದ್ದ ಶೆಟ್ಟಿ ಅದ್ಯಾಗೋ ಆತನ ನಂಟು ನಿಕಟವಾಗಿ ಬೆಳೆಸಿಕೊಂಡಿದ್ದಾರೆ. ಮತ್ತೆ ಸಿಎಂ ಆಗುವ ಅವಾಂತರಕಾರಿ ಅವಕಾಶ ಸಿಕ್ಕರೆ ಶೆಟ್ಟಿಯಂಥ ನಿಷ್ಠಾವಂತ ಶಾಸಕರು ಬೇಕಾಗುತ್ತಾರೆಂದು ಗೌಡ ಗ್ಯಾಂಗ್ ಕಟ್ಟುವ ತಯಾರಿಯಲ್ಲಿದ್ದಾರೆ. ಗೌಡರ ಬಲ ನಂಬಿರುವ ಶೆಟ್ಟಿ "ಯಾರೇನೇ ಮಾಡಲಿ... ನಾನೇ ಬಿಜೆಪಿ ಕ್ಯಾಂಡಿಡೇಟ್... ನೋಡ್ತಾಯಿರಿ ತೋರಿಸ್ತೇನೆ ನನ್ನ ತಾಕತ್ತು..." ಎಂದು ಆಪ್ತರೆದುರು ರಾತ್ರಿ ನಿಶೆಯಲ್ಲಿ ಹೇಳುತ್ತಿದ್ದಾರೆ! ಬಿಜೆಪಿಯೊಳಗಿನ ಟಿಕೆಟ್ ಗುದುಮುರಿಗೆ ಸೂಕ್ಷ್ಮವಾಗಿ ಅವಲೋಕಿಸಿದರೂ, ಜೆಡಿಎಸ್‌ನ ದಿನಕರ ಶೆಟ್ಟಿಯೇ ಬಿಜೆಪಿ ಅಭ್ಯರ್ಥಿಯಾಗುವ ಸಂಭವನೀಯತೆ ಹೆಚ್ಚೆಂಬುದು ಅರ್ಥವಾಗುತ್ತದೆ. ಒಟ್ಟಿನಲ್ಲಿ ಎಲೆಕ್ಷನ್‌ಗೆ ಮೂರು ವರ್ಷ ಬಾಕಿಯಿರುವಾಗಲೇ ಬಿಜೆಪಿಯಲ್ಲಿ ಟಿಕೆಟ್ ತರಲೆಯಿಂದ ತಲ್ಲಣ ಶುರುವಾಗಿದೆ. ಟಿಕೆಟ್ ಆಕಾಂಕ್ಷಿಗಳಲ್ಲಿ ಒಬ್ಬರ ಕಾಲು ಇನ್ನೊಬ್ಬರ ಕೈಲಿದೆ.


ಜಗ್ಗಾಟ ಜೋರಾದಂತೆ ಬಿಜೆಪಿ ಮುಗ್ಗರಿಸಲಿದೆ!!

■ ನಹುಷ

ಪಬ್ಲಿಕ್ ಟಿವಿ ರಂಗಣ್ಣನಿಗೆ ಬಹಿರಂಗ ಪತ್ರ

ಇತ್ತೀಚೆಗೆ ಟಿವಿ ಚಾನೆಲ್‌ಗಳು ತಾವೇ ನ್ಯಾಯಾಂಗ ಎಂಬಂತೆ ವರ್ತಿಸುತ್ತಾ 'ತೀರ್ಪು'ಗಳನ್ನು ಕೊಡುತ್ತಿವೆ. ಅಂತಹ ಒಂದು ಪ್ರಸಂಗಕ್ಕೆ ಸಚಿವ ಕಿಮ್ಮನೆ ರತ್ನಾಕರ್ ಅವರು ಕೊಟ್ಟಿರುವ 'ಉತ್ತರ' ಇಲ್ಲಿದೆ.





ರವರಿಗೆ,
ಶ್ರೀಯುತ ರಂಗನಾಥ್‌ರವರು,
ಮುಖ್ಯ ಕಾರ್ಯನಿರ್ವಾಹಕ ನಿರ್ದೇಶಕರು,
ಪಬ್ಲಿಕ್ ಟಿ.ವಿ. ಬಿ.ಎಂ.ಟಿ.ಸಿ. ಕಟ್ಟಡ,
ಯಶವಂತಪುರ, ಬೆಂಗಳೂರು.

ಮಾನ್ಯರೆ,

ಸಾರ್ವಜನಿಕ ಜೀವನದಲ್ಲಿ ಟೀಕೆ ಟಿಪ್ಪಣಿಗಳು ಸರ್ವೇ ಸಾಮಾನ್ಯ. ಹಾಗೆಯೇ ಅವೆರಡನ್ನೂ ಸಮಾನವಾಗಿ ಸ್ವೀಕರಿಸುವ ಮನೋಭಾವ ನನ್ನದು. ಆದರೆ ಮಾಡುವಂತಹ ಟೀಕೆ ಹಾಗೂ ಬಳಸುವಂತಹ ಭಾಷೆಯು ವೈಯಕ್ತಿಕ ಅವಹೇಳನಕಾರಿ ಹಾಗೂ ಏಕಪಕ್ಷೀಯವಾಗಿದ್ದರೆ ಅದು ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಧಕ್ಕೆ ಎಂಬುದು ನನ್ನ ಭಾವನೆ ಹಾಗೂ ನೀವು ನನ್ನ ವಿರುದ್ಧ ಬಳಸಿದ ಭಾಷೆಯು ತೀರ ಬಾಲಿಷ ಹಾಗೂ ಕೆಟ್ಟದಾಗಿದ್ದು, ವೈಯಕ್ತಿಕ ಮಾನಹಾನಿಗೆ ಎಡೆ ಮಾಡಿಕೊಡುವುದು ಎಂಬುದು ನನ್ನ ಅಲ್ಪ ಕಾನೂನು ತಿಳುವಳಿಕೆಯ ಜ್ಞಾನ ಹೇಳುತ್ತದೆ.

ಬಲ್ಲವರಿಂದ ಕಲಿಯಬೇಕು, ತಿಳಿದಿದ್ದನ್ನು ಕಲಿಸಬೇಕು- ಇದುವೇ ಜ್ಞಾನಾರ್ಜನೆ. ಹಾಗೆಯೇ ತಾವು ಬುದ್ಧ ಬಸವಣ್ಣ ಅಂಬೇಡ್ಕರ್, ಲೋಹಿಯಾ ಒಳಗೊಂಡಂತೆ ಪ್ರಪಂಚದ ಎಲ್ಲಾ ತತ್ವಜ್ಞಾನಿಗಳಿಗಿಂದ ಹೆಚ್ಚು ತಿಳಿದವರು ಅಥವಾ ಅವರಿಗೆ ಸರಿ ಸಮಾನರು ಎಂದು ತಿಳಿದಿದ್ದೀರ ಅಥವಾ ಆ ರೀತಿ ತೋರಿಸಿಕೊಳ್ಳಲು ಆಸಕ್ತರಾದವರಂತೆ ಕಾಣುತ್ತದೆ. ಹಾಗೆಯೇ ಕೃಷಿ, ವಿಜ್ಞಾನ, ಶಿಕ್ಷಣ, ನ್ಯಾಯಾಂಗ, ಸಾಹಿತ್ಯ ಎಲ್ಲಾ ವಿಚಾರಗಳಲ್ಲೂ ಭಾರಿ ಮಟ್ಟದ ಪಾಂಡಿತ್ಯ ಹೊಂದಿದವರು, ನಿಮ್ಮ ತಿಳುವಳಿಕೆಯೇ ಉತ್ಕೃಷ್ಟವಾದದ್ದು ಎಂಬ ನಿಮ್ಮ ಮನೋಸ್ಥಿತಿ ಬಗ್ಗೆ ನನಗೆ ವಿಷಾದವಿದೆ.

ಮೊದಲೇ ತಿಳಿಸಿದಂತೆ ನಾನು ಅಲ್ಪಜ್ಞಾನಿ, ನಿಮ್ಮಷ್ಟು ತಿಳುವಳಿಕೆ, ಅಧ್ಯಯನಜ್ಞಾನ, ವಿಜ್ಞಾನ, ಬುದ್ಧಿವಂತಿಕೆ ನನಗಿಲ್ಲ, ಹಾಗೆಯೇ ನಿಮ್ಮ ವೈಯಕ್ತಿಕ ಬದುಕಿನಲ್ಲಿ ಎಷ್ಟು ಜನ ಬಡವರಿಗೆ ಸಂಕಷ್ಟದಲ್ಲಿ ಸಿಲುಕಿದವರಿಗೆ ಸಹಕರಿಸಿದ್ದೀರ, ಎಷ್ಟು ಕುಟುಂಬಗಳಿಗೆ ಜೀವನಪರ್ಯಂತ ನೆನಪಿಸುವಂತಹ ಸಹಾಯ ಮಾಡಿದ್ದೀರ ಎಂದು ನನಗೆ ತಿಳಿಯುವ ಕುತೂಹಲವಿದೆ. ಹಾಗೆಯೇ ಮಾಧ್ಯಮವನ್ನು ಬಳಸದೆ ಸಾರ್ವಜನಿಕ ಹೋರಾಟಗಳಲ್ಲಿ, ಸಾಮಾಜಿಕ ನ್ಯಾಯ ಕೊಡಿಸುವಲ್ಲಿ ನೀವು ವಹಿಸಿದ ವೈಯಕ್ತಿಕ ಪಾತ್ರಗಳನ್ನು ನನಗೂ ತಿಳಿದುಕೊಳ್ಳುವ ಹಂಬಲವಿದೆ. ದೃಶ್ಯಮಾಧ್ಯಮಗಳು ಸಂವಿಧಾನದ ಒಂದು ಅಂಗದಂತೆ ಕೆಲಸ ಮಾಡಬೇಕಿದ್ದು, ಯಾವುದೇ ವಿಷಯದಲ್ಲಿ ಪೂರ್ಣ ಮಾಹಿತಿ, ವಾಸ್ತವ ಇವುಗಳನ್ನು ಸರಿಯಾಗಿ ಅರಿತುಕೊಂಡು ಸಾರ್ವಜನಿಕರ ಮುಂದಿಡುವುದು ನಿಮ್ಮ ಕರ್ತವ್ಯ ಎಂಬುದು ನನ್ನ ಭಾವನೆ. ಹಾಗೆಯೇ ಇದನ್ನು ನೀವು ಎಷ್ಟರಮಟ್ಟಿಗೆ ಪಾಲಿಸುತ್ತಿದ್ದೀರಾ ಎಂಬುದರ ಬಗ್ಗೆ ಆತ್ಮಾವಲೋಕನ ಮಾಡಿಕೊಳ್ಳಿ. ನಿರರ್ಗಳ ಮಾತಿನ ಪಾಂಡಿತ್ಯದಿಂದ ಮನೋರಂಜನೆ ನೀಡಬಹುದು, ವಾಸ್ತವವನ್ನು ಆದು ಭಾಷೆಯಲ್ಲೇ ತೋರಿಸುವ ಪ್ರಯತ್ನ ಮಾಡಿ.

ನಾನು ನಿಮ್ಮಷ್ಟು ತಿಳುವಳಿಕೆ ಹೊಂದಿಲ್ಲ, ನಿಮ್ಮಷ್ಟು ಬುದ್ಧಿವಂತನಲ್ಲ, ಓದಿನಲ್ಲಿ ಉತ್ತೀರ್ಣ ಅನುತ್ತೀರ್ಣ ಎರಡೂ ಕಂಡವನು ಹಾಗೂ ಅವೆರಡರ ಮಹತ್ವವನ್ನು ಅರಿತಿರುವೆನು. ಆದರೆ ನಾನು ನಿಮ್ಮತರಹ ಶ್ರೇಷ್ಠತಾ ಮನೋಭಾವನೆ ಹೊಂದಿಲ್ಲ, ಆದ್ದರಿಂದ ಅಹಂ ಬ್ರಹ್ಮಾಸ್ಮಿ ಎಂಬ ಉವಾಚ ನನಗೆ ಅನ್ವಯಿಸುವುದಿಲ್ಲ, ನಾನೀಗ ನಿವೃತ್ತಿ ವಯಸ್ಸು ದಾಟಿದ್ದೇನೆ. ಹಾಗೆಯೇ ಯಾರನ್ನೋ ಮೆಚ್ಚಿಸಲು ಬದುಕುವ ಅಗತ್ಯ ನನಗಿಲ್ಲ, ನನ್ನ ವೈಯಕ್ತಿಕ ಬದುಕಿನಲ್ಲಿ ನಾನು ಯಾರಿಗೂ ಮೋಸ ಮಾಡಿಲ್ಲ, ದ್ರೋಹ ಎಸಗಿಲ್ಲ, ನನಗೆ ಸಿಕ್ಕ ಅವಕಾಶದಲ್ಲಿ ಅತ್ಯಂತ ಪ್ರಾಮಾಣಿಕವಾಗಿ ಪಾರದರ್ಶಕವಾಗಿ ಎಲ್ಲಾ ಹಂತದಲ್ಲೂ ಕಾರ್ಯನಿರ್ವಹಿಸಿದ್ದೇನೆ. ಆತ್ಮರತಿಯಂತಹ ಕಾರ್ಯಕ್ಕೆ ನಾನು ಎಂದಿಗೂ ಮುಂದಾಗಿಲ್ಲ, ಆದರೆ ನನ್ನ ಬಗ್ಗೆ ನಾನೇ ಹೇಳಿಕೊಳ್ಳುವಂತಹ ಅನಿವಾರ್ಯ ಸನ್ನಿವೇಶ ನೀವು ನಿರ್ಮಾಣ ಮಾಡಿದ್ದೀರ.

1972ರ ನನ್ನ ವಿದ್ಯಾರ್ಥಿ ದೆಸೆಯಲ್ಲಿ ಸೋಷಲಿಸ್ಟ್ ಸಿದ್ಧಾಂತದೆಡೆಗೆ ಆಕರ್ಷಿತನಾಗಿ ಆ ಪಕ್ಷವನ್ನು ಸೇರುವುದರ ಮೂಲಕ ಸಾರ್ವಜನಿಕ ಬದುಕಿಗೆ ಕಾಲಿಟ್ಟಿದ್ದೇನೆ. ದಿ|| ಶಾಂತವೇರಿ ಗೋಪಾಲಗೌಡರು, ಕಡಿದಾಳ ಮಂಜಪ್ಪ, ಲೋಹಿಯಾ, ಜಯಪ್ರಕಾಶ್ ನಾರಾಯಣರ ಸಾಮಾಜಿಕ ಕ್ರಾಂತಿಯಿಂದ ಪ್ರೇರಿತನಾಗಿ ನಾನು ಅಂದಿನಿಂದ ಈವರೆಗೆ ಸುಮಾರು 4000ಕ್ಕೂ ಹೆಚ್ಚು ಹೋರಾಟಗಳಲ್ಲಿ ಭಾಗಿಯಾಗಿದ್ದೇನೆ. ಅನೇಕ ಹೋರಾಟದ ಸಾರಥ್ಯವನ್ನೂ ವಹಿಸಿದ್ದೇನೆ. ಅತ್ಯಂತ ಸಂಕಷ್ಟದಲ್ಲಿದ್ದ ಬಡವರಿಗೆ ರೈತರಿಗೆ 26 ಬಾರಿಗೂ ಹೆಚ್ಚು ರಕ್ತದಾನ ಮಾಡಿದ್ದೇನೆ. ಸಾವಿರಾರು ಬಡರೈತರ ಪರವಾಗಿ ಉಚಿತ ವಕಾಲತ್ತು ಹಾಕಿದ್ದೇನೆ ಹಾಗೂ ಕಾನೂನಿನ ಪ್ರಕ್ರಿಯೆಗೆ ತಗಲುವ ಎಲ್ಲಾ ಖರ್ಚುಗಳನ್ನು ನಾನೇ ಭರಿಸಿದ್ದೇನೆ. ನ್ಯಾಯವಾದಿಯಾಗಿ 33 ವರ್ಷಗಳ ಕಾಲ ತೀರ್ಥಹಳ್ಳಿ ನ್ಯಾಯಾಲಯದಲ್ಲಿ 4800 ಕೇಸುಗಳಲ್ಲಿ ಅಂದಾಜು 1900 ರಿಂದ 2000 ಕೇಸುಗಳಿಗೆ ವಕಾಲತ್ತು ಹಾಕಿದ್ದೇನೆ. ಅದರಲ್ಲಿ ಸುಮಾರು ಶೇ. 75ಕ್ಕಿಂತ ಹೆಚ್ಚು ವ್ಯಾಜ್ಯಗಳನ್ನು ಉಚಿತವಾಗಿ ನಡೆಸಿದ್ದೇನೆ. ಗೇಣಿರೈತರ ಹೋರಾಟದಲ್ಲಿ ನಾನು ಜೈಲಿಗೂ ಹೋಗಿ ಬಂದಿದ್ದೇನೆ. ನಾನು ಸಾರ್ವಜನಿಕ ಜೀವನಕ್ಕೆ ಬಂದ ಮೇಲೆ ನನ್ನ ಖಾಸಗಿ ಬದುಕಿಗಾಗಿ ನನ್ನ ಸಮಯವನ್ನು ಬಳಸಿದ್ದು ಕಡಿಮೆಯೇ.

ಅವಕಾಶ ಕೋರಿ 2008ರಲ್ಲಿ ವಿಧಾನ ಸಭಾ ಚುನಾವಣೆಯಲ್ಲಿ ಸ್ಪರ್ಧಿಸಿದಾಗ ತೀರ್ಥಹಳ್ಳಿಯ ಪ್ರಜ್ಞಾವಂತ ನಾಗರಿಕರು ನನಗೆ ಅವಕಾಶವನ್ನು ನೀಡಿದರು. ಹಾಗೆಯೇ 2013ರ ವಿಧಾನ ಸಭಾ ಚುನಾವಣೆಯಲ್ಲಿ ಹಣದ ಹೊಳೆಯೇ ಹರಿದಿತ್ತು, ಆದರೂ ಕ್ಷೇತ್ರದ ಜನ ನನ್ನನ್ನು ಆಯ್ಕೆ ಮಾಡಿದರು. ಈ 7 ವರ್ಷಗಳಲ್ಲಿ ಶಾಸಕನಾಗಿ, ಸಚಿವನಾಗಿ ನಾನು ಎಂದಿಗೂ ಸದನಕ್ಕೆ ಒಂದು ದಿವಸವೂ ಗೈರುಹಾಜರಾಗಿಲ್ಲ, ಅದೇ ರೀತಿ ಒಂದು ನಿಮಿಷವೂ ಸದನಕ್ಕೆ ತಡವಾಗಿ ಹೋದ ನಿದರ್ಶನಗಳಿರುವುದಿಲ್ಲ.

ಗೌರವಾನ್ವಿತ ಮುಖ್ಯಮಂತ್ರಿಗಳು ನನ್ನನ್ನು ಸಚಿವನಾಗಿ ಮಾಡಿದರು. ನನ್ನನ್ನು ಸಚಿವರನ್ನಾಗಿ ಆಯ್ಕೆ ಮಾಡಿದ ಮುಖ್ಯಮಂತ್ರಿಗಳಿಗೆ, ನಾನು ಪ್ರತಿನಿಧಿಸುವ ಪಕ್ಷಕ್ಕೆ, ನನ್ನ ಕ್ಷೇತ್ರದ ಮತದಾರರಿಗೆ ಅವರು ಇಟ್ಟ ಭರವಸೆಗಳಿಗೆ ಚ್ಯುತಿ ತರುವಂತಹ ಯಾವ ಕಾರ್ಯವನ್ನು ನಾನು ಈವರೆಗೂ ಮಾಡಿಲ್ಲ, ಮಾಡುವುದೂ ಇಲ್ಲ, ಇಂದಿಗೂ ನಾನು 10 ರಿಂದ 12 ಗಂಟೆಗಳ ಕಾಲ ಕೆಲಸ ಮಾಡುತ್ತೇನೆ. ಅಧ್ಯಯನ ಮಾಡುತ್ತೇನೆ. ಮಾನ್ಯ ಮುಖ್ಯಮಂತ್ರಿಗಳ ಬಗೆಗೆ ನೀವು ಬಳಸಿದ ಭಾಷೆ ನನಗೆ ತುಂಬಾ ನೋವನ್ನುಂಟು ಮಾಡಿದೆ.

ಇನ್ನು ಪಿಯುಸಿ ಮತ್ತು ಎಸ್.ಎಸ್.ಎಲ್.ಸಿ. ಮೌಲ್ಯಮಾಪನ ಮಾಡುವ ಸಂದರ್ಭದಲ್ಲಿ ಕಂಡು ಬಂದಂತಹ ತಪ್ಪುಗಳಿಗೆ ಕಾರಣಕರ್ತರ್‍ಯಾರು ಅವರ ವಿರುದ್ಧ ಕ್ರಮ ತೆಗೆದುಕೊಳ್ಳುವಂತೆ ತಕ್ಷಣವೇ ಮೌಖಿಕ ಆದೇಶ ನೀಡಿದ್ದು, ತದನಂತರ ಲಿಖಿತ ಆದೇಶ ಮಾಡಿರುತ್ತೇನೆ. ಇಂತಹ ವಿಚಾರಗಳಲ್ಲಿ ಪ್ರಶ್ನೆಪತ್ರಿಕೆ ಹೇಗೆ ರೂಪಿಸುತ್ತಾರೆ, ಅದರ ನಿಯಮ ಹಾಗೂ ಮಾನದಂಡ ಇವುಗಳ ಬಗ್ಗೆ ಸರಿಯಾಗಿ ಮಾಹಿತಿ ಪಡೆದುಕೊಳ್ಳದೇ ವಿಚಾರವನ್ನು ಸರಿಯಾಗಿ ಅರ್ಥೈಸಿಕೊಳ್ಳದೇ ಕೀಳು ಭಾಷೆಗಳನ್ನು ಬಳಸಿ ಮಾಹಿತಿ ಇಲ್ಲದವರನ್ನು ನಿಮ್ಮ ಸ್ಟುಡಿಯೋದಲ್ಲಿ ಕೂರಿಸಿ ಅಸಂಬದ್ಧವಾಗಿ ಚರ್ಚಿಸಿರುವುದು ಸಮಂಜಸವಲ್ಲ, ಹಾಗೆ ನೀವು ಇಡೀ ಜಗತ್ತಿಗೇ ಅನ್ವಯವಾಗುವ ರೀತಿ ತೀರ್ಪು ನೀಡುವುದು ನಿಮ್ಮ ದೃಶ್ಯಮಾಧ್ಯಮದ ಏಕಪಕ್ಷೀಯ ತೀರ್ಮಾನವಲ್ಲವೇ? ಹಾಗೆಯೇ ಅದೇ ವಾದದಲ್ಲಿ "ಈ ನಾಲಾಯಕ್ ಮಂತ್ರಿ ರಾಜೀನಾಮೆ ಕೊಟ್ಟು ಮನೆಗೆ ಹೋಗಲಿ. ತೀರ್ಥಹಳ್ಳಿ ಜನ ಯಾಕೆ ಇಂಥವರಿಗೆ ಮತ ನೀಡಿದ್ದಾರೆ" ಎಂದು ಹಲವು ಬಾರಿ ಉಲ್ಲೇಖಿಸಿದ್ದೀರಿ ಎಂದು ಕೇಳಲ್ಪಟ್ಟಿರುವೆ. ಹಾಗೆಯೇ ನಿಮ್ಮ ಮಾತನ್ನು ಒಮ್ಮೆ ನೋಡಿದ್ದೇನೆ ಕೂಡ. ಬೆಳಗ್ಗೆ 05-30ರಿಂದ ರಾತ್ರಿ 10.00 ಗಂಟೆಯವರೆಗೆ ಸರ್ಕಾರಿ ಕಾರ್ಯಕ್ರಮಗಳು, ಸಾರ್ವಜನಿಕ ಭೇಟಿ ಅಥವಾ ಸರ್ಕಾರಿ ಪ್ರವಾಸದಲ್ಲಿ ಇರುತ್ತೇನೆ. ತೀರ್ಥಹಳ್ಳಿಯ ಸುಮಾರು 37,000 ಜನ ನನ್ನ ಚಂದ ನನ್ನ ಬಟ್ಟೆ ನನ್ನ ಶ್ರೀಮಂತಿಕೆಗೆ ಮತನೀಡಿಲ್ಲ. ಈ ಕ್ಷೇತ್ರದ ಜನ ನನಗೆ ಯಾಕೆ ಮತ ನೀಡಿದರು ಎಂಬ ಕುತೂಹಲ ನಿಮಗಿದ್ದರೆ ನಮ್ಮ ತೀರ್ಥಹಳ್ಳಿಗೆ ಭೇಟಿ ನೀಡಿ ಒಂದು ಫರ್ಲಾಂಗ್ ಓಡಾಡಿ, ಅಲ್ಲಿ ಕುಳಿತ ಸಾಮಾನ್ಯ ನಾಗರಿಕರನ್ನು ವಿಚಾರಿಸಿ ನೋಡಿ ಆವಾಗ ತಿಳಿಯುತ್ತದೆ. ಹವಾನಿಯಂತ್ರಿತ ಸ್ಟುಡಿಯೋದಲ್ಲಿ ಕುಳಿತು ಬಹುಪರಾಕ್ ಹಾಕುವ ಜನರೊಂದಿಗೆ ಕಾರ್ಯಕ್ರಮ ನಿರೂಪಿಸಿದರೆ ಇವುಗಳ ಬಗ್ಗೆ ನಿಮಗೆ ಅರಿವಾಗುವುದಾದರೂ ಹೇಗೆ. ರಾಜ್ಯಾದ್ಯಂತ ನನಗೆ ಪಕ್ಷಾತೀತವಾಗಿ, ಜಾತ್ಯಾತೀತವಾಗಿ ಹಲವಾರು ಹಿತೈಷಿಗಳು, ಸ್ನೇಹಿತರು ಇದ್ದಾರೆ. ಬಹುಷಃ ಅಷ್ಟೊಂದು ಜನಗಳನ್ನು ಮೂರ್ಖರನ್ನಾಗಿಸುವ ಸಾಮರ್ಥ್ಯ ನನಗಿಲ್ಲ, ಪ್ರಾಯಶಃ ನಿಮಗಿರಬಹುದು.

ಹಾಗೆಯೇ ತೀರ್ಥಹಳ್ಳಿ ಕ್ಷೇತ್ರದಲ್ಲಿ ಈ ನಾಡಿನ ಅತ್ಯಂತ ಪ್ರಜ್ಞಾವಂತ ನಾಗರಿಕರಿದ್ದು, ನನ್ನ ಕ್ಷೇತ್ರ ಹಾಗೂ ಕ್ಷೇತ್ರ[...] ಜನರ ಮೇಲೆ ನನಗೆ ಅತೀವ ಹೆಮ್ಮೆ ಹಾಗೂ ಗೌರವವಿ[...] ಕುವೆಂಪು, ಕಡಿದಾಳು ಮಂಜಪ್ಪ, ಶಾಂತವೇರಿ ಗೋಪಾ[...] ಗೌಡರು, ಡಾ|| ಯು.ಆರ್. ಅನಂತಮೂರ್ತಿ, ಡಾ[...] ಹಾ.ಮಾ. ನಾಯಕ್, ಎಂ.ಕೆ. ಇಂದಿರ, ಎಸ್.[...] ಪರಮೇಶ್ವರಭಟ್, ಜಸ್ಟೀಸ್ ರಾಮಾ ಜೋಯಿಸ್, ಜಸ್ಟೀ[...] ಎನ್.ಡಿ. ವೆಂಕಟೇಶ್, ಗಿರೀಶ್ ಕಾಸರವಳ್ಳಿ, ಡಾ[...] ಸರೋಜಿನಿ ಮಹಿಷಿ ಮುಂತಾದ ಮಹಾನ್ ಗಣ್ಯ[...] ಜನಿಸಿದ ಪುಣ್ಯ ಮಲೆನಾಡಿದು. ಹಾಗೆ ನಮ್ಮ ಕ್ಷೇತ್ರ[...] ಪ್ರತಿಯೊಬ್ಬ ಮತದಾರರು ಕೂಡ ಪ್ರಜ್ಞಾವಂತರು. ಪ್ರ[...] ಬಾರಿ ಮತ ಚಲಾಯಿಸುವಾಗಲೂ ಯೋಚಿಸಿ ಯೋಗ್ಯರ[...] ಆಯ್ಕೆ ಮಾಡಿರುತ್ತಾರೆ. ನನಗಾದ ಅವಮಾ[...] ಸಹಿಸಿಕೊಳ್ಳುತ್ತೇನೆ. ಆದರೆ ದಯವಿಟ್ಟು ನನ್ನ ಕ್ಷೇತ್ರ[...] ಮತದಾರರ ಬಗ್ಗೆ ಕೀಳಾಗಿ ಮಾತನಾಡುವುದನ್ನು ನಾನ[...] ಎಂದಿಗೂ ಸಹಿಸುವುದಿಲ್ಲ.

ನೀವು ಇನ್ನೊಂದು ವಿಷಯದಲ್ಲಿ ಹಗುರವಾ[...] ಮಾತನಾಡಿದ್ದೀರ. "ಕಳೆದ ಎಂಟು ದಿನಗಳ ಕಾಲ ಎ[...] ಹೋಗಿದ್ದರು, ಅಡಗಿ ಕುಳಿತಿದ್ದಾರಾ, ತ[...] ತಪ್ಪಿಸಿಕೊಂಡಿದ್ದಾರಾ, ಭೂಗತರಾಗಿದ್ದಾರಾ, ಫೋನ್ ಸಂಪರ್ಕ[...] ಸಿಗುತ್ತಿಲ್ಲ" ಎಂದೆಲ್ಲಾ ಹೇಳಿದ್ದೀರ. ನಿಮ್ಮನ್ನು ನಿಮ[...] ಟಿವಿಯನ್ನು ಇಡೀ ಜಗತ್ತು ಪ್ರತಿಕ್ಷಣವೂ ನೋಡುತ್ತಿರುತ್ತ[...] ಎಂಬ ಭ್ರಮಾಲೋಕದಿಂದ ದಯಮಾಡಿ ಹೊರಬನ್ನಿ[...] ನಿಮ್ಮನ್ನು ಸಂಪರ್ಕಿಸದಿದ್ದರೆ ಅಪರಾಧಿಯಂತೆ ಬಿಂಬಿಸಲ[...] ಹೊರಟ ನಿಮ್ಮ ಮನಸ್ಥಿಗೆ ನನಗೆ ಮರುಕವಿದೆ. ಹಾಗೆಯೆ[...] ನಿಮ್ಮ ಗಮನಕ್ಕೆ ನಾನು ಪಲಾಯನವಾದಿಯಲ್ಲ-ಹೇಡಿಯಲ[...] ನಾನು ಸತ್ಯ ಪ್ರಾಮಾಣಿಕನಾಗಿರುವಷ್ಟು ಕಾಲ ಯಾರಿಗ[...] ಹೆದರುವ ಪ್ರಶ್ನೆಯಿಲ್ಲ, ನನ್ನ ತಪ್ಪಿನಿಂದ ಯಾವ ದುರಂತವ[...] ಆಗಿಲ್ಲ, ಅಧಿಕಾರಿಗಳ ಮಟ್ಟದಲ್ಲಿ ಆದ ತಪ್ಪಿಗೆ ಶಿಕ್ಷೆ ಇದ[...] ಹಾಗೆಯೇ ನಿಮ್ಮ ಟಿವಿಯ ಕಾರ್ಯಕ್ರಮಕ್ಕೆ ಹೆದರಿ ನಾನ[...] ಭೂಗತನಾಗಿದ್ದೆ ಎಂದು ಚಿತ್ರಿಸಲು ಹೊರಟಿರುವುದ[...] ತೀರ ಕ್ಷುಲ್ಲಕ. ತಪ್ಪಿತಸ್ಥರ ಮೇಲೆ ಕ್ರಮ ಖಚಿತ. ಹಾಗೆಯೆ[...] ನೀವು ಕಳೆದ ಆ 8 ದಿನಗಳ ಕಾರ್ಯಕ್ರಮದಲ್ಲಿ ನಾನ[...] ಎಲ್ಲಿದ್ದೆ ಎಂದು ತಾವು ತಮ್ಮ ತನಿಖಾ ವರದಿಗಾರ[...] ಸಹಾಯದಿಂದ ಪರಿಶೀಲಿಸಬಹುದು. ಹಾಗೆಯೇ ನ[...] ಸರ್ಕಾರಿ ಸಮಯ ಹೊರತುಪಡಿಸಿ ನಾನು ನಿಮ[...] ಅನುಕೂಲವಾದಂತಹ ದಿನವೊಂದನ್ನು ನಿಗದಿಪಡಿ[...] ನಿಮ್ಮೊಂದಿಗೆ ಮುಕ್ತ ಸಂವಾದ ನಡೆಸಲು ಸಿದ್ಧನಿರುತ್ತೇನ[...] ಆದರೆ ಜೊತೆಯಲ್ಲಿ ಸರಿಯಾದ ಮಾಹಿತಿ ಇರುವವರನ್ನ[...] ಕೂರಿಸಿಕೊಳ್ಳಬೇಕು.

ಕೊನೆಯದಾಗಿ ಅಧಿಕಾರವು ಶಾಶ್ವತ ಅಲ್ಲ ಎನ್ನು[...] ಅರಿವು ನನಗಿದೆ. ನನ್ನ ಕೆಲಸವನ್ನು ನನ್ನ ಕರ್ತವ್ಯವನ[...] ಪ್ರಾಮಾಣಿಕವಾಗಿ ನಿರ್ವಹಿಸಲು ನಾನು ಸದಾ ಸಿದ್ಧನಿರುತ್ತೇನ[...] ಹಾಗೆಯೇ ನೀವುಗಳು ಕೂಡ ಜನ ಸಾಮಾನ್ಯರಿ[...] ಕಲ್ಯಾಣವಾಗುವಂತಹ ಕಾರ್ಯಕ್ರಮಗಳನ್ನು ರೂಪಿಸಲ[...] ಯೋಗ್ಯವಾದ ಸಲಹೆಗಳನ್ನು ನೀಡುತ್ತೀರ ಎಂಬ ಭರವ[...] ನಮಗಿದೆ. ನಿಮ್ಮ ಸಂವಾದದ ಅರ್ಥವಿರುವ ಪ್ರಶ್ನೆಗಳಿ[...] ಉತ್ತರಿಸುವ ಪ್ರಯತ್ನ ಮಾಡಿದ್ದೇನೆ. ಇನ್ನು ಅರ್ಥವಿಲ್ಲ[...] ಕೆಲವು ಪ್ರಶ್ನೆಗಳಿಗೆ ಮೌನವೇ ನನ್ನ ಉತ್ತರ.

ವಂದನೆಗಳೊಂದಿ[...]
ತಮ್ಮ ವಿಶ್ವಾ[...]
ಕಿಮ್ಮನೆ ರತ್ನಾಕ[...]

ೋಕಾಯುಕ್ತದಲ್ಲಿದ್ದಾಗ ಕರಿಬಸ್ಯ ಗೆಬರಿದ್ದು 10 ಕೋಟಿ!

್ರಷ್ಟ ಪೋಲೀಸಪ್ಪನಿಗೆ 'ಪ್ರಮೋಷನ್' ಗಿಫ್ಟು?

ೇದು ವ್ಯವಸ್ಥೆಯ ವಿಪರ್ಯಾಸ. ಇಲ್ಲಿಗೆ ಒಂದೂವರೆ ವರ್ಷದ ಹಿಂದೆ ಃ ಪೋಲೀಸ್ ಅಧಿಕಾರಿಯ ಆಸ್ತಿಪಾಸ್ತಿ ಮೇಲೆ ಲೋಕಾಯುಕ್ತ ರೈಡು ಅನಾಮತ್ತು 10 ಕೋಟಿ ಅಕ್ರಮ ಆಸ್ತಿಯನ್ನು ವಶಕ್ಕೆ ಪಡೆದಿತ್ತೊ, ಪೋಲೀಸ್ ಇನ್ಸ್‌ಪೆಕ್ಟರ್ ಇವತ್ತು ಡಿ.ಎಸ್.ಪಿ.ಯಾಗಿ ಮುಂಬಡ್ತಿ ುವ ಲಿಸ್ಟಿನಲ್ಲಿ ಅಗ್ರಸ್ಥಾನದಲ್ಲಿದ್ದಾನೆ. ಹಾಗೆನ್ನುವ ಮಾಹಿತಿ 'ಪತ್ರಿಕೆ'ಗೆ ಾಗಿದೆ. ಅತ್ಯಲ್ಪ ಅವಧಿಯಲ್ಲೇ ಇಂಥಾ ಅಚ್ಚರಿಯ 'ಏಳಿಗೆ' ಸಾಧಿಸಿರೋದು ವಿ ಜಿಲ್ಲೆ ಖಾನಾಪುರ ಪೊಲೀಸ್ ತರಬೇತಿ ಶಾಲೆಯಲ್ಲಿ ಪೋಲೀಸ್ ೆಕ್ಟರ್ ಆಗಿರುವ ಎಂ.ಎಸ್. ಕರಿಬಸವನಗೌಡ. ಇಲಾಖೆಯೊಳಗೆ ಈತ ುವ ಮಸಲತ್ತುಗಳೆಲ್ಲ ಅಂದುಕೊಂಡಂತೆ ಕೈ ಹಿಡಿದುಬಿಟ್ಟರೆ ಮುಂಬರುವ ಬಡ್ತಿ ಪಟ್ಟಿಯಲ್ಲಿ ಈತ ಡಿ.ಎಸ್.ಪಿ. ಆಗಲಿದ್ದಾನೆ.

ಂದಹಾಗೆ, ಪತ್ರಿಕೆ ಈತನ ಭ್ರಷ್ಟರೂಪವನ್ನು ಬಯಲಿಗೆಳೆಯುತ್ತಿರುವುದು ಮೊದಲೇನಲ್ಲ, ಈ ಹಿಂದೆ ಲೋಕಾಯುಕ್ತ ಇನ್ಸ್‌ಪೆಕ್ಟರ್ ಆಗಿದ್ದಾಗ ಮಾಡಿಕೊಂಡ ಒಂದೆರಡು ಅಪರಾ-ತಪರಾಗಳನ್ನು ಪತ್ರಿಕೆ ಅನಾವರಣ ತ್ತು. ಅದಾದ ಮೇಲೆಯೇ ಈತನನ್ನು ಶಿವಮೊಗ್ಗ ಲೋಕಾಯುಕ್ತ ದಿಂದ ನೇರವಾಗಿ ಬೆಳಗಾಂನ ನಾಗರಿಕ ಹಕ್ಕು ಜಾರಿ ನಿರ್ದೇಶನಾಲಯಕ್ಕೆ ಡಿ ಮಾಡಲಾಗಿತ್ತು, ಅಷ್ಟರಲ್ಲಾಗಲೆ ಆತ ತನ್ನ ಇಡೀ ಖಾನಂದಾನ್ ತಿನ್ನಬಹುದಾದಷ್ಟು ಅಕ್ರಮ ಆಸ್ತಿಯನ್ನು ರಾಜ್ಯದ ಮೂಲೆಮೂಲೆಯಲ್ಲೂ ದಿಸಿಟ್ಟಿದ್ದ.


ಹೊಲವನ್ನೇ ಮೇಯ್ದ ಬೇಲಿ!

ರಿಬಸವನಂತಹ ಭ್ರಷ್ಟ ಕ್ರಿಮಿ ಲೋಕಾಯುಕ್ತದಂತಹ ಥೆಯಲ್ಲಿದ್ದುಕೊಂಡೇ ಭ್ರಷ್ಟ ಟೀಮು ಕಟ್ಟಿಕೊಂಡು ಭರ್ಜರಿ ಮಾಡುತ್ತಿದ್ದ ಸಂಗತಿ ಇಲಾಖೆಗೆ ಗೊತ್ತಿರದ ಸಂಗತಿಯೇನಾಗಿರಲಿಲ್ಲ, ಗಿಯೇ ಡಿಸೆಂಬರ್ 27, 2013ರಂದು ಕರ್ನಾಟಕ ಲೋಕಾಯುಕ್ತ ೀಸರು ಚಿತ್ರದುರ್ಗ, ದಾವಣಗೆರೆ, ಬಳ್ಳಾರಿ, ಹಾವೇರಿ, ಗದಗ, ಬೆಳಗಾಂ, ಮಿ ಮುಂತಾದೆಡೆ ಏಕಕಾಲಕ್ಕೆ ಕರಿಬವಸವನಗೌಡನ ಆಸ್ತಿಗಳ ಮೇಲಿ ನಡೆಸಿದ್ದರು. ಆ ದಾಳಿಯಲ್ಲಿ ಸಿಕ್ಕುಬಿದ್ದ ಆಸ್ತಿಯ ಮೌಲ್ಯ ಎಷ್ಟು ' ಬರೋಬ್ಬರಿ 10 ಕೋಟಿ ರೂಪಾಯಿಗಳು! ಕರ್ನಾಟಕ ಲೋಕಾಯುಕ್ತ ಾಸದಲ್ಲೇ ಅದೇ ಸಂಸ್ಥೆಯಲ್ಲಿದ್ದ ನೌಕರನ ವಿರುದ್ಧ ನಡೆದಿದ್ದ ಬಹುದೊಡ್ಡ ಅದಾಗಿತ್ತು.

ರಂಸಿಂಗ್ ಸರ್ಕಾರದ ಅವಧಿಯಲ್ಲಿ ಲೋಕಾಯುಕ್ತ ಪೊಲೀಸ್ ಇನ್ಸ್‌ಪೆಕ್ಟರ್ ದ ಕರಿಬಸವನಗೌಡ ತನಗಿದ್ದ ಅಧಿಕಾರ ಬಲ ಬಳಸಿಕೊಂಡೇ ಭ್ರಷ್ಟ ರಿಗಳ ಸುಲಿಗೆ ಆರಂಭಿಸಿದ್ದ. ಲೋಕಾಯುಕ್ತ ಪೊಲೀಸರು ನಡೆಸಲಿರುವ ು. ಬಗ್ಗೆ ಭ್ರಷ್ಟ ಅಧಿಕಾರಿಗಳಿಗೆ ಮೊದಲೇ ಮಾಹಿತಿ ನೀಡುವುದು, ನಡೆದ ಪ್ರಕರಣಗಳಲ್ಲಿ ನಂತರ ಅಂತಹ ಭ್ರಷ್ಟರನ್ನು ರಕ್ಷಿಸಲು ಒಳದಾರಿಗಳನ್ನು ಸಿ ಬಚಾವು ಮಾಡುವುದು, ತನಗಾಗದವರ ವಿರುದ್ಧ 'ಲೋಕಾಯುಕ್ತ' ಬ್ರಹ್ಮಾಸ್ತ್ರವನ್ನು ಪ್ರಯೋಗಿಸಿ ಬಲಿ ಹಾಕುವುದು... ಹೀಗೆ ಒಂದು ಕಾಲ ಲೋಕಾಯುಕ್ತ ಸಂಸ್ಥೆಗೇ ಗ್ರಹಣ ಹಿಡಿಸುತ್ತಲೇ ಬಂದಿದ್ದ ವನಗೌಡ.

ಬಸವನಗೌಡ ಅದೆಂತಾ ಖದೀಮನೆಂದರೆ ಅದೇ ಸಂಸ್ಥೆಯೊಳಗೆ ಒಂದು ಗುಂಪನ್ನೇ ಕಟ್ಟಿಬೆಳೆಸಿದ್ದ. ಲೋಕಾಯುಕ್ತದಲ್ಲಿ ಕೆಲಸ ಮಾಡುತ್ತಿದ್ದ ುಲ್ಲಿ ಇವನು ಹ್ಯಾಂಡಲ್ ಮಾಡಿರುವ ಕೇಸುಗಳನ್ನೊಮ್ಮೆ ಪರಿಶೀಲಿಸಿದರೆ ರ ದುರುಪಯೋಗ, ಭ್ರಷ್ಟಾಚಾರ, ಸ್ವಜನಪಕ್ಷಪಾತ, ಕಾನೂನು ಘನೆಯ ರಾಶಿರಾಶಿ ಮಾಹಿತಿ ಸಿಗುತ್ತದೆ. ದಾವಣಗೆರೆಯಲ್ಲೊಮ್ಮೆ ರಿ ಆಸ್ಪತ್ರೆಯ ವೈದ್ಯರೊಬ್ಬರ ಮೇಲೆ ಲಂಚದ ದೂರು ಬಂದು ಾಯುಕ್ತ ದಾಳಿಯಾದ ನಂತರವೂ ಆತನನ್ನು ರಕ್ಷಿಸಲು ಈ ಕರಿಬಸವ ಧಿಕಾರ ದುರ್ಬಳಕೆ ಮಾಡಿಕೊಂಡಿದ್ದ. ಹಾವೇರಿ ಜಿಲ್ಲೆಯಲ್ಲಿ ಶಿಗ್ಗಾಂವಿಯ ಮನೆ ಹಂಚಿಕೆಯಲ್ಲಿ ಪುರಸಭಾ ಮುಖ್ಯಾಧಿಕಾರಿ ವಿನೇಕರ್, ಯರ್‌ಗಳು ತಲಾ 10 ಸಾವಿರ ಲಂಚ ಪಡೆದು ಅನರ್ಹರಿಗೆ 270 ಹಂಚಿಕೆ ಮಾಡಿದ್ದರು. ಈ ಪ್ರಕರಣದಲ್ಲೂ ಕರಿಬಸವ ಡೀಲ್ ಕುದುರಿಸಿ ರೂ ಲೋಕಾಯುಕ್ತದ ಹಿರಿಯ ನಿಷ್ಠಾವಂತ ಅಧಿಕಾರಿಗಳ ಕಾರಣದಿಂದಾಗಿ ಮಂದಿ ಸ್ಪೆಂಡಾಗಿ ವಿರ್ಜೆ ಎಂಬಾತ ಡಿಸ್‌ಮಿಸ್ ಆದ. 'ಲಂಕೇಶ್'ನಲ್ಲೂ ವನಗೌಡನ ಭ್ರಷ್ಟಾಚಾರದ ಬಗ್ಗೆ ಆಗಲೇ ವರದಿಯೂ ಪ್ರಕಟವಾಗಿತ್ತು. ಸನ್ನೂರಿನಲ್ಲಿ ಇಂಜಿನಿಯರ್ ಹರಮಗಟ್ಟಿ ಎಂಬುವರು ಸಿಮೆಂಟ್ ಾರದಲ್ಲಿ ಸಿಕ್ಕಿ ಬಿದ್ದಾಗ ಈ ಕರಿಬಸವನಗೌಡ ಅವರ ವಿರುದ್ಧ ಕಾನೂನು ಜರುಗಿಸುವ ಬದಲಾಗಿ ಕಾನೂನಿನಿಂದ ಪಾರಾಗುವ ಒಳದಾರಿಗಳನ್ನು ಸಿ ಲಂಚ ತಿಂದು ಬಚಾವು ಮಾಡಿದ್ದ. ಆ ಇಂಜಿನಿಯರ್‌ನನ್ನು ಸೇರುವಂತೆ ಸಲಹೆ ನೀಡಿ ಬೇಲ್ ಸಿಗುವಂತೆ ಮಾಡಿ ಕೊನೆಗೆ ನಡೆಸಿದ ನಾಟಕವನ್ನು ಆಡಿ 'ಬಿ' ರಿಪೋರ್ಟ್ ಹಾಕಿಸಿದ್ದ.

ಬಸವನಗೌಡ ಲೋಕಾಯುಕ್ತ ಇಲಾಖೆಗೆ ಕಾಲಿಟ್ಟ ಕೇವಲ ಹತ್ತೇ ಲ್ಲಿ ಹತ್ತು ಕೋಟಿಗೂ ಮೀರಿದ ಬನಾಶಿ ಫಸಲು ತೆಗೆದಿದ್ದ. ತನ್ನ ಶಾಂತವೀರಮ್ಮನ ಹೆಸರಿನಲ್ಲಿ ಹದಗಲಿ ಹಾಗೂ ಹರಪನಹಳ್ಳಿ ನಲ್ಲಿ 26 ಎಕರೆ ಜಮೀನು ಖರೀದಿಸಿದ್ದಲ್ಲದೆ ಹದಗಲಿ ತಾಲ್ಲೂಕು ಂದನಹಳ್ಳಿ ಗ್ರಾಮದ ಸರ್ವೆ ನಂ. 40/ಬಿ ಯಲ್ಲಿ 2.38 ಎಕರೆ, 137/ಬಿ ಯಲ್ಲಿ 11.10 ಎಕರೆ, ಸ.ನಂ. 42/ಬಿ ಯಲ್ಲಿ 2.10 ಸರ್ವೆ ನಂ. 3 ಎಕರೆ, ಸರ್ವೆ ನಂ. 270 ರಲ್ಲಿ 3 ಎಕರೆ, ಹೀಗೆ ಜಮೀನು ಖರೀದಿಸಿದ್ದ. ಇನ್ನು ಬಿಜಾಪುರದಲ್ಲಿ ಫುಡ್ ಇನ್ಸ್‌ಪೆಕ್ಟರ್ ಸೋದರ ವಿಶ್ವನಾಥಗೌಡ ಕೂಡಾ ಕರಿಬಸವನಗೌಡನ ಹೆಸರು ಂದು ಆಹಾರ ಇಲಾಖೆಯನ್ನು ಸೂರೆ ಮೇಯುತ್ತಿದ್ದಾನೆ. ಈ ಸೋದರರು ತಮ್ಮ ಸರ್ಕಾರಿ ವೃತ್ತಿಯ ಜೊತೆಜೊತೆಗೆ ಹರಪನಹಳ್ಳಿ ವಾರ್ಡ್ ನಂಬರ್ 1 ರಲ್ಲಿ, ಸೈಟ್ ನಂಬರ್ 364, 365 ರಲ್ಲಿ



ಎಂ.ಎಸ್. ಕರಿಬಸವನಗೌಡ.

80x50 ಅಡಿ ನಿವೇಶನ ಖರೀದಿಸಿ ದೊಡ್ಡ ಮನೆ ಹಾಗೂ ಬಸವೇಶ್ವರ ಟ್ರೇಡರ್ಸ್, ಮಲ್ಲಿಕಾರ್ಜುನ ಟ್ರೇಡರ್ಸ್ ಹೆಸರಲ್ಲಿ ಸಿಮೆಂಟ್ ಮಾರಾಟ ದಂಧೆ ನಡೆಸುತ್ತಿದ್ದಾರೆ.

ಅರ್ಧ ಉತ್ತರ ಕರ್ನಾಟಕವನ್ನೇ ಮುಕ್ಕಿದ ಕರಿಬಸವನಗೌಡ ಬಂಗಾರದ ಬೆಲೆಯ ಸಿಲಿಕಾನ್ ಸಿಟಿಯ ನೆಲವನ್ನು ಬಿಟ್ಟಾನೆಯೇ? ಇಲ್ಲಿಯೂ ಸಹಾ ರಾಜರಾಜೇಶ್ವರಿ ನಗರದಲ್ಲಿ 60x40 ಅಡಿಯ ಒಂದು ಹಾಗೂ ವಿಶ್ವೇಶ್ವರಯ್ಯ ಲೇಔಟ್‌ನಲ್ಲಿ 80x50 ಅಳತೆಯ ಮತ್ತೊಂದು ಹೀಗೆ ಎರಡು ಸೈಟುಗಳನ್ನು ಖರೀದಿಸಿದ್ದಾನೆ. ಶಿವಮೊಗ್ಗದ ಗಾಡಿಕೊಪ್ಪದಲ್ಲಿ 80x50 ಅಳತೆಯ ಸೈಟು ಕೂಡಾ ಇವನ ಆಸ್ತಿಯ ನಂಟು ಮೆತ್ತಿಸಿಕೊಂಡಿದೆ. ಅಲ್ಲದೆ ಕರಿಬಸವನಗೌಡ ತಾನು ಕಮಾಯಿಸುತ್ತಿದ್ದ ಹಣದಲ್ಲಿ ನೆಂಟಕೋಗುಂಡಿ ದ್ಯಾಮಣ್ಣನೆಂಬ (ಚಿತ್ರದುರ್ಗ ಮಾಜಿ ಡಿಸಿಸಿ ಬ್ಯಾಂಕ್ ಅಧ್ಯಕ್ಷ) ಹೆಸರಲ್ಲಿ 23 ಎಕರೆ ಭೂಮಿ ಕೊಂಡಿದ್ದ. ತನ್ನ ಹೆಂಡತಿ ಸ್ಮಿತಾಳ ಹೆಸರಲ್ಲಿ ಹೊಸಪೇಟೆ ತಾಲ್ಲೂಕಿನ ನಾಗೇನಹಳ್ಳಿಯಲ್ಲಿ 20 ಎಕರೆ ಜಮೀನು ಖರೀದಿಸಿಟ್ಟಿದ್ದ. ಅವತ್ತು ದಾಳಿ ಮಾಡಿದ ಲೋಕಾಯುಕ್ತ ಪೊಲೀಸರು ಇವ್ಯಾವಕ್ಕೂ ಸರಿಯಾಗಿ ತಾಳೆಯಾಗುವ ಆದಾಯ ಮೂಲಗಳು ಸಿಗದೇ ಕೇಸ್ ಜಡಿದು ಹೋಗಿದ್ದರು. ಈಗ ಅಂತಹ ಹಿನ್ನಲೆಯ ಭ್ರಷ್ಟ ಪೊಲೀಸಪ್ಪ ಪ್ರಮೋಷನ್ ಗಿಟ್ಟಿಸುವ ಹುನ್ನಾರ ನಡೆಸಿದ್ದಾನೆ.

ಛೀಮಾರಿ ಹಾಕಿಸಿಕೊಂಡಿದ್ದ

ಅಧಿಕಾರ ಕೈಯಲ್ಲಿದ್ದರೆ ಯಾರನ್ನು, ಹೇಗೆ ಬೇಕಾದರು ಆಡಿಸಬಲ್ಲೆ ಎಂಬ ಜಾಯಮಾನದವ ಈತ. ಸಾಮಾನ್ಯವಾಗಿ, ಅದರಲ್ಲೂ ಸರ್ಕಾರಿ ಅಧಿಕಾರಿ ವರ್ಗಕ್ಕೆ ಲೋಕಾಯುಕ್ತರೆಂದರೆ ಒಂದು ನಮೂನಿ ಭಯ ಇದ್ದೇ ಇರುತ್ತೆ. ಇದನ್ನೇ ಬಂಡವಾಳ ಮಾಡಿಕೊಳ್ಳುತ್ತಿದ್ದ ಈತ ಭ್ರಷ್ಟರನ್ನು ಹೆದರಿಸಿ ಸುಲಿಗೆ ಮಾಡುತ್ತಿದ್ದ. ಅದಕ್ಕೋಸ್ಕರ ಇಲಾಖೆಯೊಳಗೆ ತನ್ನದೇ ಆದ ಒಂದು ಭ್ರಷ್ಟಕೂಪವನ್ನೇ ನಿರ್ಮಿಸಿಕೊಂಡಿದ್ದ. ದಾವಣಗೆರೆಯಲ್ಲಿ ಲೋಕಾಯುಕ್ತಲ್ಲಿ ಅಧಿಕಾರಿಗಳಾಗಿದ್ದ ಶ್ರೀನಿವಾಸ್, ಹರೀಶ್ ರೆಡ್ಡಿ ಮುಂತಾದವರು ಕರಿಬಸವನ ಭ್ರಷ್ಟ ಟೀಂ ಸದಸ್ಯರಾಗಿದ್ದರು. ಇಂಥವರನ್ನೆಲ್ಲಾ ತನ್ನ ದಾಳಗಳನ್ನಾಗಿಸಿಕೊಂಡು ತನ್ನೊಂದಿಗೆ ಅಡ್ಜಸ್ಟ್ ಆಗದವರ ವಿರುದ್ಧ ರೇಡಿನ ಅಸ್ತ್ರ ಪ್ರಯೋಗಿಸಿ ಪೀಡಿಸುತ್ತಿದ್ದ. ಶಿವಮೊಗ್ಗದ ಲೋಕಾಯುಕ್ತ ಇನ್ಸ್‌ಪೆಕ್ಟರ್ ಆಗಿದ್ದಾಗಲೊಮ್ಮೆ ಈತ ಮಾಡಿದ ಇಂಥದೇ ಒಂದು ಯಡವಟ್ಟಿನಿಂದಾಗಿ ಇಲಾಖೆಯಿಂದ ಮತ್ತು ಮಾನವಹಕ್ಕು ಆಯೋಗದಿಂದ ಛೀಮಾರಿಯನ್ನೂ ಹಾಕಿಸಿಕೊಂಡಿದ್ದ.


ಈತ ಶಿವಮೊಗ್ಗದಲ್ಲಿ ಕರ್ತವ್ಯದಲ್ಲಿದ್ದಾಗಲೆ ಕೃಷಿ ಇಲಾಖೆಯಲ್ಲಿ ಕೆ.ಜಿ. ಮಂಜಪ್ಪ ಎನ್ನುವವರು ಸಹಾಯಕ ಕೃಷಿ ನಿರ್ದೇಶಕರಾಗಿದ್ದರು. ಅವರನ್ನು ತನ್ನ ಖೆಡ್ಡಾಕ್ಕೆ ಕೆಡವುವ ಸಲುವಾಗಿ ಪ್ಲಾನ್ ರೂಪಿಸಿದ್ದ ಕರಿಬಸವನಗೌಡ, ಅವರ ಮೇಲೆ ಲೋಕಾಯುಕ್ತ ರೇಡ್ ನಡೆಯುವಂತೆ ಮಾಡಿದ್ದ. ಸಾಮಾನ್ಯವಾಗಿ ಲೋಕಾಯುಕ್ತ ದಾಳಿ ಸುಖಾಸುಮ್ಮನೆ ನಡೆಯುವುದಿಲ್ಲ, ಯಾವುದೇ ವ್ಯಕ್ತಿಯ ಮೇಲೆ ಭ್ರಷ್ಟತೆ ಅಥವಾ ಅಕ್ರಮ ಆಸ್ತಿಯ ದೂರು ಬಂದಾಗ, ಆ ಭಾಗದ ಲೋಕಾಯುಕ್ತ ಇನ್ಸ್‌ಪೆಕ್ಟರ್‌ರಿಂದ ಮೂಲ ವರದಿ ಅರ್ಥಾತ್ ಸೋರ್ಸ್ ರಿಪೋರ್ಟ್ ತರಿಸಿಕೊಳ್ಳಲಾಗುತ್ತೆ. ಹೀಗೆ ಸೋರ್ಸ್ ರಿಪೋರ್ಟ್ ತಯಾರಿಸುವಾಗ ಆ ವ್ಯಕ್ತಿಯ ವೇತನ, ಆದಾಯಗಳ ಮೂಲ, ಆಸ್ತಿಗಳು, ವ್ಯಯ ವಿವರ ಇತ್ಯಾದಿಗಳನ್ನು ದಾಖಲೆ ಸಹಿತ ನಮೂದಿಸಿ ಇಲಾಖೆಗೆ ಒಪ್ಪಿಸಬೇಕು. ಒಂದೊಮ್ಮೆ ಆ ಸೋರ್ಸ್ ರಿಪೋರ್ಟ್‌ನಲ್ಲಿ ಆದಾಯದ ಮೂಲಕ್ಕೂ, ಖರ್ಚಿನ ಋಣಕ್ಕೂ, ಆಸ್ತಿಗಳ ಲೆಕ್ಕಕ್ಕೂ ಏರುಪೇರು ಕಂಡುಬಂದರೆ ಆ ವ್ಯಕ್ತಿಯ ಮೇಲೆ ರೇಡ್ ನಡೆಸಲು ಇಲಾಖೆ ಅನುಮತಿ ನೀಡುತ್ತದೆ.

ಮಂಜಪ್ಪನವರ ಪ್ರಕರಣದಲ್ಲಿ ತನ್ನ ಅಧಿಕಾರವನ್ನು ದುರುಪಯೋಗ ಪಡಿಸಿಕೊಂಡಿದ್ದ ಕರಿಬಸವನಗೌಡ, ಸೋರ್ಸ್ ರಿಪೋರ್ಟ್‌ನಲ್ಲಿ ಸುಳ್ಳು ಸುಳ್ಳು ಮಾಹಿತಿಗಳನ್ನು ಇಲಾಖೆಗೆ ನೀಡಿ, ಮಂಜಪ್ಪನವರ ಆಸ್ತಿಗಳಿಕೆಯಲ್ಲಿ ಭಾರೀ ಅನುಮಾನ ಮೂಡುವಂತೆ ಮಾಡಿದ್ದ. ಆ ರಿಪೋರ್ಟನ್ನು ಆಧರಿಸಿಯೇ ಲೋಕಾಯುಕ್ತ ಇಲಾಖೆ ಅಂದಿನ ಚಿತ್ರದುರ್ಗ ಲೋಕಾಯುಕ್ತ ಡಿವೈಎಸ್ಪಿ ಎಚ್.ಎಸ್. ಗಂಗಾಧರಪ್ಪನವರ ನೇತೃತ್ವದಲ್ಲಿ ಮಂಜಪ್ಪನವರ ಮೇಲೆ ರೇಡ್ ಮಾಡಲು ಅನುಮತಿ ನೀಡಿತ್ತು, ಆದರೆ ರೇಡ್ ಮಾಡಿ ತನಿಖೆ ಪೂರ್ಣಗೊಳಿಸಿದ ಮೇಲೆಯೇ ಗೊತ್ತಾದದ್ದು ಇನ್ಸ್‌ಪೆಕ್ಟರ್ ಕರಿಬಸವನಗೌಡ ಸುಳ್ಳು ಮಾಹಿತಿಗಳನ್ನು ಇಲಾಖೆಗೆ ನೀಡಿದ್ದಾನೆಂಬ ಸತ್ಯ. ಮಂಜಪ್ಪರನ್ನು ಶತಾಯಗತಾಯ ರೇಡ್‌ಗೆ ಸಿಲುಕಿಸಲೇಬೇಕು ಎಂಬ ಉದ್ದೇಶದಿಂದ ತನ್ನ ಸೋರ್ಸ್ ರಿಪೋರ್ಟಿನಲ್ಲಿ ಅವರಿಗೆ 1974ರಲ್ಲಿ, 1997ರಲ್ಲಿ ಮತ್ತು 2006ರಲ್ಲಿ ತಂದೆ ಹಾಗೂ ತಾಯಿಯ ಕಡೆಯಿಂದ ಬಂದ ಪಿತ್ರಾರ್ಜಿತ ಆಸ್ತಿಗಳನ್ನೂ ಮಂಜಪ್ಪನವರ ಸ್ವಯಾರ್ಜಿತ ಆಸ್ತಿ ಅಂತ ಉಲ್ಲೇಖಿಸಿದ್ದ. ಅಲ್ಲದೇ ಆಸ್ತಿಗಳ ಮೌಲ್ಯೀಕರಣ ಮಾಡುವಾಗ, ಮಾರುಕಟ್ಟೆ ಬೆಲೆಗಿಂತ ಅಜಗಜಾಂತರ ದರಗಳನ್ನು ಹೇರಿದ್ದ. ಆತ ನೀಡಿದ್ದ ಮಾಹಿತಿ ಅದೆಷ್ಟು ಸುಳ್ಳಿನಿಂದ ಕೂಡಿತ್ತೆಂದರೆ ತನ್ನ ಸೋರ್ಸ್ ವರದಿಯಲ್ಲಿ ಮಂಜಪ್ಪನವರ ಆದಾಯಕ್ಕೂ ಅವರ ಆಸ್ತಿಗಳ ಲೆಕ್ಕಕ್ಕೂ 109.82% ನಷ್ಟು ವ್ಯತ್ಯಾಸ ಬರುತ್ತಿದೆ ಎಂದು ತೋರಿಸಿದ್ದ. ಆದರೆ ಅಂತಿಮ ತನಿಖಾ ವರದಿಯಲ್ಲಿ ಮಂಜಪ್ಪನವರ ಆದಾಯ ಮತ್ತು ಆಸ್ತಿಗಳ ನಡುವಿನ ವ್ಯತ್ಯಾಸ ಬಂದಿದ್ದು ಕೇವಲ 2.17% ಮಾತ್ರ. ಸ್ವತಃ ಲೋಕಾಯುಕ್ತ ನ್ಯಾಯಾಲಯವೇ ಕೇಸನ್ನು ವಜಾ ಮಾಡಿತ್ತು, ಅಲ್ಲದೇ ತನಿಖೆಯ ಅವಧಿಯಲ್ಲಿ ನಿಯಮಾನುಸಾರ ಮಂಜಪ್ಪನವರನ್ನು ಅಮಾನತು ಮಾಡಿದ್ದ ಕೃಷಿ ಇಲಾಖೆ ಆಮೇಲೆ ಅಷ್ಟೂ ದಿನದ ವೇತನವನ್ನು ಅವರಿಗೆ ನೀಡಿತ್ತು.

ಹೀಗೆ ಏಕಕಾಲಕ್ಕೆ ತನ್ನ ಮಾತೃಸಂಸ್ಥೆ ಲೋಕಾಯುಕ್ತ ಹಾಗೂ ಸರ್ಕಾರಗಳ ಕಾಲ, ಹಣ ಮತ್ತು ಶ್ರಮಗಳನ್ನು ವ್ಯಯಮಾಡಿದ್ದ ಕರಿಬಸವನಗೌಡನ ಮೇಲೆ ಕಿಡಿಕಾರಿದ್ದ ಲೋಕಾಯುಕ್ತ ಎಡಿಜಿಪಿ 'ಸೋರ್ಸ್ ವರದಿ ತಯಾರಿಸಿದ ಇನ್ಸ್‌ಪೆಕ್ಟರ್ ತುಂಬಾ ಬೇಜವಾಬ್ದಾರಿಯಿಂದ ವರದಿ ತಯಾರಿಸಿದ್ದಾರೆ. ಹದಿನೈದು ದಿನಗಳ ಒಳಗಾಗಿ ಈ ಕುರಿತು ಆತ ಸ್ಪಷ್ಟನೆ ನೀಡಬೇಕು' ಅಂತ ಛೀಮಾರಿ ಹಾಕಿದ್ದರು. ಆಗ ತಪ್ಪಿನಿಂದ ತಪ್ಪಿಸಿಕೊಳ್ಳುವ ಸಲುವಾಗಿ ತಾನು ಸಾಚಾ ವರದಿಯನ್ನು ಕೊಟ್ಟಿದ್ದೆ ಆದರೆ ತನಿಖಾಧಿಕಾರಿ ಎಚ್.ಎಸ್. ಗಂಗಾಧರಪ್ಪನವರೇ ಸರಿಯಾಗಿ ತನಿಖೆ ಮಾಡಿಲ್ಲ ಅಂತ ಮೇಲಾಧಿಕಾರಿಯನ್ನೇ ದೂರುವ ಉದ್ಧಟತನ ತೋರಿದ್ದ. ಅಲ್ಲದೇ ತಾನು ಇದುವರೆಗೂ 12 ರೇಡ್‌ಗಳಿಗೆ ಸೋರ್ಸ್ ರಿಪೋರ್ಟ್ ತಯಾರಿಸಿದ್ದು ಇದೇ ಮೊದಲ ಬಾರಿಗೆ ಇಂಥಾ ಯಡವಟ್ಟಾಗಿದೆ ದಯವಿಟ್ಟು ಇದೊಂದು ಬಾರಿ ಕ್ಷಮಿಸುವಂತೆ ಗೋಗರೆದು ಸ್ಪಷ್ಟನೆ (ಕ್ಷಮಾಪಣೆ) ಸಲ್ಲಿಸಿದ್ದ. ಇದೇ ವಿಚಾರವಾಗಿ ಮಂಜಪ್ಪನವರು 'ಈತ ಸುಳ್ಳು ಮಾಹಿತಿ ನೀಡಿ ತನ್ನನ್ನು ಸಮಾಜದಲ್ಲಿ ಭ್ರಷ್ಟನಂತೆ ಬಿಂಬಿಸಿ ನನ್ನ ಮಾನಕ್ಕೆ ಕುತ್ತು ತಂದಿದ್ದಾನೆ' ಅಂತ ಮಾನವಹಕ್ಕು ಆಯೋಗದ ಮೆಟ್ಟಿಲನ್ನೂ ಏರಿದ್ದರು. ಆಯೋಗ ವಿವರಣೆ ಕೇಳಿ ಈತನಿಗೆ ಪತ್ರ ಬರೆದಾಗ 'ಘಟನೆ ನಡೆದು ಒಂದು ವರ್ಷ ಆದ ಮೇಲೆ ಆಯೋಗಕ್ಕೆ ತನಿಖೆ ನಡೆಸುವ ಹಕ್ಕು ಇರೋದಿಲ್ಲ' ಅಂತ ಮಾನವಹಕ್ಕು ಆಯೋಗಕ್ಕೇ ಪಾಠ ಮಾಡಲು ಹೋಗಿ ಅಲ್ಲಿಂದಲೂ ಮಂಗಳಾರತಿ ಮಾಡಿಸಿಕೊಂಡಿದ್ದ.

ಬೇರೆ ಇಲಾಖೆಯವರ ಮಾತಿರಲಿ, ತನ್ನದೇ ಇಲಾಖೆಯ ಅದರಲ್ಲೂ ತನಗಿಂತ ಹಿರಿಯ ಪ್ರಾಮಾಣಿಕ ಅಧಿಕಾರಿಗಳಿಗೂ ಈತ ಕೊಟ್ಟ ಕಾಟ ಅಷ್ಟಿಷ್ಟಲ್ಲ. ಬಳ್ಳಾರಿ ಗಣಿ ಮಾಫಿಯಾದೊಂದಿಗೆ ಸಹಕರಿಸಲಿಲ್ಲ ಎಂಬ ಕಾರಣಕ್ಕೆ ರೆಡ್ಡಿ ಗ್ಯಾಂಗಿನ ಬಂಟನಂತೆ ಆಗಿನ ಅಡಿಷನಲ್ ಎಸ್‌ಪಿ ಡಾ|| ರಾಜಪ್ಪನವರಿಗೆ, ದಾವಣಗೆರೆ ಪೊಲೀಸ್ ಇನ್ಸ್‌ಪೆಕ್ಟರ್ ಎಚ್.ಕೆ. ರೇವಣ್ಣನವರಿಗೆ, ನಗರಸಭೆ ಕಮೀಷನರ್ ಧರ್ಮಪ್ಪ ಮತ್ತು ಚಂದ್ರಶೇಖರ್ ಎಂಬ ಎಕ್ಸಿಕ್ಯುಟಿವ್ ಇಂಜಿನಿಯರ್, ಡಿವೈಎಸ್ಪಿ ಆಂಜನೇಯ, ಆರ್‌ಟಿಓ ತೆಂಬದ ವಿರುದ್ಧವೂ ಲೋಕಾಯುಕ್ತ ರೇಡ್ ಎಂಬ ಅಸ್ತ್ರವನ್ನು ಉಪಯೋಗಿಸಿ ಅವರ ಕೆರಿಯರ್‌ನಲ್ಲಿ ಕಪ್ಪುಚುಕ್ಕೆ ಮೂಡುವಂತೆ ಕಸರತ್ತು ನಡೆಸಿದ್ದ. ಇವೆಲ್ಲಾ ಸ್ಕ್ಯಾಂಡಲ್‌ಗಳನ್ನೆ ಹೇಳುತ್ತಾ ಹೋದರೆ ಇಂಥಾ ಅಂಧಾದುಂಧಿಗಳ ಮಿನಿ ಕಾದಂಬರಿಯೇ ಸೃಷ್ಟಿಯಾಗಿಬಿಡುತ್ತದೆ. ಇಂತಿಪ್ಪ ಪರಮಭ್ರಷ್ಟನಿಗೆ ಪ್ರಮೋಷನ್ ಕೊಡಲು ಇಲಾಖೆ ಸಜ್ಜಾಗಿದೆ ಎಂದರೆ ಜನ ಅದ್ಹೇಗೆ ತಾನೆ ಇಲಾಖೆ ಮೇಲೆ ಭರವಸೆ ಇಟ್ಟಾರು? ಇವನಿಂದ ಮತ್ತಷ್ಟು ಜನ ವಿನಾಕಾರಣ ಕಿರುಕುಳಕ್ಕೆ ತುತ್ತಾಗಲಾರರು ಎನ್ನುವುದಕ್ಕೆ ಏನು ಗ್ಯಾರಂಟಿ? ಅಂದಹಾಗೆ, ಈತನಿಂದ ಕಿರುಕುಳಕ್ಕೆ ತುತ್ತಾದ ಕೆ.ಜಿ. ಮಂಜಪ್ಪನವರೇ ಗೃಹ ಇಲಾಖೆ ಮುಖ್ಯ ಕಾರ್ಯದರ್ಶಿಯಾದ ಎಸ್.ಕೆ. ಪಟ್ಟನಾಯ್ಕರಿಗೆ ಪತ್ರ ಬರೆದು ಜನಪೀಡಕ ಕರಿಬಸವನಗೌಡನಿಗೆ ಪದೋನ್ನತಿ ನೀಡಬಾರದೆಂದು ವಿನಂತಿಸಿ ಕೊಂಡಿದ್ದಾರೆ. ಈತನ ಕೆರಿಯರ್ ಹಿನ್ನಲೆಗೆ ಇದಕ್ಕಿಂತ ಸಾಕ್ಷಿ ಬೇಕೆ?

■ ವರದಿಗಾರ



150

ಕರ್ನಾಟಕ ಲೋಕಾಯುಕ್ತ

ನಂ: ಲೋಕ್/ಐಎನ್‌ವಿ(ಜಿ)/ಸಿಟಿವಲ್-26/ಸಿಆರ್ 5/2008 ಶಿವಮೊಗ್ಗ. ದಿನಾಂಕ: -10-2010.

ಜ್ಞಾಪನ

ವಿಷಯ:- ಅಂತಿಮ ವರದಿಯಲ್ಲಿನ ನ್ಯೂನತೆಗಳ ಬಗ್ಗೆ.
ಉಲ್ಲೇಖ:- ನೀವು ಸಲ್ಲಿಸಿದ ಅಂತಿಮ ವರದಿ ದಿ: 16-08-2010.
**** **** ****

ಮೇಲಿನ ವಿಷಯ ಮತ್ತು ಉಲ್ಲೇಖಕ್ಕೆ ಸಂಬಂಧಿಸಿದಂತೆ, ಶಿವಮೊಗ್ಗ ಲೋಕಾಯುಕ್ತ ಠಾಣೆ ಮೊ. ನಂ. 5/2008 ರಲ್ಲಿ ನೀವು ಸಲ್ಲಿಸಿದ್ದ ಅಂತಿಮ ವರದಿಯನ್ನು ಪರಿಶೀಲಿಸಿದ ಮಾನ್ಯ ಎ.ಡಿ.ಜಿ.ಪಿ. ಸಾಹೇಬರು ಈ ಕೆಳಗಿನಂತೆ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿರುತ್ತಾರೆ.

Let the PI who gave the Source go through the Investigation Report and explain as to why the source report was so poorly developed. This should be done within 15 days.

ಮೇಲಿನ ಅಂಶಗಳ ಬಗ್ಗೆ ಕ್ರಮ ಕೈಗೊಂಡು ನಿಮ್ಮ ಪಾಲನಾ ವರದಿಯನ್ನು ಸಲ್ಲಿಸಲು ಸೂಚಿಸಲಾಗಿದೆ.

[illegible]
ಪೊಲೀಸ್ ಮಹಾನಿರ್ದೇಶಕರ ಪರವಾಗಿ
ಕರ್ನಾಟಕ ಲೋಕಾಯುಕ್ತ,
ಬೆಂಗಳೂರು.

ಗೆ,
ಪೊಲೀಸ್ ಉಪಾಧೀಕ್ಷಕರು,
ಕರ್ನಾಟಕ ಲೋಕಾಯುಕ್ತ,
ಶಿವಮೊಗ್ಗ.

ಕರಿಬಸವನಗೌಡ ಸಲ್ಲಿಸಿದ್ದ ಸೋರ್ಸ್ ರಿಪೋರ್ಟ್ ಸುಳ್ಳು ಮಾಹಿತಿ ವಿರುದ್ಧ ಎಡಿಜಿಪಿ ಗರಂ ಪತ್ರ.

ಕಳ್ಳ ಹೋರ್ಡಿಂಗ್ ಮಾಫಿಯಾ (ಹೋರ್ಡಿಂಗ್)




ಬಿಬಿಎಂಪಿ: ಜಾಹಿರಾತು ಮಾಫಿಯಾ

ವರ್ಷಕ್ಕೆ ಸಾವಿರ ಕೋಟಿಯ ಸ್ವಾಹಾ!




ಶಾಂತಕುಮಾರಿ


ಆರ್. ಅಶೋಕ್


ಯಡ್ಡಿ

ಮೊನ್ನೆ ಅಂದರೆ 2015ರ ಫೆಬ್ರವರಿ ತಿಂಗಳಲ್ಲಿ ಮೇಯರ್ ಶಾಂತಕುಮಾರಿ ನೇತೃತ್ವದಲ್ಲಿ ಬಿಬಿಎಂಪಿಯ ಕೌನ್ಸಿಲ್ ಸಭೆಯಲ್ಲೊಂದು ಅಚ್ಚರಿಯ ನಿರ್ಣಯ ಪಾಸಾಯಿತು. ಅದು ಬೆಂಗಳೂರನ್ನು ಜಾಹಿರಾತು ಫಲಕಗಳಿಂದ ಮುಕ್ತಗೊಳಿಸುವುದು. ಅಂದರೆ ಇನ್ನು ಮುಂದೆ ರಸ್ತೆಗುಂಟ ಎಲ್ಲೆಂದರಲ್ಲಿ ಕಣ್ಣು ಕುಕ್ಕುವ ಫ್ಲೆಕ್ಸ್, ಬ್ಯಾನರ್‌ಗಳಾಗಲಿ, ಜಾಹಿರಾತು ಫಲಕಗಳನ್ನಾಗಲಿ ಹಾಕುವಂತಿಲ್ಲ!

ಅಡ್ವರ್‌ಟೈಸಿಂಗ್ ಹೋರ್ಡಿಂಗ್ಸ್‌ಗಳ ಮಟ್ಟಿಗಿನ್ನು ಬೆಂಗಳೂರು ನಿಷಿದ್ಧ ಪ್ರದೇಶ!

ಇದರರ್ಥ ಬೆಂಗಳೂರಿನ ಜನಕ್ಕಿನ್ನು ಸ್ವಚ್ಛಂದ ಆಕಾಶ ನಿರಭ್ರ ಗಿಡಮರ ಕಟ್ಟಡಗಳ ನಯನ ಮನೋಹರ.

ಪಾಲಿಕೆಯ ಕೌನ್ಸಿಲ್ ಸಭೆಯಲ್ಲಿದ್ದ ಆಡಳಿತ ಪಕ್ಷದ ನಾಯಕ ರಮೇಶ್, ಉಪಮೇಯರ್ ರಂಗಣ್ಣ, ವಿರೋಧಿ ಕಾಂಗ್ರೆಸ್ ನಾಯಕ ಮಂಜುನಾಥ್ ರೆಡ್ಡಿ, ಜೆಡಿಎಸ್ ಗುಂಪಿನ ಅಧಿಪತಿ ಆರ್. ಪ್ರಕಾಶ್ ಮತ್ತು ಪಾಲಿಕೆ ಕಮೀಷನರ್ ಲಕ್ಷ್ಮಿನಾರಾಯಣ ಸೇರಿದಂತೆ ಸಮಸ್ತರೆಲ್ಲರೂ ಸೇರಿಯೇ ಬೆಂಗಳೂರನ್ನು ಜಾಹಿರಾತು ಹೋರ್ಡಿಂಗ್ಸ್‌ಗಳಿಂದ ಮುಕ್ತಗೊಳಿಸುವ ನಿರ್ಣಯ ಕೈಗೊಂಡಿದ್ದರು. ಪತ್ರಿಕೆಗಳು, ಟೀವಿಗಳು ಮಾತ್ರವಲ್ಲದೆ ಬೆಂಗಳೂರಿನ ಪ್ರಜ್ಞಾವಂತರೆಲ್ಲರೂ ಪಾಲಿಕೆಯ ಸದರಿ ನಿರ್ಣಯವನ್ನು ಕಂಠಮಟ್ಟ ಹೊಗಳಿದ್ದೇ ಬಂತು. ಇದಾಗಿ ಎರಡು ತಿಂಗಳಾದರೂ ಕೈಗೊಂಡ ನಿರ್ಣಯ ಬಟ್ಟರೆ ಒಂದೇ ಒಂದು ಹೋರ್ಡಿಂಗ್ ಕೆಳಕ್ಕಿಳಿಯಲಿಲ್ಲ, ಯಾವೊಂದು ಫ್ಲೆಕ್ಸ್-ಬ್ಯಾನರ್‌ಗಳೂ ಇದ್ದ ಜಾಗದಿಂದ ಕದಲಲಿಲ್ಲ, ಇನ್ನೂ ಹೆಚ್ಚಾಯಿತೇ ಹೊರತು ಬೆಂಗಳೂರಿನ ದಾರಿಹೋಕರ ದೃಷ್ಟಿ ಮಾಲಿನ್ಯಕ್ಕೆ ಸಣ್ಣದೊಂದು ವಿರಾಮ ಕೂಡ ಒದಗಿ ಬರಲಿಲ್ಲ.

ಏಕೆಂದರೆ ಅದು ಪಾಲಿಕೆ ಖದೀಮರ ಬ್ಲಾಕ್‌ಮೇಲ್ ತಂತ್ರವಾಗಿತ್ತು!

ಸಾವಿರ ಕೋಟಿ!


ದೈತ್ಯ ಬೆಂಗಳೂರಿನ ಬಹುತೇಕ ರಸ್ತೆಗಳು, ಸರ್ಕಲ್‌ಗಳು, ವಿವಿಧ ಕಟ್ಟಡ ಅಪಾರ್ಟ್‌ಮೆಂಟುಗಳ ಮೇಲೆಲ್ಲ ಯದ್ವಾಬದ್ವಿ ಕಂಗೊಳಿಸುತ್ತಿರುವ ಜಾಹಿರಾತು ಫಲಕಗಳ ವಾರ್ಷಿಕ ಆಮದನಿಯೇ 10 ಸಾವಿರ ಕೋಟಿಗೂ ಹೆಚ್ಚು. ಈ ಪೈಕಿ ಪಾಲಿಕೆಯ ಪಾಲು ಕಮ್ಮಿಯೆಂದರೂ 800 ರಿಂದ 1000 ಕೋಟಿಯಷ್ಟು.

ಹೀಗೆ ಪಾಲಿಕೆಯ ಬೊಕ್ಕಸಕ್ಕೆ ಸಲ್ಲಬೇಕಾದ ಸಾವಿರ ಕೋಟಿಯಲ್ಲಿ ಕನಿಷ್ಠ ಐನೂರು ಕೋಟಿ ಲೆಕ್ಕಕ್ಕೆ ಸಿಗದೇ ಕೈಬದಲಾದರೂ ಮೇಯರ್, ಉಪಮೇಯರ್, ಪಾಲಿಕೆ ಆಡಳಿತ ಪಕ್ಷದ ನಾಯಕ ಸೇರಿದಂತೆ ಬಿಜೆಪಿಯ ಬೆಂಗಳೂರಿನ ಗಾಡ್‌ಫಾದರ್‌ಗಳ ಕೈಸೇರುವ ಮೊತ್ತ ಕಮ್ಮಿಯೆಂದರೂ ಐನೂರು ಕೋಟಿ. ಮಿಕ್ಕ ಐನೂರು ಕೋಟಿಯನ್ನು ಜಾಹಿರಾತು ಮಾಫಿಯಾ ತಿಂದು ಚೂರು ಪಾರನ್ನು ಸಂಬಂಧಪಟ್ಟ ಅಧಿಕಾರಿಗಳು, ಮೀಡಿಯಾ ದೊರೆಗಳಿಗೆ ಹಂಚುತ್ತದೆ. ಪಾಲಿಕೆಯ ಬಿಜೆಪಿ ಆಳ್ವಿಕೆಯ ಕೊನೆಗಾಲದಲ್ಲಿ ಅಂದರೆ ಮೇಯರ್ ಶಾಂತಕುಮಾರಿ ನೇತೃತ್ವದಲ್ಲಿ ಪಾಲಿಕೆಯ ಕೌನ್ಸಿಲ್ ಕೈಗೊಂಡ ನಿರ್ಣಯ ವೇನೋ ಪಾಸಾಯಿತು. ಆದರದು ಮೇಯರ್ ಕಚೇರಿಯಿಂದ ಮುಂದಕ್ಕೆ ಅಂದರೆ ಸರ್ಕಾರಕ್ಕೆ ರವಾನೆಯಾಗಲೇ ಇಲ್ಲ. ನಗರಾಭಿವೃದ್ಧಿ ಸಚಿವಾಲಯದ ಮೂಲಕ ಮುಖ್ಯ ಕಾರ್ಯದರ್ಶಿ ಆನಂತರ ಮುಖ್ಯಮಂತ್ರಿಗಳಿಗೆ ಹೋಗಬೇಕಿದ್ದ 'ಹೋರ್ಡಿಂಗ್ಸ್ ನಿಷೇಧ ನಿರ್ಣಯ' ಮೇಯರ್ ಶಾಂತಕುಮಾರಿ ಛೇಂಬರಿನಲ್ಲೇ ಕೊನೆಯುಸಿರೆಳೆದ ಫಲವಾಗಿ ಬಿಜೆಪಿ ಆಳ್ವಿಕೆಯ ಪಾಲಿಕೆ ಖದೀಮರ ಕೈಸೇರಿದ್ದು ಐನೂರು ಕೋಟಿಗೂ ಅಧಿಕ ಮೊತ್ತ!

ಇವತ್ತು ಬೆಂಗಳೂರಿನ ಯಾವುದೇ ರಸ್ತೆ ಯಾವುದೇ ಸರ್ಕಲ್, ರಸ್ತೆ ಬದಿಯ ಯಾವುದೇ ಕಟ್ಟಡ, ಅಪಾರ್ಟ್‌ಮೆಂಟ್ ನೋಡಿದರೂ ಒಂದಲ್ಲಾ ಒಂದು ಕಂಪೆನಿಯ ಹೋರ್ಡಿಂಗ್‌ಗಳೇ ಕಿಕ್ಕಿರಿಸುತ್ತವೆ. ಬೆಂಗಳೂರಿನ ಪಾರ್ಕ್‌ಗಳು, ಐತಿಹಾಸಿಕ ಭವನಗಳು, ಹಸಿರು ಚಪ್ಪರದೋಪಾದಿಯ ಮರಗಳು ಏನೊಂದೂ ನೆನಪಿರದ ಹಾಗೆ ಜಾಹಿರಾತು ಫಲಕಗಳದ್ದೇ ದೃಷ್ಟಿಮಾಲಿನ್ಯ ಹಾಳಾಗಲಿ ಇಷ್ಟೊಂದು ಭಾರೀ ಸಂಖ್ಯೆಯ ಹೋರ್ಡಿಂಗ್, ಫ್ಲೆಕ್ಸ್, ಬ್ಯಾನರ್‌ಗಳಿಂದ ಪಾಲಿಕೆಗೆ ನೂರು, ಸಾವಿರ ಕೋಟಿ ಲೆಕ್ಕದಲ್ಲಿ ಆದಾಯವಾದರೂ ಬರಬೇಕಲ್ಲವೆ?

ಕೆ. ಮಥಾಯಿ...?

ನಂಬಿ ಬಿಡಿ ವರ್ಷವೊಂದಕ್ಕೆ ಪಾಲಿಕೆಗೆ ಸಂದಾಯವಾಗುವ ಜಾಹಿರಾತು ತೆರಿಗೆಯ ಒಟ್ಟೂ ಮೊತ್ತ ಕೇವಲ 30 ಕೋಟಿ ಮಾತ್ರ! ಬೆಂಗಳೂರಿನ ರೈಲ್ವೇ ವಲಯದ ವಾರ್ಷಿಕ ಜಾಹಿರಾತು ಆದಾಯವೇ 15 ಕೋಟಿಯಷ್ಟು. ಅಂದರೆ ರೈಲ್ವೇ ನಿಲ್ದಾಣಗಳು ಮತ್ತು ರೈಲ್ವೇ ಹಳಿಗಳ ಸುತ್ತಮುತ್ತ ಜಾಹಿರಾತು ಹೋರ್ಡಿಂಗ್‌ಗಳಿಂದ ವರ್ಷವೊಂದಕ್ಕೆ 15 ಕೋಟಿ ರೂ.ಗಳ ಆದಾಯವಿದೆ. ಹಾಗೇ ಏರ್‌ಪೋರ್ಟ್ ಅಥಾರಿಟಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಸುತ್ತಮುತ್ತಲ ಜಾಹಿರಾತು ಹೋರ್ಡಿಂಗ್‌ಗಳಿಂದ ವರ್ಷವೊಂದಕ್ಕೆ 200 ಕೋಟಿ ರೂಪಾಯಿಗಳ ಆದಾಯ ಗಳಿಸುತ್ತದೆ. ಕೇವಲ ರೈಲ್ವೇ ಮತ್ತು ವಿಮಾನ ನಿಲ್ದಾಣಗಳೇ ಈ ಪಾಟಿ ಆದಾಯ ಗಳಿಸುತ್ತಿರುವಾಗ ಇದರ ಸಾವಿರ ಪಟ್ಟು ವಿಸ್ತಾರದ ಬಿಬಿಎಂಪಿ ತನ್ನ ಜಾಹಿರಾತಿನಿಂದ ಇನ್ನೆಷ್ಟು ಗಳಿಸಬೇಕು?


ಕೆ. ಮಥಾಯಿ

ಬಿಬಿಎಂಪಿಯ ಅಧಿಕೃತ ಜಾಹಿರಾತು ವ್ಯಾಪ್ತಿಯೇ 800 ಚದುರ ಮೀಟರುಗಳು ಮತ್ತು 3000 ಸಾವಿರ ಅಧಿಕೃತ ಹೋರ್ಡಿಂಗ್‌ಗಳು. ಇದಲ್ಲದೇ ಬೆಂಗಳೂರಿನ ದಶದಿಕ್ಕುಗಳಲ್ಲೂ ನಾಯಿಕೊಡೆಗಳಂತೆ ಅನಧೀಕೃತವಾಗಿ ತಲೆ ಎತ್ತಿದ ಅಕ್ರಮ ಹೋರ್ಡಿಂಗ್‌ಗಳ ಸಂಖ್ಯೆ 20 ಸಾವಿರಕ್ಕೂ ಅಧಿಕ!

ಈ ಪೈಕಿ ಅರ್ಧಕ್ಕರ್ಧ ಅಂದರೆ ಕನಿಷ್ಠ 10 ಸಾವಿರ ಹೋರ್ಡಿಂಗ್‌ಗಳನ್ನು ಕಾನೂನು ಬದ್ಧಗೊಳಿಸಿದರೂ ವರ್ಷವೊಂದಕ್ಕೆ, ಬಿಬಿಎಂಪಿಗೆ ಬರುವ ಆದಾಯ ಕನಿಷ್ಠ 800 ರಿಂದ 1000 ಕೋಟಿ ರೂ.ಗಳು. ಎಲ್ಲಿಯ 30 ಕೋಟಿ ಎಲ್ಲಿಯ ಸಾವಿರ ಕೋಟಿ?

ಇತ್ತೀಚಿಗೆ ಪಾಲಿಕೆಯಲ್ಲಿ ದೊಡ್ಡ ಮಟ್ಟದ ಸುದ್ದಿ ಮಾಡಿದ್ದು ಪಾಲಿಕೆ ಜಾಹಿರಾತು ವಿಭಾಗದ ಅಸಿಸ್ಟಂಟ್ ಕಮೀಷನರ್ ಕೆ. ಮಥಾಯಿ ಎಂಬ ನಿಷ್ಠಾವಂತ ಕೆಎಎಸ್ ಅಧಿಕಾರಿ. ಅನಧಿಕೃತ ಜಾಹಿರಾತು ಹೋರ್ಡಿಂಗ್‌ಗಳ ಮೂಲಕ ಬಂದ ಬಂದ ಮೇಯರ್‌ಗಳೆಲ್ಲ ನೂರಾರು ಕೋಟಿ ಜೇಬಿಗಿಳಿಸುತ್ತಿದ್ದದ್ದನ್ನು ಮಥಾಯ್ ಪತ್ತೆ ಹಚ್ಚಿದ್ದಾರೆ. ಆ ಕಾಲದಿಂದಲೂ ಹೋರ್ಡಿಂಗ್ ಮಾಫಿಯಾ ಜೊತೆ ಕೈಜೋಡಿಸಿ ಪಾಲಿಕೆಗೆ ಕನ್ನ ಹಾಕುತ್ತಲೇ ಬಂದ ದೊಡ್ಡ ಬಾಕ ಅಧಿಕಾರಿಗಳ ಹಿಂಡೊಂದು ಪಾಲಿಕೆಯಲ್ಲಿದೆ. ಇಂಥ ಖದೀಮರೆಲ್ಲರ ಹಿಂದಿರುವ ಜಾಹಿರಾತು ಮಾಫಿಯಾದ ಆಳ-ಅಗಲ ಯಾರ ಲೆಕ್ಕಾಚಾರಕ್ಕೂ ನಿಲುಕುವಂಥದ್ದಲ್ಲ.

ಆ್ಯಡ್ ಮಾಫಿಯಾ

ದೇಶದ ಸಿಲಿಕಾನ್ ಸಿಟಿಯೆಂಬ ಪ್ರತಿಷ್ಠೆಯಲ್ಲಿ ಮೆರೆಯುತ್ತಿರುವ ಬೆಂಗಳೂರೆಂದರೆ ಅಂತರರಾಷ್ಟ್ರೀಯ ಮಟ್ಟದ ಜಾಹಿರಾತು ಏಜೆನ್ಸಿಗಳ ಪಾಲಿಗೆ ಕಿಂಬರ್ಲಿ ಗಣಿಯಿದ್ದಂತೆ... ಎಂ.ಜಿ. ರಸ್ತೆಯಲ್ಲಿ ಸಾಧಾರಣ

ಕೊನೆಕೊನೆಗೆ ನೌಕರರ ದುಡಿಮೆಗೂ ಕನ್ನವಿಟ್ಟರು!

ಟೆಂಡರ್ ಗಿಟ್ಟಿಸಿದ್ದ ವಿವಿಧ ಗುತ್ತಿಗೆದಾರರು ನೀಡಿದ್ದ ಬ್ಯಾಂಕ್ ಗ್ಯಾರಂಟಿಗಳ ಅಸಲಿಯತ್ತೇನು, ಅವುಗಳ ಅವಧಿಯೇನು ಇತ್ಯಾದಿಗಳ ಬಗ್ಗೆ ಪಾಲಿಕೆಯಲ್ಲಿ ಲೆಕ್ಕವನ್ನೇ ಇಟ್ಟರಲಿಲ್ಲ, ಐಡಿಬಿಐ ಬ್ಯಾಂಕಿನ ಜೊತೆ ಠೇವಣಿ ಕುರಿತಂತೆ ಮಾಡಿಕೊಂಡ ಯಡವಟ್ಟಿನ ಒಪ್ಪಂದದಿಂದಾಗಿ ಪ್ರತಿವರ್ಷ ಪಾಲಿಕೆಗೆ 15.47 ಕೋಟಿ ರೂಪಾಯಿಗಳ ಅಧಿಕ ಹೊರೆಯಿತ್ತು, ಪಾಲಿಕೆ ವಿವಿಧ ಬ್ಯಾಂಕುಗಳಿಂದ ಪಡೆದ ಸಾಲಕ್ಕೆಂದು ತೋರಿಸಿದ ಕಾಮಗಾರಿಗಳ ಪಟ್ಟಿಯೇ ಒಂದಾದರೆ ಹಾಗೆ ಪಡೆದ ಸಾಲವನ್ನು ಹುಡಿಹಾರಿಸಿದ್ದೇ ಮತ್ತೊಂದಕ್ಕೆ!

ಇದು ಪಾಲಿಕೆ ಯಾವ ಮಟ್ಟಕ್ಕೆ ಕುಲಗೆಟ್ಟಿದೆಯೆಂಬುದಕ್ಕೆ ಕೆಲ ನಿದರ್ಶನಗಳಷ್ಟೆ. ಬೆಂಗಳೂರನ್ನ ಹಾಗೆ ರೂಪಿಸುತ್ತೇವೆ ಹೀಗೆ ನಿರ್ಮಿಸುತ್ತೇವೆಂದು ಬಿಜೆಪಿ ಚುನಾವಣೆಗೂ ಮುನ್ನ ಭಡಾಯಿ ಕೊಚ್ಚಿತ್ತಲ್ಲ, ಮೇಯರ್‌ಗಳಾದ ನಟರಾಜ್, ವೆಂಕಟೇಶ್ ಮೂರ್ತಿ, ಶಾರದಮ್ಮ, ಕಟ್ಟೆ ಸತ್ಯ ಮತ್ತು ಈಗಿನ ಶಾಂತಕುಮಾರಿ ಸೇರಿದಂತೆ ಎಲ್ಲರೂ ಬೆಂಗಳೂರಿಗೆ ಸ್ವರ್ಗ ಇಳಿಸಿದಂತೆ ಮಾತಾಡಿದ್ದೇ ಬಂತು.

ಅದು ಎಂಥಾ ಹೊಣೆಗೇಡಿತನವೆಂದರೆ ಪಡೆದ ಸಾಲಕ್ಕೆ ಕಟ್ಟಿದ ಬಡ್ಡಿಯ ಲೆಕ್ಕವನ್ನೇ ಪಾಲಿಕೆ ಅಧಿಕಾರಿಗಳು ಇದುತ್ತಿರಲಿಲ್ಲ, ಹೀಗೆ ಲೆಕ್ಕ ಇಡದ ಕಾರಣಕ್ಕೆ ಹುಡ್ಕೋ ಸಾಲಕ್ಕೆಂದು 6.82 ಕೋಟಿ ರೂಪಾಯಿಗಳ ಅಧಿಕ ಬಡ್ಡಿಯನ್ನು 2009-10ರಲ್ಲಿ ಕಟ್ಟಬೇಕಾಯಿತು. ಪಡೆದ ಸಾಲ ಮತ್ತು ಅದಕ್ಕೆ ಕಟ್ಟಿದ ಬಡ್ಡಿಯ ಲೆಕ್ಕವನ್ನೂ ನೆಟ್ಟಗೆ ಇಡದೆ 6.82 ಕೋಟಿ ಕಳಕೊಂಡ ಪಾಲಿಕೆಯ ಅಧಿಪತಿಗಳು ಇನ್ನು ಬೆಂಗಳೂರಿಗೆ ತಾನೇ ಇನ್ನೇನು ಮಾಡಲು ಸಾಧ್ಯ?

ಇನ್ನೂ ವಿಕಟವೆಂದರೆ ಸಂಗ್ರಹವಾದ ತೆರಿಗೆ, ಶುಲ್ಕ ಇತ್ಯಾದಿಗಳನ್ನು ಪಾಲಿಕೆಯ ಅಧಿಕೃತ ಬ್ಯಾಂಕ್ ಖಾತೆಗಳಲ್ಲಿ ಜಮಾ ಮಾಡದೇ ಕೆಲ ಅಧಿಕಾರಿಗಳು ತಮ್ಮ ವೈಯಕ್ತಿಕ ಹೆಸರಲ್ಲಿ ಬ್ಯಾಂಕ್ ಖಾತೆ ತೆರೆದು ಅದರಲ್ಲಿ ಡೆಪಾಜಿಟ್ ಮಾಡಿದ್ದನ್ನು ಕಠಾರಿಯ ವರದಿ ಬಯಲಿಗೆಳೆದಿದೆ. ಬಡಪಾಯಿ ಪೌರ ಕಾರ್ಮಿಕರಿಗೆ ಮೂರ್‍ನಾಲ್ಕು ತಿಂಗಳಿಗೊಮ್ಮೆ ಸಂಬಳ ಭಾಗ್ಯ ಕರುಣಿಸಿದ್ದೂ ಬಿಜೆಪಿಯ ಬೆಂಗಳೂರು ಕೊಡುಗೆಗಳಲ್ಲೊಂದು. ಇಷ್ಟೇ ಏಕೆ ಪಾಲಿಕೆಯ ನೌಕರರು, ಅಧಿಕಾರಿಗಳ ಸಂಬಳದಲ್ಲಿ ಭವಿಷ್ಯ ನಿಧಿ, ನಿವೃತ್ತಿ ವೇತನದ ಭತ್ಯೆ, ಇಎಸ್‌ಐ ಇತ್ಯಾದಿ ಹಿಡಿದುಕೊಂಡು ಅದನ್ನು ಸಂಬಂಧಪಟ್ಟ ಸಂಸ್ಥೆಗಳಿಗೆ ಪಾವತಿಸಬೇಕಲ್ಲವೆ?

ದುರಂತವೆಂದರೆ ಪಾಲಿಕೆ ನೌಕರರ ಸಂಬಳದಲ್ಲಿ ಮುರಿದುಕೊಂಡ ಭತ್ಯೆಯ ಪುಡಿಕಾಸನ್ನೂ ಬಿಡದೆ ಖದೀಮರು ತಿಂದು ತೇಗಿದ್ದಾರೆ. 2015ರ ಜೂನ್ ಹೊತ್ತಿಗೆ ಪಾಲಿಕೆ ಈ ರೀತಿ ನೌಕರರ ಸಂಬಳದಲ್ಲಿ ಹಿಡಿದುಕೊಂಡಿದ್ದ 18.79 ಕೋಟಿ ರೂಪಾಯಿಗಳಷ್ಟನ್ನು ಬಾಕಿಯಿಟ್ಟುಕೊಂಡಿತ್ತು.

ಕನಿಷ್ಠ ದಕಾಯಿತರಿಗಾದರೂ ಕರುಣೆಯಿರುತ್ತದೆ. ಆದರೆ ಪಾಲಿಕೆಯ ಬಿಜೆಪಿ ದೊರೆಗಳದ್ದು ದಕಾಯಿತರಿಗಿಂತಲೂ ದಕಾಯಿತರನ್ನೂ ಮೀರಿಸಿದ ದಾಹ.

...ರ್ಡಿಂಗ್ ಒಂದಕ್ಕೆ ವಿಸಲ್ಪೂಂದರ ಬಾಡಿಗೆಯೇ ಕನಿಷ್ಠ ...ತ್ತು ಸಾವಿರ. ಇನ್ನು ದೊಡ್ಡ ದೊಡ್ಡ ಹೋರ್ಡಿಂಗ್‌ಗಳ ...ದ ಬಾಡಿಗೆ ಲಕ್ಷಗಳ ಲೆಕ್ಕದ್ದು. ಪ್ರತಿಷ್ಠಿತ ಮೊಬೈಲ್ ...ನಿಗಳು, ವೀಡಿಯೋಕಾನ್, ಸ್ಯಾಮ್‌ಸಂಗ್, ಸೋನಿ, ...ಟೆಲ್, ಐಡಿಯಾ, ಕೋಲಾ ಕಂಪನಿಗಳು, ಸಾಫ್ಟ್‌ವೇರ್ ...ನ್ನರೆಲ್ಲ ಪ್ರತಿಷ್ಠಿತ ನಗರಗಳ ಜನನಿಬಿಡ ರಸ್ತೆ ಸರ್ಕಲ್ಲುಗಳ ...ರ್ಡಿಂಗ್‌ಗಳನ್ನೇ ತಮ್ಮ ಪ್ರಚಾರದ ಪ್ರತಿಷ್ಠೆಯಾಗಿ ...ಗಣಿಸುವ ಕಾಲವಿದು.

...ಇಂಥ ಒಂದೊಂದು ಹೋರ್ಡಿಂಗ್‌ಗಳ ಹಿಡಿತಕ್ಕಾಗಿ ...ತರರಾಷ್ಟ್ರೀಯ ಜಾಹಿರಾತು ಕಂಪನಿಗಳು ಸ್ಪರ್ಧೆಗಿಳಿ...ಯುತ್ತವೆ. ಸದ್ಯ ಅಧಿಕೃತವಾಗಿ ಬಿಬಿಎಂಪಿ 3000 ...ರ್ಡಿಂಗ್‌ಗಳ ಲೆಕ್ಕ ಕೊಡುತ್ತದೆ. ಆದರೆ ಅನಧಿಕೃತವಾಗಿ ... ಸಾವಿರಕ್ಕೂ ಅಧಿಕ ಹೋರ್ಡಿಂಗ್‌ಗಳಿವೆ. ಒಂದೋ ...ಥ ಅಕ್ರಮ ಹೋರ್ಡಿಂಗ್‌ಗಳನ್ನು ಪಾಲಿಕೆ ಕಿತ್ತೆಸೆಯಬೇಕು ...ವಾ ಕ್ರಮಬದ್ಧಗೊಳಿಸಿ ತೆರಿಗೆ ವಸೂಲಿ ಮಾಡಬೇಕು. ...ರೆ ಪಾಲಿಕೆಯ ಜಾಹಿರಾತು ವಿಭಾಗದ ಅಧಿಕಾರಿಗಳು ...ವುದನ್ನೂ ಮಾಡುವುದಿಲ್ಲ. ಜಾಹಿರಾತು ಮಾಫಿಯಾದ ...ತಿಕಾಸಿಗೆ ಕೈಚಾಚುತ್ತಾರೆ. ಇಲ್ಲಿ ಪುಡಿಕಾಸೆಂದರೂ ಅದು ...ಟಿ ಲೆಕ್ಕದ್ದು!

ಹಾಗೊಮ್ಮೆ ಯಾವುದಾದರೂ ಹೋರ್ಡಿಂಗ್ ಒಂದಕ್ಕೆ ...ಟೀಸು ಕೊಟ್ಟರೆಂದರೆ ಅದೂ ಕೂಡ ಮ್ಯಾಚ್‌ಫಿಕ್ಸಿಂಗ್ ...ದೇ ಅರ್ಥ. ನಿರ್ದಾಕ್ಷಿಣ್ಯವಾಗಿ ಕಿತ್ತೆಸೆಯುವ ಬದಲು ...ಟೀಸ್ ಕೊಡುತ್ತಾರೆಂದರೆ ಆ ನೋಟೀಸಿನ ಮೇರೆಗೆ ...ನಿಗಳಿಗೆ ಅಪೀಲು ಸಲ್ಲಿಸುವ ಅವಕಾಶ ಸಿಕ್ಕುತ್ತೆಯೆ. ಹಾಗೇ ...ಲು ಸಮಿತಿಗೆ ಬರುವ ಸಹಸ್ರಾರು ಅಕ್ರಮ ...ರ್ಡಿಂಗ್‌ಗಳ ಅರ್ಜಿಯನ್ನು ಇಟ್ಟುಕೊಂಡು ಪಾಲಿಕೆಯ ...ಲು ಸ್ಥಾಯಿ ಸಮಿತಿಯವರು ಡೀಲು ಕುದುರಿಸುತ್ತಾರೆ. ...ಗೆ ಅಕ್ರಮ ಹೋರ್ಡಿಂಗ್‌ಗಳ ಅರ್ಜಿಗೆ ಜಾಹಿರಾತು ...ಗದ ಉಪ ಆಯುಕ್ತ ಕೆ. ಮಥಾಯಿಯ ಸಹಿಯನ್ನೇ ...ರ್ಜರಿ ಮಾಡಿ ಆಯುಕ್ತರಿಂದ ನಕಲಿ ಪರವಾನಗಿ ತಂತ್ರದ ...ಲ್‌ಮಾಲ್‌ಗೆ ಕೈಯಿಟ್ಟವನು ಮೊನ್ನೆಯಷ್ಟೇ ನಿರ್ಗಮಿಸಿದ ...ಲು ಸ್ಥಾಯಿ ಸಮಿತಿ ಅಧ್ಯಕ್ಷನಾಗಿದ್ದ ಟಿ.ವಿ. ಕೃಷ್ಣ

ನಕಲಿ ಸಹಿ

...ವಿಜಯನಗರದ ವ್ಯಾಪ್ತಿಯ ದೀಪಾಂಜಲಿ ನಗರ ...ರ್ಡಿಗೆ ಬಿಜೆಪಿಯಿಂದ ಗೆದ್ದು ಬಂದು ಕೌನ್ಸಿಲರ್ ಆದ ...ವಿ. ಕೃಷ್ಣ ರಾಜಕೀಯವಾಗಿ ತಾನು ಸೋಮಣ್ಣನ ...ನೆಂದು ಹೇಳಿಕೊಳ್ಳುತ್ತಾನೆ. ಆದರೆ ಡಕಾಯಿತಿಯಲ್ಲಿ



...ಗುಪ್ಪೆ ವಾರ್ಡಿನ ರೌಡಿ ಕೌನ್ಸಿಲರ್ ಕೆ. ದೊಡ್ಡಣ್ಣನ ...ಶಾ. ನೂರಕ್ಕೂ ಅಧಿಕ ಹೋರ್ಡಿಂಗ್‌ಗಳ ಪರವಾಗಿ ...ಥ ಆ್ಯಡ್ ಏಜೆನ್ಸಿಗಳು ಸಲ್ಲಿಸಿದ್ದ ಅಪೀಲಿಗೆ ಜಾಹಿರಾತು ...ಗದ ಅಸಿಸ್ಟೆಂಟ್ ಕಮೀಷನರ್ ಮಥಾಯಿ ...ಜೂರಾತಿ ಕೊಟ್ಟಂತೆ ತಾನೇ ಫೋರ್ಜರಿ ಸಹಿ ...ರಾಯಿಸಿಬಿಟ್ಟ. ಇದು ಹೇಗೋ ಮಥಾಯಿ ಗಮನಕ್ಕೆ ...ದು ಅವರು ಬಿಎಂಟಿಎಫ್‌ಗೆ ದೂರು ಕೊಟ್ಟಿದ್ದಾರೆ. ...ಎ. ಗೊತ್ತಾದ್ದೇ ತಡ ಅಪೀಲು ಸ್ಥಾಯಿ ಅಧ್ಯಕ್ಷ ...ಟಿ. ಕೃಷ್ಣನೇ ತಲೆ ಮರೆಸಿಕೊಂಡು ಭೂಗತನಾಗಿ ಬಿಟ್ಟ. ... ಬಿಜೆಪಿಯ ಸ್ಥಾಯಿ ಸಮಿತಿಯ ಅಧ್ಯಕ್ಷನೇ ಜಾಹಿರಾತು ...ಫಿಯಾ ಪರವಾಗಿ ಪಾಲಿಕೆ ಅಧಿಕಾರಿಯ ಸಹಿ ...ರ್ಜರಿ ಮಾಡುತ್ತಾನೆಂದರೆ ಅದರ ಆಮದನಿಯ ಮೊತ್ತ ...ಷ್ಟಿರಬೇಡ!

...ಹೀಗೆ ಫೋರ್ಜರಿ ಆರೋಪ ಹೊತ್ತು ಭೂಗತನಾದ ... ಅಧ್ಯಕ್ಷ ಟಿ.ವಿ. ಕೃಷ್ಣ ವಿರುದ್ಧ ಅಧಿಕಾರಿ ಮಥಾಯಿ ...ದ ದೂರು ... ನಡೆಯುವಂತೆ ಬುದ್ಧಿ ...ಯರ್ ಶಾಂತಕುಮಾರಿಯೇ ದಬ್ಬಾಳಿಕೆಗಿಳಿಯು...ಯಿತು. ಇದಾವುದಕ್ಕೂ ಜಗ್ಗದ ಮಥಾಯಿಯನ್ನೇ ...ಗಡಿಗೆ ವರ್ಗಾಯಿಸಲಾಯಿತು. ಆಪತ್ತು ಗಾಪತ್ತೆಯಾದ ... ಕೃಷ್ಣಗೆ ಸದ್ಯ ... ನಿರೀಕ್ಷಣಾ ಜಾಮೀನು ...ದೆ. ಬಿಎಂಟಿಎಫ್ ಎಫ್‌ಐಆರ್ ದಾಖಲಿಸಿದ್ದೇ ತಡ ... ಮತ್ತು ... ಕೌನ್ಸಿಲರ್ ಕೃಷ್ಣನನ್ನು ... ಬಿಜೆಪಿ ... ಉಳಿಸಲಾಗಲಿಲ್ಲ.

ಇದು ಹೋರ್ಡಿಂಗ್ಸ್ ಮಾಫಿಯಾದ ತಾಕತ್ತು ಮತ್ತು ದುಡ್ಡಿನ ದೌಲತ್ತಿಗೊಂದು ನಿದರ್ಶನವಷ್ಟೆ. 2008ರಿಂದಲೂ ಬಿಬಿಎಂಪಿಯ ಜಾಹಿರಾತು ವಿಭಾಗದಲ್ಲಿ ನಿಖರವಾದ ದಾಖಲೆಗಳಿಲ್ಲ. ಈ ಬಗ್ಗೆ ಉಪ ಲೋಕಾಯುಕ್ತರು ನಡೆಸಿದ ತನಿಖೆಯ ವರದಿಯನ್ನು ಮೊನ್ನೆ 2015ರ ಫೆಬ್ರವರಿ 3ರಂದು ಬಿಡುಗಡೆ ಮಾಡಲಾಯಿತಾದರೂ ಈ ಬಗ್ಗೆ ಪಾಲಿಕೆಯ ಮೇಯರ್, ಆಯುಕ್ತರಿಗೂ ಲೆಕ್ಕಕ್ಕೇ ಇಲ್ಲ. ಜಾಹಿರಾತು ಮಾಫಿಯಾದ ಆಮದನಿಯೇ ಅಂಥಾದ್ದು. ಬಿಜೆಪಿ ಅಧಿಕಾರಕ್ಕೆ ಬಂದು ನೂರು ವಾರ್ಡುಗಳಿದ್ದ ಬಿಬಿಎಂಪಿಯನ್ನು ಇನ್ನೂರು ವಾರ್ಡುಗಳಿಗೆ ವಿಸ್ತರಿಸಿದ್ದು ಬಿಜೆಪಿ. ಮುಖ್ಯಮಂತ್ರಿಯಾಗಿದ್ದ ಯಡ್ಡಿ ಏಕಾಏಕಿ ಬಿಬಿಎಂಪಿಯ ಗಡಿಯನ್ನು ದೇವನಹಳ್ಳಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ತನಕ ವಿಸ್ತರಿಸಿದ್ದರ ಹಿಂದಿದ್ದದ್ದು ಆ್ಯಡ್ ಏಜೆನ್ಸಿಗಳ ಕಮೀಷನ್ ಆಮಿಷ.

ಏರ್‌ಪೋರ್ಟ್ ರಸ್ತೆಯಲ್ಲಿ

ಪಾಲಿಕೆಯ ವ್ಯಾಪ್ತಿ ಹೆಚ್ಚೆಂದರೆ ಯಲಹಂಕದ ತನಕ ಮಾತ್ರವೇ ಸಾಧ್ಯವಿತ್ತು. ಅಂಥಾದ್ದರಲ್ಲಿ ದೇವನಹಳ್ಳಿ ವಿಮಾನ ನಿಲ್ದಾಣಕ್ಕೆ ಹೋಗುವ ಹೆದ್ದಾರಿ ಮತ್ತು ಅದರ ಇಕ್ಕೆಲಗಳ ನೂರಡಿಯ ಪ್ರದೇಶ ಮಾತ್ರವನ್ನೇ ಆಯ್ದು ಪಾಲಿಕೆಯ ವ್ಯಾಪ್ತಿಗೆ ಸೇರಿಸಲಾಯಿತು. ಹಾಗೇ ಬಿಬಿಎಂಪಿ ವ್ಯಾಪ್ತಿಗೆ ಸೇರಿದ ದೇವನಹಳ್ಳಿ ಏರ್‌ಪೋರ್ಟ್‌ವರೆಗಿನ ಜೋಡಿ ರಸ್ತೆಯ ಎರಡೂ ಬದಿಯಲ್ಲಿ ಆರು ಸಾವಿರಕ್ಕೂ ಅಧಿಕ ಹೋರ್ಡಿಂಗ್‌ಗಳನ್ನು ಹಾಕಲಾಯಿತು. ಇಂಥ ಪ್ರತಿ ಹೋರ್ಡಿಂಗ್‌ಗಳ ಬಾಡಿಗೆ ಮತ್ತು ಲಾಭದ ಸಣ್ಣ ಮೊತ್ತವೆಂದು ಸಿಎಂ ಯಡ್ಡಿ ಜೇಬಿಗೆ ಸಂದಾಯವಾಗಿದ್ದು ಕೇವಲ 2000 ಕೋಟಿ.

ಇಲ್ಲದಿದ್ದರೆ ದೇವನಹಳ್ಳಿ ಏರ್‌ಪೋರ್ಟ್‌ವರೆಗಿನ ರಾಜಮಾರ್ಗವನ್ನಷ್ಟೇ ಪ್ರತ್ಯೇಕಿಸಿ ಬಿಬಿಎಂಪಿ ವ್ಯಾಪ್ತಿಗೆ ತರುವ ಅತಿರೇಕದ ಹುಚ್ಚಾಟಕ್ಕೆ ಯಡಿಯೂರಪ್ಪ ಕೈಹಾಕಬೇಕಿರಲಿಲ್ಲ. ಇದಲ್ಲದೆ ವಿಧಾನಸೌಧದ ಅಕ್ಕಪಕ್ಕ, ಚಾಲುಕ್ಯ ಸರ್ಕಲ್, ಲೀ ಮೆರಿಡಿಯನ್ ಹೋಟೆಲ್, ಇಂಡಿಯನ್ ಎಕ್ಸ್‌ಪ್ರೆಸ್ ವೃತ್ತ, ಎಂ.ಜಿ. ರಸ್ತೆ, ಬ್ರಿಗೇಡ್ ರಸ್ತೆ, ಮೇಖ್ರಿ ಸರ್ಕಲ್, ಹೆಬ್ಬಾಳ ಫ್ಲೈ ಓವರ್ ಸುತ್ತಮುತ್ತ ರಾರಾಜಿಸುವ ಅನಧಿಕೃತ ಹೋರ್ಡಿಂಗ್‌ಗಳ ಮಹತ್ವ ಮತ್ತು ಲಾಭದ ಲೆಕ್ಕಾಚಾರ ಅಂತರರಾಷ್ಟ್ರೀಯ ಮಟ್ಟದಲ್ಲಿರುತ್ತದೆ. ಈಗ ಕಠಾರಿಯಾ ವರದಿ ಮತ್ತದೇ ಉಪ ಲೋಕಾಯುಕ್ತರ ವರದಿಯನ್ನು ಪುನರುಚ್ಚರಿಸಿದೆ. ವರ್ಷವೊಂದಕ್ಕೆ 800 ರಿಂದ 1000



ಕೋಟಿ ಆದಾಯ ತರಬಲ್ಲ ಬೆಂಗಳೂರು ನಗರದ ಜಾಹಿರಾತು ಮಾರುಕಟ್ಟೆಯ ಲಾಭದ ಬದಲಾಗಿ ಪಾಲಿಕೆ ಬೊಕ್ಕಸಕ್ಕೆ ಸಂದಾಯವಾಗುವ ಮೊತ್ತ ಕೇವಲ 30 ಕೋಟಿ!

ಸಾವಿರ ಕೋಟಿಗೆ ಬದಲಾಗಿ ಕೇವಲ 30 ಕೋಟಿಯ ಲೆಕ್ಕ ತೋರಿಸುವ ಬಿಬಿಎಂಪಿ ಜಾಹಿರಾತು ವಿಭಾಗದ ಅಧಿಕಾರಿಗಳಿಗೆ ಶಿಕ್ಷೆಯಿಲ್ಲವೆ? ಕೇವಲ 3000 ಅಧೀಕೃತ ಹೋರ್ಡಿಂಗ್‌ಗಳ ಲೆಕ್ಕ ತೋರಿಸಿ 20 ಸಾವಿರಕ್ಕೂ ಅಧಿಕ ಅನಧೀಕೃತ ಹೋರ್ಡಿಂಗ್ಸ್‌ಗಳ ವಿರುದ್ಧ ಯಾವ ಕ್ರಮವೂ ಏಕಿಲ್ಲ? ಇದರ ಹಿಂದಿರುವ ಕಾಣದ ಕೈಗಳ್ಯಾವುವು? ಇಂಥ 20 ಸಾವಿರಕ್ಕೂ ಅಧಿಕ ಕಳ್ಳ ಹೋರ್ಡಿಂಗ್‌ಗಳ ಮಂತ್ಲಿ ಕಲೆಕ್ಷನ್ನಿನ ಮೊತ್ತವೆಷ್ಟು? ಅದು ಯಾರ ಕೈಸೇರುತ್ತಿದೆ? ಯಾರ್‍ಯಾರು ಹಂಚಿಕೊಳ್ಳುತ್ತಿದ್ದಾರೆ? ಇಂಥ ಅಕ್ರಮ ಹೋರ್ಡಿಂಗ್‌ಗಳ ಮೂಲಕ ಆ್ಯಡ್ ಏಜೆನ್ಸಿಗಳು ಬಚಾಯಿಸುವ ತಿಂಗಳ ಆಮದನಿ ಎಷ್ಟು ಸಾವಿರ ಕೋಟಿಯದ್ದು? ಕನಿಷ್ಠ ಕಳೆದ ಐದು ವರ್ಷಗಳಿಗೆ ಲೆಕ್ಕ ಹಾಕಿದರೂ ಜಾಹಿರಾತು ಕಂಪನಿಗಳು ಮತ್ತು ಬೆಂಗಳೂರು ಪಾಲಿಕೆಯ ಖದೀಮರು ಸೇರಿ ದೋಚಿರುವ ಮೊತ್ತವೆಷ್ಟು?

ಉಪಲೋಕಾಯುಕ್ತರ 2.2.15ರ ಮಧ್ಯಂತರ ವರದಿ ಮತ್ತು ಈಗ ಕಠಾರಿಯಾ ಸಮಿತಿ ನೀಡುವ ವರದಿಗಳು ಬಯಲಿಗೆಳೆದ ಅಕ್ರಮ ಹೋರ್ಡಿಂಗ್ಸ್ ಧಂದೆಕೋರರ ದರೋಡೆಗೆ ಕೊನೆಯೇ ಇಲ್ಲವೆ?

■ ರಾ. ಸೋಮನಾಥ್

ದಲಿತ ಯುವಕ ರೇವಣ್ಣನ ಬರ್ಭರ ಹತ್ಯೆ

ಏಪ್ರಿಲ್ 14 ರಂದು ಅಂಬೇಡ್ಕರ್ ಜಯಂತಿ ಆಚರಿಸುತ್ತಾ ದಲಿತ ಲೋಕದ ಶೋಷಣೆ ಮುಕ್ತ ಸಮಾಜದ ಕನಸುಗಳನ್ನು ಹಂಚಿಕೊಂಡಿದ್ದೇವೆ. ಈಗಲೂ ತಿಂಗಳು ಪೂರ್ತಿ ಅಲ್ಲಲ್ಲಿ ಅಂಬೇಡ್ಕರ್ ಜಯಂತಿಯ ಆಚರಣೆ ನಡೆಯುತ್ತಲೇ ಇದೆ. ಇದೇ ಹೊತ್ತಲ್ಲಿ ಕೂಡ್ಲಿಗಿ ತಾಲೂಕಿನ ಹುರುಳಿಹಾಳ್ ಸಮೀಪದ ಓಬಳಾಪುರ ಗ್ರಾಮದ ದಲಿತ ಯುವಕ ರೇವಣ್ಣನು ಮೇಲು ಜಾತಿಯವರಿಂದ ಬರ್ಭರ ಹತ್ಯೆಗೆ ಒಳಗಾಗಿದ್ದಾನೆ. ಆತನ ಶವ ದಾವಣಗೆರೆ ಜಿಲ್ಲೆ ಜಗಲೂರು ತಾಲೂಕಿನ ಹಿರೇಮಲ್ಲೂರು ಗ್ರಾಮದ ಕ್ರಾಸ್ ಬಳಿ ಸಿಕ್ಕಿದೆ. ಜಗಲೂರು ಪೊಲೀಸ್ ಸ್ಟೇಷನ್ನಿನಲ್ಲಿ ಪ್ರಕರಣ ದಾಖಲಾಗಿದೆ. ಪತ್ರಿಕೆಗಳ ಸ್ಥಳೀಯ ಪುಟದ ಮೂಲೆಯೊಂದರಲ್ಲಿ ಒಂದು ಕಾಲಮ್ಮಿನ ಸುದ್ದಿಯಲ್ಲಿ ಶವ ಪತ್ತೆ ಎನ್ನುವಲ್ಲಿಗೆ ಮುಕ್ತಾಯವಾಗಿದೆ.



ರೇವಣ್ಣನ ಹತ್ಯೆಯಾದ ಸುದ್ದಿ ತಿಳಿದು ವಿಚಲಿತನಾದ ನಾನು ಗೆಳೆಯ ಸೂರಮ್ಮನಹಳ್ಳಿ ಉಮೇಶ್ ಜತೆಗೂಡಿ (ಏಪ್ರಿಲ್ 27) ಓಬಳಾಪುರ ತಲುಪಿದಾಗ ಸಂಜೆ 4 ರ ಸಮಯ. ದುಃಖ ಮಡುಗಟ್ಟಿದ ಮನೆಯ ಮುಂದೆ ಹೋದಾಗ ರೇವಣ್ಣನ ಅಣ್ಣ ತಿಪ್ಪೇಸ್ವಾಮಿ ಮತ್ತಿತರರು ಸೇರಿದರು. ನೋಡು ನೋಡುತ್ತಿದ್ದಂತೆಯೇ ಇಡೀ ಕೇರಿಯ ಜನರು ನಮ್ಮನ್ನು ಮುತ್ತಿದರು. ಅವರ ಮುಖದಲ್ಲಿ ದುಃಖವಿತ್ತು; ಅದಕ್ಕಿಂತ ಹೆಚ್ಚಾಗಿ ಆತಂಕ ಮನೆ ಮಾಡಿತ್ತು. ರೇವಣ್ಣನ ತಾಯಿ ಭರಮಮ್ಮ ದುಃಖಿಸಿದ್ದು ಕರುಳು ಹಿಂಡುವಂತಿತ್ತು. ಮನೆಯ ಆಧಾರ ಸ್ತಂಭವೇ ಕುಸಿದಂತೆ ಮನೆ ಬಿಕೋ ಎನ್ನುತ್ತಿತ್ತು. ಇಡೀ ಕೇರಿಯೇ ರೇವಣ್ಣನ ಬರ್ಭರ ಹತ್ಯೆಗೆ ಕಣ್ಣೀರಾಗಿತ್ತು.

ಓಬಳಾಪುರ ಕೂಡ್ಲಿಗಿ ತಾಲೂಕಿನ ಕೊನೆ ಅಂಚಿನ ಹಳ್ಳಿ. ಚಿಕ್ಕ ಜೋಗಿಹಳ್ಳಿಯಿಂದ ಮುಂದೆ ಸಾಗಿದರೆ ಹುರುಳಿಹಾಳ್ ಸಿಗುತ್ತದೆ. ಹುರುಳಿಹಾಳಿಗೆ ಅಂಟಿಕೊಂಡಂತಿರುವ ಓಬಳಾಪುರ 110 ರಷ್ಟು ಮನೆಗಳಿರುವ ಚಿಕ್ಕ ಗ್ರಾಮ. ದಲಿತರ 52, ಲಿಂಗಾಯತ ಒಕ್ಕಲಿಗರ 45, ನಾಯಕ ಸಮುದಾಯದ 4, ಮುಸ್ಲಿಮರ 5 ಮನೆಗಳಿರುವ ಹಳ್ಳಿ. ಈ ಊರಿನ ದಲಿತರಲ್ಲಿ ಶಿಕ್ಷಣ ಪಡೆದವರು ಹೆಚ್ಚಿದ್ದಾರೆ. ಎಂಟರಿಂದ ಹತ್ತರಷ್ಟು ಬೇರೆ ಬೇರೆ ವಲಯಗಳಲ್ಲಿ ಉದ್ಯೋಗಸ್ಥರೂ ಇದ್ದಾರೆ. ಹೀಗೆ ಶಿಕ್ಷಣ ಪಡೆದು ಸ್ವಾಭಿಮಾನದಿಂದ ಬದುಕುವ ದಲಿತರ ಬಗ್ಗೆ ಮೇಲುಜಾತಿಯವರ ಅಸಹನೆ ಸಹಜವಾಗಿಯೆ ಇತ್ತು.

ರೇವಣ್ಣ ಬಿಎ, ಬಿಎಡ್ ಮಾಡಿಕೊಂಡು ಜಗಲೂರಿನ ಚೈತನ್ಯ ಫೈನಾನ್ಸ್‌ನಲ್ಲಿ ಫೀಲ್ಡ್ ಆಫೀಸರ್ ಆಗಿ ಕೆಲಸ ನಿರ್ವಹಿಸುತ್ತಿದ್ದ. ಉತ್ತಮ ಕೆಲಸಗಾರನೆಂಬ ಹೆಗ್ಗಳಿಕೆಯನ್ನೂ ಸಂಸ್ಥೆಯಲ್ಲಿ ಗಳಿಸಿದ್ದ. ಜೀವನ ನಿರ್ವಹಣೆಗೆ ಸಾಕಾಗುವಷ್ಟು ಸಂಬಳವೂ ಇತ್ತು. ತನ್ನ ಜತೆಯೇ ಕೆಲಸ ಮಾಡುತ್ತಿದ್ದ ಮೇಲುಜಾತಿ ಹುಡುಗಿಯೊಂದಿಗೆ ಪ್ರೇಮ ಅಂಕುರಿಸಿತ್ತು. ಇಬ್ಬರೂ ಪರಸ್ಪರ ಪ್ರೀತಿಸುತ್ತಿದ್ದರು. ಮದುವೆಯಾಗುವ ಬಗ್ಗೆಯೂ ಇಬ್ಬರೂ ನಿರ್ಧರಿಸಿದ್ದರು. ಮನೆಯಲ್ಲಿಯೂ ರೇವಣ್ಣ ಈ ಹುಡುಗಿಯ ಜತೆಗಿನ ಪ್ರೇಮದ ಬಗ್ಗೆ ಹೇಳಿಕೊಂಡಿದ್ದನು. ಹುಡುಗಿಯ ಫೋಟೋವನ್ನು ತೋರಿಸಿದ್ದನು. ಮನೆಯಲ್ಲಿ ಸಹಜವಾಗಿ ತಾಯಿ ಭರಮಮ್ಮ 'ದೊಡ್ಡ ಜಾತಿ ಹುಡುಗಿ ಬ್ಯಾಡಪ್ಪ, ನಿಮ್ಮ ಅಕ್ಕನ ಮಗಳು ಇದಾಳ್ಯ ಆಕೀನ ಮದ್ವಿ ಆಗು' ಎಂದು ಬುದ್ಧಿವಾದ ಹೇಳಿದ್ದಳು. ಈ ಪ್ರೇಮವೇ ರೇವಣ್ಣನ ಜೀವಕ್ಕೆ ಮುಳುವಾಯಿತು ಎನ್ನುವುದು ರೇವಣ್ಣನ ಅಣ್ಣ ತಿಪ್ಪೇಸ್ವಾಮಿಯ ಅಳಲು.

ಏಪ್ರಿಲ್ 20 ಸೋಮವಾರ ರಾತ್ರಿ ರೇವಣ್ಣ ತನ್ನ ದೊಡ್ಡಪ್ಪನ ಮಗನಾದ ಹಿರಿಯಣ್ಣ ತಿಪ್ಪಣ್ಣನ ಬಳಿ ತಾನು ಒಂದು ಹುಡುಗಿಯನ್ನು ಪ್ರೀತಿಸುತ್ತಿರುವುದಾಗಿಯೂ, ಲಿಂಗಾಯತರ ಹುಡುಗಿಯೆಂತಲೂ, ಆಕೆಯೂ ಮದುವೆಯಾಗಲು ಒತ್ತಾಯಿಸುತ್ತಿದ್ದಾಳೆ, ಮದುವೆಯಾಗದಿದ್ದರೆ ಆತ್ಮಹತ್ಯೆ ಮಾಡಿಕೊಳ್ಳುವುದಾಗಿ ಹೇಳುತ್ತಿದ್ದಾಳೆ ಎಂತಲೂ, ಆಕೆಗೆ ಮದುವೆ ಖಾಯಂ ಆಗಿದೆ ಏನು ಮಾಡುವುದು ಎಂದು ವಿಚಿತ್ರ ಗಲಿಬಿಲಿಯಲ್ಲಿ ಏನೊಂದು ತೋಚದಂತೆ ಹೇಳಿಕೊಂಡಿದ್ದನು. ಇದರ ಅಪಾಯವನ್ನರಿತ ತಿಪ್ಪಣ್ಣ ಆ ಹುಡುಗಿಯನ್ನು ಮದುವೆಯಾಗುವುದು ಬೇಡವೇ ಬೇಡ ಎಂತಲೂ, ಈ ಸಂಬಂಧ ಪೊಲೀಸ್ ಕಂಪ್ಲೇಂಟ್ ಬೇಕಾದರೆ ಕೊಡೋಣ ಎಂತಲೂ, ಮುಂದೆ ಕಷ್ಟವೆಂತಲೂ ಬುದ್ಧಿವಾದ ಹೇಳಿದ್ದಾರೆ. ತಡ ರಾತ್ರಿಯವರೆಗೂ ಈ ಚರ್ಚೆ ನಡೆದಿದೆ. ಏಪ್ರಿಲ್ 21 ರ ಬೆಳಗ್ಗೆ ತಿಪ್ಪಣ್ಣ ಹೊಲಗೆಲಸಕ್ಕೆ ಹೋಗಿದ್ದಾರೆ. ಇತ್ತ ಕಡೆ ಇದೇ ಗೊಂದಲದಲ್ಲಿ ರೇವಣ್ಣ ಜಗಲೂರಿಗೆ ಡ್ಯೂಟಿಗೆಂದು ಹೋಗಿದ್ದಾನೆ.

ಏಪ್ರಿಲ್ 21 ರ ಬೆಳಗ್ಗೆ 8.30 ಕ್ಕೆ ಓಬಳಾಪುರದ ಮನೆ ಬಿಟ್ಟ ರೇವಣ್ಣ ಮತ್ತೆ ಮನೆಯೊಂದಿಗೆ ಸಂಪರ್ಕಕ್ಕೆ ಸಿಕ್ಕಿಲ್ಲ. ಏಪ್ರಿಲ್ 25 ರ ಶನಿವಾರ ಬೆಳಗ್ಗೆ 9.30 ಸುಮಾರಿಗೆ ಜಗಲೂರು ಪೊಲೀಸ್ ಸ್ಟೇಷನ್ನಿನಿಂದ ರೇವಣ್ಣನ ಅಣ್ಣ ತಿಪ್ಪೇಸ್ವಾಮಿಗೆ ಫೋನ್ ಬಂದಿದೆ. ತೀರಿಹೋದ ರೇವಣ್ಣನ ಸುದ್ದಿ ತಿಳಿಯುತ್ತಲೂ ಮನೆಯಲ್ಲಿ ದುಃಖ ಮುಗಿಲು ಮುಟ್ಟಿದೆ. ನಂತರ ತಿಪ್ಪೇಸ್ವಾಮಿ ಮೊದಲಾದವರು ದಿಢೀರನೆ ಜಗಲೂರಿಗೆ ಧಾವಿಸಿದ್ದಾರೆ. ಜಗಲೂರು ಸಮೀಪದ ಹಿರೆಮಲ್ಲೂರು ಕ್ರಾಸಿನ ಹೊಲವೊಂದರ ಬದುವಿನಲ್ಲಿ ದೇಹವಿತ್ತು. ರೇವಣ್ಣನ ದೇಹ ಊದಿಕೊಂಡು ನೋಡುವಂತಿರಲಿಲ್ಲವಂತೆ. ಆತ ತೊಟ್ಟ ಷರ್ಟು ಪ್ಯಾಂಟಿನ ಮೇಲೆ ರೇವಣ್ಣ ಎಂದು ಅಣ್ಣ ತಿಪ್ಪೇಸ್ವಾಮಿ ಗುರುತಿಸಿದ್ದಾರೆ. ಕಾಲುಗಳನ್ನು ಕತ್ತರಿಸಿದ್ದರು, ಮುಖವನ್ನು ಖಿಚಿಂ ಆಗುವಂತೆ ಹೊಡೆಯಲಾಗಿತ್ತು. ದೇಹದ ಮೇಲೆ ಅಸ್ತ್ರಗಳಿಂದ ಕೊಯ್ದ ಗುರುತುಗಳಿದ್ದವು. ರಕ್ತಮಯವಾದ ದೇಹ ವಾಸನೆ ಬರತೊಡಗಿತ್ತು ಎಂದು ತಿಪ್ಪೇಸ್ವಾಮಿ ಹೇಳುತ್ತಾರೆ. ಅಂತೆಯೇ ಡೆಡ್ ಬಾಡಿಯ ಹತ್ತಿರ ಪೆನ್ನು ಪೇಪರು ಮೊಬೈಲು ವಿಷ ಬಾಟಲಿ ಇತ್ತೆಂದು ಪೊಲೀಸರು ತೋರಿಸಿದ್ದಾಗಿ ತಿಪ್ಪೇಸ್ವಾಮಿ ಹೇಳಿದರು. ಜಗಲೂರು ಸರಕಾರಿ ಆಸ್ಪತ್ರೆಯಲ್ಲಿ ಪೋಷ್ಟ್ ಮಾರ್ಟಮ್ ಆಗಿದೆ. ನಂತರ ಅದೇ ದಿನ ಏಪ್ರಿಲ್ 25 ರ ಶನಿವಾರ ರಾತ್ರಿ 1 ಗಂಟೆಯ ಸುಮಾರಿಗೆ ದೇಹವನ್ನು ಓಬಳಾಪುರದಲ್ಲಿ ಮಣ್ಣು ಮಾಡಿದ್ದಾರೆ. ಪೋಷ್ಟ್ ಮಾರ್ಟಮ್ ರಿಪೋರ್ಟ್ ಇನ್ನೂ ಬಂದಿಲ್ಲ ಎನ್ನುವುದು ಮನೆಯವರು ನೀಡಿದ ಮಾಹಿತಿ.

ಈ ಮಧ್ಯೆ ರೇವಣ್ಣನ ಸಂಬಂಧಿ ತಿಪ್ಪಣ್ಣನಿಗೆ (9964600929 ನಂಬರಿಗೆ) ಪ್ರಿಯತಮೆಯ ಮಾವ ಎಂದು ಹೇಳಿಕೊಂಡವರೊಬ್ಬರು ಏಪ್ರಿಲ್ 21 ರ ಮಂಗಳವಾರ ರಾತ್ರಿ 8 ಗಂಟೆಯ ಸುಮಾರಿಗೆ ಫೋನ್ ಮಾಡಿ 'ನಮ್ಮ ಹುಡುಗಿಗೆ ಏಪ್ರಿಲ್ 23 ರಂದು ಮದುವೆ ಇದೆ, ನಿಮ್ಮ ಹುಡುಗನನ್ನು ಒಂದೆರಡು ದಿನಗಳ ಕಾಲ ಈ ಕಡೆ (ಜಗಲೂರು) ಬಿಡಬೇಡಿ, ಹಿಂದೆ ಏನೋ ನಡೆದಿದೆ. ಆದದ್ದನ್ನು ಮರೆಯಲು ನಿಮ್ಮ ಹುಡುಗನಿಗೆ ಹೇಳಿ' ಎಂದು ಎಚ್ಚರಿಕೆ ನೀಡಿದ್ದಾರೆ. ಇದರಿಂದ ಭಯಗೊಂಡ ತಿಪ್ಪಣ್ಣ ರೇವಣ್ಣನಿಗೆ ಬುದ್ಧಿ ಮಾತು ಹೇಳುವುದಾಗಿಯೂ, ಆ ತರಹದ ಯಾವುದೇ ತೊಂದರೆಯಾಗದಂತೆ ನಮ್ಮ ಹುಡುಗನಿಗೆ ತಿಳಿ ಹೇಳುತ್ತೇವೆ, ನಮ್ಮ ಹುಡುಗನನ್ನು ನಮ್ಮ ಹದ್ದುಬಸ್ತಿನಲ್ಲಿಟ್ಟುಕೊಳ್ಳುತ್ತೇವೆ ಎಂದು ತಿಪ್ಪಣ್ಣ ಹೇಳಿದ್ದಾರೆ.

ಇದನ್ನೆಲ್ಲಾ ನೋಡಿದರೆ ಹುಡುಗಿಯ ಕಡೆಯವರೆ ರೇವಣ್ಣನನ್ನು ಕೊಲೆ ಮಾಡಿದ್ದಾರೆ ಅಥವಾ ಮಾಡಿಸಿದ್ದಾರೆ ಎನ್ನುವ ಅನುಮಾನ ಓಬಳಾಪುರ ಕೇರಿಯ ಜನರಲ್ಲಿ ದಟ್ಟವಾಗಿದೆ. ರೇವಣ್ಣನ ಸಾವಿನ ಆಚೀಚಿನ ಘಟನೆಗಳನ್ನು ನೋಡಿದರೂ ಈ ಅನುಮಾನ ಸಹಜವಾಗಿ ಬರುತ್ತದೆ. ಹಾಗಾಗಿ ರೇವಣ್ಣನ ಕೊಲೆಯ ಬಗ್ಗೆ ತನಿಖೆಯಾಗಬೇಕು, ಕೊಲೆಗಾರರು ಯಾರೆಂದು ತಿಳಿಯಬೇಕು, ಅವರಿಗೆ ಶಿಕ್ಷೆಯಾಗಬೇಕು ಎನ್ನುವುದು ರೇವಣ್ಣನ ಮನೆಯವರ ಒಕ್ಕೊರಲ ಧ್ವನಿ. 'ಸಣ್ಣ ಮಗ ಬಾಳ ನೋವುಂಡು ಸತ್ತಾನ್ರಿ, ಆ ಮಗ ಸಾಯೋ ಮುಂದೆ ಎಷ್ಟು ನೋವುಂಡುತ್ತೋ..' ಎಂದು ರೇವಣ್ಣನ ತಾಯಿ ನೋಯುತ್ತಾ ಹೇಳುತ್ತಾರೆ.

ರೇವಣ್ಣ ಬಿಎ ಬಿಎಡ್ ಮಾಡಿದ ಪದವೀಧರ. ಆತನ ದಾಖಲಾತಿಗಳನ್ನು ಗಮನಿಸಿದರೆ ಬುದ್ಧಿವಂತ ಕೂಡ. ರೇವಣ್ಣನ ಅಣ್ಣ ತಿಪ್ಪೇಸ್ವಾಮಿಯೂ ಬಿ.ಎ ಅರ್ಧಕ್ಕೆ ನಿಲ್ಲಿಸಿದ ಶಿಕ್ಷಿತ. ಇನ್ನೊಬ್ಬ ಅಣ್ಣ ಮಲಿಯಪ್ಪ ಅನಕ್ಷರಸ್ಥ. ಇಬ್ಬರು ಅಣ್ಣಂದಿರಿಗೂ ಮದುವೆಯಾಗಿ ಮಕ್ಕಳಿವೆ. ಈ ಕುಟುಂಬಕ್ಕೆ ಆರ್ಥಿಕ ಭದ್ರತೆಯೇ ರೇವಣ್ಣನಾಗಿದ್ದ. ಅಣ್ಣಂದಿರು ತುಂಡು ಭೂಮಿಯನ್ನು ಉಳುಮೆ ಮಾಡಿಕೊಂಡು ಕೃಷಿ ಕೂಲಿ ಮಾಡಿಕೊಂಡಿದ್ದಾರೆ. ರೇವಣ್ಣನು ವಾರಕ್ಕೊಮ್ಮೆ ಹದಿನೈದು ದಿನಕ್ಕೊಮ್ಮೆ ಓಬಳಾಪುರಕ್ಕೆ ಬಂದು ಹೋಗುತ್ತಿದ್ದ. ಹೀಗೆ ಮನೆಗೆ ಆಧಾರವಾಗಿದ್ದ ಜ್ಯೋತಿಯೇ ಆರಿದಂತೆ ಮನೆಯಲ್ಲಿ ಕತ್ತಲು ಆವರಿಸಿದೆ. ಈ ಕೊಲೆಯನ್ನು ನೋಡಿದರೆ ಮೇಲುಜಾತಿಯ ಅಟ್ಟಹಾಸ ಎದ್ದು ಕಾಣುತ್ತದೆ. ಇದರ ಪ್ರಭಾವಕ್ಕೆ ಒಳಗಾಗಿ ರೇವಣ್ಣನ ಕೊಲೆ ಮುಚ್ಚಿ ಹೋಗುವ ಮುಂಚೆ ದಲಿತ ಸಂಘಟನೆಗಳು ಹೋರಾಟಕ್ಕೆ ಇಳಿಯಬೇಕಿದೆ. ಈ ಕೇಸಿನ ತನಿಖೆಯಾಗಬೇಕು. ತಪ್ಪಿತಸ್ಥರಿಗೆ ಶಿಕ್ಷೆಯಾಗಬೇಕು.

■ ಅರುಣ್

1996ರ ಈ ತೀರ್ಪನ್ನು ಪ್ರಶ್ನಿಸಲು ಕಾಲ ಇನ್ನೂ ಪಕ್ವವಾಗಿಲ್ಲವೇ?



ನಗರದ ಪ್ರತಿಷ್ಠಿತ ಕಾನೂನು ಮಹಾವಿದ್ಯಾಲಯದ ಪಕ್ಕದಲ್ಲಿ ಅದರ ಪೌಳಿಗೆ ಹೆಚ್ಚುಕಮ್ಮಿ ತಾಗಿಕೊಂಡಂತಿರುವ ಪಾಳುಬಿದ್ದ ಮನೆಯೊಂದರ ಗೋಡೆ ಮೇಲಿಂದ ಹೀಗೊಂದು ಸಂದೇಶವನ್ನು ಸಾರಲಾಗಿದೆ:


"HINDUTVA IS THE WAY OF LIFE OF ALL INDIANS"

- SUPREME COURT OF INDIA

ಕನ್ನಡದಲ್ಲಿ ಇದನ್ನು ಹೀಗೆ ಅನುವಾದಿಸಬಹುದು: "ಹಿಂದೂತ್ವ ಎಂಬುದು ಎಲ್ಲಾ ಭಾರತೀಯರ ಜೀವನ ಕ್ರಮವಾಗಿರುತ್ತದೆ"

– ಭಾರತದ ಸರ್ವೋಚ್ಚ ನ್ಯಾಯಾಲಯ

ಅದೇ ಕಾಲೇಜಿನ (ಎಲ್ಲಾ?) ವಿದ್ಯಾರ್ಥಿಗಳ ಹೆಸರಿನಲ್ಲಿರುವ ಈ ವಾಕ್ಯಗಳನ್ನು ಕೇಸರಿ ಬಣ್ಣದ ಬ್ಯಾನರ್‌ನಲ್ಲಿ ಮುದ್ರಿಸಲಾಗಿದ್ದು ಕೇಸರಿ ಪ್ಲಾಸ್ಟಿಕ್ ತೋರಣಗಳಿಂದ ಸಿಂಗರಿಸಲಾಗಿದೆ. ಪಕ್ಕದ ಮಹಾತ್ಮಾ ಗಾಂಧಿ ರಸ್ತೆಯಲ್ಲಿ ಸಂಚರಿಸುವ ವಾಹನಿಗರು ಮತ್ತು ದಾರಿಹೋಕರ ಕಣ್ಣಿಗೆ ರಾಚುವಷ್ಟು ದೊಡ್ಡ ಅಕ್ಷರಗಳಲ್ಲಿರುವ ಈ ಸಂದೇಶವನ್ನು ಬಹಳ ದಿನಗಳಿಂದಲೂ ಕಾಣಬಹುದಾಗಿದೆ. ಭಾರತದ ಸರ್ವೋಚ್ಚ ನ್ಯಾಯಾಲಯದ್ದೆನ್ನಲಾದ ಈ ಹೇಳಿಕೆ ಗಮನಾರ್ಹವಾಗಿರುವುದು ಪ್ರಧಾನವಾಗಿ ಅದರಲ್ಲಿ ಅಂತರ್ಗತವಾಗಿರುವ ಏಕರೂಪಿ ಸಂಸ್ಕೃತಿಯ ಊಹನೆಗಾಗಿ. ಈ ದೇಶದ ಪ್ರಜೆಗಳಾಗಿರುವ ಕ್ರೈಸ್ತರು, ಮುಸ್ಲಿಮರು, ಪಾರಸಿಗಳು, ಯಹೂದ್ಯರು ಮೊದಲಾದ ಕೆಲವು ನಿರ್ದಿಷ್ಟ ಅಲ್ಪಸಂಖ್ಯಾತ ಸಮುದಾಯಗಳನ್ನು ಹಿಂದೂತ್ವದ ತೆಕ್ಕೆಗೆ ಸೇರಿಸುವ ಈ ಹೇಳಿಕೆ ಭಾರತದ ಸಂವಿಧಾನ ಎತ್ತಿಹಿಡಿದಿರುವಂತಹ



ಬಹುಸಂಸ್ಕೃತಿಗೆ ವಿರುದ್ಧವಿರುವುದು ಮೇಲುನೋಟಕ್ಕೇ ಗೋಚರಿಸುತ್ತದೆ. ಸಂವಿಧಾನ ಏನು ಹೇಳುತ್ತದೆ? ಪ್ರಜೆಗಳ ಮೂಲಭೂತ ಹಕ್ಕುಗಳನ್ನು ಪಟ್ಟಿಮಾಡುವ ಸಂವಿಧಾನದ ಕಲಮು 510, ಭಾರತದ ಬಹುಸಂಸ್ಕೃತಿಗೆ ಮನ್ನಣೆ ನೀಡಿ ಅದನ್ನು ಸುರಕ್ಷಿತವಾಗಿ ಉಳಿಸಿಕೊಂಡು ಬರುವುದು (510 (ಜೆ)) ಪ್ರಜೆಗಳ ಕರ್ತವ್ಯವೆಂದು ಹೇಳುತ್ತದೆ. ಅದೇ ರೀತಿ ಧಾರ್ಮಿಕ, ಭಾಷಿಕ, ಪ್ರಾದೇಶಿಕ, ವರ್ಗೀಯ ವೈವಿಧ್ಯತೆಗಳನ್ನು ಮೀರಿ ಭಾರತದ ಎಲ್ಲಾ ಪ್ರಜೆಗಳಲ್ಲಿ ಸೌಹಾರ್ದ ಮತ್ತು ಸಹೋದರತ್ವದ ಭಾವನೆಯನ್ನು ಬೆಳೆಸುವುದು (510(ಜೆ)) ಕೂಡ ಪ್ರತಿಯೋರ್ವ ಪ್ರಜೆಯ ಕರ್ತವ್ಯ ಎನ್ನುತ್ತದೆ. ಇನ್ನು ಕಲಮು 29 ಅಲ್ಪಸಂಖ್ಯಾತ ಸಮುದಾಯಗಳ ಹಿತಾಸಕ್ತಿಗಳನ್ನು ಕಾಪಾಡುವುದರ ಕುರಿತಾಗಿದ್ದರೆ ಕಲಮು 25ರಲ್ಲಿ ಪ್ರಜೆಗಳ ಧಾರ್ಮಿಕ ಸ್ವಾತಂತ್ರ್ಯದ ಹಕ್ಕಿನ ಬಗ್ಗೆ ಬರೆಯಲಾಗಿದೆ.

ಪಠ್ಯಕ್ರಮದ ಭಾಗವಾಗಿ ಸಂವಿಧಾನವನ್ನು ಓದಿರಲೇಬೇಕಾದ ಕಾನೂನು ವಿದ್ಯಾರ್ಥಿಗಳಿಗೆ ಇದೆಲ್ಲದರ ಅರಿವಿಲ್ಲ ಎನ್ನಲಾಗದು. ಆದರೆ ಭವಿಷ್ಯತ್ತಿನಲ್ಲಿ ನ್ಯಾಯವಾದಿಗಳಾಗಲಿರುವ ಇವರು ಕೂಡ ಈ ರೀತಿ ಹಿಂದೂತ್ವವನ್ನು ಬೆಂಬಲಿಸಿರುವುದು ತೀರಾ ದುರದೃಷ್ಟಕರ ಮಾತ್ರವಲ್ಲ ದೊಡ್ಡ ದುರಂತವೂ ಹೌದು. ಬದಲು, ಸಂವಿಧಾನದ ಆಶಯಗಳಿಗೆ ವಿರುದ್ಧವಾದ ಈ ತೀರ್ಪನ್ನು ಪ್ರಶ್ನಿಸಿ ಸರ್ವೋಚ್ಚ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸುತ್ತಿದ್ದರೆ ಅವರು ಕಲಿತ ವಿದ್ಯೆ ಸಾರ್ಥಕವಾಗುತ್ತಿತ್ತು, ದೇಶದ ಜಾತ್ಯತೀತ ಇತಿಹಾಸದಲ್ಲಿ ಅವರ ಹೆಸರು ಶಾಶ್ವತವಾಗಿ ಉಳಿಯುತ್ತಿತ್ತು, ಏಕೆಂದರೆ ನಮ್ಮಲ್ಲಿ ಜಾತ್ಯತೀತ ಎಂದು ಕರೆದುಕೊಳ್ಳುವ ಇಷ್ಟೊಂದು ರಾಜಕೀಯ ಪಕ್ಷಗಳಿದ್ದರೂ ಇದುವರೆಗೆ ಯಾವೊಂದು ಪಕ್ಷವೂ ಈ ಕೆಲಸವನ್ನು ಮಾಡಲು ಮುಂದಾಗಿಲ್ಲ! ನೆನಪಿರಲಿ, ಪ್ರತಿಯೊಂದು ಪಕ್ಷವೂ ಚುನಾವಣಾ ಆಯೋಗದಲ್ಲಿ ನೋಂದಾಯಿಸಿಕೊಳ್ಳುವಾಗ ತಾನು ಸಂವಿಧಾನಕ್ಕೆ ಬದ್ಧವಾಗಿ ಕಾರ್ಯಾಚರಿಸುವೆನೆಂದು ಬರೆದುಕೊಟ್ಟಿರುತ್ತದೆ! ಸರ್ವೋಚ್ಚ ನ್ಯಾಯಾಲಯದ ಈ ವಿವಾದಾತ್ಮಕ ತೀರ್ಪಿನ ಹಿನ್ನೆಲೆಯನ್ನು ನೋಡುವ ಮುನ್ನ ಹಿಂದೂತ್ವ ಅಂದರೇನು, ಹಿಂದೂ ಧರ್ಮ ಅಂದರೇನು, ಇವೆರಡೂ ಸಮಾನಾರ್ಥಕ ಪದಗಳೇ ಎಂಬುದನ್ನು ಒಂದಿಷ್ಟು ವಿಶ್ಲೇಷಿಸುವ ಅವಶ್ಯಕತೆ ಇದೆ.

ಹಿಂದೂತ್ವ

ಹಿಂದೂತ್ವ ಎಂಬ ಪದಕ್ಕೆ ಹೆಚ್ಚೆಂದರೆ ಸುಮಾರು 90 ವರ್ಷಗಳಾಗಬಹುದು. ಹಿಂದೂತ್ವ ಶಬ್ದವನ್ನು ಹುಟ್ಟುಹಾಕಿ ಅದನ್ನು ಮೊತ್ತಮೊದಲಾಗಿ ಬಳಸಿದಾತ ವಿನಾಯಕ ದಾಮೋದರ (ವಿ.ಡಿ.) ಸಾವರ್ಕರ್. ಇದಕ್ಕೂ ಮುಂಚೆ ಹಿಂದೂತ್ವ ಎಂಬ ಶಬ್ದವೇ ಇರಲಿಲ್ಲ. ಹಿಂದೂ ಧರ್ಮದ ಹಿರಿಯ ಚೇತನರಾದ ಸ್ವಾಮಿ ವಿವೇಕಾನಂದ, ರಾಮತೀರ್ಥ ಪರಮಹಂಸ ಮೊದಲಾದವರು ಈ ಶಬ್ದವನ್ನೆಂದೂ ಬಳಸಿರಲಿಲ್ಲ ಎಂಬುದನ್ನು ಗಮನಿಸಬೇಕು. ಹಿಂದೂತ್ವದ ಜನಕನಾದ ವಿ.ಡಿ.ಸಾವರ್ಕರ್ ಒಂದು ಕಾಲದಲ್ಲಿ ಕ್ರಾಂತಿಕಾರಿ ಸ್ವಾತಂತ್ರ್ಯ ಹೋರಾಟಗಾರನೆಂದು ಗುರುತಿಸಲ್ಪಟ್ಟವರು. 1906ರಿಂದ 1910ರ ತನಕ ಕಾನೂನು ವಿದ್ಯಾರ್ಥಿಯಾಗಿ ಬ್ರಿಟನ್‌ನಲ್ಲಿದ್ದಾಗ 'ಫ್ರೀ ಇಂಡಿಯ ಸೊಸೈಟಿ'ಯನ್ನು ಸ್ಥಾಪಿಸಿ ಅದರ ಮೂಲಕ ಭಾರತದಲ್ಲಿನ ಬ್ರಿಟಿಷ್ ಆಳ್ವಿಕೆಯನ್ನು ಕೊನೆಗಾಣಿಸಲು ರಹಸ್ಯ ಕಾರ್ಯಾಚರಣೆಗಳನ್ನು ಆರಂಭಿಸಿದವರು. 1910ರಲ್ಲಿ 'ಫ್ರೀ ಇಂಡಿಯ ಸೊಸೈಟಿ'ಯ ಸದಸ್ಯ ಮದನ್ ಲಾಲ್ ಧಿಂಗ್ರಾ ಎಂಬಾತ ಲಂಡನಿನ ಇಂಡಿಯನ್ ಕಚೇರಿಯ ಅಧಿಕಾರಿಯೊಬ್ಬನನ್ನು ಹತ್ಯೆ ಮಾಡಿದಾಗ ಬ್ರಿಟಿಷ್ ಸರಕಾರ ಸಾವರ್ಕರ್‌ಗೆ 50 ವರ್ಷಗಳ ಕರಿನೀರಿನ ಶಿಕ್ಷೆ ವಿಧಿಸಿ ಅಂಡಮಾನ್ ಜೈಲಿಗೆ ರವಾನಿಸಿತು. ಅಲ್ಲಿ ಒಂದೆರಡು ವರ್ಷ ಕಳೆಯುವಷ್ಟರಲ್ಲಿ ದಯಾಭಿಕ್ಷೆಯ ಅರ್ಜಿಗಳನ್ನು ಬರೆಯತೊಡಗಿದ ಸಾವರ್ಕರ್, ತನ್ನನ್ನು ಶೀಘ್ರದಲ್ಲಿ ಬಿಡುಗಡೆ ಮಾಡಿದರೆ ಬ್ರಿಟಿಷರ ಮತೀಯ ವಿಭಜನೆಯ ನೀತಿಗೆ ಸಹಕರಿಸುವೆನೆಂದು ಮಾತುಕೊಟ್ಟ ನಂತರ 1921ರಲ್ಲಿ ಆತನನ್ನು ಅಂಡಮಾನಿನಿಂದ ರತ್ನಗಿರಿ ಜೈಲಿಗೆ ವರ್ಗಾಯಿಸಲಾಯಿತು. ಅಲ್ಲಿ ಆತ ಬ್ರಿಟಿಷರ ಒಡೆದಾಳುವ ನೀತಿಗೆ ಪೂರಕವಾದ 'ಹಿಂದೂತ್ವ' ಎಂಬ ಪ್ರಬಂಧವನ್ನು ಬರೆದರು. 1923ರಲ್ಲಿ ಅದನ್ನು ಬ್ರಿಟಿಷರ ಸಹಾಯದಿಂದ ಹೊರಗೆ ಸಾಗಿಸಿ ಪುಸ್ತಕ ರೂಪದಲ್ಲಿ ಪ್ರಕಟಿಸಲಾಯಿತು. 1924ರಲ್ಲಿ ಅಂದರೆ ಕೇವಲ ಹತ್ತು ವರ್ಷಗಳ ಬಳಿಕ ಬಿಡುಗಡೆಯಾದ ವಿ.ಡಿ. ಸಾವರ್ಕರ್ ಮುಂದೆ ಬ್ರಿಟಿಷರಿಗೆ ಸಂಪೂರ್ಣ ಸಹಕಾರ ನೀಡುವುದರ ಜೊತೆಗೆ ತನ್ನ ಉಳಿದ ಜೀವಮಾನವನ್ನೆಲ್ಲ ಹಿಂದೂತ್ವಕ್ಕಾಗಿ ಮುಡಿಪಿಟ್ಟರು.

ಹಿಂದೂ ಧರ್ಮ ಮತ್ತು ಹಿಂದೂತ್ವ

ಇವತ್ತು ಅನೇಕರಲ್ಲಿ ಹಿಂದೂ ಧರ್ಮ ಮತ್ತು ಹಿಂದೂತ್ವ ಇವೆರಡೂ ಒಂದೇ ಎಂಬ ಭಾವನೆಯೊಂದು ಬೇರೂರಿದೆ. ಎರಡೂ ಶಬ್ದಗಳನ್ನು ಒಂದಕ್ಕೊಂದು ಪರ್ಯಾಯವಾಗಿ, ಪೂರಕವಾಗಿ ಬಳಸುತ್ತಿರುವ ಉದಾಹರಣೆಗಳು ಸಾಕಷ್ಟಿವೆ. ಆದರೆ ವಾಸ್ತವದಲ್ಲಿ ಹಿಂದೂ ಧರ್ಮ ಬೇರೆ. ಹಿಂದೂತ್ವ ಬೇರೆ. ಎಲ್ಲಾ ಧರ್ಮಗಳ ಹಾಗೆ ಹಿಂದೂ ಧರ್ಮವೂ ನಂಬಿಕೆ, ಆರಾಧನೆ ಮತ್ತು ಸಂಪ್ರದಾಯಗಳನ್ನು ಆಧರಿಸಿದ ಒಂದು ಧರ್ಮ. ಇಲ್ಲಿನ ಬಹುಸಂಖ್ಯಾತರ ಧರ್ಮವೆಂದು ಹೇಳಲಾಗುತ್ತಿರುವ ಹಿಂದೂ ಧರ್ಮ ಎನ್ನುವುದು ನಿಜವಾಗಿ ವೇದಗಳ ಪಾರಮ್ಯವನ್ನು ಎತ್ತಿಹಿಡಿಯುವ ವೈದಿಕ ಧರ್ಮ. ಈ ವೈದಿಕ ಧರ್ಮದ ಅನುಯಾಯಿಗಳಾದ ಬ್ರಾಹ್ಮಣರದು ವಾಸ್ತವವಾಗಿ ಒಂದು ಅಲ್ಪಸಂಖ್ಯಾತ ಸಮುದಾಯ. ಆದುದರಿಂದ 'ಹಿಂದೂ ಧರ್ಮ ಎಂಬುದು ಭಾರತದ ಬಹುಸಂಖ್ಯಾತರ ಧರ್ಮ, ಭಾರತೀಯ ಸಂಸ್ಕೃತಿ ಅಂದರೆ ಹಿಂದೂ ಸಂಸ್ಕೃತಿ, ಭಾರತವೆಂದರೆ ಹಿಂದೂಸ್ತಾನ್' ಎನ್ನುವವರು ಜನಸಾಮಾನ್ಯರಿಂದ ಸತ್ಯವನ್ನು ಮರೆಮಾಚುತ್ತಿದ್ದಾರೆ ಎಂಬುದನ್ನು ಗಮನಿಸಬೇಕಾಗಿದೆ.



ವಿ.ಡಿ. ಸಾವರ್ಕರ್ ಹುಟ್ಟುಹಾಕಿದಂತಹ ಹಿಂದೂತ್ವ ನಿಚ್ಚಳವಾಗಿ ಒಂದು ಧರ್ಮಮಿಶ್ರಿತ ರಾಜಕೀಯ ಚಳವಳಿಯಾಗಿದೆ. ಅದು ಧರ್ಮವನ್ನು ರಾಜಕೀಯ ಉದ್ದೇಶಕ್ಕಾಗಿ, ಅಧಿಕಾರದ ಗದ್ದುಗೆಗೇರುವ ಸಲುವಾಗಿ ಬಳಸಿಕೊಳ್ಳುವ ಒಂದು ರಾಜಕೀಯ ಸಿದ್ಧಾಂತವಾಗಿದೆ. ಚರಿತ್ರೆ, ಸಂಸ್ಕೃತಿ, ಪೌರತ್ವ, ನಾಗರಿಕತೆಗಳನ್ನೂ ತನ್ನೊಳಗೆ ಸೇರಿಸಿಕೊಳ್ಳುವ ಹಿಂದೂತ್ವದಲ್ಲಿ ರಾಜಕಾರಣದ ಸೆಲೆಯನ್ನು ಸ್ಪಷ್ಟವಾಗಿ ಗುರುತಿಸಬಹುದು. ಹಿಂದೂತ್ವ ಸಿದ್ಧಾಂತವನ್ನು ತಮ್ಮ ಬೀಜಮಂತ್ರವಾಗಿಸಿಕೊಂಡವರೇ ಹಿಂದೂತ್ವವಾದಿಗಳು. ಹಿಂದೂತ್ವವಾದಿಗಳ ಮಾತೃ ಸಂಘಟನೆಯಾಗಿರುವ ರಾಷ್ಟ್ರೀಯ ಸ್ವಯಂ ಸೇವಕ ಸಂಘ, ಅದರ ರಾಜಕೀಯ ಮುಖವಾಗಿರುವ ಭಾರತೀಯ ಜನತಾ ಪಕ್ಷ, ಧಾರ್ಮಿಕ ಮುಖವಾಗಿರುವ ವಿಶ್ವ ಹಿಂದೂ ಪರಿಷತ್ ಮತ್ತಿತರ ನೂರಾರು ಉಪಸಂಘಟನೆಗಳು ಒಟ್ಟಾರೆಯಾಗಿ ಸಂಘ ಪರಿವಾರ ಎಂದು ಗುರುತಿಸಲ್ಪಟ್ಟಿವೆ. ಹಿಂದೂತ್ವ ಸಿದ್ಧಾಂತವನ್ನು ಪ್ರತಿಪಾದಿಸಿದ ವಿ.ಡಿ. ಸಾವರ್ಕರ್‌ರನ್ನು ಸಂಘ ಪರಿವಾರ ತನ್ನ ಆರಾಧ್ಯದೈವಗಳಲ್ಲೊಬ್ಬರೆಂದು ಪರಿಗಣಿಸುತ್ತದೆ.

'ಹಿಂದೂತ್ವ' ಪುಸ್ತಕದ ಅಧಿಕೃತ, ದ್ವಿತೀಯ ಆವೃತ್ತಿಗೆ (1942) ಮುನ್ನುಡಿ ಬರೆದ ಪ್ರಕಾಶಕ ಎಸ್.ಎಸ್.ಸಾವರ್ಕರ್ ಹೇಳುವಂತೆ ಅದರಲ್ಲಿರುವುದು ಹಿಂದೂತ್ವ ಮತ್ತು ಹಿಂದೂ ಗುಣದ ನಿರೂಪಣೆಯೆ ಹೊರತು ಹಿಂದೂ ಧರ್ಮದ ನಿರೂಪಣೆಯಲ್ಲ. "ಹಿಂದೂ ಮತ್ತು ಹಿಂದೂ ಧರ್ಮ ಎನ್ನುವ ಈ ಎರಡು ಶಬ್ದಗಳ ಪರಿಕಲ್ಪನೆಗೆ ಒಂದು ಧಾರ್ಮಿಕ ಆಯಾಮವಿದೆ. ಹೀಗಾಗಿ ವೀರ ಸಾವರ್ಕರ್‌ರಿಗೆ ಹಿಂದೂತ್ವ, ಹಿಂದೂ ಗುಣ ಮುಂತಾದ ಕೆಲವು ಹೊಸ ಶಬ್ದಗಳನ್ನೂ ಸೃಷ್ಟಿಸುವ ಅವಶ್ಯಕತೆ ಉಂಟಾಯಿತು. ಧಾರ್ಮಿಕದೊಂದಿಗೆ ಸಾಂಸ್ಕೃತಿಕ, ಚಾರಿತ್ರಿಕ ಮತ್ತು ಎಲ್ಲಕ್ಕೂ ಮಿಗಿಲಾಗಿ ರಾಷ್ಟ್ರೀಯ ಆಯಾಮಗಳನ್ನೊಳಗೊಂಡ ಒಂದು ಸಂಪೂರ್ಣತೆಯನ್ನು ಅಭಿವ್ಯಕ್ತಿಸುವುದೇ ಇದರ ಉದ್ದೇಶವಾಗಿತ್ತು, ಹಿಂದೂ ಜನರನ್ನು ಪೂರ್ತಿಯಾಗಿ ಗುರುತಿಸುವ ಅಂಶಗಳೇ ಇವು."


ಈಗ ನಾವು ಕಾನೂನು ವಿದ್ಯಾರ್ಥಿಗಳು ಉಲ್ಲೇಖಿಸಿರುವ ಹೇಳಿಕೆಗೆ ಮರಳಿ ಅದರ ಹಿನ್ನೆಲೆಯನ್ನು ಸ್ವಲ್ಪ ವಿವರವಾಗಿ ಪರಿಶೀಲಿಸೋಣ.

ಮನೋಹರ್ ಜೋಶಿ ಪ್ರಕರಣ

1992-93ರ ಮುಂಬಯಿ ಕೋಮು ದಂಗೆಗಳ ತರುವಾಯ ಮಹಾರಾಷ್ಟ್ರದಲ್ಲಿ ನಡೆದ ಮೊದಲ ಅಸೆಂಬ್ಲಿ ಚುನಾವಣೆಗಳಲ್ಲಿ (1995) ಶಿವಸೇನೆಯ ಮನೋಹರ್ ಜೋಶಿ ಓರ್ವ ಅಭ್ಯರ್ಥಿಯಾಗಿದ್ದರು. ಆತ ತನ್ನ ಚುನಾವಣಾ ಪ್ರಚಾರದ ವೇಳೆ ಮಾಡಿದ ಭಾಷಣವೊಂದರಲ್ಲಿ ಮಹಾರಾಷ್ಟ್ರವನ್ನು ಭಾರತದ ಪ್ರಥಮ "ಹಿಂದೂ ರಾಷ್ಟ್ರ"ವನ್ನಾಗಿ ಪರಿವರ್ತಿಸುವ ಭರವಸೆ ಕೊಟ್ಟಿದ್ದರು. ಆಗ ಜನಪ್ರತಿನಿಧಿ ಕಾಯ್ದೆ 1951ರ ಸೆಕ್ಷನ್ 123(3)ನ್ನು (ಇದರ ಪ್ರಕಾರ ಧರ್ಮದ ನೆಲೆಯಲ್ಲಿ ಮತಯಾಚನೆ ಮಾಡುವುದು ಅಪರಾಧ) ಉಲ್ಲಂಘಿಸಿರುವುದಕ್ಕಾಗಿ ಆತನ ವಿರುದ್ಧ ಪ್ರಕರಣ ದಾಖಲಿಸಲ್ಪಟ್ಟಿತು. ಜೋಶಿ ಚುನಾವಣೆಯಲ್ಲಿ ಗೆದ್ದರಲ್ಲದೆ ಶಿವಸೇನೆ, ಬಿಜೆಪಿ ಸಮ್ಮಿಶ್ರ ಸರಕಾರದ ಮುಖ್ಯಮಂತ್ರಿಯೂ ಆದರು. ಮುಂದೆ ಜೋಶಿಯ ಚುನಾವಣೆಯನ್ನು ಅನೂರ್ಜಿತಗೊಳಿಸಿದ ಮುಂಬಯಿ ಹೈಕೋರ್ಟ್ "ಹಿಂದೂ ರಾಷ್ಟ್ರ" ಸ್ಥಾಪನೆಯ ಭರವಸೆಯ ಮೇರೆಗೆ ಮತ ಯಾಚಿಸಿರುವುದು ಸಂವಿಧಾನದ ಜಾತ್ಯತೀತ ಮೌಲ್ಯಗಳನ್ನು ಉಲ್ಲಂಘಿಸಿದಂತಾಗಿದೆ ಎಂದು ಬರೆಯಿತು. ಜೋಶಿ ಸರ್ವೋಚ್ಚ ನ್ಯಾಯಾಲಯದ ಮೊರೆಹೊಕ್ಕರು. ಆಗ ಹೆಸರಾಂತ ಮುಖ್ಯನ್ಯಾಯಮೂರ್ತಿ ಜೆ.ಎಸ್.ವರ್ಮ ನೇತೃತ್ವದ ಸರ್ವೋಚ್ಚ ನ್ಯಾಯಾಲಯದ ಪೀಠ ಹೈಕೋರ್ಟಿನ ತೀರ್ಮಾನವನ್ನು ತಳ್ಳಿಹಾಕಿತಲ್ಲದೆ "ನಮ್ಮ ಅಭಿಪ್ರಾಯದಲ್ಲಿ ಮಹಾರಾಷ್ಟ್ರದಲ್ಲಿ ಪ್ರಥಮ 'ಹಿಂದೂ ರಾಷ್ಟ್ರ'ವನ್ನು ಸ್ಥಾಪಿಸಲಾಗುವುದು ಎಂದಿರುವುದು ಧರ್ಮದ ಆಧಾರದಲ್ಲಿ ವೋಟಿಗಾಗಿ ಮಾಡಿಕೊಂಡ ಯಾಚನೆಯಲ್ಲ, ಹೆಚ್ಚೆಂದರೆ ಅಂತಹದೊಂದು ಆಶಯ ವ್ಯಕ್ತಪಡಿಸುವ ಹೇಳಿಕೆ" ಎಂದು ಅಭಿಪ್ರಾಯಿಸಿತು. ದ್ವೇಷದ ಭಾಷಣಗಳು ವಾಕ್ಸ್ವಾತಂತ್ರ್ಯದ ಭಾಗವಾಗಲಾರವು ಎಂದು ಅಂತಾರಾಷ್ಟ್ರೀಯವಾಗಿ ಹೆಚ್ಚೆಚ್ಚು ಪರಿಗಣಿಸಲಾಗುತ್ತಿರುವ ಸಂದರ್ಭದಲ್ಲಿ ಇಂತಹ ತೀರ್ಪು ಬಂದಿರುವುದನ್ನು ಅತ್ಯಂತ ದುರದೃಷ್ಟಕರವೆನ್ನದೆ ವಿಧಿಯಿಲ್ಲ. ನ್ಯಾ। ವರ್ಮ "ಸಾಮಾನ್ಯವಾಗಿ ಹಿಂದೂತ್ವವನ್ನು ಒಂದು ಜೀವನಕ್ರಮ ಯಾ ಮನೋಸ್ಥಿತಿ ಎಂಬುದಾಗಿ ಗ್ರಹಿಸಲಾಗುತ್ತದೆ; ಅದನ್ನು ಮತೀಯ ಮೂಲಭೂತವಾದದೊಂದಿಗೆ ಸಮೀಕರಿಸುವುದಾಗಲಿ ಅಥವಾ ಹಾಗೆ ಅರ್ಥೈಸುವುದಾಗಲಿ ಮಾಡಬಾರದು... ಹಿಂದೂತ್ವವನ್ನು ಭಾರತೀಕರಣ ಎಂಬ ಪದಕ್ಕೆ ಪರ್ಯಾಯವಾಗಿ ಬಳಸಲಾಗುತ್ತದೆ ಮತ್ತು ಅರ್ಥೈಸಲಾಗುತ್ತದೆ. ಭಾರತೀಕರಣ ಅಂದರೆ ದೇಶದಲ್ಲಿ ಸಹಬಾಳ್ವೆ ನಡೆಸುತ್ತಿರುವ ಎಲ್ಲಾ ಸಂಸ್ಕೃತಿಗಳ ನಡುವಿನ ಭೇದಗಳನ್ನು ತೊಡೆದುಹಾಕಿ ಒಂದು ಏಕರೂಪದ ಸಂಸ್ಕೃತಿಯನ್ನು ಬೆಳೆಸುವುದು" ಎಂದು ಬರೆದರು. ಈ ಸಂದರ್ಭದಲ್ಲಿ ಸಾವರ್ಕರರ 'ಹಿಂದೂತ್ವ' ಪುಸ್ತಕ ಮತ್ತು ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಸರಸಂಘಚಾಲಕ ಗುರು ಗೋಲ್ವಲ್ಕರರ ಹೇಳಿಕೆಗಳ ಆಶಯವೇನೆಂದು ತಿಳಿಯುವುದು ಮುಖ್ಯವಾಗುತ್ತದೆ.

ಸಾವರ್ಕರ್ ಮತ್ತು ಗೋಲ್ವಲ್ಕರರ ಹೇಳಿಕೆಗಳು

ಸಾವರ್ಕರರ 'ಹಿಂದೂತ್ವ' ಪುಸ್ತಕದಲ್ಲಿ ಮುಸ್ಲಿಮರು, ಕ್ರೈಸ್ತರು, ಪಾರಸಿಗಳು, ಯಹೂದ್ಯರು ಮುಂತಾದವರನ್ನು ಮೊದಲು ಅನ್ಯರನ್ನಾಗಿಸುವ ತಂತ್ರಗಾರಿಕೆಯನ್ನು ಸ್ಪಷ್ಟವಾಗಿ ಗುರುತಿಸಬಹುದು: "ಯಾರ ಪಾಲಿಗೆ ಹಿಂದೂಸ್ತಾನದ ನೆಲ ಪಿತೃಭೂಮಿಯೂ ಪುಣ್ಯಭೂಮಿಯೂ ಆಗಿ ಅವರ ವರ್ತಮಾನ, ಭೂತ, ಭವಿಷ್ಯತ್ತುಗಳೊಂದಿಗೆ ಬಹಳ ನಿಕಟವಾಗಿ ಬೆಸೆದುಕೊಂಡಿದೆಯೋ ಅಂತಹವರು ಮಾತ್ರ ಹಿಂದೂಗಳು. ಹಿಂದೂಗಳು ಭಾರತ ದೇಶದ ಬುನಾದಿ, ಅದರ ಆಧಾರಶಿಲೆ, ಅದರ ಮೀಸಲು ಪಡೆಗಳು... ತೀರಾ ಇತ್ತೀಚಿನವರೆಗೆ ಹಿಂದೂಗಳಾಗಿದ್ದ ಮುಸಲ್ಮಾನರು ಮತ್ತು ಕ್ರೈಸ್ತರು ಕೂಡ ಇದು ತಮ್ಮ ಪಿತೃಭೂಮಿ ಎಂದೂ, ತಮ್ಮದೂ ಹೆಚ್ಚುಕಮ್ಮಿ ಪರಿಶುದ್ಧ ಹಿಂದೂ ರಕ್ತವೆಂದೂ, ತಮ್ಮ ಪೂರ್ವಜರೂ ಇದೇ ದೇಶದವರೆಂದೂ ಹೇಳಿಕೊಳ್ಳಬಹುದಾದರೂ ಅವರು ಹೊಸ ಪಂಥವನ್ನು ಸ್ವೀಕರಿಸಿದ ಬಳಿಕ ಇಡೀ ಹಿಂದೂ ಸಂಸ್ಕೃತಿಯ ಮೇಲಿನ ಹಕ್ಕನ್ನು ಕಳೆದುಕೊಂಡಿದ್ದಾರೆ. ಅವರ ವೀರರು, ವೀರರ ಆರಾಧನೆ, ಅವರ ಹಬ್ಬಗಳು, ಅವರ ಆಚರಣೆಗಳು, ಅವರ ಆದರ್ಶಗಳು, ಅವರ ಜೀವನದೃಷ್ಟಿ ಎಲ್ಲವೂ ಈಗ ನಮ್ಮದಕ್ಕೆ ಸಮಾನವಾಗಿ ಉಳಿದಿಲ್ಲ, ಅವರ ಪುಣ್ಯಭೂಮಿಗಳಿರುವುದು ದೂರದ ಪ್ಯಾಲೆಸ್ಟೀನ್ ಅಥವಾ ಅರೇಬಿಯದಲ್ಲಿ... ಅವರ ಹೆಸರುಗಳೂ ವಿದೇಶೀ ಮೂಲದವು". ಮತ್ತೊಂದು ಕಡೆ



ಬಹಳಷ್ಟು ಸಾಮ್ಯಗಳಿರುವುದನ್ನು ಕಾಣಬಹುದು. ಹಿಂದೂತ್ವ ಎಂಬುದು ಮತೀಯ ಮೂಲಭೂತವಾದ ಅಲ್ಲ ಎಂಬ ತೀರ್ಮಾನಕ್ಕೆ ಬರುವ ನ್ಯಾ। ವರ್ಮರು ಸಾವರ್ಕರ್, ಗೋಲ್ವಲ್ಕರರ ಬರಹಗಳನ್ನು ಗಣನೆಗೆ ತೆಗೆದುಕೊಳ್ಳದಿರುವುದು ಸ್ಪಷ್ಟವಿದೆ. ಭಾರತದ ಸಂವಿಧಾನವೆ ಬಹುಸಂಸ್ಕೃತಿಯನ್ನು ರಕ್ಷಿಸಬೇಕು ಎನ್ನುತ್ತಿರುವಾಗ ಏಕಪ್ರಕಾರದ 'ಹಿಂದೂತ್ವ' ಸಂಸ್ಕೃತಿಯನ್ನು ಬೆಳೆಸುವ ಕುರಿತು ಮಾತನಾಡುವುದು ನೇರಾನೇರ ಸಂವಿಧಾನದ ಆಶಯಗಳಿಗೆ ವಿರುದ್ಧವಾಗಿದೆ. ಈ ಸಂದರ್ಭದಲ್ಲಿ ನ್ಯಾ। ವರ್ಮರ ಇನ್ನೂ ಒಂದೆರಡು ವಿವಾದಾಸ್ಪದ ತೀರ್ಪುಗಳನ್ನು ನೆನಪಿಸಿಕೊಳ್ಳಬೇಕಾಗಿದೆ. ಉದಾಹರಣೆಗೆ ಆತ 1994ರ ಬೊಮ್ಮಾಯಿ ಪ್ರಕರಣದಲ್ಲಿ 'ಜಾತ್ಯತೀತತೆಯು ಸಂವಿಧಾನದ ಒಂದು ಮೂಲಭೂತ ಲಕ್ಷಣ'ವೆಂದು ಘೋಷಿಸಲು ಹಿಂಜರಿದಿದ್ದರು. ಅಯೋಧ್ಯೆ ಪ್ರಕರಣದಲ್ಲಿ ಆತ ನೀಡಿರುವ ತೀರ್ಪು ಕೂಡಾ ದೋಷಯುಕ್ತವಾಗಿದೆ.

ಬೌದ್ಧ ಜೈನ ಸಿಖ್ಖ ಮುಂತಾದ ಮತಗಳ ಅನುಯಾಯಿಗಳು ವೇದಗಳ ಪವಿತ್ರತೆಯನ್ನು ನಂಬದೆ ಹೋದರೂ ಅವರು ಹಿಂದೂಗಳು ಎಂಬರ್ಥದ ಮಾತುಗಳಿವೆ. ಆದರೆ ಈ ನಿರೂಪಣೆಯನ್ನು ಬಹಳ ಎಚ್ಚರಿಕೆ ಹಾಗೂ ಜಾಗರೂಕತೆಯಿಂದ ಮಾಡಲಾಗಿದೆ ಎಂದು ಸಂವಿಧಾನದಲ್ಲಿ ಡಾ. ಅಂಬೇಡ್ಕರ್ ಹೇಳುತ್ತಾರೆ. ಅವರ ಪ್ರಕಾರ ಎರಡು ಉದ್ದೇಶಗಳನ್ನಿಟ್ಟುಕೊಂಡು ಇದನ್ನು ಮಾಡಲಾಗಿದೆ. ಮೊದಲನೆಯದಾಗಿ ಪುಣ್ಯಭೂಮಿ ಎಂಬ ಶಬ್ದ ಇರುವುದೇ ಮುಸ್ಲಿಮರನ್ನು, ಕ್ರೈಸ್ತರನ್ನು, ಪಾರಸಿಗಳನ್ನು ಹಾಗೂ ಯಹೂದ್ಯರನ್ನು ನಿರೂಪಣೆಯ ಹೊರಗಿಡುವ ಸಲುವಾಗಿ. ಎರಡನೆಯದಾಗಿ ಬೌದ್ಧ ಜೈನ, ಸಿಖ್ಖ ಮುಂತಾದ ಮತಗಳ ಅನುಯಾಯಿಗಳು ವೇದಗಳ ಪವಿತ್ರತೆಯನ್ನು ನಂಬುವ ಆವಶ್ಯಕತೆಯಿಲ್ಲ ಎಂದಿರುವುದು ಅವರನ್ನು ಒಳಸೇರಿಸಿಕೊಳ್ಳುವ ಉದ್ದೇಶದಿಂದ".

ಮುಂದೆ, ಗೋಲ್ವಲ್ಕರ್ ತನ್ನ 'ವಿ ಆರ್ ಅವರ್ ನೇಷನ್‌ಹುಡ್ ಡಿಫೈನ್ಡ್' ಮತ್ತು 'ಬಂಚ್ ಆಫ್ ಥಾಟ್ಸ್' ಎಂಬ ಎರಡು ಕೃತಿಗಳ ಮೂಲಕ ಹಿಂದೂತ್ವ ಪರಿಕಲ್ಪನೆಯನ್ನು ಇನ್ನಷ್ಟು ವಿಸ್ತರಿಸಿದರು. ಆತನ ಯೋಚನಾಲಹರಿಯ ಕೆಲವು ಸ್ಯಾಂಪಲ್‌ಗಳು ಇಲ್ಲಿವೆ:

"ಹಿಂದುಸ್ತಾನದಲ್ಲಿರುವ ವಿದೇಶೀ ಜನಾಂಗಗಳು ಒಂದೋ ಹಿಂದೂ ಸಂಸ್ಕೃತಿ ಮತ್ತು ಭಾಷೆಯನ್ನು ಗಳವಡಿಸಿಕೊಳ್ಳಬೇಕು, ಹಿಂದೂ ಧರ್ಮಕ್ಕೆ ಗೌರವ ತೋರಿಸಿ ಅದನ್ನು ಭಯಭಕ್ತಿಯಿಂದ ಕಾಣಬೇಕು, ಹಿಂದೂ ಜನಾಂಗವನ್ನು ಹಾಗೂ ಹಿಂದೂ ರಾಷ್ಟ್ರದ ಸಂಸತಿಯನ್ನು ವೈಭವೀಕರಿಸುವುದರ ಹೊರತು ಬೇರಾವ ವಿಷಯವನ್ನೂ ಮನಸದೊಳಕ್ಕೆ ಬಿಟ್ಟುಕೊಳ್ಳಬಾರದು ಮತ್ತು ತಮ್ಮ ಪ್ರತ್ಯೇಕ ಅಸ್ತಿತ್ವವನ್ನು ತ್ಯಜಿಸಿ ಹಿಂದೂ ಜನಾಂಗದೊಳಕ್ಕೆ ಸೇರಿಕೊಳ್ಳಬೇಕು. ಇಲ್ಲಾ ಯಾವುದಕ್ಕೂ ಆಗ್ರಹಿಸದೆ, ಯಾವುದೇ ಸವಲತ್ತುಗಳಿಗೂ, ವಿಶೇಷ ಸೌಕರ್ಯಗಳಿಗೂ ಅರ್ಹರಾಗದೆ, ನಾಗರಿಕ ಹಕ್ಕುಗಳನ್ನು ಸಮೇತ ಕೇಳದೆ ಹಿಂದೂ ರಾಷ್ಟ್ರಕ್ಕೆ ಪೂರ್ತಿ ಅಧೀನರಾಗಿ ದೇಶದೊಳಗಿರಬಹುದು".

ಕ್ರೈಸ್ತರು, ಮುಸ್ಲಿಮರನ್ನು ವಿದೇಶೀ ಜನಾಂಗಗಳೆಂದು ಕರೆಯುವ ಗೋಲ್ವಲ್ಕರರ ಈ ವಾಕ್ಯಗಳಲ್ಲಿ ಘರ್ ವಾಪಸಿಯ ಬೀಜಗಳನ್ನು ಗುರುತಿಸಬಹುದು. ಮತ್ತೊಂದು ಕಡೆ ಆತ ಘರ್ ವಾಪಸಿಗೆ ಕರೆ ನೀಡುವ ಕರ್ತವ್ಯದ ಬಗ್ಗೆ ಪ್ರಸ್ತಾಪಿಸುತ್ತಾರೆ:

"...ಹಲವು ಶತಮಾನಗಳಿಂದ ಮತೀಯ ಗುಲಾಮಗಿರಿಯಡಿ ನರಳುತ್ತಿರುವ ನಮ್ಮ ಸಹೋದರರನ್ನು ಅವರ ಪೂರ್ವಿಕರ ಮನೆಗೆ ಮರಳುವಂತೆ; ಮರಳಿ ಬಂದು ಉಟ್ಟೆಬರೆ, ಸಂಪ್ರದಾಯ, ವಿವಾಹ ಸಮಾರಂಭ, ಶವಸಂಸ್ಕಾರ ಇತ್ಯಾದಿಗಳಲ್ಲಿ ಅವರ ಪೂರ್ವಿಕರ ಹಿಂದೂ ಜೀವನಕ್ರಮದೊಂದಿಗೆ ಗುರುತಿಸಿಕೊಳ್ಳುವಂತೆ ಕರೆ ನೀಡುವುದು ನಮ್ಮ ಕರ್ತವ್ಯವಾಗಿದೆ."

ಸಾವರ್ಕರ್, ಗೋಲ್ವಲ್ಕರ್ ಮಾತುಗಳ ಅಂತರಾರ್ಥ ಏನು? ಅವರ ಹಿಂದೂತ್ವ ಸಿದ್ಧಾಂತದ ಪ್ರಕಾರ ಯಾರಿಗೆ ಭಾರತ ದೇಶ ಪಿತೃಭೂಮಿಯಷ್ಟೇ ಅಲ್ಲ, ಪುಣ್ಯಭೂಮಿಯೂ ಆಗಿದೆಯೋ ಅವರೇ ಹಿಂದೂಗಳು ಮತ್ತು ಭಾರತವನ್ನು ತಮ್ಮದೆಂದು ಹೇಳುವ ಹಕ್ಕಿರುವುದು ಕೇವಲ ಹಿಂದೂಗಳಿಗೆ. ಇದರರ್ಥ ಏನಾಯಿತೆಂದರೆ ಭಾರತದ ಪ್ರಜೆಗಳೇ ಆಗಿರುವ ಅನೇಕ ಹಿಂದೂಯೇತರ ಅಲ್ಪಸಂಖ್ಯಾತ ಸಮುದಾಯಗಳಿಗೆ ಆ ಹಕ್ಕಿಲ್ಲ ಮತ್ತು ಅವರು ಭಾರತೀಯರಲ್ಲ! ಇದಕ್ಕೆ ಸಾವರ್ಕರ್, ಗೋಲ್ವಲ್ಕರ್ ಜೋಡಿ ಸೂಚಿಸುವ ಪರಿಹಾರೋಪಾಯವೇನು? ಹಿಂದೂಯೇತರರು ಹಿಂದೂ ಸಂಸ್ಕೃತಿಯನ್ನು ಅಳವಡಿಸಿಕೊಂಡರೆ ಅರ್ಥಾತ್ ಮನೆಗೆ ಮರಳಿದರೆ (ಘರ್ ವಾಪಸಿ ಆದರೆ) ಅವರು ಭಾರತೀಯರಾಗುತ್ತಾರೆ ಮತ್ತು ಅವರ ಜೀವನಕ್ರಮ ಹಿಂದೂ ಆಗುತ್ತದೆ. ಪರಿಣಾಮವಾಗಿ ಎಲ್ಲಾ ಭಾರತೀಯರ ಜೀವನಕ್ರಮ ಒಂದೇ ಆಗುತ್ತದೆ. ಅಥವಾ ಬೇರೊಂದು ರೀತಿಯಲ್ಲಿ ಹೇಳುವುದಾದರೆ ಭಾರತದಲ್ಲಿ ಏಕರೂಪದ ಹಿಂದೂತ್ವ ಸಂಸತಿ ನಿರ್ಮಾಣವಾಗುತ್ತದೆ!

ಸಾವರ್ಕರ್, ಗೋಲ್ವಲ್ಕರ್ ಮಾತುಗಳ ಅಂತರಾರ್ಥಕ್ಕೂ, ನ್ಯಾ। ವರ್ಮರ ಹಿಂದೂತ್ವ, ಭಾರತೀಕರಣದ ಮಾತುಗಳಿಗೂ ಯಾವುದೇ ವ್ಯತ್ಯಾಸವೇನೂ ಇರುವಂತಿಲ್ಲ. ವಾಸ್ತವದಲ್ಲಿ


ವಿಶ್ಲೇಷಣೆ

ಮನೋಹರ್ ಜೋಶಿ ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯ ನೀಡಿದ ಈ ವಿವಾದಾತ್ಮಕ ತೀರ್ಪು ಧರ್ಮ ಮಿಶ್ರಿತ ರಾಜಕೀಯ ಸಿದ್ಧಾಂತವಾಗಿರುವ ಹಿಂದೂತ್ವವನ್ನು ತಿಳಿದೋ ತಿಳಿಯದೆಯೋ ನ್ಯಾಯಸಮ್ಮತಗೊಳಿಸಿರುವುದು ಸಂಘ ಪರಿವಾರದ ಬಲಪಂಥೀಯ ರಾಜಕಾರಣಕ್ಕೆ, ಅದರ ಜಾತ್ಯತೀತತೆ ವಿರೋಧಿ ಆಂದೋಳನಕ್ಕೆ ಜಂಘಾಬಲ ಒದಗಿಸಿದಂತಾಗಿದೆ. ಬಿಜೆಪಿ ಪಾಲಿಗೆ ರೊಟ್ಟಿ ಜಾರಿ ತುಪ್ಪದಲ್ಲಿ ಬಿದ್ದಂತಾಗಿದೆ. ಅದು ಇದನ್ನು ಅಂತಿಮ ತೀರ್ಪೆಂದು ಹೇಳಿಕೊಂಡಿತಲ್ಲದೆ ಸ್ವಲ್ಪವೂ ತಡಮಾಡದೆ ಅದನ್ನು ತನ್ನ ಚುನಾವಣಾ ಪ್ರಣಾಳಿಕೆಗಳಲ್ಲಿ ಬಳಸಿಕೊಂಡು ಭಾರಿ ರಾಜಕೀಯ ಲಾಭವನ್ನು ಬಾಚಿಕೊಳ್ಳತೊಡಗಿದೆ. ಈಗಂತೂ ಧರ್ಮದ ನೆಲೆಯಲ್ಲಿ ಮತಯಾಚನೆ, ಚುನಾವಣಾಪೂರ್ವದ ಸಮಾಜೋತ್ಸವಗಳು, ದ್ವೇಷದ ಭಾಷಣಗಳು ಮತ್ತಿತರ ಕೋಮುವಾದಿ ಚಟುವಟಿಕೆಗಳಿಗೆ ಅಡೆತಡೆ ಇಲ್ಲವೆಂದಾಗಿದೆ. 2014ರ ಚುನಾವಣೆಗಳ ತರುವಾಯ ಎನ್‌ಡಿಎ ಸರಕಾರ ಅಧಿಕಾರಕ್ಕೆ ಬಂದ ನಂತರದಲ್ಲಂತೂ ಏಕರೂಪದ ಹಿಂದೂ ಸಂಸತಿಯನ್ನು ಹೇರುವ ಪ್ರಯತ್ನಗಳು ಶರವೇಗ ಪಡೆದುಕೊಂಡಿರುವುದನ್ನು ಗಮನಿಸಬಹುದಾಗಿದೆ. ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ವಿಶ್ಲೇಷಿಸಿರುವ ಕಾನೂನು ವಿಮರ್ಶಕ ಮನೋಜ್ ಮಿಟ್ಟಾ "ಸುಪ್ರೀಂ ಕೋರ್ಟ್ 1996ರಲ್ಲಿ ಹಿಂದೂತ್ವಕ್ಕೆ ಕ್ಲೀನ್ ಚಿಟ್ ನೀಡಿರುವುದು ರಾಜಕೀಯವಾಗಿ ಅತ್ಯಂತ ವಿನಾಶಕಾರಿ ಹೆಜ್ಜೆಯಾಗಿದೆ. ಅದರಿಂದೀಚೆಗೆ ಸಂಘಪರಿವಾರ ತನ್ನ ನೈತಿಕ ಪೊಲೀಸ್‌ಗಿರಿ, ಮತಾಂತರ, ಲವ್ ಜಿಹಾದ್, ಕೋಮು ದಂಗೆ ಮುಂತಾದ ?ಮತೀಯ? ಅಸಹಿಷ್ಣುತೆಯ ಚಟುವಟಿಕೆಗಳನ್ನು ತಾರ್ಕಿಕ ವಿವರಣೆಗಳ ಮೂಲಕ ತೇಲಿಸಿಬಿಡಲು ಈ ತೀರ್ಪನ್ನು ಬಳಸಿಕೊಂಡಿದೆ. .....1996ರ ಹಿಂದೂತ್ವ ಕುರಿತ ತೀರ್ಪನ್ನು ಕಾನೂನು ರೀತ್ಯಾ ರದ್ದುಗೊಳಿಸುವ ಬಗ್ಗೆ ಈಗಲಾದರೂ ರಾಜಕೀಯ ಒಮ್ಮತಕ್ಕೆ ಬರಬೇಕಿದೆ" (ಟೈಮ್ಸ್ ಆಫ್ ಇಂಡಿಯ 'ದೆಹಲಿ' 24-2-2009).

ಡಾ. ಅಂಬೇಡ್ಕರ್‌ರಂತಹ ಹಿಂದೂತ್ವದ ಕಟ್ಟಾ ವಿರೋಧಿಯನ್ನು ಕೂಡಾ ಹಿಂದೂತ್ವ ಪಾಳಿಯದೊಳಕ್ಕೆ ಸೇರಿಸಿಕೊಳ್ಳುವ ಪ್ರಯತ್ನ ನಡೆಯುತ್ತಿರುವಂತಹ ಇಂದಿನ ಅಪಾಯಕಾರಿ ಸನ್ನಿವೇಶದಲ್ಲಿ ನಾವೆಲ್ಲರೂ, ಅದರಲ್ಲೂ ವಿಶೇಷವಾಗಿ ದಲಿತರು, ಅಂಬೇಡ್ಕರ್ ತನ್ನ 'ಪಾಕಿಸ್ತಾನ ಅಥವಾ ಭಾರತದ ವಿಭಜನೆ' (ಮಹಾರಾಷ್ಟ್ರ ಸರಕಾರ, 1990-1946ರ ಆವೃತ್ತಿಯ ಮರುಮುದ್ರಣ?, ಪುಟ 358) ಎಂಬ ಕೃತಿಯಲ್ಲಿ ಕೊಟ್ಟಿರುವ ಎಚ್ಚರಿಕೆಯನ್ನು ಜ್ಞಾಪಿಸಿಕೊಳ್ಳುವುದು ಅತ್ಯಾವಶ್ಯಕವಾಗಿದೆ:

"ಹಿಂದೂ ರಾಷ್ಟ್ರ ಎಂಬುದು ಸ್ಥಾಪಿಸಲ್ಪಟ್ಟರೆ ಅದು ಈ ದೇಶಕ್ಕೆ ಬಂದೊದಗುವ ಅತಿ ಭೀಕರ ವಿಪತ್ತು. ಅದು ಸ್ವಾತಂತ್ರ್ಯ ಸಮಾನತೆ ಮತ್ತು ಸಹೋದರತೆಗಳಿಗೆ ಆಪತ್ಕಾರಿಯಾಗಿರುವುದರಿಂದ ಅದಕ್ಕೂ ಪ್ರಜಾಪ್ರಭುತ್ವಕ್ಕೂ ಹೊಂದಾಣಿಕೆ ಆಗುವುದಿಲ್ಲ, ಎಷ್ಟೇ ಬೆಲೆಯನ್ನಾದರೂ ತೆತ್ತು ಹಿಂದೂ ರಾಷ್ಟ್ರವನ್ನು ತಡೆಗಟ್ಟಬೇಕು."

ಆದರೆ ಪ್ರಶ್ನೆ ಏನೆಂದರೆ 2015ರಲ್ಲಾದರೂ ಬಿಜೆಪಿಯೇತರ ರಾಜಕೀಯ ಪಕ್ಷಗಳು ಮತ್ತು ಕಾನೂನು ವಿದ್ಯಾರ್ಥಿಗಳು ಒಂದುಗೂಡಿ ಸರ್ವೋಚ್ಚ ನ್ಯಾಯಾಲಯದ ಈ ದೋಷಯುಕ್ತ ತೀರ್ಪನ್ನು 5 ಅಥವಾ 7 ಸದಸ್ಯರ ಸಾಂವಿಧಾನಿಕ ಪೀಠದ ಮೂಲಕ ಇತ್ಯರ್ಥಗೊಳಿಸಲು ಪಣತೊಡಬಲ್ಲರೇ? ಆ ಮೂಲಕ ಅಧಃಪತನದತ್ತ ಸಾಗುತ್ತಿರುವ ಜಾತ್ಯತೀತ ಮೌಲ್ಯಗಳನ್ನು ರಕ್ಷಿಸಲು, ಆಪತ್ಕಾರಿ ಹಿಂದೂ ರಾಷ್ಟ್ರ ಸ್ಥಾಪನೆಯನ್ನು ತಡೆಗಟ್ಟಲು ಮತ್ತು ಅಂತಿಮವಾಗಿ ಹಳಿ ತಪ್ಪುತ್ತಿರುವ ದೇಶದ ಪ್ರಜಾಪ್ರಭುತ್ವವನ್ನು ಮತ್ತೆ ಹಳಿಗೇರಿಸಲು ಮುಂದಾಗುವರೇ?



(ಆಧಾರ: ವಿವಿಧ ಮೂಲಗಳು)

■ ಸುರೇಶ್ ಭಟ್ ಬಾಕ್ರಬೈಲ್

ಮಾನವೀಯ ಮೌಲ್ಯಗಳ ಉದಾಹರಣೆಗಳು ಈ ಪ್ರಸಂಗಗಳು

ನನ್ನ ಸ್ನೇಹಿತರೊಬ್ಬರು ಈಚೆಗೆ ತೀರಿಹೋದರು. ಅವರ ಜಾತಿಯಾದ ಬ್ರಾಹ್ಮಣ ವಿಧಿ ವಿಧಾನಗಳಿಗನುಸಾರವಾಗಿ ಅಂತ್ಯಕ್ರಿಯೆಯು ಅವರ ಊರಾದ ಹಾವೇರಿ ಜಿಲ್ಲೆಯ ಹಾನಗಲ್ಲಿನಲ್ಲಿ ನಡೆಯಿತು. ಅಂತಿಮ ನಮನ ಸಲ್ಲಿಸಲು ಬಂದಿದ್ದ ಬ್ರಾಹ್ಮಣರಷ್ಟೇ ಅಲ್ಲದೆ, ದಲಿತರು, ಮುಸ್ಲಿಮರು, ಲಿಂಗಾಯತರು ಹೀಗೆ ಎಲ್ಲರಿಂದಲೂ ಪುರೋಹಿತರು ಎಳ್ಳು-ನೀರು ಬಿಡಿಸಿದರು. ಎಲ್ಲರೂ ತುಂಬು ಹೃದಯದಿಂದ, ಭಾರವಾದ ಮನಸ್ಸಿನಿಂದ ಎಳ್ಳು-ನೀರು ಬಿಟ್ಟರು.

***

ತೊಂಬತ್ತರ ದಶಕದಲ್ಲಿ ನಾನು ಬ್ಯಾಂಕ್ ಅಧಿಕಾರಿಯಾಗಿ ಗುಜರಾತ್‌ನ ವಲ್ಸದ್ ಎಂಬ ಪಟ್ಟಣದಲ್ಲಿ ಕಾರ್ಯ ನಿರ್ವಹಿಸುತ್ತಿದ್ದೆ. ನನ್ನ ಮನೆಯ ಸಮೀಪದಲ್ಲಿ ವಾಸವಿದ್ದ ಮುಸ್ಲಿಂ ಕುಟುಂಬದ ಸದಸ್ಯರೊಬ್ಬರು ತೀರಿಹೋದರು. ಶವವನ್ನು ಮಣ್ಣು ಮಾಡಲು ಹೊರಟಿದ್ದ ಬಂಧುಗಳೊಡನೆ ಸುತ್ತಮುತ್ತಲಿನ ಗುಜರಾತಿ ಹಿಂದೂಗಳೂ ಮತ್ತು ಜೈನರೂ ಸೇರಿಕೊಂಡರು. ನಾನೂ ಅವರೆಲ್ಲರ ಜೊತೆಗೂಡಿದೆ.

***



ಅರವತ್ತರ ದಶಕದಲ್ಲಿ ನಾನು ದಾವಣಗೆರೆಯಲ್ಲಿ ಪ್ರೌಢಶಾಲಾ ವಿದ್ಯಾರ್ಥಿ. ನನ್ನ ತಂದೆಯವರು ತೀವ್ರ ಅಸೌಖ್ಯದಿಂದ ಹಾಸಿಗೆ ಹಿಡಿದು ಕೊನೆಯ ದಿನಗಳನ್ನು ಎಣಿಸುತ್ತಿದ್ದರು. ನಾವು ಬ್ರಾಹ್ಮಣರಾದರೂ ನಮ್ಮ ತಂದೆಯವರಿಗೆ ವಿವಿಧ ಜಾತಿ-ಧರ್ಮಗಳ ಸ್ನೇಹಿತರಿದ್ದರು. ಆ ಪೈಕಿ ಮುಸ್ಲಿಂ ದರ್ಜಿ (ಸಿಂಪಿಗ-ಟೈಲರ್) ಒಬ್ಬರು ನಿತ್ಯವೂ ನಮ್ಮ ಮನೆಗೆ ಬಂದು, ಹಾಸಿಗೆ ಹಿಡಿದಿದ್ದ ನನ್ನ ತಂದೆಯವರೊಡನೆ ಒಂದಷ್ಟು ಹೊತ್ತು ಆತ್ಮೀಯವಾಗಿ ಮಾತನಾಡಿ ಹೋಗುತ್ತಿದ್ದರು. ಫೋಟೋ ಸ್ಟುಡಿಯೋ ಮಾಲೀಕರಾಗಿದ್ದು ಸಾಕಷ್ಟು ಗಣ್ಯ ವ್ಯಕ್ತಿಗಳ ಸ್ನೇಹ ಹೊಂದಿದ್ದ ನನ್ನ ತಂದೆಯವರಿಗೆ ಆ ದರ್ಜಿ ಮಿತ್ರ ಅತ್ಯಂತ ಆಪ್ತರಾಗಿದ್ದರು. (ಖ್ಯಾತ ಸಾಹಿತಿ ಬಿ. ಶಿವಮೂರ್ತಿ ಶಾಸ್ತ್ರಿಗಳು, ಖ್ಯಾತ ಸಂಗೀತಗಾರ ಪಿ. ಕಾಳಿಂಗರಾಯರು ಮೊದಲಾದ ಗಣ್ಯರು ಆ ದಿನಗಳಲ್ಲಿ ನನ್ನ ತಂದೆಯವರನ್ನು ಮಾತನಾಡಿಸಿ ಹೋಗಿದ್ದರು.)

***

ನಾನು ಕಾಲೇಜು ಪ್ರವೇಶಿಸಿದ್ದೆ. ನನ್ನ ತಂದೆಯವರು ನಿಧನರಾದರು. ನಾನೇ ದೊಡ್ಡ ಮಗ. ತಾಯಿಯನ್ನೂ ತಮ್ಮಂದಿರನ್ನೂ ತಂಗಿಯರನ್ನೂ ಸಾಕಬೇಕು. ಆದಾಯ ನಾಸ್ತಿ. ತಂದೆಯವರ ಕ್ರಿಯಾವಿಧಿಗಳಿಗೂ ಪರದಾಡಬೇಕಾದ ಆರ್ಥಿಕ ಮುಗ್ಗಟ್ಟು. ಕ್ರಿಯಾವಿಧಿಯಲ್ಲಿ ನಾನು ತೊಡಗಿದ್ದಾಗ, ಅನಿರೀಕ್ಷಿತವಾಗಿ ನನ್ನ ಮನೆಗೆ ಬಂದ ನನ್ನ ಸಹಪಾಠಿ ಹಾಗೂ ಆಪ್ತಮಿತ್ರ ಒಂದಷ್ಟು ಹಣವನ್ನು ನನ್ನ ಕೈಗೆ ತುರುಕಿ ಹೋದ. ತನ್ನ ಬಳಿಯಿದ್ದ ಹಣ ಮಾತ್ರವಲ್ಲದೆ ಆತ ಇತರ ಸಹಪಾಠಿ ಮಿತ್ರರಿಂದಲೂ ಹಣ ಸಂಗ್ರಹಿಸಿ ತಂದು ನನಗೆ ನೀಡಿದ್ದ. ಆತ ಹಿಂದುಳಿದ ವರ್ಗಕ್ಕೆ ಸೇರಿದವನು. ಮುಂದೆ ಆತ ಕರ್ನಾಟಕದ 'ಹಿಂದುಳಿದ ವರ್ಗಗಳ ಶಾಶ್ವತ ಆಯೋಗ'ದ ಅಧ್ಯಕ್ಷ ಸ್ಥಾನಕ್ಕೆ ಏರಿದ. ಪ್ರಸ್ತುತ, ಆ ನನ್ನ ಆಪ್ತಮಿತ್ರ ಕರ್ನಾಟಕದ ಅಡ್ವೊಕೇಟ್ ಜನರಲ್. ಅವರೇ ಪ್ರೊಫೆಸರ್ ರವಿವರ್ಮಕುಮಾರ್.

***

ಡಿ.ಕೆ. ರವಿ ಅವರ ಮರಣಾನಂತರ ನಡೆದ ಪ್ರತಿಭಟನೆಗಳಲ್ಲಿ ಎಲ್ಲ ಜಾತಿ-ವರ್ಗಗಳ ಹಿಂದೂಗಳು, ಮುಸ್ಲಿಮರು, ಕ್ರಿಶ್ಚಿಯನ್ನರು ಎಲ್ಲರೂ ಇದ್ದರು. 'ರವಿ ಓರ್ವ ಹಿಂದೂ; ಒಕ್ಕಲಿಗ; ಮುಖ್ಯಮಂತ್ರಿ ಓರ್ವ ಹಿಂದೂ; ಕುರುಬ; ನಾವ್ಯಾಕೆ ಪ್ರತಿಭಟನೆಗೆ ಸೇರಿಕೊಳ್ಳಬೇಕು' ಎಂದು ಯಾರೂ ಯೋಚಿಸಲಿಲ್ಲ. ಮಾನವೀಯತೆಯ ಮುಂದೆ ಯಾವ ಜಾತಿ-ಧರ್ಮಗಳೂ ಇಲ್ಲ ಎಂಬ ಲೋಕಸತ್ಯದ ಅರಿವು ಸಮಾಜಕ್ಕಿದೆಯೆಂಬುದು ರವಿ ಪ್ರಕರಣ ಕುರಿತ ಪ್ರತಿಭಟನೆಗಳಲ್ಲಿ ಸಾಬೀತಾಗಿತ್ತು.

***


ಬೆಂಗಳೂರಿನಲ್ಲೋ, ರಾಜ್ಯದ ಬೇರೆಡೆಯೋ, ದೇಶದ ಇನ್ನೆಲ್ಲೋ ಕೋಮು ಗಲಭೆಯಾದಾಗ, ಆ ಸುದ್ದಿಯು ಬಿಸಿಯೇರಿಸಿಕೊಂಡ ದಿನಗಳಲ್ಲೇ ನಾನು ಬೇಕೆಂದೇ ಬೆಳಗಿನಿಂದ ರಾತ್ರಿಯವರೆಗೂ ನಗರ ಸಾರಿಗೆ ಬಸ್ಸುಗಳಲ್ಲಿ ಬೆಂಗಳೂರು ಸುತ್ತುತ್ತೇನೆ; ವಿವಿಧ ಕೋಮುಗಳವರು ದಟ್ಟವಾಗಿರುವ ಸೂಕ್ಷ್ಮ ಪ್ರದೇಶಗಳಲ್ಲಿ ಕಾಲ್ನಡಿಗೆಯಲ್ಲಿ ಅಡ್ಡಾಡುತ್ತೇನೆ. ಓರ್ವ ಬರಹಗಾರನಾಗಿ ನಿಜಸ್ಥಿತಿಯನ್ನು ಕಣ್ಣಾರೆ ಕಂಡು ಅರಿಯುವುದು ಮತ್ತು ಸಮಾಜ ಸೇವಕನಾಗಿ ಕೋಮು ಸೌಹಾರ್ದಕ್ಕೆ ನನ್ನ ಕೈಲಾಗುವ ಕೊಡುಗೆಯನ್ನು ನೀಡುವುದು (ಸೌಹಾರ್ದ ಹುಟ್ಟಿಸುವ ಪ್ರಯತ್ನ ಮಾಡುವುದು) ಇವು ನನ್ನ ಆ ದಿನಗಳ ಸಂಚಾರದ ಉದ್ದೇಶ. ನಾಲ್ಕು ದಶಕಗಳಿಂದ ನಾನು ಸಾಗಿಸಿಕೊಂಡು ಬರುತ್ತಿರುವ ಈ ಕಾರ್ಯದಲ್ಲಿ ನನಗೆ ಒಂದೇ ಒಂದು ಸಲ ಕೂಡ, ಬಸ್ಸಿನಲ್ಲಾಗಲೀ, ಗಲ್ಲಿಗಳಲ್ಲಾಗಲೀ, ಅನ್ಯ ಕೋಮಿನ ವಿರುದ್ಧ ಕೆಂಡ ಕಾರುವ ಜನರಾಗಲೀ, ಕೋಮು ಗಲಭೆಗೆ ಕಾರಣವಾದ ಕೋಮಿನವರ ಮೇಲೆ ಹಲ್ಲೆಗೆತ್ನಿಸುವ ಇನ್ನೊಂದು ಕೋಮಿನವರಾಗಲೀ, ಹಲ್ಲೆಯ ಭೀತಿಯಿಂದ ನಡುಗುವವರಾಗಲೀ ಕಂಡಿಲ್ಲ, ಎಲ್ಲಿಯೂ ಯಾವ ಕೋಮುಗಲಭೆಯೂ ಆಗಿಲ್ಲವೆಂಬಂತೆ ಎಲ್ಲ ಕೋಮುಗಳವರೂ ಅಕ್ಕಪಕ್ಕದಲ್ಲೇ ಕೂತಿದ್ದು, ಓಡಾಡಿಕೊಂಡು, ಎಂದಿನಂತೆ ವ್ಯವಹರಿಸುವುದನ್ನೇ ನಾನು ನೋಡಿದ್ದೇನೆ.

***

ಈ ಎಲ್ಲ ಘಟನೆಗಳನ್ನು ನಾನಿಲ್ಲಿ ಬರೆದಿರುವುದರ ಉದ್ದೇಶ, ವಾಸ್ತವದ ಅನಾವರಣ. ಕೋಮು ದ್ವೇಷವೆಂಬುದು ಭಾರತದ ಸಾಮಾನ್ಯ ಪ್ರಜೆಗಳ ಹತ್ತಿರವೂ ಸುಳಿದಿಲ್ಲ. ಈ ದೇಶದ ಪ್ರಜೆಗಳಾದ ನಾವೆಲ್ಲರೂ ಸೌಹಾರ್ದವನ್ನೇ ಬಯಸುತ್ತಿದ್ದೇವೆ ಮತ್ತು ಪರಸ್ಪರ ಸೌಹಾರ್ದದಿಂದಲೇ ಬಾಳುತ್ತಿದ್ದೇವೆ. ವೋಟಿಗಾಗಿ ರಾಜಕಾರಣಿಗಳು, ಪ್ರತಿಷ್ಠೆಗಾಗಿ ಧರ್ಮಗುರುಗಳು, ಪ್ರಚಾರಕ್ಕಾಗಿ ಹುಸಿ ಚಿಂತಕರು ಮತ್ತು ಪೂರ್ವಗ್ರಹ ಪೀಡೆಯಿಂದಾಗಿ ಅಥವಾ ದುಃಸ್ವಾರ್ಥಕ್ಕಾಗಿ ಮೂಲಭೂತವಾದಿಗಳು ಇವರುಗಳು ಮಾತ್ರ ಜನಸಾಮಾನ್ಯರಲ್ಲಿ ಮುಖ್ಯವಾಗಿ ಯುವಕರಲ್ಲಿ ಕೋಮು ದ್ವೇಷದ ಭಾವನೆ ಬಿತ್ತಿ ಆ ಬೆಂಕಿಯಲ್ಲಿ ತಮ್ಮ ಬೇಳೆ ಬೇಯಿಸಿಕೊಳ್ಳಲೆತ್ನಿಸುತ್ತಿದ್ದಾರೆ. ಈ ವಾಸ್ತವದ ಅರಿವು ಜನಸಾಮಾನ್ಯರಲ್ಲಿ ವ್ಯಾಪಕವಾಗಬೇಕು. ಆಗ ಯಾವ 'ಕೋಮು ವಿಭಜಕ ಶಕ್ತಿ'ಯೂ ಈ ದೇಶದ ಸೌಹಾರ್ದಮಯ ವಾತಾವರಣವನ್ನು ಕದಡಲಾರದು. ಇಂಥ ಅರಿವಿಗಾಗಿ ಅನವರತ ಪ್ರಯತ್ನಿಸುವುದು ಬರಹಗಾರನಾದ-ಚಿಂತಕನಾದ ನನ್ನ ಕರ್ತವ್ಯ ಎಂದು ಭಾವಿಸಿರುವವನು ನಾನು. ಸೌಹಾರ್ದದ ಜೊತೆಗೆ, ಸರ್ವಧರ್ಮ ಸಮನ್ವಯ ಭಾವ, ಮಾನವಧರ್ಮದ ಪಾಲನೆ ಮತ್ತು ಮಾನವೀಯತೆ, ಇವುಗಳಿಗೂ ಕೂಡ ಮೇಲಿನ ಪ್ರಸಂಗಗಳು ಉತ್ತಮ ಉದಾಹರಣೆಗಳು.

■ ಎಚ್.ಆನಂದರಾಮ ಶಾಸ್ತ್ರಿ

ಸ, ಶ, ಷಗಳ ನಡುವೆ ವ್ಯತ್ಯಾಸ ಗೊತ್ತಿಲ್ಲದ ಮುಖ್ಯಮಂತ್ರಿ




"ಸಿದ್ದರಾಮಯ್ಯನವರೇ ಹುಸಾರು - ನಾಯ್ತು ಬರುತ್ತಿದ್ದಾರೆ" - ಇದು ಕನ್ನಡಪ್ರಭ ಸಂಪಾದಕರ ಇತ್ತೀಚಿನ ಲೇಖನವೊಂದರ ಶೀರ್ಷಿಕೆ (ಕನ್ನಡಪ್ರಭ 23-04-2015 ಪುಟ - 6). ತನ್ನ ಲೇಖನದಲ್ಲಿ ಅವರು ಹೇಳುವ ಪ್ರಕಾರ ಆಧ್ಯಾತ್ಮಿಕ ಗುರುವೊಬ್ಬರು ತಾವು ಸ್ಥಾಪಿಸಲು ಉದ್ದೇಶಿಸಿರುವ ಮೂಲಭೂತ ವಿಜ್ಞಾನ ಕೇಂದ್ರಕ್ಕೆ ಬೆಂಗಳೂರಿನಲ್ಲಿ 150 ಎಕ್ರೆ ಜಮೀನು ನೀಡುವಂತೆ ಬಹಳ ಹಿಂದೆಯೇ ರಾಜ್ಯ ಸರಕಾರವನ್ನು ಕೇಳಿದ್ದರು. ಆ ಬಗ್ಗೆ ಸರಕಾರದಿಂದ ಇದುವರೆಗೂ ಯಾವ ಪ್ರತಿಕ್ರಿಯೆಯೂ ಇಲ್ಲ, ಆದರೆ ಆಂಧ್ರದ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಸದ್ರಿ ಆಧ್ಯಾತ್ಮಿಕ ಗುರುವಿಗೆ ಎಲ್ಲ ಅನುಕೂಲ ಮಾಡಿಕೊಟ್ಟು ಆ ವಿಜ್ಞಾನ ಕೇಂದ್ರವನ್ನು ತನ್ನ ರಾಜ್ಯಕ್ಕೆ ಬರಮಾಡಿಕೊಳ್ಳುವ ಉತ್ಸಾಹದಲ್ಲಿದ್ದಾರಂತೆ. ಆ ಗುರುವಿಗಾದರೋ ಬೆಂಗಳೂರು ಬಿಟ್ಟು ಹೋಗುವ ಮನಸ್ಸಿಲ್ಲ, ರಾಜ್ಯ ಸರಕಾರ ಈಗಲಾದರೂ ಎಚ್ಚೆತ್ತುಕೊಂಡು ತಡಮಾಡದೆ ಅವರ ಬೇಡಿಕೆಯನ್ನು ಪೂರೈಸಬೇಕು ಎಂಬುದು ಸಂಪಾದಕರ ಆಗ್ರಹ. ಅದಕ್ಕಾಗಿ ಅವರು ಮುಖ್ಯಮಂತ್ರಿಗೆ ಹೇಳುತ್ತಿದ್ದಾರೆ, "ಸಿದ್ದರಾಮಯ್ಯನವರೇ ಹುಸಾರು - ನಾಯ್ಡು ಬರುತ್ತಿದ್ದಾರೆ".

ಸಂಪಾದಕರು ಹೇಳುವ ಈ ಆಧ್ಯಾತ್ಮಿಕ ಗುರು ಯಾರು? ಅವರು ಶುರು ಮಾಡಲು ಹೊರಟಿರುವ ಸಂಸ್ಥೆಯಿಂದ ಏನು ಪ್ರಯೋಜನ? ಎಷ್ಟೇ ಘನವಾದ ಉದ್ದೇಶಕ್ಕಾದರೂ ಬೆಂಗಳೂರಿನಲ್ಲಿ 150 ಎಕ್ರೆ ಜಮೀನು ಕೊಡುವುದಕ್ಕಾಗುತ್ತದಾ? ಈ ಪ್ರಶ್ನೆಗಳೆಲ್ಲ ಹಾಗಿರಲಿ. ಲೇಖನದಿಂದ ನಮಗೆ ಶಾಕ್ ಹೊಡೆಸಿಕೊಂಡ ಹಾಗಾಗುವುದು ಅದರ ಶೀರ್ಷಿಕೆಯ 'ಹುಸಾರು' ಎಂಬ ಪದದಿಂದ. ರಾಜ್ಯದ ಮುಖ್ಯಮಂತ್ರಿ ಮೈಸೂರು ಗ್ರಾಮಾಂತರ ಪ್ರದೇಶದ ಕುರುಬ ಸಮುದಾಯದವರಾಗಿರುವುದರ ಬದಲು ಬ್ರಾಹ್ಮಣರಾಗಿದ್ದರೆ ಸಂಪಾದಕರು ಈ ಪದ ಬಳಸುತ್ತಿದ್ದರಾ? ಎಂದು ಒಂದು ಕ್ಷಣ ಯೋಚಿಸಿ. ಸಿದ್ದರಾಮಯ್ಯನವರ ಮಾತಿನಲ್ಲಿ ಒಮ್ಮೊಮ್ಮೆ ಮೈಸೂರು ಸೀಮೆಯ ಬಹುಜನರ ಆಡು ಮಾತಿನ ಬನಿ ಕಾಣಿಸುವುದು ನಿಜ. ಅವರು ಸಭೆ ಸಮಾರಂಭಗಳಲ್ಲಿ 'ಬಾಂಬ್ರ ಹಾಗೆ ತಿದ್ಕಿ ತಿದ್ಕಿ' (ಪಿ. ಲಂಕೇಶ್- 'ಸಂಕ್ರಾಂತಿ' ನಾಟಕದಲ್ಲಿ) ಮಾತಾಡುವುದಕ್ಕಿಂತ ಅದೇ ಹೆಚ್ಚು ಸೊಗಸಾದ ಕನ್ನಡ. ಆದರೆ ಲೇಖನದ ಶೀರ್ಷಿಕೆ ಅವರ ಮನೆ ಮಾತಿನ ಸೊಗಸನ್ನು ಸೂಚಿಸುತ್ತಿಲ್ಲ, ಅದು ಸಿದ್ದರಾಮಯ್ಯ ಆಡಿದ ಮಾತಲ್ಲ, ಸಿದ್ದರಾಮಯ್ಯನವರಿಗೆ ಸಂಪಾದಕರು ಹೇಳುತ್ತಿರುವ ಮಾತು ಅದು. ಸಾಮಾಜಿಕವಾಗಿ ಸಿದ್ದರಾಮಯ್ಯನವರ ಸ್ಥಾನ ಯಾವುದು? ಎಂದು ಆ ಮುಖಾಂತರ ಸಂಪಾದಕರು ಹೇಳುತ್ತಿದ್ದಾರೆ. ಆ ಮಾತು ಖಂಡಿತ ಅವರಿಬ್ಬರ ನಡುವೆ ಸಮಾನ ನೆಲೆಯದ್ದಲ್ಲ, ಸಿದ್ದರಾಮಯ್ಯನವರನ್ನು ಲೇವಡಿ ಮಾಡಲೆಂದೇ ತಮ್ಮ ಲೇಖನದ ಶೀರ್ಷಿಕೆಯನ್ನು ಹಾಗೆ ಬರೆದಿರುವಂತೆ ಕಾಣುತ್ತದೆ.

ಕನ್ನಡಪ್ರಭ ಸಂಪಾದಕರು ಇದನ್ನೆಲ್ಲ ಯೋಚಿಸಿ ಹಾಗೆ ಮಾಡಿರಲಾರರು. ಅದು ಅವರ ಹಾಸ್ಯದ ಪರಿಯೂ ಆಗಿರಬಹುದು. ಅಥವಾ ಆ ಮಾತು ನಿರುದ್ದಿಶ್ಯವೇ ಇರಬಹುದು. ಆದರೆ ಭಾಷೆಯ ಬಳಕೆಯಲ್ಲಿ ಜಾತಿ ತಾರತಮ್ಯ ವ್ಯಕ್ತಗೊಳ್ಳುವುದೇ ಹಾಗೆ; ಅಪ್ರಜ್ಞಾಪೂರ್ವಕವಾಗಿ; ಅದೇ ಸಹಜವೆಂಬಂತೆ. ಈಗಲೂ ಕೆಳಜಾತಿಯ ಹಣ್ಣು ಹಣ್ಣು ಮುದುಕರು ಸಹ ಮೇಲು ಜಾತಿಯ ತೊಟ್ಟಿಲ ಕೂಸುಗಳನ್ನೂ ನೀವು ತಾವು ಎಂದು ಗೌರವ ಕೊಟ್ಟು ಮಾತಾಡುವುದು, ಅದಕ್ಕೆ ಪ್ರತಿಯಾಗಿ ಈ ಮೇಲು ಜಾತಿಯ ಮಕ್ಕಳು ಅವರನ್ನು "ಹೋಗೋ ಬಾರೋ" ಎನ್ನುವುದು ಅತ್ಯಂತ ಸಹಜವೆಂಬಂತೆ ಕಾಣುತ್ತದೆ. ಈ ಭಾಷೆ ಯಜಮಾನಿಕೆ ಮತ್ತು ವಿಧೇಯತೆಗಳ ಅಸಮಾನತೆಯನ್ನು ತನ್ನ ಒಡಲಲ್ಲೇ ಇರಿಸಿಕೊಂಡಿದೆ ಎಂದು ಯಾವತ್ತೂ ಅನಿಸುವುದಿಲ್ಲ, ಇದು ಭಾಷೆಯ ಅವಗುಣವಲ್ಲ, ನಮ್ಮ ಬದುಕು ಇರುವುದೇ ಹಾಗೆ. ನಮ್ಮ ಮೊದಲ ತಲೆಮಾರಿನ ಕನ್ನಡ ಪಂಡಿತರು ಕೆಳಜಾತಿಯ ವಿದ್ಯಾರ್ಥಿಗಳನ್ನು 'ಸಶಷ ನಾಲಗೆಯಲ್ಲಿ ತಿರುಗದ ಶೂದ್ರ ಮುಂಡೇವು' ಎಂದು ಹೀಗಳೆಯುತ್ತಿದ್ದರು. ಯಾರಿಗೂ ಅದು ವಿಶೇಷವಾಗಿ ತಲೆ ಕೆಡಿಸಿಕೊಳ್ಳಬೇಕಾದದ್ದು ಎಂದು ಅನ್ನಿಸುತ್ತಿರಲಿಲ್ಲ, ಕನ್ನಡಪ್ರಭ ಸಂಪಾದಕರ ಮೇಲೆ ಹೇಳಿದ ಲೇಖನದ ಶೀರ್ಷಿಕೆಯೂ ಅದೇ ಸಂಸ್ಕೃತಿಯ ಬೈಪ್ರಾಡಕ್ಟ್.

ಇದೆಲ್ಲ ಅತಿಯಾಯಿತು ಎಂದು ನಿಮಗೆ ಅನ್ನಿಸಬಹುದು. ಮುಖ್ಯ ಮಂತ್ರಿಯವರ ಜಾತಿ ಮತ್ತು ಭಾಷೆಯನ್ನು ಆಡಿಕೊಂಡು ಗೇಲಿ ಮಾಡುವುದು ಸಂಪಾದಕರ ಉದ್ದೇಶವಾಗಿರಲಾರದು. ಆದರೆ ಈ ಬಗೆಯ ಬೆನಿಫಿಟ್ ಆಫ್ ಡೌಟ್‌ಗೆ ಅವರು ಪಾತ್ರರೆ? ಸಿದ್ದರಾಮಯ್ಯ ಮುಖ್ಯಮಂತ್ರಿ ಆದಂದಿನಿಂದ ಕನ್ನಡಪ್ರಭ ಅವರ ಸರಕಾರದ ಬಗ್ಗೆ ಅಪಪ್ರಚಾರ ನಡೆಸುತ್ತಲೇ ಬಂದಿದೆ. ಸರಕಾರದ ಪ್ರಸ್ತಾಪಿತ ಮೂಢ ನಂಬಿಕೆ, ಆಚರಣೆಗಳ ನಿಷೇಧ ಕಾಯ್ದೆ ಮಠ ಮಾನ್ಯಗಳ ನಿಯಂತ್ರಣ ಕಾಯ್ದೆ ಜಾತಿ ಜನಗಣತಿ, ಸರಕಾರಿ ಅಧಿಕಾರಿ ಡಿ.ಕೆ ರವಿಯವರ ಆತ್ಮಹತ್ಯೆ ಮುಂತಾದ ಎಲ್ಲ ವಿದ್ಯಮಾನಗಳ ಬಗೆಗೂ ಕನ್ನಡಪ್ರಭ ಅರ್ಧ ಸತ್ಯ ಮತ್ತು ಹಸಿ ಸುಳ್ಳುಗಳನ್ನೇ ಹೇಳಿತು. ಆ ಪತ್ರಿಕೆಯ ಸಂಪಾದಕರ ನಿಷ್ಠೆ ತನ್ನ ವೃತ್ತಿ ಧರ್ಮಕ್ಕಿಂತ ಹೆಚ್ಚಾಗಿ ಹಿಂದೂತ್ವದ ಸಿದ್ಧಾಂತಕ್ಕೆ ಎನ್ನುವ ಸತ್ಯ ಎಲ್ಲರಿಗೂ ಗೊತ್ತಿರುವಂತಹದ್ದೆ. ಆದರೆ ಸಿದ್ದರಾಮಯ್ಯ ತನ್ನ ಮುಖ್ಯಮಂತ್ರಿ ಪದವಿಗೆ ಅಪಾತ್ರರು ಎಂದು ಅವರು ಚಿತ್ರಿಸುವುದನ್ನು ಹೇಗೆ ವಿವರಿಸುವುದು? ವೈದಿಕ ಸಂಸ್ಕೃತಿಯೇ ಭಾರತೀಯ ಸಂಸ್ಕೃತಿ ಎಂಬ ಹಿಂದೂತ್ವ ಸಿದ್ಧಾಂತಕ್ಕೆ ಅನುಗುಣವಾಗಿ ಬ್ರಾಹ್ಮಣರ ಕನ್ನಡವೇ ಕನ್ನಡದ ಶುದ್ಧರೂಪ ಎಂಬ ಸಂಪಾದಕರ ಗ್ರಹಿಕೆಯೇ ಅದಕ್ಕೆ ಕಾರಣವಲ್ಲವೆ?



ಈ ಕಾಲದಲ್ಲೂ ಮಡಿ ಬ್ರಾಹ್ಮಣರು ಇರಬಹುದು: ಆದ[illegible] ಭಾಷೆ ಮಾತ್ರ ಯಾವತ್ತೂ ಮಡಿಯಾಗಿ ಉಳಿದದ್ದೇ ಇ[illegible] ಸದಾ ಚಲಾವಣೆಯಲ್ಲಿರುವ ರೂಪಾಯಿ ನೋಟ[illegible] ಮಲಿನವಾಗುವ ಹಾಗೆ ಭಾಷೆಯೂ ಅದರ ಮಲ[illegible] ರೂಪದಲ್ಲೇ ನಮ್ಮ ಬಳಕೆಗೆ ಸಿಗುವಂತಹದ[illegible] ಚಲಾವಣೆಯಲ್ಲಿದ್ದರೆ ಮಾತ್ರ ರೂಪಾಯಿ ನೋಟಿಗೆ ಬೆ[illegible] ಇಲ್ಲವಾದರೆ ಅದು ಗೆದ್ದಲು ಹಿಡಿಯುವ ಕಾಗದದ ಚೂ[illegible] ಭಾಷೆಯೂ ಅಷ್ಟೇ. ಚಿರಕೆಯಾಗದ, ಜನರ ನಾಲಿಗೆಯ[illegible] ಸವೆಯದ ಭಾಷೆ, ಭಾಷೆಯ ಕಳೇಬರವಷ್ಟೆ. ಉದಾಹರಣ[illegible] ಕನ್ನಡಪ್ರಭ ಸಂಪಾದಕರು ಮುಖ್ಯ ಮಂತ್ರಿಯವರನ್ನು ಲೇವ[illegible] ಮಾಡಿದ ಹುಸಾರು ಎಂಬ ಶಬ್ದದ ಮೂಲ 'ಹುಷಾ[illegible] ಕೂಡ ಶುದ್ಧ ಕನ್ನಡವಲ್ಲ, ಅದು ಹೋಶ್ಯಾರ್ ಎ[illegible] ಪರ್ಷಿಯನ್ ಮೂಲದ ಶಬ್ದದಿಂದ ಬಂದಿರುವಂತಹುದ[illegible] ಕನ್ನಡಪ್ರಭ ಸಂಪಾದಕರು ಭಾಷೆಯ ಈ ಸ್ವಧರ್ಮವ[illegible] ಇನ್ನಾದರೂ ಗಮನಿಸಬೇಕು.

■ ಜೆ. ರಾಜಶೇಖ[illegible]


ಕುರುಕ್ಷೇತ್ರ ಯುದ್ಧ ಮುದುಕರ ನೂಕಾಟವಾಗಿತ್ತೇ?

ಇತ್ತೀಚಿಗೆ ಉಡುಪಿಯ 82 ವರ್ಷದ ಪ್ರಖರ ವಿಚಾರವಾದಿ ಗೋಪಾಲ ಬಿ ಶೆಟ್ಟರ ಬರಹಗಳ ಸಂಗ್ರಹ 'ಮಿಥ್ಯೆಯೊಳಗಿನ ಸತ್ಯ' ಎಂಬ ಪುಸ್ತಕವನ್ನು ಹಾಸನದ ಖ್ಯಾತ ವಿಚಾರವಾದಿ ಲೇಖಕ ಜ.ಹೊ.ನಾರಾಯಣಸ್ವಾಮಿ ಬಿಡುಗಡೆ ಮಾಡಿದರು. ಆ ಸಂದರ್ಭದಲ್ಲಿ ಈ ಪುಸ್ತಕವನ್ನು ವಿಮರ್ಶಿಸುತ್ತಾ ಇನ್ನೊಬ್ಬ ಪ್ರಸಿದ್ಧ ವಿಚಾರವಾದಿ ಡಾ.ಭಾಸ್ಕರ್ ಮಯ್ಯ ಅವರು "ಶ್ರೀಕೃಷ್ಣ ದೇವರಾದರೆ ತನ್ನ ನೂರಾ ಇಪ್ಪತ್ತಾರನೇ ವಯಸ್ಸಿನಲ್ಲಿ ಬೇಡನ ಬಾಣದಿಂದ ತಾನೇ ಅತ್ಯಂತ ಹೀನ ಮರಣ ಹೊಂದುವುದನ್ನು ಹಾಗೂ ತನ್ನ ಯದುಕುಲ ಒಳ ಜಗಳದಿಂದ ಸಂಪೂರ್ಣ ನಾಶ ಹೊಂದುವುದನ್ನು ತಪ್ಪಿಸಲು ಯಾಕಾಗಲಿಲ್ಲ?" ಎಂದು ಪ್ರಶ್ನಿಸಿದರು.

ಆಗ ನನ್ನ ಮನದಲ್ಲಿ ಕೃಷ್ಣ 126 ನೇ ವಯಸ್ಸಿನಲ್ಲಿ ಮರಣ ಹೊಂದಿದ್ದರೆ ಕುರುಕ್ಷೇತ್ರ ಯುದ್ಧ ಅವನ ಎಷ್ಟನೇ ವಯಸ್ಸಿನಲ್ಲಿ ನಡೆದಿರಬಹುದು ಎಂಬ ಪ್ರಶ್ನೆ ಮೂಡಿದ್ದರಿಂದ ಇಂಟರ್ನೆಟ್‌ನಲ್ಲಿ ಈ ಬಗ್ಗೆ ಕೆದುಕಿದೆ. ಅಲ್ಲಿ ಸಿಕ್ಕ ಮಾಹಿತಿ ನನ್ನನ್ನೇ ಆಶ್ಚರ್ಯಗೊಳಿಸಿತು.

ಮಹಾಭಾರತ ಭಾಗವತ ಪುರಾಣಗಳು ಕಾಲ್ಪನಿಕ ಕತೆಯಾದರೂ ಟಿವಿ ಸಿನಿಮಾಗಳಿಂದಾಗಿ ಅದರಲ್ಲಿ ಬರುವ ಪಾತ್ರಗಳ ದೈಹಿಕ ನಿಲುವು, ವರ್ತನೆ ಹಾಗೂ ವಯಸ್ಸಿನ ಬಗ್ಗೆ ಒಂದು ನಿರ್ದಿಷ್ಟ ಚಿತ್ರ ಜನರ ಮನದಲ್ಲಿ ತಾನಾಗಿಯೇ ಸೃಷ್ಟಿಯಾಗಿರುತ್ತದೆ. ಅದರಂತೆ ಈ ಕಾಲ್ಪನಿಕ ಕಥೆಯಲ್ಲಿ ಕುರುಕ್ಷೇತ್ರ ಯುದ್ಧದ ಸಮಯದಲ್ಲಿ ಕೃಷ್ಣನ ವಯಸ್ಸು ಹೆಚ್ಚೆಂದರೆ ನಲ್ವತ್ತು ಹಾಗೂ ಪಾಂಡವರೆಲ್ಲ 35 ರಿಂದ ನಲ್ವತ್ತರ ನಡುವೆ ಹಾಗೂ ಕೌರವರು ಇದಕ್ಕಿಂತ ಸ್ವಲ್ಪ ದೊಡ್ಡವರು ಎನ್ನುವ ಚಿತ್ರ ನಮ್ಮ ಮನದಲ್ಲಿ ಅಚ್ಚಾಗಿರುತ್ತದೆ. ಹಾಗೆಯೇ ಭೀಷ್ಮನಿಗೆ-75, ದ್ರೋಣನಿಗೆ-70, ಧೃತರಾಷ್ಟ್ರ ಮತ್ತು ಶಕುನಿಗೆ- 65 ವರ್ಷ ವಯಸ್ಸಾಗಿರಬಹುದು ಎಂದು ನಾವು ಎಣಿಸಿರುತ್ತೇವೆ.

ಆದರೆ ನನಗೆ ಕೆಲವು ಪೌರಾಣಿಕ ಪುಸ್ತಕಗಳಲ್ಲಿ ಹಾಗೂ ಇಂಟರ್ನೆಟ್‌ನಲ್ಲಿ ಸಿಕ್ಕ ಮಾಹಿತಿಯಂದರೆ ಕುರುಕ್ಷೇತ್ರ ಯುದ್ಧದ ಸಮಯದಲ್ಲಿ ಕೃಷ್ಣ 89 ವರ್ಷದ ವೃದ್ಧನಾಗಿದ್ದ. ಹಾಗೆಯೇ ಧರ್ಮರಾಯ-87, ಭೀಮ-86, ಅರ್ಜುನ-85, ನಕುಲ ಮತ್ತು ಸಹದೇವ-84 ವರ್ಷದ ವೃದ್ಧರಾಗಿದ್ದರು. ಆಗ ದುರ್ಯೋಧನ ಹಾಗೂ ಅವನ 99 ಸಹೋದರರು ಮತ್ತು ತಂಗಿ ದುಶ್ಶಲೆ ಇವರ ವಯಸ್ಸು 90 ದಾಟಿತ್ತು, ಇವರೆಲ್ಲರೂ ಒಂದೇ ಅಂಡಾಣುವಿನಿಂದ ಜನಿಸಿದ್ದರಿಂದ ಕೌರವರೆಲ್ಲರ ವಯಸ್ಸು ಒಂದೇ ಆಗಿತ್ತು. ಕುರುಕ್ಷೇತ್ರ ಯುದ್ಧದ ಸಮಯದಲ್ಲಿ ಭೀಷ್ಮನ ವಯಸ್ಸು 160,



ದ್ರೋಣ-130, ಶಕುನಿ-120, ಧೃತರಾಷ್ಟ್ರ-120, ಗಾಂಧಾರಿ-115, ಕುಂತಿ-110, ಕರ್ಣ-90, ಬಲರಾಮ-90, ವಿದುರ-115, ದ್ರೋಣನ ಮಗ ಅಶ್ವತ್ಥಾಮ-100, ದ್ರೌಪದಿ ಮತ್ತು ಸುಭದ್ರೆ- 82 ವರ್ಷ, ದ್ರೌಪದಿಯ ಅಣ್ಣ ದೃಷ್ಟದ್ಯುಮ್ನ-85 ಹಾಗೂ ತಮ್ಮ ಶಿಖಂಡಿ-80 ವರ್ಷದವರಾಗಿದ್ದರು.

ಅರ್ಜುನ-ಸುಭದ್ರೆ ದಂಪತಿಗಳ ಮಗ ಅಭಿಮನ್ಯು ಯುದ್ಧ ಕಾಲದಲ್ಲಿ ಕೇವಲ 16 ವರ್ಷದವನಾಗಿದ್ದನು. ಅಂದರೆ ಅರ್ಜುನನಿಗೆ 69 ವರ್ಷ ಹಾಗೂ ಸುಭದ್ರೆಗೆ 65 ವರ್ಷ ವಯಸ್ಸಾಗಿದ್ದಾಗ ಅಭಿಮನ್ಯು ಜನಿಸಿದ್ದು, ಸುಭದ್ರೆ ಮುದುಕಿಯಾಗಿ ಮೆನೋಪಾಸ್ ಮುಟ್ಟಿದ ಮೇಲೆ ಪ್ರಕೃತಿ ನಿಯಮಕ್ಕೆ ವಿರುದ್ಧವಾಗಿ ಅಭಿಮನ್ಯುವನ್ನು ಹೆತ್ತಿದ್ದು! ಭೀಮ, ಅರ್ಜುನ, ನಕುಲ, ಸಹದೇವ ಇವರೆಲ್ಲ ದ್ರೌಪದಿಯ ಹೊರತಾಗಿ ಇನ್ನೂ ಹಲವು ಮದುವೆಯಾಗಿದ್ದರು. ಅದರಿಂದ ಹುಟ್ಟಿದ ಮಕ್ಕಳು ಯುದ್ಧ ಕಾಲದಲ್ಲಿ ಐವತ್ತು ವರ್ಷಕ್ಕಿಂತ ಹೆಚ್ಚು ವಯಸ್ಸಿನವರಾಗಿದ್ದರು. ಘಟೋತ್ಕಚನಂತೂ ಅರವತ್ತು ವರ್ಷದ ಸೀನಿಯರ್ ಸಿಟಿಜನ್ ಆಗಿದ್ದನು. ಇವರೆಲ್ಲರ ತಲೆಕೂದಲು ಒಂದೋ ಬಿಳಿಯಾಗಿತ್ತು ಅಥವಾ ಪೂರ್ತಿ ಬೋಳಾಗಿತ್ತು, ಬೋಳು ತಲೆಯ ಮೇಲೆ ಅವರು ಭಾರದ ಕಿರೀಟ ಇಡಲು ಅದೆಷ್ಟು ಕಷ್ಟಪಡುತ್ತಿದ್ದರೋ ಪಾಪ!

ಒಟ್ಟಾರೆ ಕುರುಕ್ಷೇತ್ರ ಯುದ್ಧವಂತೂ ಹಣ್ಣು ಹಣ್ಣು ಮುದುಕರ ಹೊಡೆದಾಟವಾಗಿತ್ತು, ಕೃಷ್ಣ ತನ್ನ 89 ನೇ ವಯಸ್ಸಿನಲ್ಲಿ ಬೊಚ್ಚು ಬಾಯಲ್ಲಿ ಅಸ್ಪಷ್ಟ ಸ್ವರದಲ್ಲಿ ಸರಿಯಾಗಿ ಕಿವಿ ಕೇಳದ 85 ವರ್ಷದ ಅರ್ಜುನನಿಗೆ ಗಂಟೆಗಟ್ಟಲೆ ಭಗವದ್ಗೀತೆ ಹೇಗೆ ಬೋಧಿಸಿರಬಹುದು ಊಹಿಸಿ. ಅಂದಾಜು 120 ರಿಂದ 160 ವರ್ಷ ವಯಸ್ಸಾಗಿದ್ದ ಭೀಷ್ಮ, ದ್ರೋಣ, ದ್ರುಪದ, ಶಕುನಿ, ಶಲ್ಯ ಮುಂತಾದವರು ಸರಿಯಾಗಿ ಕಣ್ಣು ಕಾಣಿಸದಿದ್ದರೂ, ಕಿವಿ ಕೇಳಿಸದಿದ್ದರೂ ಹೇಗೆ ಯುದ್ಧ ಮಾಡಿರಬಹುದು? ಈ ಸ್ಥಿತಿಯಲ್ಲಿ ಅವರು ಬಿಟ್ಟ ಬಾಣಗಳು ಅವರದೇ ಯೋಧರನ್ನು ಕೊಂದಿರಬಹುದು. ಭೀಮನು ಗದೆ ಬೀಸಿ ಒಂದೇ ಏಟಿಗೆ ಆನೆಗಳನ್ನು ಕೊಲ್ಲುತ್ತಿದ್ದನಂತೆ. ಅಂದರೆ ಅವನ ಗದೆ ಇನ್ನೂರು ಕಿಲೋ ಭಾರವಿದ್ದಿರಬಹುದು. ತನ್ನ 86 ನೇ ವಯಸ್ಸಿನಲ್ಲಿ ಅಂತಹಾ ಭಾರದ ಗದೆ ಎತ್ತುವಷ್ಟು ಶಕ್ತಿ ಭೀಮನಲ್ಲಿ ಉಳಿದಿತ್ತೇ?

ಕುರುಕ್ಷೇತ್ರ ಯುದ್ಧ ಮುಗಿದು ಅಶ್ವಮೇಧ ಯಾಗ ಮಾಡುವಾಗ ಅರ್ಜುನನು ತನ್ನ 90 ನೇ ವಯಸ್ಸಿನಲ್ಲಿ ಮತ್ತೆ ಪ್ರಮೀಳಾ ಎಂಬ ರಾಣಿಯನ್ನು ಮದುವೆಯಾಗುತ್ತಾನೆ. ಅದು ಯಾವ ಪುರುಷಾರ್ಥಕ್ಕೆ? 145 ವರ್ಷ ವಯಸ್ಸಿನ ವೇದ ವ್ಯಾಸ ಯುದ್ಧವನ್ನೆಲ್ಲ ಕಣ್ಣಾರೆ ನೋಡಿ ಪ್ರತಿಯೊಬ್ಬ ಯೋಧ ಹೇಗೆ ಸತ್ತ ಎಂಬುದನ್ನು ಸ್ವತಃ ವೀಕ್ಷಿಸಿ ನೆನಪಿಟ್ಟು ಎಷ್ಟೋ ವರ್ಷಗಳ ನಂತರ ಅದನ್ನು ಗಣಪತಿಗೆ ಡಿಕ್ಟೇಟ್ ಮಾಡಿ ಮಹಾಭಾರತ ಬರೆಸಲು ಸಾಧ್ಯವೇ?

48 ಲಕ್ಷ ಯೋಧರು, ನಾಲ್ಕು ಲಕ್ಷ ಆನೆ ಹಾಗೂ ಹದಿನಾರು ಲಕ್ಷ ಕುದುರೆಗಳು ಕಾದಾಡಿದ ನೂರಾರು ಯೋಜನೆ ಉದ್ದ-ಅಗಲದ ಯುದ್ಧ ಭೂಮಿಯಲ್ಲಿ ಹಣ್ಣು ಹಣ್ಣು ಮುದುಕ ವ್ಯಾಸ ಒಬ್ಬನೇ ಎಲ್ಲೆಡೆ ಓಡಾಡಿ ಯುದ್ಧ ನೋಡಿರಬಹುದೇ? ಅಥವಾ ಕುರುಡ ಧೃತರಾಷ್ಟ್ರನ ರನ್ನಿಂಗ್ ಕಾಮೆಂಟೇಟರ್ ಸಂಜಯನಂತೆ ದಿವ್ಯ ಚಕ್ಷುವೆಂಬ ಸ್ಯಾಟಲೈಟ್ ಅಂತರ್ಜಾಲ ವ್ಯಾಸನಲ್ಲೂ ಇತ್ತೇ? ಇಡೀ ಯುದ್ಧ ಭೂಮಿಗೆ ಕೇಳಿಸುವಷ್ಟು ಜೋರಾಗಿ ಪಾಂಚಜನ್ಯ ಶಂಖ ಊದುವಷ್ಟು ಶಕ್ತಿ ಕೃಷ್ಣನ ಗಂಟಲಲ್ಲಿ ಇತ್ತೇ?

ಈ ಎಲ್ಲ ಪ್ರಶ್ನೆಗಳಿಗೆ ಈಗಿನ ವೈದಿಕರು ಶಬ್ದಗಳ ಕಸರತ್ತು ನಡೆಸಿ ಸಂಸ್ಕೃತ ಶ್ಲೋಕಾರ್ಥಗಳ ಜಾಲ ಹೆಣೆದು ಈ ಎಲ್ಲರ ಮುದಿತನವನ್ನು ಯವ್ವನ ಎಂದು ಸಮರ್ಥಿಸಲು ಪ್ರಯತ್ನಿಸುವುದು ಖಂಡಿತ. ಆಗಿನ ಕಾಲದಲ್ಲಿ ಇತರ ದೇಶದಲ್ಲಿ ಜನರು ಎಂಬತ್ತು ವರ್ಷಕ್ಕೇ ಸಾಯುತ್ತಿದ್ದರೂ ಪವಿತ್ರ ಭೂಮಿ ಭಾರತದಲ್ಲಿ ಮಾತ್ರ ಜನರು ಮುನ್ನೂ[illegible] ವರ್ಷ ಜೀವಿಸುತ್ತಿದ್ದರು ಹಾಗೂ ಆಗಿನ ತೊಂಬತ್[illegible] ವರ್ಷವೆಂದರೆ ಈಗಿನ ಮುವ್ವತ್ತು ವರ್ಷಕ್ಕೆ ಸಮ ಎಂ[illegible] ವಿತಂಡವಾದ ಮಂಡಿಸುವುದು ಖಂಡಿತ. ಆಗಿನ ಕಾಲದ[illegible] ಶುದ್ಧ ಗಾಳಿ ನೀರು ಮತ್ತು ಪೆಸ್ಟಿಸೈಡ್ ಇಲ್[illegible] ಆಹಾರದಿಂದಾಗಿ ಆಗಿನ ಜನರ ಜೀವನಾವಧಿ ಈಗಿನಕ್ಕಿ[illegible] ಮೂರು ಪಾಲು ಹೆಚ್ಚಾಗಿತ್ತು ಎಂದು ವೈದಿಕ[illegible] ವಾದಿಸಬಹುದು. ಆದರೆ ಇದಕ್ಕೆ ಯಾವ ವೈಜ್ಞಾನ[illegible] ಪುರಾವೆಯೂ ಇಲ್ಲ.

ಆಗಿನ ಕಾಲದಲ್ಲೂ ಭಾರತೀಯರು ಎಷ್[illegible] ಆರೋಗ್ಯವಂತರಾಗಿದ್ದರೂ ಪ್ರಕೃತಿ ನಿಯಮದಂತೆ [illegible] ವರ್ಷಕ್ಕೇ ದೈಹಿಕವಾಗಿ ಮುದಿತನದ ಅಶಕ್ತ ನಿಶಕ್ತಿಗಳನ್[illegible] ಅನುಭವಿಸಲು ಶುರು ಮಾಡಿ 90 ವರ್ಷಕ್ಕೆ ಸಂಪೂರ್ಣ[illegible] ನಿತ್ರಾಣರಾಗಿ ಹೋಗುತ್ತಿದ್ದರು ಎಂಬುದು ಸತ್ಯ. ಆಗಿನವ[illegible] ಇನ್ನೂರು-ಮುನ್ನೂರು ವರ್ಷ ಜೀವಿಸುತ್ತಿದ್ದರು ಎಂಬು[illegible] ಕೇವಲ ಪುರಾಣಕರ್ತರ ಕಲ್ಪನೆ ಅಷ್ಟೇ.

ಇತ್ತೀಚಿಗೆ ನನ್ನ ಹಿರಿಯ ಸಂಬಂಧಿಕರಲ್ಲಿ ಒಬ್ಬ[illegible] 98 ವರ್ಷಕ್ಕೆ ತೀರಿಕೊಂಡರೆ ಇನ್ನೊಬ್ಬರು 93 ವರ್ಷ[illegible] ತೀರಿಕೊಂಡರು. ಜೀವನವಿಡೀ ಹಳ್ಳಿಯಲ್ಲೇ ಇ[illegible] ಅವರಿಬ್ಬರಿಗೂ ಯಾವುದೇ ಕೆಟ್ಟ ಚಟಗಳು ಇರಲಿ[illegible] ಹಾಗೂ ಕೊನೆಯವರೆಗೂ ಯಾವುದೇ ಬಿಪಿ ಶುಗ[illegible] ಇಂತಹಾ ರೋಗಗಳೂ ಬಾಧಿಸಿರಲಿಲ್ಲ. ಆದರೂ ಕೇವ[illegible] ಮುದಿತನ ಎಂಬ ರೋಗವೇ ಅವರಿಬ್ಬರ ಕೊನೆ[illegible] ನಾಲ್ಕೈದು ವರ್ಷದಲ್ಲಿ ಅವರನ್ನು ತುಂಬಾ ಹಿಂಸಿಸಿತ[illegible] ಅವರ ಸ್ನಾನ ಕಕ್ಕಸು ಇವುಗಳ ಸಮಯದಲ್ಲಿ ಆಗುತ್[illegible] ಕಷ್ಟಗಳನ್ನು ನೋಡುವಾಗ ನಾವು ಅಷ್ಟು ಸಮ[illegible] ಬದುಕುವುದೇ ಬೇಡ ಎನಿಸುತ್ತಿತ್ತು, ಇಂತಹಾ ಸ್ಥಿತಿಯ[illegible] 80 ರಿಂದ 160 ವರ್ಷ ವಯಸ್ಸಿನ ಮುದುಕರು ಕುರುಕ್ಷೇ[illegible] ಯುದ್ಧದಲ್ಲಿ ಸಕ್ರೀಯವಾಗಿ ಭಾಗವಹಿಸಿ ಲಕ್ಷಾಂತರ ತರು[illegible] ಯೋಧರನ್ನು ಹಾಗೂ ಸಾವಿರಾರು ಆನೆ ಕುದುರೆಗಳ[illegible] ಕೊಂದರು ಎಂಬುದು ಸಂಪೂರ್ಣ ಅವಾಸ್ತವ ಕ[illegible] ಎಂಬುದರಲ್ಲಿ ಸಂಶಯವಿಲ್ಲ.

ಈಗಲೂ ನಮ್ಮ ಸುತ್ತ-ಮುತ್ತ ಇರುವ ಹಣ್ಣು ಹ[illegible] ಮುದುಕರನ್ನು ಗಮನಿಸಿ ಅವರನ್ನು ಮಹಾಭಾರತದ ಕೌ[illegible] ಪಾಂಡವ ಕಷ್ಣ ಇವರಿಗೆ ಹೋಲಿಸಿ ನೋಡಿದಾಗ ನವ[illegible] ಸಿಗುವ ಕುರುಕ್ಷೇತ್ರ ಯುದ್ಧದ ನೈಜ ದೃಶ್ಯ ಎಷ್ಟೊಂ[illegible] ತಮಾಷೆಯಾಗಿ ಕಾಣಿಸಬಹುದು ಊಹಿಸಿ. ಹಿಂದಿ[illegible] ಅತ್ಯಂತ ಸುರದ್ರೂಪಿ ನಟ ದೇವಾನಂದ ಜೀವಂತವಿರುವ[illegible] ತನ್ನ 88 ನೇ ವಯಸ್ಸಿನಲ್ಲಿ ಹೇಗೆ ಕಾಣುತ್ತಿದ್ದರು ಎಂಬು[illegible]

ಮಧು ಕಿನ್ನರ: ಲಿಂಗಾಂತರಿ ಮೇಯರ್



ಛತ್ತೀಸಗಡ ರಾಜ್ಯದ ರಾಯಗಡದಲ್ಲಿ ಮೇಯರ್ ...ಗಿ ಲಿಂಗಾಂತರಿ ಸಮುದಾಯದ ಮಧು ಕಿನ್ನರ್ ...ಯ್ಕೆಯಾಗಿದ್ದಾರೆ. ಇದು ಛತ್ತೀಸಗಡ ರಾಜ್ಯದ ಚುನಾವಣಾ ...ತಿಹಾಸದಲ್ಲಿ ಚಾರಿತ್ರಿಕ ಸಂಗತಿ. ಆಡಳಿತ ಪಕ್ಷ ಬಿಜೆಪಿ ...ನ್ನಾಗಲೂ ಇದೇ ಪಕ್ಷದ ಮಹಾವೀರ್ ಗುರೂಜಿ ಅವರನ್ನು ...537 ಮತಗಳ ಅಂತರದಲ್ಲಿ ಸೋಲಿಸಿ 33,168 ...ಮತಗಳನ್ನು ಪಡೆದು ಗೆಲುವು ಸಾಧಿಸಿದ್ದಾಳೆ. ಈ ...ಜಯವನ್ನು ದೇಶದಾದ್ಯಂತ ಲಿಂಗಾಂತರಿ ಸಮುದಾಯವು ...ಸಂಭ್ರಮಿಸಿತು. ಸುಪ್ರಿಂ ಕೋರ್ಟ್ ತೃತೀಯ ಲಿಂಗಿ ಎಂದು ...ಗುರುತಿಸಿದ ನಂತರ ಸಾರ್ವತ್ರಿಕ ಚುನಾವಣೆಯಲ್ಲಿ ಗೆಲುವು ...ಸಾಧಿಸಿದ ಮೊದಲ ಲಿಂಗಾಂತರಿ ಮಧು.

ಮಧು ಆಗಿ ಬದಲಾಗುವ ಪೂರ್ವದಲ್ಲಿ ದಲಿತ ...ಸಮುದಾಯದ ನರೇಶ್ ಚೌಹಾನ್ ಆಗಿದ್ದನು. ನರೇಶ್ ...ಏಳನೆ ತರಗತಿ ಓದುವ ಹೊತ್ತಿಗೆ ದೇಹದೊಳಗಿನ ...ಣ್ಣು ಒಡೆದು ಕಾಣಲು ಶುರುವಾಯಿತು. ಶಾಲೆಯಲ್ಲಿ ...ಹಿತರ ಕೀಟಲೆ, ಅವಮಾನ ಇವುಗಳಿಂದ ಓದನ್ನು ಮುಂದುವರಿಸಲಾಗದೆ ಓದು ಮೊಟಕಾಯಿತು. ಮನೆಯವರ ಹಿಂಸೆಯನ್ನೂ ಸಹಿಸಲಾರದೆ ಏಕಾಂಗಿಯಾಗಿ ರಾಯಗಡದಲ್ಲಿ ತನ್ನಂತೆಯೇ ಇರುವ ಹಿಜಡಾಗಳ ಜತೆ ಸೇರಿ ನಿಧಾನಕ್ಕೆ ನರೇಶ್ ಮಧು ಕಿನ್ನರ್ ಆಗಿ ರೂಪಾಂತರಗೊಂಡಳು. 35 ವರ್ಷದ ಮಧು 15 ವರ್ಷದಿಂದಲೂ ರೈಲುಗಳಲ್ಲಿ ಬೆಗ್ಗಿಂಗ್, ನೃತ್ಯ ಮಾಡುತ್ತಾ ತನ್ನ ಸಂಗಾತಿಗಳ ಜತೆಗೂಡಿ ಜೀವನ ಸಾಗಿಸಿದ್ದಳು.

ಚುನಾವಣಾ ಗೆಲುವಿನ ನಂತರ ಮಧು 'ಈ ಗೆಲುವು ಜನರು ನನ್ನ ಮೇಲಿಟ್ಟಿರುವ ನಂಬಿಕೆಯನ್ನು ತೋರಿಸುತ್ತದೆ, ಹಾಗಾಗಿ ಈ ಗೆಲುವನ್ನು ಜನರ ಪ್ರೀತಿ ಮತ್ತು ಹಾರೈಕೆಯ ಫಲ ಎಂದು ನಂಬಿದ್ದೇನೆ. ಜನರ ನಂಬಿಕೆಯನ್ನು ಉಳಿಸಿಕೊಳ್ಳುವ ಹಾಗೆ ಕೆಲಸ ಮಾಡುತ್ತೇನೆ' ಎಂದು ಆತ್ಮವಿಶ್ವಾಸದಿಂದ ಮಾತನಾಡುತ್ತಾಳೆ. 'ನಾನು ಈ ಚುನಾವಣಾ ಪ್ರಚಾರಕ್ಕೆ 60 ರಿಂದ 70 ಸಾವಿರದಷ್ಟು ಖರ್ಚು ಮಾಡಿದ್ದೇನೆ. ನಮ್ಮ ಸಮುದಾಯದ ಸದಸ್ಯರು ಮನೆ ಮನೆಗೆ ಹೋಗಿ ಮತ ಯಾಚಿಸಿದ್ದೆವು, ಇದಕ್ಕೆ ಪೂರಕವಾಗಿ ರಾಯಗಡದ ಜನರು ನಮಗೆ ತುಂಬಾ ಬೆಂಬಲ ನೀಡಿದ್ದಾರೆ. ಜನರು ತಮ್ಮ ಸ್ವಂತ ಇಚ್ಛೆಯಿಂದ ನನಗೆ ಮತ ಹಾಕಿದ್ದಾರೆ. ಛತ್ತೀಸಗಡದ ಜನರು ಆಡಳಿತರೂಢ ಬಿಜೆಪಿ ಪಕ್ಷದ ಭ್ರಷ್ಟಾಚಾರದ ಆಡಳಿತಕ್ಕೆ ನೊಂದಿದ್ದರು.



ಅದು ಕೂಡ ನನಗೆ ವರವಾಗಿ ಪರಿಣಮಿಸಿದೆ' ಎಂದಿದ್ದಾಳೆ.

ಮಧು ಮಾತು ಮುಂದುವರೆಸುತ್ತಾ 'ಎಲ್ಲಾ ಕ್ಷೇತ್ರದಲ್ಲಿ ಭ್ರಷ್ಟಾಚಾರ ತುಂಬಿ ತುಳುಕುತ್ತಿರುವ ಈ ಹೊತ್ತಿನಲ್ಲಿ ನಾನು ಭ್ರಷ್ಟಾಚಾರ ಮುಕ್ತ ಆಡಳಿತ ನಡೆಸುತ್ತೇನೆ. ಪ್ರಾಮಾಣಿಕವಾಗಿ ಕೆಲಸ ಮಾಡಿ ರಾಯಗಡ ನಗರವನ್ನು ಅಭಿವೃದ್ಧಿ ಪಡಿಸುತ್ತೇನೆ. ಛತ್ತೀಸಗಡ ರಾಜ್ಯದಲ್ಲಿಯೇ ಇದನ್ನೊಂದು ಮಾದರಿ ನಗರವನ್ನಾಗಿ ಮಾಡುತ್ತೇನೆ' ಎಂದು ವಿಶ್ವಾಸದಿಂದ ನುಡಿಯುತ್ತಾಳೆ. 'ರಾಯಗಡದ ಜನರು ನನ್ನನ್ನು ಮನೆಯ ಮಗಳಂತೆ ಭಾವಿಸಿದ್ದಾರೆ. ಅವರ ಕುಟುಂಬದ ಒಬ್ಬ ಸದಸ್ಯೆ ಎಂದು ತಿಳಿದಿದ್ದಾರೆ. ಇಂತಹ ಮನೆಗಳಿಂದ ಬಂದ ನಾನು ಒಳ್ಳೆಯ ಆಡಳಿತ ಮಾಡಿ ಜನರ ವಿಶ್ವಾಸವನ್ನು ಹೆಚ್ಚಿಸುತ್ತೇನೆ' ಎನ್ನುತ್ತಾಳೆ.

ರಾಯಗಡದ ಬಟ್ಟೆ ಅಂಗಡಿ ವ್ಯಾಪಾರಿ ಮಹಾದೇವ ಸೇನ್ ಎಂಬುವವರು 'ನಾವು ಹಿಂದೆ ಬಿಜೆಪಿಯನ್ನು ಬೆಂಬಲಿಸಿದ್ದೆವು. ಬಿಜೆಪಿ ಮೇಯರ್ ಯಾವ ಕೆಲಸವನ್ನೂ ಮಾಡಲಿಲ್ಲ, ಕಾಂಗ್ರೆಸ್ ಮೇಯರ್ ಕೂಡ ಭ್ರಷ್ಟರಾಗಿದ್ದರು. ನಗರದ ರಸ್ತೆಗಳಲ್ಲಿ ಗುಂಡಿ ಬಿದ್ದಿವೆ, ಬೇಸಿಗೆಯಲ್ಲಿ ಕುಡಿಯುವ ನೀರಿಗಾಗಿ ಪೇಚಾಡುವ ಸ್ಥಿತಿ ಬಂದಿದೆ. ಹಾಗಾಗಿ ನಾವು ಮಧು ಅವರನ್ನು ಆಯ್ಕೆ ಮಾಡಿದ್ದೇವೆ' ಎನ್ನುತ್ತಾರೆ. ಛತ್ತೀಸಗಡದ ಕಾಂಗ್ರೆಸ್ ನಾಯಕರು ಇದು 'ಮಧು ಕಿನ್ನರಳ ಜಯವಲ್ಲ, ಬದಲಿಗೆ ಬಿಜೆಪಿಯ ಹೀನಾಯ ಸೋಲು' ಎಂದು ಎಂದಿನ ಹಳಸಲು ಮಾತನ್ನೇ ಆಡಿದ್ದಾರೆ. ಪರಾಭವಗೊಂಡ ಮಹಾವೀರ್ ಗುರೂಜಿ 'ಜನರ ಆಯ್ಕೆಯನ್ನು ಗೌರವಿಸುವೆ' ಎಂದಷ್ಟೇ ಹೇಳಿ ಮೌನ ತಾಳಿದ್ದಾರೆ.

ಮಧುಬಾಯಿ ಕಿನ್ನರ ಲಿಂಗಾಂತರಿ ಸಮುದಾಯದಲ್ಲಿ ಚುನಾವಣೆಯಲ್ಲಿ ಗೆಲುವು ಕಂಡ ಆರನೆಯವಳು. ಭಾರತದ ರಾಜಕೀಯ ಇತಿಹಾಸದಲ್ಲಿ ಇದಕ್ಕೊಂದು ಚರಿತ್ರೆಯೂ ಇದೆ. ಮೊದಲ ಬಾರಿಗೆ ಮಧ್ಯಪ್ರದೇಶದಲ್ಲಿ ಹಿಜ್ರಾ ಶಬನಂ ಮೌಸಿ ಸ್ವತಂತ್ರ ಅಭ್ಯರ್ಥಿಯಾಗಿ ಸ್ಪರ್ಧಿಸಿ 1998-2003 ರ ಅವಧಿಗೆ ವಿಧಾನಸಭಾ ಸದಸ್ಯರಾಗಿ ಆಯ್ಕೆಯಾಗಿದ್ದರು. ಇವರ ಬದುಕನ್ನು ಆಧರಿಸಿ ಸಿನೆಮಾವೊಂದು ಬಂದಿದೆ. ಮಧ್ಯಪ್ರದೇಶದ ಅತ್ಯಂತ ಹಳೆಯದಾದ ಹೌರಾದ... ಸಂಸ್ಥೆಯಲ್ಲಿ ಹಿಜ್ರಾ ಮಿನಾಬಾಯಿ ಸೆಹೊರಾ ನಗರ ಮುನಿಸಿಪಾಲಿಟಿಗೆ ಅಧ್ಯಕ್ಷರಾಗಿದ್ದರು. 2000ರಲ್ಲಿ ಆಶಾದೇವಿ ಮಹಿಳಾ ಮೀಸಲಾತಿ ಕೋಟಾದಡಿ ಗೋರಕ್‌ಪುರದ ಮೇಯರ್ ಆಗಿ ಆಯ್ಕೆಯಾಗಿದ್ದರು. ಆಗ ಅಲ್ಲಿನ ನ್ಯಾಯಾಲಯ ಆಶಾದೇವಿ ಗಂಡಸು ಎಂದು ತೀರ್ಪು ಕೊಟ್ಟಿದ್ದರಿಂದ ಸ್ಥಾನವನ್ನು ಕಳೆದುಕೊಂಡಿದ್ದರು. ಆನಂತರ ಅವರು ಕಾನೂನಾತ್ಮಕ ಹೋರಾಟ ಮಾಡಿ ತಮ್ಮ ಶಾಸಕಿ ಸ್ಥಾನವನ್ನು ಪುನಃ ಪಡೆದುಕೊಂಡಿದ್ದರು. 2005ರಲ್ಲಿ 24 ವರ್ಷ ವಯಸ್ಸಿನ ಸೋನಿಯಾ ಅಜ್ಮೆರಿ 40,000 ಜನ ಹಿಜ್ರಾಗಳ ಪ್ರತಿನಿಧಿಯಾಗಿ ಗುಜಾರಾತ್‌ನ ವಿಧಾನಸಭೆಗೆ ಆಯ್ಕೆಯಾಗಿದ್ದರು. 2013 ರಲ್ಲಿ ಬಳ್ಳಾರಿ ನಗರಸಭೆಯ ಕಾರ್ಪೋರೇಟ್ ಆಗಿ ಪರ್ವಿನಾಬಾನು ಆಯ್ಕೆಯಾಗಿ ಈಗಲೂ ಸಕ್ರಿಯವಾಗಿ ಕೆಲಸ ಮಾಡುತ್ತಿದ್ದಾಳೆ. ಇದೀಗ ಮಧು ಸರದಿ. ಹಿಂದೊಮ್ಮೆ 1999 ರಲ್ಲಿ ಲಿಂಗಾಂತರಿ ಕಿಶೋರಿಮಾತಾ ಅಹಮದಾಬಾದ್ ಕಾರ್ಪೋರೇಷನ್ ಚುನಾವಣೆಗೆ ಸ್ಪರ್ಧಿಸಿ ಸೋತಿದ್ದರು.

ಹಾಗೆ ನೋಡಿದರೆ 2014 ರ ಲೋಕಸಭಾ ಚುನಾವಣೆಯಲ್ಲಿ ಲಿಂಗಾಂತರಿಗಳ ಚುನಾವಣಾ ಸ್ಪರ್ಧೆಯ ಸಂಖ್ಯೆ ಹೆಚ್ಚಾಯಿತು. ಅಹಮದಾಬಾದ್‌ನ ಗಾಂಧಿನಗರ ಲೋಕಸಭಾ ಚುನಾವಣೆಗೆ ಎಲ್.ಕೆ.ಅದ್ವಾನಿ ವಿರುದ್ಧ ಲಿಂಗಾಂತರಿ ಇಮ್ರಾನ್ ಅಜ್ಮೇರಿ ಸ್ಪರ್ಧಿಸಿದ್ದಳು. ವಾರಣಾಸಿಯಲ್ಲಿ ನರೇಂದ್ರ ಮೋದಿ ಮತ್ತು ಕೇಜ್ರಿವಾಲ್ ವಿರುದ್ಧ ಹಿಜಡಾ ಕಮಲಾ ಸ್ಪರ್ಧಿಸಿದ್ದಳು. ಪೂರ್ವಾಂಚಲ ಮೂಲದ ಕಮಲಾ 'ಶಾಸ್ತ್ರ ಮತ್ತು ಪುರಾಣದ ಪ್ರಕಾರ 'ಕಿನ್ನರ'ರನ್ನು (ಲಿಂಗ ಬದಲಿಸಿಕೊಂಡವರು) ಅರ್ಧನಾರೀಶ್ವರ ಎಂದು ಕರೆಯಲಾಗುತ್ತದೆ. ಹೀಗಾಗಿ ವಾರಣಾಸಿ ಜನತೆ ಮೋದಿ ಮತ್ತು ಕೇಜ್ರಿವಾಲ್ ಬದಲಾಗಿ ನನಗೇ ಮತ ಹಾಕಬೇಕು, ಗಂಡು ಹೆಣ್ಣು ಆಡಳಿತ ನಡೆಸಿದರೂ ಈ ದೇಶ ಉದ್ಧಾರವಾಗಿಲ್ಲ, ನಮಗೆ ಅಧಿಕಾರ ಕೊಡಿ ದೇಶವನ್ನು ಉದ್ಧಾರ ಮಾಡುತ್ತೇವೆ' ಎಂದು ಪ್ರಚಾರ ಕೈಗೊಂಡಿದ್ದಳು.

ಅಂತೆಯೇ ತೆಲಂಗಾಣ ರಾಜ್ಯದಲ್ಲಿ ಸ್ಪರ್ಧಿಸಿದ ಹಿಜಡಾ ಒಬ್ಬಳು 'ನಮಗೆ ಮಕ್ಕಳಿಲ್ಲ ಮರಿಯಿಲ್ಲ ನಾವು ರಾಜಕೀಯದಿಂದ ಯಾರಿಗಾಗಿ ಹಣ ಸಂಪಾದನೆ ಮಾಡಬೇಕು? ಗಂಡು, ಹೆಣ್ಣಿಗೆ ಮತಕೊಟ್ಟು ಅವರ ಆಡಳಿತವನ್ನು ನೋಡಿದ್ದೀರಿ, ಹತ್ತಾರು ತಲೆಮಾರಿಗಾಗುವಷ್ಟು ಅವರು ಹಣದ ಗುಡ್ಡೆ ಹಾಕಿಕೊಂಡಿದ್ದಾರೆ. ಈಗ ನಮ್ಮ ಸರದಿ, ನನ್ನನ್ನು ಗೆಲ್ಲಿಸಿ ಪ್ರಾಮಾಣಿಕವಾಗಿ ಜನರಿಗಾಗಿ ದುಡಿಯುತ್ತೇನೆ' ಎಂದಿದ್ದಳು. ಚಿತ್ರದುರ್ಗ ಲೋಕಸಭೆಗೆ ಪಕ್ಷೇತರ ಅಭ್ಯಾರ್ಥಿಯಾಗಿ ಲಿಂಗಾಂತರಿ ಭಾವನಾ ಸ್ಪರ್ಧಿಸಿ 'ಹಿಂದುಳಿದವರು, ಬಡವರಿಗೆ ನಿವೇಶನ, ಮನೆ, ಸ್ಲಂಗಳಲ್ಲಿ ಶೌಚಾಲಯ, ರಸ್ತೆ ನಿರ್ಮಾಣ ನನ್ನ ಮೊದಲ ಆದ್ಯತೆ. ಬಡಜನರಿಗೆ ಅನುಕೂಲ ಆಗುವ ಕೆಲಸ ಮಾಡುತ್ತೇನೆ' ಎಂದು ನಾಮಪತ್ರ ಸಲ್ಲಿಸುವಾಗ ಹೇಳಿದ್ದಳು. ಅಹಮದಾಬಾದ್ ವಿಧಾನಸಭೆ ಚುನಾವಣೆಯಲ್ಲಿ ಲಿಂಗಾಂತರಿ ಸಂಜುದ ನಾಯಕ್ ಮಾಜಿ ಮಂತ್ರಿ ಹರಿನಿ ಪಾಠಕ್ ವಿರುದ್ಧ ಸ್ಪರ್ಧಿಸಿದ್ದಳು. ಚುನಾವಣೆಗೆ ಸ್ಪರ್ಧಿಸುವ ಈ ಸಮುದಾಯವನ್ನು ಬೆದರಿಸಿ ನಾಮಪತ್ರ ಹಿಂತೆಗೆದುಕೊಳ್ಳುವಂತೆ ಮಾಡುವುದೂ ಇದೆ. ಲಿಂಗಾಂತರಿ ಸಂಜುದಾ 2002 ರಲ್ಲಿ ಗುಜರಾತಿನ ವಿಧಾನಸಭೆಗೆ ಸ್ಪರ್ಧಿಸಿದಾಗ ಪ್ರಭಾವಿ ಸ್ಪರ್ಧಿಯೊಬ್ಬರು ಸಂಜುದಾಳನ್ನು ಕಿಡ್ನಾಪ್ ಮಾಡಿ ವಾಪಾಸ್ ತೆಗೆದುಕೊಳ್ಳುವಂತೆ ಒತ್ತಡ ಹೇರಿ ನಾಮಪತ್ರ ವಾಪಾಸ್ ತೆಗೆಸಲಾಗಿತ್ತು.

ಚುನಾವಣೆಗೆ ಸ್ಪರ್ಧಿಸಿದಾಗ ಈ ಎಲ್ಲರೂ ಹೆಣ್ಣು ಗಂಡಲ್ಲದ ತಮ್ಮ ಸ್ಥಿತಿಯನ್ನೇ ಮೌಲ್ಯೀಕರಿಸಿ, ಸಮಾಜ ಗುರುತಿಸುವ ದ್ವಿಲಿಂಗಿ ಸಮಾಜವನ್ನು ಅಪಮೌಲ್ಯೀಕರಿಸಿದ ಮಾತುಗಳೇ ದ್ವಿಲಿಂಗಾಧರಿತ ಸಮಾಜವನ್ನು ಗೇಲಿ ಮಾಡುವಂತಿವೆ. ಹೌದೆಂಬಂತೆ, ಮುಂದಾದರೂ ಜೀರ್ಣಿಸಿಕೊಳ್ಳಲೇಬೇಕಾದ ಇಂತಹದ್ದೊಂದು ವಾಸ್ತವವನ್ನು ನಮ್ಮೆದುರಿಡುತ್ತಿದ್ದಾರೆ. ಈ ನೆಲೆಯಲ್ಲಿ ಅವರು ಎತ್ತುವ ತಕರಾರುಗಳನ್ನು ಕೇಳಿಸಿಕೊಂಡರೆ, ಅದು ಅಚ್ಚರಿ ಹುಟ್ಟಿಸುವಂತಿದೆ. ಹೊಸ ಪ್ರಶ್ನೆಗಳನ್ನು ಎತ್ತುವಂತಿದೆ.

ಭಾರತದ ಚುನಾವಣಾ ಆಯೋಗವು ಬಿಡುಗಡೆ ಮಾಡಿದ 2014 ರ ಮತದಾರರ ಸಂಖ್ಯೆಯಲ್ಲಿ ಲೈಂಗಿಕ ಅಲ್ಪಸಂಖ್ಯಾತರ ಸಂಖ್ಯೆಯನ್ನೂ ಸೇರಿಸಿತ್ತು. ಆಗ 81,45,91184 ರಷ್ಟು ಮತದಾರರಿದ್ದರು. 'ಇತರೆ' ವಿಭಾಗದಲ್ಲಿ ದಾಖಲಿಸಿಕೊಂಡ ಲೈಂಗಿಕ ಅಲ್ಪಸಂಖ್ಯಾತರು 0.0035? ರಷ್ಟಿದ್ದರು. ಕರ್ನಾಟಕದಲ್ಲಿ ಅವರ ಸಂಖ್ಯೆ 8,453 ರಷ್ಟಿತ್ತು, ಇದು ಭಾರತದ 17 ರಾಜ್ಯಗಳಿಗೆ ಹೋಲಿಸಿದರೆ 'ಇತರೆ' ವಿಭಾಗದಲ್ಲಿ ದಾಖಲಿಸಿಕೊಂಡ ಲೈಂಗಿಕ ಅಲ್ಪಸಂಖ್ಯಾತರ ಸಂಖ್ಯೆ ಕರ್ನಾಟಕದಲ್ಲಿಯೇ ಹೆಚ್ಚಾಗಿದೆ ಎಂದು ಚುನಾವಣಾ ಆಯೋಗ ತಿಳಿಸಿತ್ತು. ಭಾರತಕ್ಕೆ ಹೊಂದಿಕೊಂಡತಿರುವ ನೇಪಾಳ ಸರಕಾರವು 2013 ರಲ್ಲಿ 'ಮೂರನೆ ಲಿಂಗ' ಅಥವಾ 'ಲೈಂಗಿಕ ಅಲ್ಪಸಂಖ್ಯಾತ' ಸಮುದಾಯವು ಚುನಾವಾಣೆಗೆ ಸ್ಪರ್ಧಿಸುವ ಮತ್ತು ಮತ ಚಲಾಯಿಸುವ ಹಕ್ಕನ್ನು ಅಧಿಕೃತವಾಗಿ ಘೋಷಿಸಿತ್ತು. ಹಾಗಾಗಿ 2013ರ ನೇಪಾಳದ ವಿಧಾನ ಸಭಾ ಚುನಾವಣೆಯಲ್ಲಿ 63 ರಷ್ಟು ಲೈಂಗಿಕ ಅಲ್ಪಸಂಖ್ಯಾತರು ಚುನಾವಣೆಗೆ ಸ್ಪರ್ಧಿಸಿದ್ದರು.

2013 ರಲ್ಲಿ ನಡೆದ ಪಾಕಿಸ್ತಾನದ ಸಾರ್ವತ್ರಿಕ ಚುನಾವಣೆಯಲ್ಲಿ ಹಿಜಡಾ ಬಿಂದಿಯಾ ರಾಣ ಮತ್ತು ವೀರೂ ಕೋಹ್ಲಿಯವರು ಚುವಾವಣೆಗೆ ಸ್ಪರ್ಧಿಸಿದ್ದರು. 'ರಾಷ್ಟ್ರದ ರಾಜಕಾರಣದಲ್ಲಿರುವ ಭೂಮಾಲೀಕರು, ಉದ್ಯಮಿಗಳು ಹಾಗೂ ವೃತ್ತಿಪರ ರಾಜಕಾರಣಿಗಳ ಮಾಫಿಯಾ ಜಗತ್ತನ್ನು ಮುರಿಯುವ ನಿಟ್ಟಿನಲ್ಲಿ ನಮ್ಮಂಥವರು ಚುನಾವಣೆಯಲ್ಲಿ ಸ್ಪರ್ಧಿಸುವ ಅಗತ್ಯವಿದೆ' ಎಂದು ಬಿಂದಿಯಾ ಅಭಿಪ್ರಾಯ ಪಟ್ಟಿದ್ದರು. ಅಂತೆಯೇ ವೀರೂಕೋಹ್ಲಿ ಚುನಾವಣೆ ಸ್ಪರ್ಧೆಗೆ ನೀಡಿದ ಕಾರಣ ವಿಶಿಷ್ಟವಾಗಿತ್ತು. '2004ರಲ್ಲಿ ನಮ್ಮ ಸಮುದಾಯದ ಸದಸ್ಯರೋರ್ವರು ಸಾವನ್ನಪ್ಪಿದ್ದರು. ಮೃತದೇಹವನ್ನು ಆಕೆಯ ತವರು ಪಂಜಾಬ್‌ಗೆ ತಲುಪಿಸಲು ನಾನು ನನ್ನ ಸ್ನೇಹಿತೆ ಹೋಗಿದ್ದೆವು. ಆಗ ವಿಮಾನ ನಿಲ್ದಾಣ, ಪೋಲೀಸ್ ಇಲಾಖೆ ಸೇರಿದಂತೆ ಎಲ್ಲಾ ಅಧಿಕಾರಿಗಳು ನಮ್ಮನ್ನು ತುಂಬಾ ಅವಮಾನಿಸಿದ್ದರು. ಆ ನೋವಿನಿಂದ ಬೇಸತ್ತು ನಮ್ಮ ಸಮುದಾಯವನ್ನು ಬಲಪಡಿಸುವ ಕಾರಣಕ್ಕೆ ಚುನಾವಣೆಗೆ ಸ್ಪರ್ಧಿಸಿದ್ದೇನೆ' ಎಂದಿದ್ದಳು.

ಸುಪ್ರಿಂ ಕೋರ್ಟ್ ಏಪ್ರಿಲ್ 15, 2014 ರಂದು ಲಿಂಗಾಂತರಿ ಸಮುದಾಯವನ್ನು 'ಥರ್ಡ್ ಜೆಂಡರ್' ಎಂದು ಘೋಷಿಸಿ, ಅವರಿಗೆ ಸರಕಾರದ ಎಲ್ಲಾ ಸವಲತ್ತುಗಳನ್ನು ನೀಡಬೇಕು, ಸಮಾಜ ಅವರನ್ನು ಮಾನವೀಯವಾಗಿ ನಡೆಸಿಕೊಳ್ಳಬೇಕೆಂಬ ಚಾರಿತ್ರಿಕ ತೀರ್ಪು ನೀಡಿತ್ತು, ಈ ತೀರ್ಪನ್ನು ವಿಶ್ವಸಂಸ್ಥೆ ಕೂಡ ಗೌರವಿಸಿತ್ತು, ಆಗ ಈ ಸಮುದಾಯವು ಈತನಕದ ಶೋಷಣೆಯ ವಿರುದ್ಧದ ಹೋರಾಟಕ್ಕೆ ಸಿಕ್ಕ ಜಯ ಎಂದು ಒಕ್ಕೊರಲಿನಿಂದ ಕೂಗಿತ್ತು.

ಅಂತೆಯೇ ಈಚೆಗೆ ಈ ಸಮುದಾಯದವರ ಅಪರೂಪದ ಸಾಧನೆಗಳೂ ಗಮನ ಸೆಳೆಯುತ್ತಿವೆ. ಡಿಸೆಂಬರ್ 2013 ರಲ್ಲಿ ತಮಿಳುನಾಡಿನಲ್ಲಿ 23 ವರ್ಷದ ಪದವೀಧರೆ ಲಿಂಗಾಂತರಿ ಸ್ವಪ್ನ ಮೊದಲ ಬಾರಿಗೆ ಟಿಪಿಎಸ್ (ತಮಿಳುನಾಡು ನಾಗರಿಕ ಸೇವಾ ಆಯೋಗ) ಪರೀಕ್ಷೆ ಬರೆದಿದ್ದಳು. ಆಗಸ್ಟ್ 15 2014 ರಂದು ಲಿಂಗಾಂತರಿ ಪದ್ಮಿನಿ ಪ್ರಕಾಶ್ ಕೊಯಮತ್ತೂರು ಮೂಲದ ಲೋಟಸ್ ಟಿವಿಯಲ್ಲಿ ಮೊದಲ ಬಾರಿಗೆ ವಾರ್ತೆ ಓದಿದಳು. ಈಕೆ ದೇಶದ ಮೊದಲ ಲಿಂಗಾಂತರಿ ಟಿ.ವಿ ಆಂಕರ್ ಆದಳು.

ನಾವು ಚುನಾವಣೆ ಎಂದು ಮಾತನಾಡುವಾಗ ಹೆಣ್ಣು ಗಂಡೆಂಬ ಲಿಂಗಾಧಾರದ ಸಮಾಜವನ್ನು ಗುರುತಿಟ್ಟುಕೊಳ್ಳುತ್ತೇವೆ. ಆದರೆ ಹೆಣ್ಣು ಗಂಡಲ್ಲದ ಪ್ರತ್ಯೇಕ ಲಿಂಗಿಗಳೂ ನಮ್ಮ ಜತೆಗೇ ಬದುಕುತ್ತಿದ್ದಾರೆ. ಮಧು ಕಿನ್ನರ್ ಅವರಂತವರು ಎತ್ತುವ ಪ್ರಶ್ನೆಗಳಿಗೂ ಉತ್ತರ ಕೊಡಬೇಕಾಗುತ್ತದೆ. ರಾಯಗಡದ ಮೇಯರ್ ಆದ ಮಧು ದ್ವಿಲಿಂಗಾಧರಿತ ರಾಜಕೀಯ ಆಡಳಿತದ ಮಿತಿಗಳನ್ನು ಎತ್ತಿ ತೋರಿಸುವಂತೆ ಸಶಕ್ತ ಆಡಳಿತ ಕೊಡಲಿ. ಇದು ಚುನಾವಣಾ ಸ್ಪರ್ಧೆಗೆ ಈ ಸಮುದಾಯದ ಸದಸ್ಯರಲ್ಲಿ ಹೊಸ ಹುರುಪನ್ನು ಮೂಡಿಸಲಿ.

■ ಅರುಣ್ ಜೋಳದಕೂಡ್ಲಿಗಿ

...ಗಲೂ ನಾವು ಇಂಟರ್ನೆಟ್‌ನಲ್ಲಿ ನೋಡಿದರೆ ವಯಸ್ಸಿಗೆ ...ನುಗುಣವಾಗಿ ಮಾನವ ದೇಹ ಹೇಗೆ ಜರ್ಜರಿತವಾಗುತ್ತಾ ...ಹೋಗುತ್ತದೆ ಎಂಬುದನ್ನು ಅಂದಾಜು ಮಾಡಬಹುದು.


ಮುದಿತನಕ್ಕೆ ಮದ್ದೇ ಇಲ್ಲ. ನಮ್ಮ ಹಿರಿಯ ...ಜಕಾರಣಿಗಳಾದ ಅಡ್ವಾಣಿ, ಮುರಳಿಮನೋಹರ ಜೋಷಿ, ...ನ್.ಡಿ.ತಿವಾರಿ, ಅಥವಾ ನಮ್ಮ ಪೇಜಾವರಶ್ರೀ ...ಮರುಗಳನ್ನು ಕುರುಕ್ಷೇತ್ರ ಯುದ್ಧದಲ್ಲಿಯ ಭೀಷ್ಮ, ದ್ರೋಣ, ...ಕುನಿ, ಕೃಷ್ಣ ಇವರ ಪಾತ್ರದಲ್ಲಿ ಕಲ್ಪಿಸಿಕೊಂಡು ನೋಡಿ. ...ನೋಗಟ್ಟಲೆ ಭಾರವಿರುವ ಲೋಹದ ಮೈಕವಚ, ಬಾಹು ...ವಚ, ಕಾಲು ಕವಚ, ತಲೆಗೆ ಶಿರಾಸ್ತ್ರಾಣ ಇವನ್ನು ತೊಡಿಸಿ ...ನತರ ಕೈಗೆ ಮಣ ಭಾರದ ಗದೆ ಖಡ್ಗ ಭರ್ಚಿ ಬಿಲ್ಲು-ಬಾಣ ...ವನ್ನೂ ಕೊಟ್ಟು, ಅವರೆಲ್ಲಾ ನೂಕಾಡುತ್ತಾ ಕೊಸರಾಡುತ್ತಾ ...ಂದು ಐವತ್ತು ಅಡಿ ನಡೆಯಲು ಹೇಳಿ ನೋಡಿ. ಈ ...ಬುದಿ ರಾಜಕಾರಣಿ ಅಥವಾ ಮಠಾಧೀಶರಲ್ಲಿ ಯಾರಿಗೂ ...ದು ಸಾಧ್ಯವಾಗಲಿಕ್ಕಿಲ್ಲ. (83 ವರ್ಷದ ಪೇಜಾವರರನ್ನು ...ಶ್ರೀಕೃಷ್ಣನ ಪಾತ್ರದಲ್ಲಿ ಕಲ್ಪಿಸಿಕೊಂಡು ಬಿಡಿ, ಆದರಿಂದ ...ವರಿಗೆ ಸ್ವಲ್ಪ ಖುಷಿಯಾಗಬಹುದು ಪಾಪ).

ಇಂತಹಾ ಜರ್ಜರ ದೈಹಿಕ ಅವಸ್ಥೆಯಲ್ಲಿ ಅವರು ...ಯಂಕರ ಆನೆ ಕುದುರೆಗಳ ಎದುರಲ್ಲಿ ಗದೆ-ಖಡ್ಗ ಬೀಸುತ್ತಾ ...ಯುದ್ಧ ಮಾಡುವ ದೃಶ್ಯ ಕಲ್ಪಿಸಿಕೊಂಡಾಗ ಕನಿಕರ ಹುಟ್ಟುತ್ತದೆ; ...ತೆಗೆ ವಿಪರೀತ ನಗುವೂ ಬರುತ್ತದೆ. ಹಾಸ್ಯ ಪ್ರಜ್ಞೆ ...ರುವ ನಿರ್ದೇಶಕರು ಟಿವಿ ಹಾಗೂ ಸಿನಿಮಾಗಳ 80 ...ರ್ಷ ದಾಟಿದ ನಟ ನಟಿಯರನ್ನೆಲ್ಲಾ ಹಾಕಿಕೊಂಡು 'ಮೂಲ ...ಕುರುಕ್ಷೇತ್ರ ಯುದ್ಧ' ಎಂಬ ಟೈಟಲಿನ ಒಂದು ಒಳ್ಳೆಯ ...ಮೋಡಿ ಸೀರಿಯಲ್ ಮಾಡಿದರೆ ಹಿಟ್ ಆಗಬಹುದು.

ಗ್ರೀಸ್ ಈಜಿಪ್ಟ್ ರೋಮ್ ದೇಶಗಳಲ್ಲೂ ಇಂತಹ ...ಪಾತ್ರಪ... ಅಸಂಬದ್ಧ ಪುರಾಣ ಕತೆಗಳಿರುವುದು ನಿಜ. ...ದರೆ ಈ ಪುರಾಣ ಕತೆಗಳನ್ನು ಕಟ್ಟಿದ ಪುರಾತನ ...ಧರ್ಮದವರು ಆ ದೇಶಗಳಲ್ಲಿ ಈಗ ಉಳಿದಿಲ್ಲ, ಹಾಗಾಗಿ ...ದೇಶಗಳಲ್ಲಿ ಈಗಿರುವ ಹೊಸ ಧರ್ಮದವರು ಈ ...ಪುರಾಣಗಳನ್ನು ತಮ್ಮ ಪೂರ್ವಜರ ನೈಜ ಇತಿಹಾಸ ...ಎಂದು ನಂಬುವುದಿಲ್ಲ ಹಾಗೂ ಅದರಲ್ಲಿ ಬರುವ ...ಕತೆಗಳನ್ನು ದೇವರೆಂದು ಅಲ್ಲಿ ಯಾರೂ ಪೂಜಿಸುವುದಿಲ್ಲ. ...ಪುರಾಣಗಳಲ್ಲಿರುವ ಅಸಂಗತಗಳನ್ನು ಬಯಲಿಗೆಳೆದರೆ ...ಯಾರೂ ತಮ್ಮ ಧಾರ್ಮಿಕ ಭಾವನೆಗಳಿಗೆ ...ಘಾಯಾಯಿತೆಂದು ಬೀದಿಗಿಳಿದು ಗಲಾಟೆ ಮಾಡುವುದಿಲ್ಲ. ...ಆದರೆ ಭಾರತದಲ್ಲಿ ನಮ್ಮ ಪುರಾಣಗಳಲ್ಲಿಯ ...ಸಂಗತಗಳನ್ನು ಎತ್ತಿ ತೋರಿಸಿದರೆ ಜೀವ ಬೆದರಿಕೆ ...ಎದುರಿಸಬೇಕಾಗುತ್ತದೆ. ನನಗೂ 64 ವರ್ಷ ...ವಯಸ್ಸಾಗಿರುವುದರಿಂದ ಸ್ವಾನುಭವ ನಿಜ ಅನುಭವ ...

- ಪ್ರವೀಣ್ ಎಸ್ ಶೆಟ್ಟಿ, ಮಂಗಳೂರು

ಸಮಾನತೆಯ ಸಂಕೇತ ಮತ್ತು ಅದರ ಸಾಧ್ಯತೆಗೆ ಸಮೀಕರಣಗಳು




ಗಣಿತದಲ್ಲಿ = ಸಂಕೇತವನ್ನು ಅನೇಕ ಕಡೆ ಬಳಸುತ್ತೇವೆ. ಹಾಗೆಯೇ ಇದೇ ಸಂಕೇತವನ್ನು ವಿಜ್ಞಾನದಲ್ಲೂ ಸಮೀಕರಣಗಳಲ್ಲಿ ಸಮದೂಗಿಸುವ ಸಂದರ್ಭಗಳಲ್ಲಿ ಬಳಸುತ್ತೇವೆ. ಈ ಎರಡೂ ಜ್ಞಾನ ಶಿಸ್ತುಗಳಲ್ಲಿ ಗುಂಪುಗಳ ನಡುವಣ ಸಮಾನತೆಯನ್ನು ಹೇಳುವಲ್ಲಿ = ಅನ್ನು ಬಳಸುತ್ತೇವೆ. ಆದೇ ರೀತಿಯಲ್ಲಿ ಹಲವಾರು ಬಾರಿ ನಮ್ಮ ಮಾತುಗಳ ನಡುವೆ ಇಕ್ವೇಶನ್‌ಗಳು ಸರಿ ಇಲ್ಲ ಅಂತಲೂ ಹೇಳುತ್ತೇವಲ್ಲವೇ? ಅಂದರೆ ಇಲ್ಲಿ ಏನೋ ಸಮಾನತೆಯ ಕೊರತೆ ಇದೆ ಅಂತಲೋ ಅಥವಾ ಸಮಾನ ಚಿಂತನೆಯ ವಿಚಾರದಲ್ಲಿ ಕೊರತೆ ಎಂತಲೋ ಭಾವಿಸುವುದು ಸಹಜ. ಅಂದಂತೆ ಸಮೀಕರಣಗಳಲ್ಲಂತೂ = ಈ "ಇಕ್ವಲ್ಸ್" ಬಳಕೆ ತುಂಬಾನೇ ಕಾಮನ್, ಅಷ್ಟರ ಮಟ್ಟಿಗೆ ಅದು ಜನಪ್ರಿಯ.

ಸಮೀಕರಣದ ಮೂಲ ತರ್ಕವನ್ನು ಸಾಧ್ಯಗೊಳಿಸುವ ಈ ಸಂಕೇತವನ್ನು ಜಗತ್ತಿಗೆ ಮೊದಲು ಪರಿಚಯಿಸಿದವರು ರಾಬರ್ಟ್ ರೆಕಾರ್ಡೆ ಎಂಬ ಗಣಿತಜ್ಞ, ರಾಬರ್ಟ್ ಏನೂ ತನ್ನ ಪದವಿಗಳಿಂದ ಗಣಿತಜ್ಞರಲ್ಲ, ಬ್ರಿಟನ್ನಿನ ಈ ವಿಜ್ಞಾನಿ ವೈದ್ಯಕೀಯದ ಪದವಿಗಳಿಸಿದವರು. ವಿಜ್ಞಾನದಲ್ಲಿ ಗಣಿತದ ತತ್ವಗಳ ಬಳಕೆಯಲ್ಲಿ ಅಪಾರ ಆಸಕ್ತ ಮತ್ತು ಅಂತಹ ಸಂಗತಿಗಳು ಜನ ಸಾಮಾನ್ಯರನ್ನು ತಲುಪಬೇಕೆನ್ನುವ ಮತ್ತು ಆಮೂಲಕ ಸಮಾನತೆಯನ್ನು ಜನಪರಗೊಳಿಸಿ, ಗಣಿತವನ್ನೂ ಜನರಿಗೆ ಹತ್ತಿರವಾಗಿಸುವ ಆಶಯ ಹೊಂದಿದ್ದ ವ್ಯಕ್ತಿ ಈತ. ಆ ಕಾಲದಲ್ಲಿ ಗಣಿತದಂತಹಾ ಸಂಗತಿಗಳು ಜನಸಾಮಾನ್ಯರ ಭಾಷೆಯಾದ ಇಂಗ್ಲೀಷಿನಲ್ಲಿ ರಚನೆಯಾಗುತ್ತಿರಲಿಲ್ಲ, ಹಾಗಾಗಿ ಮೊಟ್ಟ ಮೊದಲು ಜನಸಾಮಾನ್ಯರಿಗೆ ಗಣಿತವನ್ನು ಜನರ ಭಾಷೆಯಾದ ಇಂಗ್ಲೀಷಿನ ಮೂಲಕ ಪರಿಚಯಿಸಿದ ಕೀರ್ತಿ ಈತನದೇ.

1549ರಲ್ಲಿಯೇ ಅಂಕಗಣಿತವನ್ನು ಮೊಟ್ಟ ಮೊದಲಬಾರಿಗೆ ಇಂಗ್ಲೀಷಿನಲ್ಲಿ ಬರೆದು ಪ್ರಕಟಿಸುತ್ತಾರೆ. ಆ ಕಾಲದಲ್ಲಿ ಆವರೆವಿಗೂ ಗಣಿತದ ಎಲ್ಲಾ ಪ್ರಕಟಣೆಗಳೂ ಲ್ಯಾಟಿನ್ ಅಥವಾ ಗ್ರೀಕ್ ಭಾಷೆಯಲ್ಲಿಯೇ ಇರುತ್ತಿದ್ದವು. ಅವೆಲ್ಲಾ ಸಾಮಾನ್ಯರ ಓದಿಗೆ ವಂಚಿತವಾಗಿದ್ದವು. ಅದಕ್ಕಾಗಿ ಗಣಿತದಂತಹಾ ಸಂಗತಿಗಳು ಜನಸಾಮಾನ್ಯರಿಗೂ ಸಿಗಬೇಕೆಂಬ ಆಕಾಂಕ್ಷೆಯಲ್ಲಿ ಈ ಪುಸ್ತಕವನ್ನು ಸಾಮಾನ್ಯ ಜನರ ಭಾಷೆಯಾದ ಇಂಗ್ಲೀಷಿನಲ್ಲಿ ಬರೆಯುತ್ತಾರೆ. ಅದು ಅಲ್ಲದೆ ಮುಂದೆ 1552ರಲ್ಲಿ ಯೂಕ್ಲೀಡಿಯನ್ ಗಣಿತದ ಸಂಗತಿಗಳುಳ್ಳ ವಿಚಾರಗಳನ್ನು "ಜ್ಞಾನಕ್ಕೆ ರಹದಾರಿ" ಎನ್ನುವ ಪುಸ್ತಕ ಪ್ರಕಟಿಸುವ ಮೂಲಕ ಜ್ಞಾನ ಸಮಾನತೆಯ ಸಂದೇಶವನ್ನು ವ್ಯಕ್ತಪಡಿಸುತ್ತಾರೆ. ಜನಸಾಮಾನ್ಯರೂ ಪಂಡಿತರ ಜ್ಞಾನವನ್ನು ತಿಳಿಯಲು ಹಕ್ಕುದಾರರು ಎಂಬ ನಿಲುವುಳ್ಳ ರಾಬರ್ಟ್ ಗಣಿತವನ್ನು ಜನಸಾಮಾನ್ಯರ ಭಾಷೆಗೆ ತರುವ ಮೂಲಕ ಸಮಾನತೆಯ ಸಾಧನೆಗೆ ಜ್ಞಾನದ ಬಾಗಿಲುಗಳು ತೆರೆದಿರಬೇಕೆಂಬ ಸಂದೇಶವನ್ನು ಕೊಟ್ಟವರು. ಬಹುಶಃ ಇಂದಿನ 'ಓಪನ್ ಆಕ್ಸೆಸ್' -ಮುಕ್ತ ಆಕರಗಳು- ಹಾಗೂ ಕೈಗೆಟಕುವ ಹಾಗಿನ ಜ್ಞಾನ ಶಿಸ್ತನ್ನು 16ನೇ ಶತಮಾನದಲ್ಲಿಯೇ ಭಿನ್ನವಾಗಿ ಕಂಡ ಮನಸ್ಸು ರಾಬರ್ಟ್ ಅವರದ್ದು. ಅಂದಂತೆ ಈ ಮುಕ್ತ ಆಕರಗಳ ಕೊಡುಗೆಯಿಂದಾಗಿಯೇ ಜ್ಞಾನ ಜಾಗತಿಕವಾಗಿ ಮುಕ್ತವಾಗುತ್ತಾ ಅಕ್ಷರಶಃ ಕೈಗೆಟಕುವಂತೆ -ಕೈ ಬೆರಳ ತುದಿಯಲ್ಲಿರುವಂತೆ- ಆಗಿದೆ. ಅವರ ಸಮಾನತೆಯ ಚಿಂತನೆಯ ಉತ್ಪನ್ನವಾಗಿಯೇ "ಈಕ್ವಲ್ಸ್" = ಸಂಕೇತ ಕೂಡ ಅವರದ್ದೇ ಕೊಡುಗೆಯಾಗಿ ಪ್ರಚಲಿತಕ್ಕೆ ಬಂದಿದೆ. ಮಾತ್ರವಲ್ಲವೇ ಮುಂದಿನ ವಿಜ್ಞಾನದ ಬಹುತೇಕ ಆಗು ಹೋಗುಗಳ ವಿವರಣೆಗಳಾದ ಸಮೀಕರಣಗಳಲ್ಲಿ ಸಹಜವಾಗಿ ಬಳಕೆಯಾಗಿದೆ. ಇದರ ಹಿಂದಿರುವ ಈ ಬಗೆಯ ಸಮಾನತೆಯ ಸಾಧ್ಯಗೊಳಿಸುವಿಕೆಯ ತಿಳಿವು ಇಂದಿನ ಅನೇಕ ವಿಜ್ಞಾನದ ಮನಸ್ಸುಗಳದ್ದೂ ಹಾಗೂ ಅದರ ಆಸಕ್ತ ಮನಸ್ಸುಗಳದ್ದೂ ಆಗಿದೆ.

ರಾಬರ್ಟ್ ರೆಕಾರ್ಡೆ ಅವರ ಮಾತಿನಂತೆ "ಸಮಾನಾಂತರವಾಗಿರುವ ಒಂದೇ ಉದ್ದಳತೆಯ ಎರಡು ಸರಳರೇಖೆಗಳು ಒಂದನ್ನೊಂದು ಸಮವಾಗಿರುವಷ್ಟು ಮತ್ತೇನೂ ಸಮಾನವಾಗಿರದು" ಎಂಬದರಲ್ಲಿ ಅವರ ಸಮಾನತೆಯ ಸಂಕೇತದ ಅರ್ಥವಿದೆ. ಎರಡು ಸಂದರ್ಭಗಳು ಸಾಧ್ಯವಾದಷ್ಟೂ ಜೊತೆಯಾಗಿರುವಷ್ಟು ಅವು ಸಮಾನತೆಯ ಸಾಧನವಾಗಿರುತ್ತವೆ ಎಂಬುದೂ ಕೂಡ. ಈ ಇಕ್ವಲ್ ಅನ್ನು ಬಳಕೆಗೆ ಮೊದಲು ಕೊಟ್ಟಾತ ಈ ವೈದ್ಯ-ಗಣಿತಜ್ಞ ವೈದ್ಯನಾಗಿದ್ದು ಚಿಕಿತ್ಸೆಯಾಗಿ ಕೊಡುವ ಔಷಧಕ್ಕಿಂತಲೂ ಬೃಹತ್ ಜ್ಞಾನ ಶಾಖೆಯ ಅರ್ಥಪೂರ್ಣ ವಿವರವನ್ನು ಕೊಡಬಲ್ಲ ಗಣಿತವು ಎಲ್ಲರನ್ನೂ ತಲುಪಬೇಕು ಎಂದು ಕೊಂಡವರು. ಅದಕ್ಕಾಗಿ ಗಣಿತವು ಜ್ಞಾನದ ರಹದಾರಿ ಎಂದು ಕಂಡುಕೊಂಡು ಅದೂ ಜನಸಾಮಾನ್ಯರ ತಲುಪಬೇಕೆನ್ನುವ ಆಶಯದ ಹಿನ್ನೆಲೆಯಲ್ಲಿ, ಹಾಗೆಯೇ ಸಮಾನತೆಯ ಸಂಕೇತದ ಕೊಡುಗೆಯನ್ನು ಕೊಟ್ಟವರು. ಈತ ಯೂರೋಪಿನಾದ್ಯಂತ ವೈಜ್ಞಾನಿಕ ಚಿಂತನೆಗೆ ಗಣಿತದ ಬೆಂಬಲವನ್ನು ಕೊಡುವಲ್ಲಿ ಮಹತ್ವದ ಪಾತ್ರವಹಿಸುತ್ತಾರೆ. ಒಂದು ರೀತಿಯಲ್ಲಿ ಆ ಕಾಲದಲ್ಲೇ ಜನಸಾಮಾನ್ಯರ ಸಂಗತಿಯಾಗುವಂತೆ ಗಣಿತ ಮತ್ತು ವಿಜ್ಞಾನವನ್ನು ಪರಿಚಯಿಸುತ್ತಾರೆ. ಇದಕ್ಕೊಂದೇ ರಾಜಕೀಯ ವೈರತ್ವವನ್ನೂ ಗಳಿಸಿಕೊಳ್ಳಬೇಕಾಗಿದ್ದು ಪ್ರಸ್ತುತ ಸಂದರ್ಭಗಳೂ ಅದಕ್ಕಿಂತಾ ಭಿನ್ನಾವಾಗಿರದ ಸಂಗತಿಯನ್ನು ನೆನಪಿಸುತ್ತವೆ. ಅದಕ್ಕಾಗಿಯೇ ರಾಬರ್ಟ್ ತನ್ನ ಕೊನೆಗಾಲವನ್ನು ರಾಜಕೀಯ ಕೈದಿಯಾಗಿ ಜೈಲಿನಲ್ಲೇ ಕಳೆದು ಕೊನೆಯುಸಿರೆಳೆಬೇಕಾದ್ದು ಸಮಾನತೆಯ ಪರವಾದ ಸಂಗತಿಗಳಿಗೆ ರಾಜಕೀಯದ ಸ್ಥಿತಿಯನ್ನು ನೆನಪಿಸುತ್ತವೆ.

ಸಮಾನತೆಗೊಂದು ಸಂಕೇತವನ್ನು ಕೊಟ್ಟ ಮಹಾನುಭಾವ ಮಾತ್ರವೇ ಅಲ್ಲ ಅವರ ಮತ್ತೂ ವಿಶೇಷವೆಂದರೆ ಆತನ ಎಲ್ಲಾ ಪುಸ್ತಕಗಳೂ ಗುರು-ಶಿಷ್ಯರ ಸಂಭಾಷಣೆಯಂತೆ ವಿಜ್ಞಾನ-ಗಣಿತವನ್ನು ಜನ ಸಾಮಾನ್ಯರಿಗೆ ತಿಳಿಸುವ ಮಾದರಿಗಳನ್ನು ಒದಗಿಸುತ್ತವೆ. ಆ ಮೂಲಕವೂ ಕಷ್ಟವೆಂದು ಪಾಂಡಿತ್ಯದ ಹಿನ್ನೆಲೆಯಲ್ಲಿಯೇ ನೋಡಿದ್ದ ಕಲಿಕೆಯನ್ನೂ ಒಂದು ಇಕ್ವಿಟಿಯ ಸಾಧನೆಯಲ್ಲಿ ನೋಡಿದ್ದಾತ.




ವಿಜ್ಞಾನದ ಬಹುತೇಕ ಆಗುಹೋಗುಗಳು ಸಮತೂಗಿಸುವ ಮತ್ತು ಒಂದನ್ನೊಂದು ಸಮಭಾವದಲ್ಲಿ ಪ್ರಕ್ರಿಯೆಗೊಳಿಸುವ ಸಂಗತಿಗಳೇ ಆಗಿರುತ್ತವೆ. ಇವೆಲ್ಲವನ್ನೂ ಸಮೀಕರಣಗಳಾಗಿಸಿ ವಿವರಿಸುವುದುಂಟು. ರಾಬರ್ಟ್ ಅವರ ಕೊಡುಗೆ ಅದನ್ನು ಸಂಕೇತದಿಂದ ಸಾಧಿಸಿದ್ದರೂ ವಿಜ್ಞಾನಗಳಲ್ಲಿ ಎಲ್ಲೆಂದರಲ್ಲಿ ಬಂದು ವಿವರಿಸುವ ಸಮೀಕರಣದ ಸಂಗತಿಗಳನ್ನೆಲ್ಲಾ ಒಂದೇ ಪ್ರಬಂಧದಲ್ಲಿ ಹೇಳಲು ಖಂಡಿತಾ ಸಾಧ್ಯವಾಗದು. ಆದರೂ ವಿಜ್ಞಾನದ ಅನುರಣನವು ಸಮೀಕರಣಗಳ ಜೊತೆೀ ಸಾಗುವುದರಿಂದ ರಾಬರ್ಟ್ ನೆಪದಲ್ಲಿ ಒಂದಷ್ಟು ಸಮೀಕರಣಗಳ ಸಂಗತಿಗಳನ್ನು ಮೆಲುಕು ಹಾಕುವುದಾಗಿದೆ.. ಅದರಲ್ಲೂ ಕನ್ನಡದ ಓದುಗರಿಗೆ ಹೇಳುವುದು ಮತ್ತೂ ಕಷ್ಟವೇ! ಕನ್ನಡದ ಓದು ಎಂದರೆ ಕೇವಲ ಸಾಹಿತ್ಯದ ಓದಿನ ಗ್ರಹಿಕೆಯಿರುವುದರಿಂದ, ಮತ್ತೂ ಆ ಮೂಲಕವೇ ವಿಜ್ಞಾನ ಮತ್ತು ಗಣಿತವನ್ನೂ ಅರ್ಥೈಸಿಕೊಳ್ಳುವುದರಿಂದ ಇದರ ಸಂಪೂರ್ಣ ತಿಳಿವು ಇನ್ನೂ ಭಿನ್ನವಾಗಿರುತ್ತದೆ. ಅದರ ಮಧ್ಯೆಯೂ ಸಮೀಕರಣಗಳ ಸಂಗತಿಗಳು ವಿಜ್ಞಾನದ ಅನುರಣನಕ್ಕೆ ಸದಾ ಬೇಕಿವೆ.

ಸಮೀಕರಣಗಳ ಸಂಗತಿಗಳು

ಈ ಸಮೀಕರಣಗಳೆಂದರೆ ಅವು ಗಣಿತವೇ ಎನ್ನುವ ತೀರ್ಮಾನ ಬಹುತೇಕ ಓದುಗರದ್ದು, ಒಂದಷ್ಟು ಮಟ್ಟಿಗೆ ಅದು ನಿಜ ಕೂಡ. ಅದಕ್ಕಾಗಿಯೇ ಕೆಲವು ವಿಜ್ಞಾನ ಶಾಖೆಗಳು ಮುಖ್ಯವಾಗಿ ಜೀವಶಾಸ್ತ್ರೀಯ ಅಧ್ಯಯನಗಳು ಅದರಲ್ಲೂ ಅದರ ಅನ್ವಯದ ಓದುಗಳು ಗಣಿತವನ್ನು ಹೆಚ್ಚಾಗಿ ಬಳಸದೆ ಅದರ ಮೂಲ ಲಾಭದಲ್ಲಿ ಸುತ್ತಾಡಿ ಕಲಿಕೆಯನ್ನು ಮುಗಿಸುತ್ತಾರೆ. ಇದರಲ್ಲಿ ಕೃಷಿ ವಿಜ್ಞಾನದ ವಿದ್ಯಾರ್ಥಿಗಳೂ, ವೈದ್ಯಕೀಯ ವಿದ್ಯಾರ್ಥಿಗಳೂ ಹೊರತಲ್ಲ, ಬಹುತೇಕ ನಮ್ಮ ದೇಶದ ಜೀವವಿಜ್ಞಾನದ ವಿದ್ಯಾರ್ಥಿಗಳು ಗಣಿತವನ್ನು ಅಂಕಶಾಸ್ತ್ರಕ್ಕೇ ಸೀಮಿತಗೊಳಿಸಿ ಕೂಡುವ ಕಳೆಯುವ ಲೆಕ್ಕವಾಗಿಸಿ ಮುಗಿಸುತ್ತಾರೆ. ಅದಕ್ಕಾಗಿ ವಿಜ್ಞಾನದ ಪಾಠದಲ್ಲಿ ಅದರಲ್ಲೂ ಜೀವಶಾಸ್ತ್ರದ ಕಲಿಕೆಯಲ್ಲಿ ಪಾಠದ ಮಧ್ಯೆ ಬೋರ್ಡಿನ ಮೇಲೆ ಸಮೀಕರಣವನ್ನೋ, ಗ್ರಾಫನ್ನೋ ಹಾಕಿದಾಗ ವಿದ್ಯಾರ್ಥಿಗಳು ಸ್ವಲ್ಪ ಕಸಿವಿಸಿಮಾಡಿಕೊಂಡು ನೋಡುತ್ತಾರೆ. ಎಂತಹದ್ದೋ ಏನೋ? ಏನು ಕಷ್ಟನೋ ಏನೋ ಅನ್ನುವಂತೆ.

ಮುಖ್ಯವಾಗಿ ಸಮೀಕರಣಗಳು ವಿಕಾಸವನ್ನು ಹೀಗೆ ನೋಡಬಹುದು. ಜಗತ್ತಿನ ಒಟ್ಟಾರೆ ಆಗುಹೋಗುಗಳು ಒಂದನ್ನೊಂದು ಸಂಬಂಧವಿರದೇ ವರ್ತಿಸವು. ಸಾಮಾನ್ಯವಾಗಿ ನಮ್ಮೆಲ್ಲಾ ಗ್ರಹಿಕೆಗಳೂ ಸಾಮಾಜಿಕ ಹಿನ್ನೆಲೆಯಲ್ಲಿನವು, ಹಾಗಾಗಿ ನಾವು ನಮ್ಮನ್ನು ಒಂದು ಇಡಿಯಾದ ಪಾತ್ರದಾರರನ್ನಾಗಿಸಿ ಉಳಿದೆಲ್ಲವನ್ನೂ ಹಾಗೆಯೇ ಕಾಣಬರುವ ಪಾತ್ರಗಳ ಜತೆಯಲ್ಲಿ ನಡೆಯುವ ಪ್ರಕ್ರಿಯೆಗಳಂತೆ ಗಮನಿಸುತ್ತೇವೆ. ಆದಾಗಿ ಅವೆಲ್ಲವೂ ಒಂದನ್ನೊಂದು ಬರೀ ಅರ್ಥಪೂರ್ಣ ಮಾತ್ರವಲ್ಲ, ಸಮತೂಕದಲ್ಲಿ ಮಾತ್ರವೇ ಪ್ರಕ್ರಿಯೆಗಳ ವರ್ತನೆಗಳಾಗಿರುತ್ತವೆ. ಅಲ್ಲದೇ ಅವೆಲ್ಲವೂ ಸೂಕ್ಷ್ಮಾತಿಸೂಕ್ಷ್ಮ ಮೂಲ ವಸ್ತುಗಳ ವರ್ತನೆಯನ್ನು ಸಂಬಂಧಿರುತ್ತವೆ. ಇವೆಲ್ಲವನ್ನೂ ಸರಿಹೊಂದಿಸುವ ಆ ಮೂಲಕ ಸತ್ಯದ ತಿಳಿವನ್ನು ನಮ್ಮದಾಗಿಸುವ ಜಾಣತನವೇ ಸಮೀಕರಣಗಳು. ಸಮೀಕರಣಗಳು ಅನೇಕ ಬಾರಿ ನಮಗೆ ಜಾಣತನವನ್ನು ಸಹಜವಾಗಿಸುವುದನ್ನು ಕಲಿಸುತ್ತವೆ. ಆ ಮೂಲಕ ನಾವು ತಲುಪುವ ಗುರಿಗಳನ್ನು ಸುಲಭ ಮಾಡುತ್ತವೆ ಈ ಸಮೀಕರಣಗಳು. ವಿಜ್ಞಾನದ ಸಂಕೀರ್ಣತೆಗೆ ಅರ್ಥಪೂರ್ಣ ಭಾಷೆಯನ್ನು ಒದಗಿಸುವುದೇ ಈ ಸಮೀಕರಣಗಳು.

ವಿಜ್ಞಾನವನ್ನು ಗಣಿತೀಯ ಮಾಧ್ಯಮದ ಸಂವಹನದಲ್ಲಿ ಬಳಸುವ ಗ್ರಾಫ್ ಆಗಲಿ ಸಮೀಕರಣವಾಗಲಿ ಇಲ್ಲದೆ ವಿಜ್ಞಾನದಲ್ಲಿ ವಿವರಣೆಗಳು ಮುಗಿಯವು. ಅಷ್ಟರ ಮಟ್ಟಿಗೆ ಸಮೀಕರಣಗಳು ವಿಜ್ಞಾನದಲ್ಲಿ ಜನಪ್ರಿಯ. ಒಂದನ್ನೊಂದು ಸಮೀಕರಿಸದೆ ವಿಜ್ಞಾನದಲ್ಲಿ ವಿಚಾರಗಳು ಚಾಲ್ತಿಯಲ್ಲಿರವು. ಎಲ್ಲೋ ಪಾರ್ಕಿನಲ್ಲೋ, 'ತೋಟದಲ್ಲೋ, ಆಟದ ಬಯಲಿನಲ್ಲೋ ನಡೆವಾಗ ಅಡ್ಡ ದಾರಿಯ ಕಾಲುದಾರಿ ಕಂಡರೆ ವಿಜ್ಞಾನದ ವಿದ್ಯಾರ್ಥಿಯಾಗಿದ್ದರೆ ನಿಮಗೆ ಪೈಥಾಗೊರಸ್ ನೆನಪಾಗದೆ ಇರುವುದಿಲ್ಲ, ಶಾಲಾದಿನಗಳಲ್ಲಿ ಮೊದಲು ಪರಿಚಯವಾಗುವ ಸೈದ್ಧಾಂತಿಕ ಶಾಸ್ತ್ರಜ್ಞ ಪೈಥಾಗೊರಸ್, ಶತಮಾನಗಳಷ್ಟು ದೀರ್ಘಕಾಲದ ದೂರ ಸವೆಸಿ ಬಂದು ತ್ರಿಕೋನದ ಕರ್ಣದ ದೂರದ ಸಂಬಂಧವನ್ನು ಈ ಅಡ್ಡದಾರಿಗಳಲ್ಲಿ ಹಾಯುವಾಗ ಕಂಡಂತೆ ಭಾಸವಾಗುವಂತೆ ಮಾಡುವುದು ಖಂಡಿತ. ಪೈಥಾಗೊರಸ್ ಪ್ರಮೇಯದ ಸಮೀಕರಣವು ತ್ರಿಕೋನದ ಬಾಹುಗಳ ಸಂಬಂಧವನ್ನು ಕರ್ಣದ ಅಳತೆಯಲ್ಲಿ ಸಮೀಕರಿಸುತ್ತದೆ. ಅದರ ಪ್ರಾಯೋಗಿಕ ಬಳಕೆಯೇ ನಮ್ಮ ಅಡ್ಡದಾರಿಯ ಓಡಾಟ. ಸುಲಭವಾಗಿ ದೂರವನ್ನು ಹತ್ತಿರದಲ್ಲಿ ಕ್ರಮಿಸುವ ಬಗೆಯನ್ನು ಕಲಿಸುವ ರೀತಿಯನ್ನು ಪೈಥಾಗೊರಸ್ ಸಮೀಕರಣವಾಗಿಸಿ ಕೊಟ್ಟಾತ. ಪೈಥಾಗೊರಸ್‌ನ ಸಮೀಕರಣದ ಬಳಕೆಯಿಂದಲೇ ಜ್ಯಾಮಿತಿಯ, ಜತೆಗೆ ತ್ರಿಕೋನಮಿತಿಯ ವಿಕಾಸವಾಗಿದೆ. ಇಂದಿನ ಜಿ.ಪಿ.ಎಸ್ ಕೂಡ ಈ ಸಮೀಕರಣವನ್ನು ಬಳಸಿಕೊಂಡಿದೆ. ಮೂಲಭೂತವಾಗಿ ಈ ಜಿ.ಪಿ.ಎಸ್-ಗ್ಲೋಬಲ್ ಪೊಸಿಶನಿಂಗ್ ಸಿಸ್ಟಂ-ನೆಲದ ನೆಲೆಯನ್ನು ಸ್ಥಿರವಾಗಿ ಗುರುತಿಸುವ ಪ್ರಕ್ರಿಯೆ ಅಷ್ಟೆ. ಹಾಗಾಗಿ ಅದಕ್ಕೆ ನಿಖರವಾಗಿ ದೂರ ಮತ್ತು ನಡುವಣ ಅತ್ಯಂತ ಹತ್ತಿರವಾಗಬಲ್ಲ ಸಾಧ್ಯತೆಗಳು ಬಹಳ ಮುಖ್ಯವಾಗುತ್ತವೆ. ಇವೆಲ್ಲವನ್ನೂ ಈ ಜಿ.ಪಿ.ಎಸ್ ಬಳಸಿಕೊಂಡು ನೆಲದ ನೆಲೆಯ ಪ್ರತೀ ಸ್ಥಳಕ್ಕೂ ಗಣಿತೀಯ ಸಂಕೇತವನ್ನಾಗಿಸಿ ಇದನ್ನು ಸಾಧ್ಯ ಮಾಡುತ್ತದೆ.



ಈ ಸಮೀಕರಣಗಳು ಸಾಮಾನ್ಯ ಮೈಂಪಾಟನಲ್ಲಿ ಸತ್ಯದ ವಿವರವನ್ನು ಮಧ್ಯೆ ನಿಲ್ಲಿಸಿದಂತೆ ಕಂಡರೂ ಪುಟಗಟ್ಟಲೇ ಪಠ್ಯದ ವಿವರವನ್ನು ಮಿತಿಗೊಳಿಸುವ ಸಾಧನಗಳು. ಉದ್ದವಾದ ವಿವರಣೆಯನ್ನು ಚಿಕ್ಕದಾಗಿ ಅಷ್ಟೇ ನಿಖರವಾಗಿ ಹೇಳಲು ಸಮೀಕರಣಗಳಿಗೆ ಮಾತ್ರವೇ ಸಾಧ್ಯ! ನಮ್ಮ ಬದುಕೂ ಸದಾ ಸಮೀಕರಣಗಳ ಸಂಕೀರ್ಣ ಸಂಗತಿಗಳನ್ನೇ ಆವರಿಸಿವೆ. ಆದಕ್ಕೊಂದೇ ನಾವು ಅನೇಕ ಸಂಗತಿಗಳನ್ನು ಸಮೀಕರಿಸುತ್ತಲೇ ಚಲನಶೀಲವಾಗಿರುತ್ತೇವೆ. ಈ ಜಗತ್ತು ನಡೆಯುತ್ತಿರುವುದೇ ಸಂಗತಿಗಳು ಸಮೀಕರಣವಾದಾಗ ಮಾತ್ರ. ಇಡೀ ವಿಶ್ವದ ಎಲ್ಲ ಕ್ರಿಯೆಗಳೂ ತರ್ಕಬದ್ಧ ನಿಯಮ ಹಾಗೂ ಸಮತೂಕದ ಆಧಾರಗಳಿಂದ ನಡೆಯುತ್ತಿರುತ್ತವೆ. ನಮ್ಮ ಗೋಚರಕ್ಕೆ ಎಷ್ಟೊಂದು ಕಲಸುಮೇಲೋಗರದಂತೆ ಕಾಣುವ ಜಗತ್ತಿನ ಆಗು ಹೋಗುಗಳು ತರ್ಕಬದ್ಧವಾದ ಮತ್ತು ಸರಿ ತೂಗಿಸುವ ಸಂಯಮವನ್ನು ಒಳಗೊಂಡಿವೆ. ಅದಕ್ಕೆ ರಸಾಯನಶಾಸ್ತ್ರದಲ್ಲಂತೂ ಈ ಸಮೀಕರಣಗಳ ಸರಿತೂಗಿಸುವ ಸಂದರ್ಭಗಳು ಕಲಿಕೆಯ ಮಾರ್ಗದಲ್ಲಿ ಸದಾ ಕಾಣುವ ಸಂಗತಿಗಳು.

ಐನ್‌ಸ್ಟೀನರ $E=mc^2$ ಸಮೀಕರಣವು ಅತ್ಯಂತ ಹೆಚ್ಚು ಜನಪ್ರಿಯವಾದ ಸಮೀಕರಣ. ಇದೇ ಹೆಸರಿನಲ್ಲಿ ಒಂದು ಚಲನಚಿತ್ರ ಕೂಡ ತಯಾರಾಗಿದೆ. ಅದು ಶಕ್ತಿ ಮತ್ತು ದ್ರವ್ಯರಾಶಿಯ ನಡುವಣ ಸಂಕೀರ್ಣ ಸಮೀಕರಣದ ಕಥೆಯನ್ನೇ ವಸ್ತುವಾಗುಳ್ಳ ಚಿತ್ರ. ಅದರ ಇಡೀ ಕಥೆಯನ್ನು ವಿಜ್ಞಾನದ ಹಿನ್ನೆಲೆಯಲ್ಲಿ ಅವುಗಳು ದಾಖಲಾದ ಬಗೆಯನ್ನು ಹೇಳುತ್ತದೆ. ವಿಜ್ಞಾನದಲ್ಲಿ ಸಮೀಕರಣಗಳಿಗೆ ಲೆಕ್ಕವೇ ಇಲ್ಲ. ಅಷ್ಟೊಂದು ಸಂಖ್ಯೆಯಲ್ಲಿ ವಿಜ್ಞಾನದ ಸಂವಹನವನ್ನು ಸರಳಗೊಳಿಸುವಲ್ಲಿ ನಿರತವಾಗಿವೆ. ನೂರಾರು ಸಮೀಕರಣಗಳು ಹಲವಾರು ವಿಜ್ಞಾನಿಗಳ ಹೆಸರಿಂದಲೇ ಕರೆಯಲ್ಪಡುತ್ತಿವೆ. ಥರ್ಮೋಡೈನಮಿಕ್ಸ್ ಕುರಿತ ಮಾಕ್ಸ್ ಪ್ಲಾಂಕ್ ಸಮೀಕರಣ, ಬರ್ನೋಲಿಯ ಸಮೀಕರಣ, ಲ್ಯಾಪ್ಲೇಸ್ ಸಮೀಕರಣ ಹೀಗೆ. ವಿಜ್ಞಾನ ಜಗತ್ತು ಸಮೀಕರಣಗಳಿಂದ ಸಮೃದ್ಧವಾಗಿದೆ. ವಿಜ್ಞಾನಕ್ಕೆ ಅಂತಹದ್ದೊಂದು ಸಮಸ್ಥಿತಿ ಸಾಧ್ಯವಾಗದೆ ಇದ್ದರೆ ಅದರ ವಿವರಣೆಯೇ ಸಂಪೂರ್ಣಗೊಳ್ಳುವುದಿಲ್ಲ, ಇಡೀ ಜಗತ್ತಿನ ಅನೇಕ ಪ್ರಕ್ರಿಯೆಗಳೂ ಸಹಾ ಕ್ರಿಯೆಯಾಗಿ ಪೂರ್ಣಗೊಳ್ಳುವುದೇ ಆಯಾ ವಸ್ತುಗಳ ನಡುವಣ ಸಮಸ್ಥಿತಿ ಸಾಧ್ಯವಾದಾಗ ಮಾತ್ರ. ಅದನ್ನೇ ಸಮೀಕರಣದ ಸಾಧ್ಯತೆಯು ಬಳಸಿಕೊಂಡಿದೆ. ಅದನ್ನೇ ವಿಜ್ಞಾನದ ಸಂವಹನದಲ್ಲಿ ಗಣೀತೀಯ ಭಾಷೆಯಲ್ಲಿ ನಿರೂಪಗೊಳಿಸಿದೆ.

ಸಮೀಕರಣವು ಸಮಸ್ಥಿತಿಯನ್ನು ಹುಡುಕುವ ಜತೆಗೆ ತನ್ನದೇ ಸಮಸ್ಥಿತಿಯನ್ನೂ ಕಾಪಾಡಿಕೊಳ್ಳಬೇಕಿದೆ. ವಸ್ತುಗಳ ಮೂಲ ಸ್ಥಿತಿಯ ಪರಮಾಣುಗಳ ರಚನೆಯೂ ಸಮಸ್ಥಿತಿಯಲ್ಲಿಲ್ಲದಿದ್ದರೆ ಅದರ ಪ್ರಕ್ರಿಯೆಯೂ ಪೂರ್ಣವಾಗದು. ಹಾಗಾಗಿ ಸಮೀಕರಣದ ಸಾಧ್ಯತೆಯೆಂದರೆ ನೈಸರ್ಗಿಕ ಚಲನಾಶೀಲಸ್ಥಿತಿ. ಇದನ್ನೂ ಕೂಡ ಸಮೀಕರಣಗಳ ಮೂಲಕವೇ ಪ್ರಸ್ತುತಿ ಸಾಧ್ಯವಿದೆ. ಮೂಲ ವಸ್ತುಗಳ ಸಂಯೋಗದಿಂದ ಉಂಟಾಗಿರುವ ಈ ಅನಂತ ಸಂಖ್ಯೆಯ ಸಂಕೀರ್ಣ ಸಂಯುಕ್ತಗಳ ಜಗತ್ತು ಸಮಸ್ಥಿತಿಯ ಸಮೀಕರಣದಿಂದಲೇ ಉಂಟಾಗಿದೆ. ನಮಗೂ ಅದೆಷ್ಟೋ ಬಾರಿ, "ಅಯ್ಯೋ ಅವನಿಗೂ/ಅವಳಿಗೂ ನನಗೂ ಈಕ್ವೇಶನ್ ಸರಿ ಹೋಗಲ್ಲ" ಅಂತಾನೋ ಅಥವಾ "ತುಂಬಾ ಒಳ್ಳೆಯ ಈಕ್ವೇಶನ್" ಅನಿಸಿರಬೇಕಲ್ಲವೇ? ಈ ಸಮೀಕರಣ ಸಮದೂಗಿದಾಗಲೇ ಪ್ರಕ್ರಿಯೆಯು ಸಂಪೂರ್ಣವಾಗುವುದು. ಜಗತ್ತಿನ ಎಲ್ಲಾ ಚಟುವಟಿಕೆಗಳೂ ಸಮಸ್ಥಿತಿಯಲ್ಲಿದ್ದರೆ ಆಗ ಸಮೀಕರಣ ಬ್ಯಾಲೆನ್ಸ್ ಆಗಿರಲೇಬೇಕು. ಈ ಬ್ಯಾಲೆನ್ಸ್‌ಗಾಗಿಯೇ ನಿಸರ್ಗದ ಹಾಗೂ ಬದುಕಿನ ಎಲ್ಲಾ ಪ್ರಕ್ರಿಯೆಗಳ ಹೋರಾಟ.

ಯೋಗೇಶ್ ಮಾಸ್ಟರ್

ಪುರಾಣದ ಹೂರಣ

ಅಹಂ ಬ್ರಹ್ಮಾಸ್ಮಿಯ ವೈಫಲ್ಯಗಳು

23ನೇ ತಾರೀಖು ಏಪ್ರಿಲ್, 2015ರಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ ನಯನ ಸಭಾಂಗಣದಲ್ಲಿ ತತ್ವಜ್ಞಾನಿಗಳ ದಿನಾಚರಣೆ ನಡೆಯಿತು. ಅಂದು ಶಂಕರ ಜಯಂತಿ. ಹಾಗಾಗಿ ಅಂದಿನ ಬರ್ತ್‌ಡೇ ಸೆಲೆಬ್ರಿಟಿಯನ್ನು ಕೊಂಡಾಡುವ ಸಲುವಾಗಿ ಸಂಶೋಧಕಿ ಡಾ.ಜಯಂತಿ ಮನೋಹರ್ ಕೊಂಡಾಡುತ್ತಾ, ಶಂಕರಾಚಾರ್ಯರು ಭಾರತದಿಂದ ಬೌದ್ಧ ಧರ್ಮವನ್ನು ಓಡಿಸುವ ಕೆಲಸ ಮಾಡಿದ್ದರು ಎಂಬ ಮಾತು ಸತ್ಯಕ್ಕೆ ದೂರವಾದದ್ದು. ಜನಸಾಮಾನ್ಯರಿಗೆ ವೈದಿಕ ಧರ್ಮದ ತತ್ವಗಳನ್ನು ಸರಳ ರೀತಿಯಲ್ಲಿ ಬೋಧಿಸಿ ಬೌದ್ಧ ಧರ್ಮಕ್ಕೆ ಮತಾಂತರಗೊಳ್ಳುತ್ತಿದ್ದವರನ್ನು ತಡೆದರು. ವೈದಿಕ ವಿರೋಧಿ ಆಚಾರಗಳನ್ನು ಜನರಿಂದ ದೂರ ಮಾಡಿ ಹಿಂದೂ ಧರ್ಮದಲ್ಲಿ ಹುಟ್ಟಿಕೊಂಡಿದ್ದ ಹಲವು ಪಂಥಗಳನ್ನು ಸಮನ್ವಯಗೊಳಿಸುವ ಶ್ರೇಷ್ಠ ಕೆಲಸ ಮಾಡಿದ್ದರು. ವೈದಿಕರಲ್ಲಿ ಯಜ್ಞದ ಹೆಸರಿನಲ್ಲಿ ನಡೆಯುತ್ತಿದ್ದ ಪ್ರಾಣಿಗಳ ಹಿಂಸೆಯನ್ನು ಬಲವಾಗಿ ವಿರೋಧಿಸಿದ್ದರು. ವೇದಗಳ ಅಧ್ಯಯನದಿಂದ ದೂರ ಉಳಿದು ಎಲ್ಲಾ ಅವಕಾಶಗಳನ್ನು ಸ್ತ್ರೀಯರಿಗೆ ಒದಗಿಸಿಕೊಟ್ಟಿದ್ದರು. ಅಲ್ಲದೇ ವೈದಿಕ ಧರ್ಮದ ಪ್ರಸಾರಕ್ಕೆ ದೇಶದ ನಾಲ್ಕು ಭಾಗಗಳಲ್ಲಿ ಪೀಠ ಸ್ಥಾಪಿಸಿದ್ದರು" ಎಂದೆಲ್ಲಾ ಹೇಳಿದ ಮಾತುಗಳು ಪತ್ರಿಕೆಗಳಲ್ಲಿ ವರದಿಯಾದವು. ಹಾಗೇ ಕನ್ನಡ ಮತ್ತು ಸಂಸ್ಕೃತಿಯ ಸಚಿವೆ ಉಮಾಶ್ರೀ ಮನುಕುಲದ ಉದ್ಧಾರಕ್ಕಾಗಿ ಶ್ರಮಿಸಿದ ದಾರ್ಶನಿಕರಲ್ಲಿ ಶಂಕರಾಚಾರ್ಯರು ಒಬ್ಬರು. ಚಿಕ್ಕವಯಸ್ಸಿನಲ್ಲೇ ದೇಶ ಸುತ್ತಾಡಿ ವೇದ ಉಪನಿಷತ್ತುಗಳನ್ನು ಪ್ರಚಾರ ಮಾಡಿದ್ದರು" ಎಂದೆಲ್ಲ ಮಾತನಾಡಿದ್ದೂ ವರದಿಯಾಗಿತ್ತು. (ಪ್ರಜಾವಾಣಿ ವರದಿ ಆಧರಿಸಿ)

ಡಾ. ಜಯಂತಿ ಮನೋಹರ್ ಅಂದಿನ ಬರ್ತ್‌ಡೇ ಸೆಲೆಬ್ರಿಟಿಯಾದ ಶಂಕರನನ್ನು ಸಮರ್ಥಿಸಿಕೊಂಡಿದ್ದಾರೆಯೇ ಹೊರತು ಸಂಶೋಧಕಿಯಾಗಿ ಮಾತನಾಡಿದಂತೆ ಕಾಣುವುದಿಲ್ಲ. ಹಾಗೆಯೇ ಉಮಾಶ್ರೀಯ ಅವರಿಗಂತೂ ಶಂಕರನ ಬಗ್ಗೆ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಯ ಮಟ್ಟದ ಜ್ಞಾನವಿದ್ದಂತೆ ಕಾಣುತ್ತದೆ. ಮನುಕುಲದ ಉದ್ಧಾರಕ್ಕೆ ಶ್ರಮಿಸುವ ಯಾವುದೇ ವ್ಯಕ್ತಿಯು ದಿಗ್ವಿಜಯಗಳಿಗೆ ಹೋಗುವುದಿಲ್ಲ ಎಂಬ ಪ್ರಾಥಮಿಕ ಅರಿವೂ ಉಮಾಶ್ರೀ ಅವರಿಗಿಲ್ಲ.

ದಿಗ್ವಿಜಯವೇ ಅಹಂಕಾರದ ಪರಮಾವಧಿಯ ಸಾಹಸ ಯಾತ್ರೆ.

ಸೈನ್ಯದಲ್ಲಿ ರಕ್ಷಣಾ ವ್ಯವಸ್ಥೆಗೂ, ಆಕ್ರಮಣಕ್ಕೂ ವ್ಯತ್ಯಾಸವಿದೆ. ತಮ್ಮ ಮೇಲೆ ಆಕ್ರಮಣ ಮಾಡಲು ಬರುವವರನ್ನು ತಡೆಯಲು, ತನ್ನನ್ನು ತಾನು ರಕ್ಷಿಸಿಕೊಳ್ಳಲು ವ್ಯವಸ್ಥೆಯನ್ನು ಹೊಂದುವುದು ರಕ್ಷಣಾ ವ್ಯವಸ್ಥೆ. ತಾನೇ ಇತರರನ್ನು ಸದೆ ಬಡೆಯಲು, ಆಕ್ರಮಣ ಮಾಡಲು ಹೋಗುವುದು ಆಕ್ರಮಣಕಾರಿ ವ್ಯವಸ್ಥೆ. ಇದರಲ್ಲಿ ಅಹಂಕಾರದ ಮಹತ್ವಾಕಾಂಕ್ಷೆಯು ಇರುತ್ತದೆ.

ಶಂಕರನ ಸಮಸ್ಯೆಗಳು ಅನೇಕ. ಅವನು ಭಾರತದಲ್ಲಿ ಸಮಾಜವನ್ನು ಒಡೆಯುವ ಪ್ರಕ್ರಿಯೆಗೆ ನೀಡಿದ ಕಾಣಿಕೆಗಳು ಅನೇಕಾನೇಕ.

ಅಹಂ ಬ್ರಹ್ಮಾಸ್ಮಿ

ಅದ್ವೈತದ ಘೋಷವಾಕ್ಯ 'ಅಹಂ ಬ್ರಹ್ಮಾಸ್ಮಿ'ಯೇ ಹಲವು ಗೊಂದಲಗಳನ್ನು ಸೃಷ್ಟಿಸುತ್ತದೆ. ಅದು ಅರಿವಿನ ಅರಿಕೆಯೇ ಅಥವಾ ಅದು ನಾನೇ ಎಂಬ ಘೋಷಣೆಯೇ?

ಸೋಹಂ, ಅದೇ ನಾನು ಎಂಬುದು ತನ್ನನ್ನು ಅದರಲ್ಲಿ ಅಥವಾ ಪರದಲ್ಲಿ ಒಳಗೊಳ್ಳುತ್ತಾ ಎರಡಿಲ್ಲದಂತೆ ಆಗುವಂತಹ ಪ್ರಕ್ರಿಯೆಯಾದರೆ, ನೇತಿ ಎಂಬುದು "ಅದಲ್ಲ, ಅದಲ್ಲ" ಎಂಬ ನಕಾರಾತ್ಮಕದಿಂದ ವಸ್ತು ಮತ್ತು ವಿಷಯ ಜಗತ್ತಿನ ಪದರ ಪದರಗಳನ್ನೂ ನಿರಾಕರಿಸುತ್ತಾ ಕೊನೆಗೆ ಯಾವುದು ಉಳಿಯುವುದೋ ಅದೇ ಪರವಸ್ತುವೆಂದು ಕಂಡುಕೊಳ್ಳುವುದೆಂದು ತಿಳಿಯೋಣ.

ಅದ್ವೈತದ ಅಹಂ ಬ್ರಹ್ಮಾಸ್ಮಿಯು ಸೋಹಂ ವಿಭಾಗಕ್ಕೆ ಬರುತ್ತದೆ. ಆದರೆ ಇಲ್ಲಿ ಇರುವ ಸಮಸ್ಯೆ ಎಂದರೆ, ಶಂಕರನ ದ್ವಂದ್ವ ನೀತಿಗಳು.

ತನ್ನ ಕೃತಿಯಾದ ಆತ್ಮಪಂಚಕದಲ್ಲಿ "ನಾನು ದೇಹವಲ್ಲ, ಇಂದ್ರಿಯಗಳಲ್ಲ, ಮನಸ್ಸಲ್ಲ, ಅಹಂಕಾರವಲ್ಲ, ಪ್ರಾಣವರ್ಗವಲ್ಲ, ಬುದ್ಧಿಯೂ ಅಲ್ಲ, ಹೆಂಡತಿ ಮಕ್ಕಳು ಜಮೀನು ಐಶ್ವರ್ಯ ಇವುಗಳಿಂದ ದೂರನಾದವನು ನಾನು. ನಿತ್ಯನೂ, ಸಾಕ್ಷಿಯೂ, ಪ್ರತ್ಯಗಾತ್ಮನೂ ಆದ ಸಾಕ್ಷಾತ್ ಶಿವನೇ ನಾನು" ಎಂದು ಹೇಳುವನು.

ತಾನು ಅದಲ್ಲ ಎಂದು ಹೇಳುವಾಗ, ಅದರಲ್ಲಿರುವ ಪರವಸ್ತುವನ್ನು ನಿರಾಕರಣೆ ಮಾಡುತ್ತಾ ತನ್ನನ್ನು ತಾನು ಹೊರಗಿಟ್ಟುಕೊಳ್ಳುತ್ತಾನೆ. ಆಗ ಅದರಿಂದ ಒಳಗೊಳ್ಳುವಿಕೆಯು ಹೊರತಾಗಿ ಅದನ್ನು 'ಅಜ್ಞಾನದಿಂದ ಹಗ್ಗವು ಹಾವೆಂದು ತೋರುವಂತೆ, ಆತ್ಮಜ್ಞಾನದ ಅಭಾವದಿಂದ ಜೀವಭಾವವು ಹುಟ್ಟುವುದು' ಎಂದು ತಾನೇ





ಹೇಳುವನು. ಇಲ್ಲಿ ಇರುವ ವಿಚಾರವೆಂದರೆ, ಹಗ್ಗವೆಂಬುದು ಇದೆ, ಹಾವೆಂಬುದು ಇಲ್ಲ. ಹಗ್ಗವನ್ನು ಹಾವೆಂದು ಕಂಡಿದ್ದು ಒಂದು ಭ್ರಾಮಕ ದೃಷ್ಟಿ. ಆದರೆ ಹಗ್ಗವು ಭ್ರಮೆಯಲ್ಲ. ಅದು ವಾಸ್ತವ. ಅಸ್ತಿತ್ವದಲ್ಲಿ ಇರುವಂತಹದ್ದು. ಇಂದ್ರಿಯ, ದೇಹ ಇತ್ಯಾದಿಗಳು ತಾನಲ್ಲದಿದ್ದರೂ ಅದು ಒಳಗೊಂಡಿರುವ ಸಮಗ್ರರೂಪವೇ ತಾನು ಎಂಬುದಾಗಿ ಅರಿವಿಲ್ಲದೇ ಅವುಗಳನ್ನು ಬೇರ್ಪಡಿಸುತ್ತಾ ನೇತಿ ಭಾವವನ್ನು ಹೊಂದುತ್ತಾನೆ. ಇದೇ ಅಹಂ ಬ್ರಹ್ಮಾಸ್ಮಿಯ ತೊಡಕು. ಬ್ರಹ್ಮನನ್ನು ಇಂದ್ರಿಯದಿಂದ, ದೇಹದಿಂದ, ಮನಸ್ಸಿನಿಂದ, ಪ್ರಾಣವರ್ಗದಿಂದ ಬೇರ್ಪಡಿಸಿದರೆ, ಸರ್ವಂ ಖಲ್ವಿದಂ ಬ್ರಹ್ಮವು ಹುಸಿಯಾಗುತ್ತದೆ.

ಶಂಕರನ ಸಮಸ್ಯೆ ಇಲ್ಲಿಂದಲೇ ಪ್ರಾರಂಭ.

ನಿರ್ವಾಣಷಟ್ಕದಲ್ಲಿಯೂ ಇದೇ ನೇತ್ಯಾತ್ಮಕ ಧೋರಣೆ ಸ್ಪಷ್ಟವಾಗುತ್ತದೆ. "ಬುದ್ಧಿ ಮನ ಚಿತ್ತಹಂಕಾರ, ಕಣ್ಣು ಕಿವಿ ಮೂಗು, ನಾಲಗೆ, ನಭ, ಧರೆ ಇದ್ಯಾವುವೂ ಅಲ್ಲ, ಸಚ್ಚಿದಾನಂದಾತ್ಮ ಶಿವ ನಾನು ನಾನು" ಎಂದು ಹೇಳುತ್ತಾ ಹೋಗುತ್ತಾನೆ. ಬ್ರಹ್ಮನು ಇವುಗಳಿಲ್ಲದರ ಹೊರತಾಗಿ ಹೇಗಿರುವನೆಂಬ ಸೂಕ್ಷ್ಮತೆ ಶಂಕರನಿಗೆ ಏಕೆ ಹೊಳೆಯದೇ ಹೋಯಿತೋ ತಿಳಿಯದು. ಅದೇ ನಾನು ಒಂದು ಬ್ರಹ್ಮನ್‌ನನ್ನು ತಿಳಿಯುವಾಗ, ಬ್ರಹ್ಮನಿಲ್ಲದ ವಸ್ತುಗಳನ್ನು, ಭಾವಗಳನ್ನು, ವಿಷಯಗಳನ್ನು ಹೇಗೆ ಕಂಡುಕೊಂಡನೆಂಬುದು ತಿಳಿಯದು.

ದಿಗ್ವಿಜಯಕ್ಕೆ ಹೋಗುವ ಶಂಕರ ತನ್ನ ಎದುರು ಇರುವ ಮತ್ತು ತನ್ನ ವಿಷಯದ ಪರನಲ್ಲದ ವಸ್ತು ಅಥವಾ ವ್ಯಕ್ತಿಯನ್ನು ಬ್ರಹ್ಮನಿಂದ ಹೊರತು ಪಡಿಸಿ ಹೇಗೆ ನೋಡಿದನೋ ತಿಳಿಯದು. ತನ್ನನ್ನು ಬ್ರಹ್ಮನಾಗಿಸಿಕೊಂಡು, ದೊಡ್ಡ ವಿಶಾಲಾರ್ಥದ ಘೋಷವಾಕ್ಯದ ತಳದಲ್ಲಿ, ಬ್ರಹ್ಮನ ವ್ಯಾಪ್ತಿಯಿಂದ ಹೊರತಾಗಿ ಇತರರನ್ನು ನೋಡುವ, ವಾದಿಸುವ, ಗೆಲ್ಲುವ ಪ್ರಕ್ರಿಯೆಗಳು ತೀರಾ ಬಾಲಿಶವಾಗಿಯೂ, ಅಪ್ರಬುದ್ಧವಾಗಿಯೂ ಕಾಣುತ್ತದೆ.

ತಾನೇ ಬ್ರಹ್ಮನಾಗಿರುವ ಅನುಭಾವ ಪಡೆದಿರುವಂತಹ ಆತ್ಮಜ್ಞಾನಿಗೆ ಇತರರನ್ನು ಸೋಲಿಸುವ, ತಾನು ಗೆಲ್ಲುವಂತಹ, ಇತರ ಸಿದ್ಧಾಂತಗಳ ಮಣಿಸುವಂತಹ ಸಂಕುಚಿತ ಸ್ಪರ್ಧಾ ಮನೋಭಾವವಾದರೂ ಹೇಗೆ ಬಂದೀತು? ಆ ಎಲ್ಲಾ ವಿವಿಧತೆಗಳಲ್ಲಿ ಏಕಸ್ವರೂಪವನ್ನು ನೋಡದೇ, ಸಾಕ್ಷಿಯಾಗಿ ಬೆರಗನ್ನು ಪಡೆದು ಆನಂದವನ್ನು ಪಡೆಯುತ್ತಾ, ಪಡೆದ ಆನಂದವೇ ತಾನಾಗುವ ಸಚ್ಚಿದಾನಂದಾತ್ಮ ಶಿವ ತಾನೇ ಆಗುತ್ತಾನಲ್ಲವೇ?

ಹೇಳಿದ್ದೊಂದು, ಇದ್ದ ಬಗೆಯೊಂದು ಆದಂತಹ ಸಿದ್ಧಾಂತಿಯಾಗಿ ಶಂಕರ ನನಗೆ ಕಾಣುತ್ತಾನೆ. ಅವನು ಹೇಳುವುದರಲ್ಲಿಯೇ ನಾನಾ ಗೊಂದಲಗಳಿವೆ.

ಮನಿಷಾಪಂಚಕ

"ಚಂಡಾಲೋಸ್ತು ಸ ತು ದ್ವಿಜೋಸ್ತು ಗುರುರಿತ್ಯೇಷಾ ಮನಿಷಾ ಮಮ" ಅಂದರೆ ಚಂಡಾಲನಾಗಿರಲಿ ಅಥವಾ ಬ್ರಾಹ್ಮಣನಾಗಿರಲಿ, ಅವನೇ ಗುರುವು ಎಂಬುದು ನನ್ನ ತಿಳುವಳಿಕೆ ಎಂಬ ಮನಿಷಾ ಪಂಚಕದಲ್ಲಿ ಬರುವ ಮಾತು ಬಹುಶಃ ಕಾಶಿಯಲ್ಲಾದ ಚಂಡಾಲನ ಪ್ರಕರಣದ ನಂತರ ಎಂದು ಅನಿಸುತ್ತದೆ.

ಕಾಶಿಯಲ್ಲಿ ತನ್ನ ಬ್ರಾಹ್ಮಣಾಧಿಕ್ಯದ ಜಾತಿ ಬುದ್ಧಿಯಿಂದ ತನಗೆ ಎದುರಾದ ಚಂಡಾಲನನ್ನು "ಅತ್ತ ಸರಿ, ಅತ್ತ ಸರಿ (ಅಪ ಸರ)" ಎಂದು ನಕಾರಾತ್ಮಕವಾಗಿ ವರ್ತಿಸಿದಾಗ "ಯಾವುದು ಸರಿಯಬೇಕು? ದೇಹವೋ ಅಥವಾ ಆತ್ಮವೋ?" ಎಂಬ ಶಂಕರನ ಆಸಕ್ತಿಯ ಕೇಂದ್ರದ ಪ್ರಶ್ನೆಯನ್ನೇ ಎತ್ತಿದ ಚಂಡಾಲನಿಗೆ ಅವನು ಮಣಿಯಬೇಕಾಗುತ್ತದೆ.


ಆದರೆ, ಈ ಘಟನೆಯನ್ನು ಅವನ ಬ್ರಾಹ್ಮಣಾಧಿಕ್ಯದ ಅನುಯಾಯಿಗಳು ಸಾಕ್ಷಾತ್ ಕಾಶಿ ವಿಶ್ವನಾಥನೇ ಚಾಂಡಾಲನ ವೇಷದಲ್ಲಿ ಬಂದು ಪರೀಕ್ಷಿಸಿದ ಎಂದು ರೀಲ್ ಬಿಟ್ಟು ತಮ್ಮ ವರ್ಣಾಶ್ರಮದ ಧರ್ಮವನ್ನು ಎತ್ತಿ ಹಿಡಿಯುತ್ತಾರೆ.


ಶಂಕರ ಒಬ್ಬ ಎಳೆ ನಿಂಬೆಕಾಯಿಯ ಹಾಗೆ ಪದೇ ಪದೇ ತೋರುತ್ತಾನೆ. ಅವನೊಬ್ಬ ಅಪರಾಧ ಪ್ರಜ್ಞೆಯಿಂದ ನರಳುತ್ತಿದ್ದ ಮನಸ್ಥಿತಿಯವನ ಹಾಗೆಯೂ ಕಾಣುತ್ತಾನೆ. ಅವನ ಮನಸ್ಸು ಗೊಂದಲಗಳ ಬೀಡಾಗಿತ್ತು ಎಂದು ಅವನ ಹಲವಾರು ಕೃತಿಗಳು ಸಾರುತ್ತಾ ಹೋಗುತ್ತವೆ.

"ಮತ್ಸಮಃ ಪಾತಕೀ ನಾಸ್ತಿ, ಪಾಪಘ್ನಿ ತ್ವತ್ಸಮಾ ನ ಹಿ, ಏವಂ ಜ್ಞಾತ್ವಾ ಮಹಾದೇವಿ ಯಥಾ ಯೋಗ್ಯಂ ತಥಾ ಕುರು" ಅಂದರೆ "ನನ್ನಂತಹ ಪಾತಕಿಯೂ ಇಲ್ಲ, ನಿನ್ನಂತಹ ಪಾಪನಾಶಕಳೂ ಇಲ್ಲ, ಹೇ ಮಹಾದೇವಿ, ಇದನ್ನು ಅರಿತು ಯಾವುದು ಉಚಿತವೋ ಅದನ್ನೇ ಮಾಡು" ಎಂದು ದೇವಿಯ ಬಳಿ ಅವಲತ್ತುಕೊಳ್ಳುವ ಶಂಕರ, ಶಿವನೆಂಬ ಪ್ರತಿಮೆಯ ಮುಂದೆ "ಆತ್ಮಾ ತ್ವಂ ಗಿರಿಜಾ ಮತಿಃ ಸಹಚರಾಃ" ಎನ್ನುವಲ್ಲಿ "ನೀನೇ (ನನ್ನ) ಆತ್ಮಾ, ಗಿರಿಜೆಯೇ ಬುದ್ಧಿ ಇಂದ್ರಿಯಗಳು ನಿನ್ನ ಸಹಚರರು, ಈ ದೇಹವೇ ನಿನ್ನ ಮನೆ, ವಿಷಯಸುಖದ ಅನುಭವವೇ ನಿನ್ನ ಪೂಜೆ, ನಿದ್ರೆಯೇ ಸಮಾಧಿಸ್ಥಿತಿಯು, ಕಾಲ್ನಡಿಗೆಯೆಲ್ಲವೂ ನಿನಗೆ ಪ್ರದಕ್ಷಿಣೆ ಮತ್ತು ಆಡುವ ಮಾತೆಲ್ಲವೂ ಸ್ತೋತ್ರಗಳು, ಹೇ ಶಂಭು, ನಾನು ಏನೇನು ಕರ್ಮವನ್ನು ಮಾಡುತ್ತೇನೆಯೋ ಅದೆಲ್ಲವೂ ನಿನ್ನ ಆರಾಧನೆ" ಎನ್ನುವ ಶಂಕರ ತಾನು ಶರಣಾಗಿರುವ ಭಾವವನ್ನು ಹೊಂದುತ್ತಾನೆ. ಇದು ಭಕ್ತನೊಬ್ಬನ ಆತ್ಮೀಯ ನಡವಳಿಕೆಯಾಗಿ, ಶರಣಾಗತಿಯ ಆಪ್ತ ಅಭಿವ್ಯಕ್ತವಾಗಿ ಕಾಣುತ್ತದೆ. ಸರಿ, ಮುಂದೆ "ಕರಚರಣಕೃತಂ ವಾಕ್ಕಾಯಜಂ ಕರ್ಮಜಂ ವಾ" ಭಾಗದಲ್ಲಿ "ಕೈಕಾಲುಗಳಿಂದಲೂ, ಮಾತಿನಿಂದಲೂ, ದೇಹದಿಂದಲೂ, ಕರ್ಮದಿಂದಲೂ, ಕಣ್ಣು ಕಿವಿಗಳಿಂದಲೂ, ಅಥವಾ ಮನಸ್ಸಿನಿಂದಲೂ-ಮಾಡುವುದರಿಂದ ಅಥವಾ ಮಾಡದೆ ಇರುವುದರಿಂದಾದ-ಎಲ್ಲಾ ನನ್ನ ಅಪರಾಧಗಳನ್ನೂ ಕ್ಷಮಿಸು" ಎಂದು ಬೇಡಿಕೊಳ್ಳುತ್ತಾನೆ.


ಕವಿಯೊಬ್ಬನ ಕಾವ್ಯಾಭಿವ್ಯಕ್ತಿ ಆತನ ಅನುಭವ, ಅನುಭಾವವೇ ಆಗಿರುತ್ತದೆಯಾದರೆ, ಇದು ಶಂಕರನ ತೊಳಲಾಟದ ನಿವೇದನೆ. ತಾನೇ ಬ್ರಹ್ಮನಾಗಿ ಘೋಷಿಸಿಕೊಂಡಿದ್ದೇನು? ಇನ್ನು ಯಾರ್ಯಾರೋ ದೇವತೆಗಳ ಮುಂದೆ ಅವಲತ್ತುಕೊಳ್ಳುವುದೇನು? ಸ್ತುತಿಸುವುದೇನು? ಕ್ಷಮೆ ಕೋರುವುದೇನು? ಅದು ತನಗಾಗಿ ಅಲ್ಲ, ಸಿನಿಮಾ ಸಾಹಿತಿಗಳ ರೀತಿಯಲ್ಲಿ ಯಾವುದೋ ಸನ್ನಿವೇಶಕ್ಕೆ ಬರೆದಿರುವಂತಹ ಸಾಹಿತ್ಯವೇ? ಇತರರಿಗಾಗಿ ತಾನು ಸಾಹಿತ್ಯ ಬರೆದು ಅವಲತ್ತುಕೊಳ್ಳಲು ಉಪಕರಿಸಿರುವನೇ? ಹಲವು ಸಿನಿಮಾಗಳ ಸನ್ನಿವೇಶಗಳಿಗೆ ಎಲ್ಲಾ ಬಗೆಯ ಭಾವ ಪ್ರಕಟಣೆಗಳಿಗೆ ನಾನಾ ಬಗೆಯ ಗೀತ ಸಾಹಿತ್ಯಗಳನ್ನು ರಚಿಸಿರುವ ಚಿ.ಉದಯ ಶಂಕರ್ ಮಾದರಿಯ ಶಂಕರನೇ ಈ ಶಂಕರಾಚಾರ್ಯ?

ಆತನ ಭಾಷಾ ನೈಪುಣ್ಯಕ್ಕೆ ಪದಗಳ ಪ್ರಯೋಗಕ್ಕೆ ನುಡಿ ಚಮತ್ಕಾರಕ್ಕೆ ಸಲ್ಲುವ ಗೌರವವು ಒಂದೆಡೆಯಾದರೆ, ಆತನ ಸಿದ್ಧಾಂತದ ಮೇರು ಮೆರವಣಿಗೆಯ ಬಗೆಗೆ ಇಲ್ಲಿ ಒಡ್ಡುತ್ತಿರುವ ಅಡ್ಡಗಾಲು. ■





ದಲಿತರ ಕ್ಷೇತ್ರಗಳಲ್ಲಿ ಬುದ್ಧಿಮತ್ತೆ ಪರೀಕ್ಷೆ ನಡೆಯುವ ಸ್ಥಿತಿ ಬರಬೇಕು



ಕಳೆದ ಸಂಚಿಕೆಯಲ್ಲಿ 'ಭೈರಪ್ಪನದು ಮರವಲ್ಲ, ಆಸಹನೆ' ಎಂಬ ತಲೆಬರಹದ ಪತ್ರದಲ್ಲಿ 'ಬ್ರಾಹ್ಮಣರಿಗಿಂತ ವಿದ್ಯೆಯಲ್ಲಿ ಅಬ್ರಾಹ್ಮಣರೇ ಶ್ರೇಷ್ಠರು. ಯಾಕೆಂದರೆ ಪರಂಪರಾಗತ ವಿದ್ಯಾವಂತ ಸಂಸ್ಕಾರದಲ್ಲಿ ಬೆಳೆಯುವ ಬ್ರಾಹ್ಮಣನ ಸಾಧನೆಗಿಂತ ಏನೂ ಬೇಸ್ ಇಲ್ಲದ ಅಬ್ರಾಹ್ಮಣನ ಸಾಧನೆ ಹೋಲಿಕೆಗೆ ಸಿಗದಂಥದ್ದು' ಎಂದು ಶಶಿ ಪುತ್ತೂರು ಅವರು ಹೇಳಿರುವುದು ಅತ್ಯಂತ ಸಮಂಜಸವಾದ ಮತ್ತು ಹೆಚ್ಚಿನ ಚಿಂತನೆಗೆ ಯೋಗ್ಯವಾದ ಮಾತು.

ತನಗಿಂತ ಕೆಳಗಿನ ಜಾತಿಗಳವರಿಗೆ ಉದ್ದೇಶಪೂರ್ವಕವಾಗಿ (ತನಗೆ ಪ್ರತಿಸ್ಪರ್ಧಿಯಾಗಬಹುದು ಎಂಬ ಭಯದಿಂದ) ಶಿಕ್ಷಣದ ಅವಕಾಶವನ್ನು ನಿರಾಕರಿಸಿದ ಬ್ರಾಹ್ಮಣ ವರ್ಗದವರು ಅದೆಷ್ಟೋ ತಲೆಮಾರುಗಳಿಂದ ಶಿಕ್ಷಣದ ಸಂಸ್ಕಾರದೊಂದಿಗೇ ಬೆಳೆದುಬಂದವರು. ದೇಶಕ್ಕೆ ಬ್ರಿಟಿಷರ ಪ್ರವೇಶಕ್ಕೆ ಮುನ್ನವೇ ಬ್ರಾಹ್ಮಣರು ಮಠಗಳಲ್ಲಿ ಶಿಕ್ಷಣ ಪಡೆಯುತ್ತಿದ್ದವರು. ವಂಶವಾಹಿ ವಿಜ್ಞಾನದ ಪ್ರಕಾರ ಇಂತಹ ಸಂಪತ್ತು ತಲೆಮಾರುಗಳಿಂದ ತಲೆಮಾರುಗಳಿಗೆ ಸಾಗುತ್ತಿರುತ್ತದೆ ಮತ್ತು ಮುಂದಿನ ತಲೆಮಾರನ್ನು ಹೆಚ್ಚು ಬುದ್ಧಿವಂತರನ್ನಾಗಿಸುತ್ತಲೇ ಇರುತ್ತದೆ. ಬ್ರಾಹ್ಮಣರು ಈ ವಿಚಾರದಲ್ಲಿ ಭಾಗ್ಯಶಾಲಿಗಳಾಗಿರುವುದು ಸಹಜವಾಗಿಯೇ ಆಗಿದೆ.



ಆದರೆ ಶೂದ್ರರಿಗೆ ಶಿಕ್ಷಣ ಸಂಸ್ಕಾರದ ಬಳುವಳಿ ಬಂದಿರುವುದು ಕೇವಲ ಒಂದೋ ಎರಡೋ ತಲೆಮಾರುಗಳಿಂದ (ಅದೂ ಬ್ರಿಟಿಷರು ಶಿಕ್ಷಣವನ್ನು ಜಾತಿ ಮತ ಭೇದವಿಲ್ಲದೆ ಎಲ್ಲರಿಗೂ ತೆರೆದುದರಿಂದ). ತೀರಾ ಕೆಳಜಾತಿಯವನದಲ್ಲದ ನನ್ನಂಥವನಿಗೂ ಶಿಕ್ಷಣ ಸಂಸ್ಕಾರದ ಪರಂಪರೆ ಇರುವುದು ಕೇವಲ ಎರಡು ತಲೆಮಾರುಗಳದ್ದು. ನನ್ನ ಅಜ್ಜ ಅನಕ್ಷರಸ್ಥನಾದರೆ ನನ್ನ ತಂದೆ ಆರನೆ ತರಗತಿ ಓದಿದವರು. ನಾನು ಪದವೀಧರ. ನನ್ನ ಮಗ ಇಂಜೀನಿಯರಿಂಗ್ ಪದವೀಧರ.

ಶೂದ್ರ ವರ್ಗದ ಸ್ಥಿತಿಯೇ ಹೀಗಿರಬೇಕಾದರೆ ಇನ್ನು ದಲಿತ ವರ್ಗದ ಮಕ್ಕಳ ಕತೆಯನ್ನು ಹೇಳಬೇಕಾಗಿಯೇ ಇಲ್ಲ, ಅವರಲ್ಲಿ ಬಹುತೇಕ ಹೆತ್ತವರು ಶಾಲೆಯ ಬಾಗಿಲನ್ನೂ ನೋಡಿದವರಲ್ಲ, ಹಾಗಾಗಿ ಅವರೇ ಮೊದಲ ತಲೆಮಾರಿನ ವಿದ್ಯಾವಂತರು. ನಮ್ಮ ಇಡಿಯ ಶಿಕ್ಷಣ ವ್ಯವಸ್ಥೆಯ ಮೂಲದಲ್ಲೇ ಒಂದು ದೋಷವಿದೆ. ಅದು ಬ್ರಾಹ್ಮಣರ ಬುದ್ಧಿಮತ್ತೆಯನ್ನು ಮಾನದಂಡವಾಗಿರಿಸಿಕೊಂಡು, ಅವರಲ್ಲಿರುವ ಕೌಶಲಗಳನ್ನು ನೆಲೆಯಾಗಿ ಮಾಡಿಕೊಂಡು ಅದರ ಮೇಲೆ ಜಾತಿ ವ್ಯವಸ್ಥೆಯಲ್ಲಿ ಕೆಳಗಿರುವವರ ಸಾಮರ್ಥ್ಯವನ್ನು ಪರೀಕ್ಷಿಸಿ ಅವರು ಪಾಸೋ ಫೈಲೋ ಎಂದು ನಿರ್ಧರಿಸುವುದು. ಈ ಸಂದರ್ಭದಲ್ಲಿ ನನಗೆ ಕನ್ನಡದ ಈರ್ವರು ಹಿರಿಯ ಚಿಂತಕರಾದ ಡಾ.ಯು.ಆರ್. ಅನಂತಮೂರ್ತಿ ಮತ್ತು ಡಾ.ಪುರುಷೋತ್ತಮ ಬಿಳಿಮಲೆಯವರ ವಾದಗಳು ನೆನಪಾಗುತ್ತವೆ.

ಬುದ್ಧಿಮತ್ತೆಗೆ ಸಂಬಂಧಿಸಿದಂತೆ ಬ್ರಾಹ್ಮಣನಲ್ಲಿ ಕೆಲವು ವಿಶೇಷ ಕೌಶಲಗಳಿವೆ. ಹಾಗೆಯೇ ದಲಿತನೊಬ್ಬನಲ್ಲಿ ದೈಹಿಕ ಕೌಶಲಗಳಿಗೆ ಸಂಬಂಧಿಸಿಂತೆ ಅಪ್ರತಿಮವಾದ ಕೆಲವು ಕೌಶಲಗಳಿವೆ. ಆದರೆ ನಮ್ಮ ಇಡಿಯ ಶಿಕ್ಷಣ ವ್ಯವಸ್ಥೆಯಲ್ಲಿ ಬ್ರಾಹ್ಮಣನ ಬೌದ್ಧಿಕ ಕೌಶಲಗಳನ್ನು ಮಾನದಂಡವಾಗಿರಿಸಿಕೊಂಡು ಅದರ ಮೂಲಕ ಎಲ್ಲರ ಸಾಮರ್ಥ್ಯವನ್ನು ಅಳೆಯಲಾಗುತ್ತದೆ. ತಲೆಮಾರುಗಳಿಂದ ಶಿಕ್ಷಣ ಸಂಸ್ಕಾರದ ಪರಂಪರೆಯನ್ನು ಹೊಂದಿರುವ ಬ್ರಾಹ್ಮಣರು ಸಹಜವಾಗಿಯೇ ಇದರಲ್ಲಿ ವಿಜಯಶಾಲಿಗಳಾಗುತ್ತಾರೆ. ಇತರರು ಹಿಂದೆ ಬೀಳುತ್ತಾರೆ. ಅದೇ ಕೆಳಜಾತಿಗಳಲ್ಲಿರುವ ದೈಹಿಕ ಕೌಶಲಗಳನ್ನೇ ಶಾಲಾ ಶಿಕ್ಷಣದ ಪ್ರಧಾನ ವಿಚಾರಗಳನ್ನಾಗಿ ಮಾಡಿ ಅದರಲ್ಲಿ ಪರೀಕ್ಷೆ ಮಾಡಲಿ, ಆಗ ದಲಿತರದ್ದು ಯಾರೂ ಸರಿಗಟ್ಟಲಾಗದ ಸಾಧನೆ ಎನಿಸಿಕೊಳ್ಳುತ್ತದೆ ಮತ್ತು ಬ್ರಾಹ್ಮಣರು ಸೊನ್ನೆ ಅಂಕಗಳೊಂದಿಗೆ ಅನುತ್ತೀರ್ಣರಾಗುತ್ತಾರೆ ಎಂಬುದು ಅನಂತಮೂರ್ತಿಯವರ ವಾದದ ತಾತ್ಪರ್ಯ.

ಬ್ರಾಹ್ಮಣರು ಸಂಸ್ಕೃತ ಶ್ಲೋಕಗಳು, ವೇದ, ಉಪನಿಷತ್ತುಗಳು, ರಾಮಾಯಣ, ಮಹಾಭಾರತ, ಭಗವದ್ಗೀತೆ ಇತ್ಯಾದಿಗಳಲ್ಲಿ ಪಾರಂಗತರಾಗಿರುತ್ತಾರೆ. ಯಾಕೆಂದರೆ ಅದುವೇ ಅವರ ಉದ್ಯೋಗ, ಅದು ಅವರ ಪರಂಪರೆ, ಅವರ ಕ್ಷೇತ್ರ. ಹಾಗಾಗಿ ಬ್ರಾಹ್ಮಣರು ತೋಡಿದ ಖೆಡ್ಡಾಕ್ಕೆ ನಾವು ಬೀಳದಂತೆ ಇಲ್ಲಿ ನಾವು ಎಚ್ಚರದಿಂದಿರಬೇಕು. ಸಾಮಾಜಿಕ ಸ್ತರದ ಕೆಳಗಿನವರಾದ ನಾವು ಅವರ ಕ್ಷೇತ್ರಕ್ಕೆ ಸಂಬಂಧಿಸಿದ ವಿಚಾರಗಳಲ್ಲಿ ಅವರೊಂದಿಗೆ ಸ್ಪರ್ಧೆ ನಡೆಸಿದರೆ ಸಹಜವಾಗಿಯೇ ಅಲ್ಲಿ ನಾವು ವಿಫಲರಾಗುವ ಸಾಧ್ಯತೆ ಇದೆ. ನಾವು ಬ್ರಾಹ್ಮಣರನ್ನು ಪಾಡ್ದನಗಳು, ಜಾನಪದ, ಮಂಟೇಸ್ವಾಮಿ ಪ್ರಸಂಗ ಇತ್ಯಾದಿ ತಳವರ್ಗದ ಕ್ಷೇತ್ರಗಳಲ್ಲಿ ನಮ್ಮೊಂದಿಗೆ ಸ್ಪರ್ಧಿಸುವಂತೆ ಆಹ್ವಾನಿಸಬೇಕು. ಅಲ್ಲಿ ಅವರಿಗೆ ಸ್ಪರ್ಧಿಸಲು ಸಾಧ್ಯವೇ ಆಗುವುದಿಲ್ಲ, ಅವರು ಸೋಲುವುದು ಖಂಡಿತ ಎನ್ನುವುದು ಡಾ.ಬಿಳಿಮಲೆಯವರ ವಾದದ ಸಾರಾಂಶ. ಹಾಗಾಗಿ ಇಲ್ಲಿ ಯಾರು ಎಷ್ಟು ಸಾಧನೆ ಮಾಡಿದ್ದಾರೆ, ಯಾರು ಶ್ರೇಷ್ಠರು ಎನ್ನುವುದು ಯಾವುದರ ಮೇಲೆ ನೀವು ಅವರನ್ನು ಅಳೆಯುತ್ತಿದ್ದೀರಿ ಎನ್ನುವುದನ್ನು ಆಧರಿಸಿದೆ. ಸದ್ಯದ ನಮ್ಮ ಶಿಕ್ಷಣ ವ್ಯವಸ್ಥೆ ಬ್ರಾಹ್ಮಣರ ಬುದ್ಧಿಮತ್ತೆಯನ್ನೇ ಶ್ರೇಷ್ಠ ಎಂಬ ಪೂರ್ವಭಾವನೆಯೊಂದಿಗೆ ಮುಂದುವರಿಯುತ್ತಿರುವುದರಿಂದ ಅಬ್ರಾಹ್ಮಣರಿಗೆ ಸಹಜವಾಗಿಯೇ ಕಷ್ಟವಾಗುತ್ತಿದೆ. ಬ್ರಾಹ್ಮಣರಿಗೆ ಸೀಮಿತವಾಗಿದ್ದ ಕ್ಷೇತ್ರಗಳನ್ನು ಬದಿಗೆ ಸರಿಸಿ ದಲಿತರ ಕ್ಷೇತ್ರಗಳಲ್ಲಿ ಬುದ್ಧಿಮತ್ತೆ ಮತ್ತು ಕೌಶಲದ ಪರೀಕ್ಷೆ ನಡೆಯುವ ಸ್ಥಿತಿ ಬರಬೇಕು. ಆಗ ಯಾರು ಶ್ರೇಷ್ಠರು, ಯಾರ ಜಾಗ ಎಲ್ಲಿ ಎನ್ನುವುದು ಸ್ಪಷ್ಟವಾಗುತ್ತದೆ.

- ಶ್ರೀನಿವಾಸ ಕಾರ್ಕಳ, ಮಂಗಳೂರು

ಸಂಪುಟ ವಿಸ್ತರಣೆ ಮರೀಚಿಕೆಯೇ?

ಕಳೆದ ಎರಡು ವರ್ಷಗಳಿಂದ ನಡೆಯುತ್ತಿರುವ ಸಚಿವ ಸಂಪುಟ ವಿಸ್ತರಣೆ, ಪುನರಚನೆ ಮತ್ತು ನಿಗಮ ಮಂಡಳಿಗೆ ನೇಮಕಾತಿ ಪ್ರಕ್ರಿಯೆ ಕನ್ನಡದ ಗಾದೆ 'ವಿಧವೆ ಮದುವೆಗೆ ವಿಘ್ನಗಳು ಹನ್ನೆರಡು' ಎನ್ನುವಂತೆ ಮುಂದೆ ಹೋಗುತ್ತಲೇ ಇದೆ. ಇಂಗ್ಲೀಷ್‌ನಲ್ಲಿ ಹೇಳುವ 'ಸೋ ನಿಯರ್ ಎಟ್ ಸೋ ಫಾರ್'ನಂತೆ ಕ್ಲೈಮ್ಯಾಕ್ಸ್‌ವರೆಗೆ ಹೋಗಿ ಹಿಂದೆ ಜಾರುತ್ತದೆ. ಮಂತ್ರಿ ಮಂಡಳ ಮತ್ತು ನಿಗಮ ಮಂಡಳಿಗೆ ನೇಮಕಾತಿ ಪ್ರಹಸನವನ್ನು ನೋಡಿದಾಗ ಪುರಂದರದಾಸರ "ನಗೆಯು ಬರುತಿದೆ ಎನಗೆ ನಗೆಯು ಬರುತಿದೆ" ಹಾಡು ನೆನಪಾಗುತ್ತದೆ. ವಿಸ್ತರಣೆ ವಿಳಂಬಕ್ಕೆ ಕಾರಣಗಳೇನೇ ಇರಲಿ, ಈ ಹುದ್ದೆಗೆ ಆಶೆ ಪಟ್ಟ ಜನಪ್ರತಿನಿಧಿಗಳ ಮತ್ತು ಇತರ ಕಾರ್ಯಕರ್ತರ ತಾಳ್ಮೆಯನ್ನು ಮತ್ತು ಈ ವಿಳಂಬಕ್ಕೆ ಪ್ರತಿ ಬಾರಿಯೂ ನೀಡುವ ಕಾರಣಗಳನ್ನು ಪ್ರಶಂಸಿಸಲೇಬೇಕು. ಈಗ ಬೆಂಗಳೂರು ಮಹಾನಗರ ಪಾಲಿಕೆಯ ಮತ್ತು ಪಂಚಾಯತ ಚುನಾವಣೆಗಳು ನಡೆಯಲಿದ್ದು, ಇನ್ನು ಎರಡು ತಿಂಗಳ ಪ್ರಕ್ರಿಯೆಗೆ ಕಡ್ಡಾಯ ವಿರಾಮ; ಹಾಗೆಯೇ ಮುಖ್ಯಮಂತ್ರಿಗಳೂ ನಿರಾಳ.

ಚುನಾವಣೆ ಮುಗಿದು ಅಧಿಕಾರಕ್ಕೆ ಬಂದ ತಕ್ಷಣ ಈ ಪ್ರಕ್ರಿಯೆ ಮುಗಿಸಿದರೆ, ಯಾವುದೇ ಜಂಜಾಟ ಇರುವುದಿಲ್ಲ. ಗೆದ್ದ ಹುಮ್ಮನಸ್ಸಿನಲ್ಲಿ ಭಿನ್ನಾಭಿಪ್ರಾಯಗಳು ತೀವ್ರವಾಗಿ ವಿಳುವದಿಲ್ಲ, ಭಿನ್ನಾಭಿಪ್ರಾಯಗಳು ರೂಪು ಪಡೆಯುವುದರಲ್ಲಿ ಪ್ರಕ್ರಿಯೆ ಮುಗಿದು ಹೋಗುತ್ತದೆ. ದಿನಗಳು ಕಳೆದಂತೆ ಭಿನ್ನಾಭಿಪ್ರಾಯಗಳು ಹೆಚ್ಚುತ್ತವೆ ಮತ್ತು ಆಕಾಂಕ್ಷಿಗಳೂ ಹೆಚ್ಚಾಗುತ್ತಾರೆ. ಅವಕಾಶಗಳು ಕೆಲವು ಆದರೆ ಆಕಾಂಕ್ಷಿಗಳು ಹಲವು ಎನ್ನುವ ಸ್ಥಿತಿ ಇರುವಾಗ, ಈ ಪ್ರಕ್ರಿಯೆ ಜೇನುಗೂಡಿಗೆ ಕೈಹಾಕಿದಂತೆ. ಸಪ್ಲೈಗಿಂತ ಬೇಡಿಕೆ ಹೆಚ್ಚಿರುವ ಈ 'ಮಿಸ್‌ಮ್ಯಾಚ್' ಸ್ಥಿತಿಯಲ್ಲಿ ರಾಜಕೀಯ ಚಾಣಾಕ್ಷತೆಯನ್ನು ಒರೆಗೆ ಹಚ್ಚ ಬೇಕಾಗುತ್ತದೆ. ಬಹುಷಃ ಇದೇ ಕಾರಣಕ್ಕೋ ಏನೋ ಮುಖ್ಯಮಂತ್ರಿಗಳು ಮುಂದಾಗುತ್ತಿಲ್ಲ? ವಿಚಿತ್ರವೆಂದರೆ, ಪ್ರತಿಬಾರಿಯೂ ಈ ವಿಷಯ ತಾರಕಕ್ಕೇರಿದಾಗ 'ಇದು ಮುಖ್ಯಮಂತ್ರಿಗಳ ವಿವೇಚನೆಗೆ ಬಿಟ್ಟದ್ದು, ಇದು ಅವರ ಪರಮಾಧಿಕಾರ, ನಾವು ಮಾಡುವಂಥದ್ದೇನಿಲ್ಲ' ಎಂದು ಹೈಕಮಾಂಡ್ ಹೇಳಿದರೆ, 'ಹೈಕಮಾಂಡ್ ಸಂಗಡ ಒಂದೆರಡು ಬಾರಿ ಸಮಾಲೋಚಿಸಿದ್ದೇನೆ. ಇದರ ಬಗೆಗೆ ಇನ್ನೊಮ್ಮೆ ಮುಕ್ತ ಸಮಾಲೋಚನೆ ಮಾಡುತ್ತೇನೆ. ಅಲ್ಲಿಂದ ಹಸಿರು ನಿಶಾನೆ ದೊರೆತ ತಕ್ಷಣ ವಿಸ್ತರಿಸುತ್ತೇನೆ' ಎಂದು ಮುಖ್ಯ ಮಂತ್ರಿಗಳಿಂದ ಹೇಳಿಕೆ ಬರುತ್ತದೆ. ರಾಜಕೀಯ ವಿಶ್ಲೇಷಕರ ಪ್ರಕಾರ ನಿಂತ ಮತ್ತು ಶಾಂತವಾದ ನೀರಿನ ಕೊಳವನ್ನು ಕದಲುವ ಮನಸ್ಸು ಸಂಬಂಧಪಟ್ಟವರಿಗೆ ಇಲ್ಲ, ಜಾತಿ ಮತ್ತು ಪ್ರಾದೇಶಿಕ ಸಮೀಕರಣವನ್ನು ಚೇದಿಸಿ ಎಲ್ಲರನ್ನೂ ಒಗ್ಗೂಡಿಸಿ ಅಥವಾ ಸಂತೈಸಿ ಈ ಪ್ರಕ್ರಿಯೆಯನ್ನು ಮಾಡುವದು ತುಂಬಾ ಕ್ಲಿಷ್ಟಕರ ಕೆಲಸ. ಇದ್ದವರಲ್ಲಿ ಕೆಲವರನ್ನು ತೆಗೆಯದೇ ಹೊಸಬರನ್ನು ತೆಗೆದುಕೊಳ್ಳುವಂತಿಲ್ಲ, ಈ ಪ್ರಕ್ರಿಯೆಯನ್ನು ಮಾಡದಿದ್ದರೆ, ಒಂದು ಹುದ್ದೆ ದೊರಕುವ ನಿರೀಕ್ಷೆಯಲ್ಲಿ ಭಿನ್ನಮತ ಚಟುವಟಿಕೆ ನಿಯಂತ್ರಣದಲ್ಲಿ ಇರುತ್ತದೆ. ಧೈರ್ಯ ಮಾಡಿ ಈ ಕಾರ್ಯಕ್ಕೆ ಮುಂದಾದರೆ Apple Cart ಮುಗ್ಗರಿಸುತ್ತದೆ. ನಮ್ಮ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಇದಕ್ಕೆ ಸಾಕಷ್ಟು ಉದಾಹರಣೆಗಳಿವೆ. ಅಂತೆಯೇ ಗಾಡಿ ಓಡಿದಷ್ಟು ದೂರ ಮತ್ತು ಸಮಯ ಓಡಲಿ ಎನ್ನುವ ರಾಜಕೀಯ ಗತ್ತುಗಾರಿಕೆ, ಚಾಣಾಕ್ಷತನ ಮತ್ತು ಮುತ್ಸದ್ದಿತನವನ್ನು ಮುಖ್ಯಮಂತ್ರಿಗಳು ತೋರಿಸುತ್ತಿರಬೇಕು ಎಂದು ರಾಜಕೀಯ ವಲಯದಲ್ಲಿ ಹೇಳಲಾಗುತ್ತಿದೆ. ನಿಗಮ ಮಂಡಳಿಗಳಿಗೆ ನೇಮಕಾತಿ ಮಾಡುವಾಗ ೨೦ ತಿಂಗಳ ಅವಧಿಯನ್ನು ನಿಗದಿ ಮಾಡಿದಂತೆ, ಮಂತ್ರಿ ಪದವಿಗೂ ಈ ರೀತಿ ಸಮಯ ಪರಿಮಿತಿಯನ್ನು ನಿಗದಿ ಮಾಡಿದ್ದರೆ, ಈ ಪರಿಸ್ಥಿತಿ ಉದ್ಭವಿಸುತ್ತಿರಲಿಲ್ಲ, ಆದರೆ, ಕೊನೆಯವರೆಗೂ "ನಾನೇ, ನನ್ನ ನಂತರ ನಮ್ಮವರು" ಹುದ್ದೆ ಹಿಡಿಯಬೇಕು ಎನ್ನುವ ಅಲಿಖಿತ ರಾಜಕೀಯ ವ್ಯವಸ್ಥೆಯಲ್ಲಿ, ಇಂತಹ ದೂರಗಾಮಿ ಮತ್ತು ಅರ್ಥಪೂರ್ಣ ಚಿಂತನೆಯನ್ನು ಮಾಡುವ ಮತ್ತು ಅನುಷ್ಠಾನಗೊಳಿಸುವ ರಾಜಕೀಯ ಇಚ್ಛಾ ಶಕ್ತಿ ಯಾರಿಗಿದೆ?

- ರಮಾನಂದ ಶರ್ಮಾ, ಬೆಂಗಳೂರು

ಉದಾರ ನೆರವು ನೀಡಿ

ಮಾನ್ಯರೇ,

ಕರ್ನಾಟಕ ರಾಜ್ಯ ರೈತ ಸಂಘದ ಹಿರಿಯ ನಾಯಕರೂ, ಉಪಾಧ್ಯಕ್ಷರೂ ಆದ ಶ್ರೀ ಜೆ.ಎಂ. ವೀರಸಂಗಯ್ಯನವರು ತುಂಬಾ ಗಂಭೀರವಾದ ಕಿಡ್ನಿ ವೈಫಲ್ಯದಿಂದ ನರಳುತ್ತಿದ್ದಾರೆ. ನೆಫ್ರೊ ಯುರಾಲಜಿ ಸಂಸ್ಥೆ ವಿಕ್ಟೋರಿಯಾ ಕಾಂಪೌಂಡ್, ಬೆಂಗಳೂರಿನಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ರೈತ ಹೋರಾಟವೊಂದರಲ್ಲಿ ಭಾಗಿಯಾಗಿ ಬಂಧನದಲ್ಲಿರುವಾಗ ಪೊಲೀಸರ ಹಲ್ಲೆಯಿಂದ ಹೊಟ್ಟೆಯ ಮೇಲೆ ಬಿದ್ದ ಪೆಟ್ಟಿನಿಂದಾಗಿ ಆರೋಗ್ಯ ಹದಗೆಟ್ಟು ಉದರ ಶಸ್ತ್ರ ಚಿಕಿತ್ಸೆಯಾದರೂ ಮೂತ್ರ ಪಿಂಡಕ್ಕೆ ಹಾನಿಯಾಗಿ ಸೋಂಕಾಗಿ, ಈಗ ಕಿಡ್ನಿ ವೈಫಲ್ಯಗೊಂಡಿದೆ. ಕಿಡ್ನಿ ಕಸಿ ಶಸ್ತ್ರ ಚಿಕಿತ್ಸೆಗೆ ಮತ್ತು ಆಸ್ಪತ್ರೆ ಖರ್ಚಿಗಾಗಿ ಇಲ್ಲಿಯವರೆಗೆ 32 ಲಕ್ಷ ಖರ್ಚು ಮಾಡಿಕೊಂಡು ಸಂಪೂರ್ಣ ಅಸಹಾಯಕ ಸ್ಥಿತಿ ತಲುಪಿದ್ದಾರೆ. ಇದು ನಿರಂತರವಾಗಿ ಚಿಕಿತ್ಸೆ ಪಡೆಯುತ್ತಲೇ ಇರಬೇಕಾದ ಅನಾರೋಗ್ಯದ ಸ್ಥಿತಿಯಾದುದರಿಂದ ಸಹಾಯಕ್ಕೆ ಬಂದ ಜೊತೆಗಾರರ ವೆಚ್ಚ ಇವೆಲ್ಲ ಸೇರಿ ಕನಿಷ್ಠ ಪ್ರತಿ ತಿಂಗಳು ರೂ. 20,000 (ಇಪ್ಪತ್ತು ಸಾವಿರ ರೂಪಾಯಿಗಳು) ಖರ್ಚಿದೆ.

ಪ್ರೊ. ನಂಜುಂಡಸ್ವಾಮಿ ಜೊತೆಗೂಡಿ ರೈತ ಚಳುವಳಿ ಕಟ್ಟಿ ಬೆಳೆಸಿದ ಹಿರಿಯ ರೈತನಾಯಕರಾದ ಶ್ರೀ ವೀರಸಂಗಯ್ಯನವರಿಗೆ ಕಷ್ಟ ಕಾಲದಲ್ಲಿ ನಾಡಿ[...] ಪ್ರಗತಿಪರರೆಲ್ಲರೂ ಬೆಂಬಲ ನೀಡಬೇಕಾಗಿದೆ. ಅವರ[...] ಸರ್ಕಾರ ಒತ್ತಾಸೆಯಾಗಿ ನಿಂತು ಸಂಪೂರ್ಣ ವೆ[...] ನಿರ್ವಹಿಸುವಂತೆ ಮುಖ್ಯಮಂತ್ರಿಗಳನ್ನು ನಾವೆಲ್ಲ ಕೇಳಬೇಕು[...] ಮುಖ್ಯಮಂತ್ರಿಗಳು ಒಪ್ಪಿ ಸರ್ಕಾರ ಆದೇಶ ಬರುವುದಕ್ಕೆ[...] ಮುನ್ನ ದಿನ ನಿತ್ಯದ ವೆಚ್ಚಕ್ಕೆ ಸಾರ್ವಜನಿಕರು, ಸಂಘ[...] ಸಂಸ್ಥೆಗಳು ಉದಾರವಾಗಿ ನೆರವು ನೀಡಿ ನಮ್ಮ ಕರ್ತ[...] ನಿರ್ವಹಿಸುವ ಅಗತ್ಯವಿದೆ. ಈ ಬಗೆಗೆ ಆಸಕ್ತಿಯಿರು[...] ವಿಚಾರವಾದಿಗಳು ದಯವಿಟ್ಟು ಈ ಕೆಳಕಂಡಂತಿರುವ[...]

ಜೆ.ಎಂ. ವೀರಸಂಗಯ್ಯ

ಅಕೌಂಟ್ ನಂಬರ್ 31226667581

ಎಸ್‌ಬಿಐ, ಗಾಂಧಿನಗರ ಶಾಖೆ, ಬೆಂಗಳೂರು


ಮೊಬೈಲ್ ನಂಬರ್: 9342658829

ಚೆಕ್ ರೂಪದಲ್ಲಿ ಹಣ ಕಳುಹಿಸಬೇಕೆಂದು ನಾ[...] ಕೇಳುತ್ತಿದ್ದೇವೆ. ಸಾಮಾಜಿಕ ಚಳುವಳಿಗಾಗಿ ಬದುಕನ್ನ[...] ಮುಡುಪಿಟ್ಟ ಶ್ರೀ ವೀರಸಂಗಯ್ಯನವರಿಗೆ ಬೆಂಬಲವಾ[...] ಉದಾರವಾದಿಗಳೆಲ್ಲರೂ ಇವರ ಪರವಾಗಿ ನಿಲ್ಲಬೇಕಾ[...] ವಿನಂತಿಸಿಕೊಳ್ಳುತ್ತಿದ್ದೇವೆ.

ಇಂತಿ

ಬರಗೂರು ರಾಮಚಂದ್ರಪ್ಪ, ಪ್ರೊ. ಕೆ. ಮರುಳಸಿದ್ದ[...] ವೀರಭದ್ರ ಚನ್ನಮಲ್ಲ ಸ್ವಾಮೀಜಿ (ನಿಡುಮಾಮಿ[...] ಪೀಠಾಧ್ಯಕ್ಷರು), ಬಿ.ಟಿ. ಲಲಿತಾನಾಯಕ್, ದೇವನೂರ[...] ಮಹಾದೇವ, ಜಿ.ಕೆ. ಗೋವಿಂದ ರಾವ್, ರಂಜಾನ್ ದರ್ಗಾ[...]

ಚಂಭಟ್ಟನ ಹೂರಣ ಹೊರಬೀಳಲಿದೆ.



ನೇಪಾಳದ ಪಶುಪತಿನಾಥ ದೇವಾಲಯವು ಶುಚಿತ್ವದ ಕೊರತೆ ಹಾಗೂ ಅಲ್ಲಿಯ ಆಡಳಿತ ಮಂಡಳಿ ಹಾಗೂ ಪುರೋಹಿತರ ಅವೈದಿಕ ಪೂಜೆಗಳಿಂದಾಗಿ ದೇವಾಲಯವು ಕಳಾಹೀನವಾಗಿದ್ದು, ತಾನು ಈ ಮುಂಚೆ ಈ ಬಗ್ಗೆ ಎಚ್ಚರಿಕೆ ಕೊಟ್ಟಿದ್ದರೂ ಅಲ್ಲಿಯ ರಾಜ ಮನೆತನದವರು ಇದನ್ನು ಸರಿಪಡಿಸದೇ ಇದ್ದುದರಿಂದಾಗಿ ಭೂಕಂಪ ಘಟಿಸಿದೆ ಎಂದು ಬೆಂಗಳೂರಿನ ಆರ್.ಟಿ.ನಗರದ ಢೋಂಗಿ ಜ್ಯೋತಿಷಿ ಚಂದ್ರಶೇಖರಸ್ವಾಮಿ ಅರ್ಥಾತ್ ಚಂಭಟ್ಟ ಬೂಸಿ ಬಿಟ್ಟಿದ್ದಾನೆ.

ಆದರೆ ತಾನು ನೇಪಾಳಕ್ಕೆ ಹೋಗಿ ಯಜ್ಞ ಯಾಗ ಪೂಜೆಗಳಿಂದ ಪ್ರಕೃತಿಯನ್ನು ಶಾಂತ ಪಡಿಸುವುದಾಗಿ ನೇಪಾಳದ ಪ್ರಧಾನ ಮಂತ್ರಿಗೆ ವಾಗ್ದಾನ ಮಾಡಿರುವುದಾಗಿ ಈ ಚಂಭಟ್ಟ ಕರಾವಳಿಯ ಪತ್ರಿಕೆಗಳಿಗೆ ಬೊಗಳೆ ಹೇಳಿಕೆ ಕೊಟ್ಟಿದ್ದಾನೆ. ಚಂಭಟ್ಟ ಹೇಳಿದ್ದರ ಅರ್ಥ ನೇಪಾಳದ ಪಶುಪತಿನಾಥ ದೇವಲದ ಕನ್ನಡಿಗ ಹಾಗೂ ನೇಪಾಳಿ ಪುರೋಹಿತರಿಗೆ ಶಾಸ್ತ್ರಬ[...]ವಾಗಿ ಪೂಜೆ ಮಾಡುವುದ[...] ಗೊತ್ತಿಲ್ಲ! ಜತೆಗೆ ಅಲ್ಲಿಯ [...]ಡಳಿತ ಮಂಡಳಿ ಹಾಗ[...] ಸರಕಾರವನ್ನೇ ಈತ ದೇ[...]ದ ಆಡಳಿತ ಗೊತ್ತಿಲ್ಲ[...] ಅನಾಡಿಗಳು ಎನ್ನುವ ರೀತಿ ಅವಮಾನಿಸಿದ್ದಾನೆ. [...] ನೇಪಾಳದ ದೇಗುಲದ ಸ್ಮಾರ್ತ ಬ್ರಾಹ್ಮಣ ಕನ್ನಡಿ[...] ಪುರೋಹಿತರ ಹತ್ತಿರದ ಸಂಬಂಧಿಕರು ಉಡುಪಿಯ[...] ಈಗಲೂ ನೆಲೆಸಿದ್ದು, ಅವರು ಹೇಳುವಂತೆ ಈ ಚಂಭಟ್ಟ[...] ಬಗ್ಗೆ ನೇಪಾಳದಲ್ಲಿ ಯಾರಿಗೂ ಗೊತ್ತಿಲ್ಲ, ಅವನದು ಕೇವ[...] ಸ್ವರತಿಯ ಹೇಳಿಕೆಗಳು ಅಷ್ಟೇ. ಜತೆಗೆ ಒಂದು ಕನ್ನ[...] ಪತ್ರಿಕೆಯ ಸಂಪಾದಕನಿಗೆ ದುಡ್ಡು ಕೊಟ್ಟು ತನ್ನನ್ನು ಅಂತ[...] ರಾಷ್ಟ್ರೀಯ ಖ್ಯಾತಿಯ ವಾಸ್ತು ತಜ್ಞ, ಅಮೆರಿಕಾದ ಅಧ್ಯ[...] ಒಬಾಮಾ ಹಾಗೂ ಜಪಾನಿನ ಪ್ರಧಾನಿಗಳೂ ತನ್ನ ಸಲ[...] ಪಡೆಯುತ್ತಾರೆ ಎಂದು ಪ[...]ಕೆಯಲ್ಲಿ ಬರೆಸಿಕೊಳ್ಳುತ್ತಾ[...] ನಮ್ಮ ಕುಶಾಲನಗರದ ಟಿಬೇಟಿ ಯುವಕರಿಗೆ ಕೋಟ[...] ಪ್ಯಾಂಟು ಟೈ ತೊಡಿಸಿ ಅವರೊಂದಿಗೆ ಸೆಲ್ಫೀ ಫೋಟೋ[...] ತೆಗೆದು ಅದನ್ನು ವಿಭಟ್ಟನ ಪತ್ರಿಕೆಯಲ್ಲಿ ಹಾಕಿಸಿ, ಅವರ[...] ಜಪಾನಿನ ರಾಯಭಾರಿ ತಂಡದವರಾಗಿದ್ದು ಸುನಾಮಿಯಿಂ[...] ಜರ್ಜರಿತವಾದ ಜಪಾನಿನ ನಗರದ ಮರು ನಿರ್ಮಾಣ[...] ಬಗ್ಗೆ ತನ್ನಲ್ಲಿ ವಾಸ್ತು ಸಲಹೆ ಪಡೆಯಲು ಬಂದಿರುವುದಾ[...] ಬೊಗಳೆ ಬಿಟ್ಟು ಪ್ರಚಾರ ಪಡೆಯುತ್ತಾನೆ.

ಮಣಿಪಾಲದ ಮೆಡಿಕಲ್ ಕಾಲೇಜಿನಲ್ಲಿ ಕಲಿಯು[...] ಕೆಲವು ಸೀನಿಯರ್ ನೇಪಾಳಿ ವಿದ್ಯಾರ್ಥಿಗಳಲ್ಲಿ ಚಂಭಟ್ಟ[...] ಬಗ್ಗೆ ನಾವು ಕೇಳಿದಾಗ ಇವನು ಯಾರೋ ಗೊತ್ತಿ[...] ನೇಪಾಳದಲ್ಲಿ ಇವನನ್ನು ಯಾರೂ ಗುರುತಿಸುವುದಿಲ್ಲ ಎಂದ[...] ಹೇಳಿದರು. ಮೇಲಾಗಿ ನಮ್ಮ ದೇಶದ ಖ್ಯಾತ ಪುರಾತ[...] ಶೈವ ದೇಗುಲದ ಪುರೋಹಿತರಿಗೆ, ಆಡಳಿತ ಮಂಡಳಿ[...] ಹಾಗೂ ರಾಜ ಪರಿವಾರದವರಿಗೆ ಹಿಂದೂ ಶಾಸ್ತ್ರ[...] ಬಗ್ಗೆ ಸರಿಯಾದ ಮಾರ್ಗದರ್ಶನ ಮಾಡಲು ಸಮರ್ಥರಾ[...] ವೇದ ಶಾಸ್ತ್ರ ಪರಿಣಿತ ಶೈವ ಬ್ರಾಹ್ಮಣರು ನಮ[...] ದೇಶದಲ್ಲಿಯೇ ಬೇಕಾದಷ್ಟು ಇದ್ದಾರೆ. ಅದಕ್ಕೂ ಮಿಗಿಲಾ[...] ಹತ್ತಿರದಲ್ಲಿಯೇ ಭಾರತದ ಅಗ್ರಮಾನ್ಯ ಕಾಶಿಯ ಧರ್ಮ[...] ಸಂಸತ್ತು ಇದೆ, ಹರಿದ್ವಾರದ ಪ್ರಚಂಡ ವೈದಿಕರಿದ್ದಾ[...] ನಮಗೆ ದಕ್ಷಿಣ ಭಾರತದ ಒಬ್ಬ ಢೋಂಗಿ ವೈಷ್ಣವ ತಾಂತ್ರಿ[...] ಮಾರ್ಗದರ್ಶನದ ಅವಶ್ಯಕತೆಯೇ ಇಲ್ಲ ಎಂದು [...] ನೇಪಾಳಿ ವೈದ್ಯಕೀಯ ವಿದ್ಯಾರ್ಥಿಗಳು ಖಡಾಖಡಿಯಾ[...] ಹೇಳಿದರು. ಅಷ್ಟೇ ಅಲ್ಲ ಈ ಖೋ[...] ವಾಸ್ತುಪಂಡಿತ ಹಾಗೂ ಅವನ ಕನ್ನ[...] ಸಂಪಾದಕನ ಸ್ವ-ಪ್ರಚಾರದ ಟ್ರಿಕ್ಕುಗಳ ಬ[...] ನೇಪಾಳಿಗರನ್ನು ಎಚ್ಚರಿಸಲು ನೇಪಾಳ[...] ಎಲ್ಲ ಪ್ರಮುಖ ಪತ್ರಿಕೆಗಳಿಗೆ ಪ[...] ಬರೆಯುವುದಾಗಿ ಆ ವೈದ್ಯ ವಿದ್ಯಾರ್ಥಿಗ[...] ನಮಗೆ ವಾಗ್ದಾನ ಮಾಡಿದರು. ಇನ್ನು [...] ಚಂಭಟ್ಟ ಹಾಗೂ ವಿಭಟ್ಟನ ಹೂರ[...] ಹೊರಬೀಳಲಿದೆ.


- ಹರೀಶ್ ಎಂ ರಾವ[...]
ಉಡು[...]



ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ [...] ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು. ನಿ[...] ಪ್ರತಿಕ್ರಿಯೆಗಳನ್ನು 9980331427 ನಂಬರ್‌ಗ[...] ಚಿಕ್ಕದಾಗಿ ಮತ್ತು ಚೊಕ್ಕದಾಗಿ SMS ಕಳುಹಿಸಬಹು[...]

ಬಿಡುಗಡೆಯ ಗೊಂದಲದಲ್ಲಿ 'ರನ್ನ' ಚಿತ್ರ

ಇಷ್ಟು ದಿನ ಬಿಡುಗಡೆ ದಿನಾಂಕವನ್ನು ಘೋಷಣೆ ಮಾಡುತ್ತಾ, ಜೊತೆಗೆ ಅದನ್ನು ಮುಂದೂಡುತ್ತಾ ಬಂದಿದ್ದ ಕಿಚ್ಚ ಸುದೀಪ್ ಅಭಿನಯದ ಬಹು ನಿರೀಕ್ಷೆಯ 'ರನ್ನ' ಚಿತ್ರದ ತಂಡ ಕೊನೆಗೂ ಅದನ್ನು ಬಿಡುಗಡೆ ಮಾಡಲು ಸಿದ್ಧವಾಗಿದೆ.



ಆದರೆ ಕಂಟಕ ಬೇರೊಂದು ಕಡೆಯಿಂದ ಬಂದೆರಗಿದೆ. ಅಂದರೆ 'ರನ್ನ' ರಿಲೀಸ್‌ಗೆ ತೊಂದರೆಯಾಗಿದೆಯೇ? ಹೌದು ಎನ್ನುತ್ತಿದೆ ಗಾಂಧೀನಗರ. ಹಣಕಾಸು ವಿಚಾರಕ್ಕೆ ಸಂಬಂಧಿಸಿದಂತೆ 'ರನ್ನ' ಚಿತ್ರ ಬಿಡುಗಡೆಗೆ ಬೆಂಗಳೂರು ನಗರದ ಸಿಟಿ ಸಿವಿಲ್ ಕೋರ್ಟ್ ಮಧ್ಯಂತರ ತಡೆಯಾಜ್ಞೆ ನೀಡಿದೆ. ಹಾಗಾಗಿ ಚಿತ್ರ ನಿಗದಿತ ದಿನಕ್ಕೆ ಬಿಡುಗಡೆಯಾಗುತ್ತಿಲ್ಲ ಎನ್ನುವ ಸುದ್ದಿ ಗಾಂಧೀನಗರದಲ್ಲಿ ಹರಿದಾಡುತ್ತಿತ್ತು, ಗಾಂಧೀನಗರದವರ ಪ್ರಕಾರ ಶಿವಮೊಗ್ಗದ ಫೈನಾನ್ಷಿಯರ್ ಆದ ನಾಗರಾಜ್ ಎನ್ನುವವರು ಸಿನಿಮಾ ಬಿಡುಗಡೆಗೆ ನ್ಯಾಯಾಲಯದ ಮೂಲಕ ತಡೆಯಾಜ್ಞೆ ತಂದಿದ್ದಾರೆ. ನಿರ್ಮಾಪಕರಾದ ಚಂದ್ರಶೇಖರ ತಮಗೆ ಹೋದ ಸಿನಿಮಾದಲ್ಲಿ ನೀಡಬೇಕಾಗಿದ್ದ ಬಾಕಿ ಹಣ ನೀಡಿಲ್ಲ, ಹಾಗಾಗಿ ಆ ಬಾಕಿ ಮೂವತ್ತು ಲಕ್ಷ ಹಣ ಚುಕ್ತಾ ಮಾಡದೇ ಬಿಡುಗಡೆ ಮಾಡುವುದಕ್ಕೆ ಬಿಡುವುದಿಲ್ಲ ಎಂದಿದ್ದಾರೆ ಎಂಬುದು ಕೇಳಿಬರುತ್ತಿದ್ದ ಸುದ್ದಿ.

ಈಗ ಈ ಎಲ್ಲ ಊಹಾಪೋಹಗಳಿಗೆ 'ರನ್ನ' ನಿರ್ಮಾಪಕ ತೆರೆ ಎಳೆದಿದ್ದಾರೆ. "ಇದೆಲ್ಲಾ ಕಿಡಿಗೇಡಿಗಳು ಹಬ್ಬಿಸಿರುವ ಸುಳ್ಳು ಸುದ್ದಿ, ಅಭಿಮಾನಿಗಳು ಇದನ್ನು ನಂಬಬೇಡಿ" ಎಂದು ಚಂದ್ರಶೇಖರ್ ಸ್ಪಷ್ಟನೆ ನೀಡಿದ್ದಾರೆ. "ಒಂದು ಒಳ್ಳೆ ಚಿತ್ರ ಮಾಡಿದ್ದೇವೆ. ಚಿತ್ರದ ಬಗೆಗಿನ ಅಪಪ್ರಚಾರಕ್ಕೆ ನಾನು ಭಯಪಡುವುದಿಲ್ಲ, ಉತ್ತಮ ಚಿತ್ರವನ್ನು ಯಾವತ್ತೂ ಕನ್ನಡಿಗರು ಕೈಬಿಟ್ಟಿಲ್ಲ, 'ರನ್ನ' ಚಿತ್ರವನ್ನೂ ಜನ ಸ್ವೀಕರಿಸಲಿದ್ದಾರೆ ಎನ್ನುವ ವಿಶ್ವಾಸದಲ್ಲಿದ್ದೇವೆ. ಚಿತ್ರ ರಾಜ್ಯಾದ್ಯಂತ ಮೇ ಮೊದಲ ವಾರದಲ್ಲಿ ಬಿಡುಗಡೆಯಾಗುವುದು ನಿಶ್ಚಿತ. ಈ ಬಗ್ಗೆ ಅಭಿಮಾನಿಗಳಿಗೆ ಯಾವುದೇ ಆತಂಕ, ಗೊಂದಲ ಬೇಡ. ಕೋರ್ಟ್ ತಡೆಯಾಜ್ಞೆ ನೀಡಿರುವುದೆಲ್ಲಾ ಸತ್ಯಕ್ಕೆ ದೂರವಾದ ವಿಷಯ. ನನ್ನ ಮತ್ತು ನಾಗರಾಜ್ ನಡುವೆ ಯಾವುದೇ ಹಣಕಾಸಿನ ಗೊಂದಲವಿಲ್ಲ, ನನ್ನ ಬ್ಯಾನರಿನ ಚಿತ್ರಕ್ಕೆ ಮಸಿ ಬಳಿಯಬೇಕೆನ್ನುವ ಉದ್ದೇಶದಿಂದ ಈ ರೀತಿಯ ಸುದ್ದಿಯನ್ನು ಹಬ್ಬಿಸಲಾಗುತ್ತಿದೆ. ಯುಟ್ಯೂಬ್‌ನಲ್ಲಿ 'ರನ್ನ' ಚಿತ್ರದ ಸೀರೆ ಮತ್ತು ಬಬ್ಬರ್ ಹಾಡುಗಳು ಸೂಪರ್ ಹಿಟ್ ಆಗಿವೆ. ಇದನ್ನು ಸಹಿಸದ ಕೆಲವು ಕಿಡಿಗೇಡಿಗಳು ಚಿತ್ರದ ಬಗ್ಗೆ ಅಪಪ್ರಚಾರ ಮಾಡುತ್ತಿದ್ದಾರೆ" ಎಂದು ಚಂದ್ರಶೇಖರ್ ಹೇಳಿದ್ದಾರೆ.

ಆರ್.ಜಿ.ವಿ ನಿರ್ದೇಶನದಲ್ಲಿ ಶಿವಣ್ಣ

ಕಾಂಟ್ರವರ್ಶಿಯಲ್ ಡೈರೆಕ್ಟರ್ ರಾಮ್ ಗೋಪಾಲ್ ವರ್ಮಾ ಸ್ಯಾಂಡಲ್‌ವುಡ್‌ಗೆ ಕಾಲಿಡುತ್ತಿದ್ದಾರಂತೆ. ಹ್ಯಾಟ್ರಿಕ್ ಹೀರೋ ಶಿವರಾಜ್‌ಕುಮಾರ್ ಜೊತೆ ಸಿನಿಮಾ ಮಾಡುತ್ತಿದ್ದಾರಂತೆ. ಹೀಗಂತ ಗಾಂಧಿನಗರದಲ್ಲಿ ಅಂತೆ-ಕಂತೆ ಸುದ್ದಿಗಳು ಹರಿದಾಡುತ್ತಿದ್ದವು. ಆ ಅಂತೆ-ಕಂತೆ ಈಗ ನಿಜವಾಗಿದೆ. ರಾಮ್ ಗೋಪಾಲ್ ವರ್ಮಾ ಸಾಹೇಬ್ರು ಶಿವರಾಜ್‌ಕುಮಾರ್‌ಗೆ ಆಕ್ಷನ್ ಕಟ್ ಹೇಳೋದು 100% ಕನ್ಫರ್ಮ್ ಆಗಿದೆ. ಈ ವಿಷಯವನ್ನು ಖುದ್ದು ರಾಮ್ ಗೋಪಾಲ್ ವರ್ಮಾ ಖಚಿತ ಪಡಿಸಿದ್ದಾರೆ. ಅಷ್ಟೇ ಅಲ್ಲದೇ, ಸಿನಿಮಾದ ಬಗ್ಗೆ ಹಲವು ಮಾಹಿತಿಯನ್ನೂ ಹೊರಹಾಕಿದ್ದಾರೆ.



ಶಿವಣ್ಣ-ವರ್ಮಾ ಕಾಂಬಿನೇಷನ್‌ನಲ್ಲಿ ಸೆಟ್ಟೇರಲಿರುವ ಚಿತ್ರದ ಹೆಸರು 'ಕಿಲ್ಲಿಂಗ್ ವೀರಪ್ಪನ್'! ಹೌದು, ಕಾಡುಗಳ್ಳ, ನರಹಂತಕ, ದಂತಚೋರ ಎಂದೇ ಕುಖ್ಯಾತಿ ಗಳಿಸಿದ್ದ ವೀರಪ್ಪನ್ ಕುರಿತು ರಾಮ್ ಗೋಪಾಲ್ ವರ್ಮಾ ನಿರ್ದೇಶಿಸುತ್ತಿರುವ 'ಕಿಲ್ಲಿಂಗ್ ವೀರಪ್ಪನ್' ಸಿನಿಮಾದಲ್ಲಿ ಶಿವರಾಜ್‌ಕುಮಾರ್ ಹೀರೋ!

ಮುಂಚಿನಿಂದಲೂ ವೀರಪ್ಪನ್ ಬಗ್ಗೆ ಸಿನಿಮಾ ಮಾಡುವ ಹಂಬಲ ವರ್ಮಾಗೆ ಇತ್ತಾದರೂ, ಅವರಿಗೆ ಸೂಕ್ತ ಮಾಹಿತಿ ಲಭ್ಯವಾಗಿರಲಿಲ್ಲ, ಕಳೆದ ಹಲವು ವರ್ಷಗಳಿಂದ ಸುದೀರ್ಘ ರಿಸರ್ಚ್ ಮಾಡಿರುವ ಆರ್.ಜಿ.ವಿಗೆ ಈಗ ವೀರಪ್ಪನ್ ಕುರಿತಾದ ಕೆಲ ರಹಸ್ಯ ವಿಚಾರಗಳು ದೊರಕಿವೆಯಂತೆ. ಅದನ್ನೇ ಇಟ್ಟುಕೊಂಡು ವರ್ಮಾ ಈಗಾಗಲೇ ಸ್ಕ್ರಿಪ್ಟ್ ಕೂಡ ರೆಡಿ ಮಾಡಿ 'ಕಿಲ್ಲಿಂಗ್ ವೀರಪ್ಪನ್' ಅಂತ ಟೈಟಲ್ ಫಿಕ್ಸ್ ಮಾಡಿದ್ದಾರೆ.


ರಾಮ್ ಗೋಪಾಲ್ ವರ್ಮಾ ಪ್ರಕಾರ ವಿಶ್ವ ಕಂಡ ಅತ್ಯಂತ ನಟೋರಿಯಸ್ ಕ್ರಿಮಿನಲ್ ವೀರಪ್ಪನ್. ವೀರಪ್ಪನ್‌ನನ್ನು ಕೊಂದ ವ್ಯಕ್ತಿ ನಿಜವಾದ ಹೀರೋ. ಆ ಹೀರೋ ಕುರಿತ ಚಿತ್ರವೇ 'ಕಿಲ್ಲಿಂಗ್ ವೀರಪ್ಪನ್'. ಕಾಡುಗಳ್ಳ ವೀರಪ್ಪನ್ ಸಾವಿನ ಕುರಿತು ಈವರೆಗೂ ಯಾರೂ ಹೇಳಿರದ ನೈಜ ಕಥೆಯನ್ನ 'ಕಿಲ್ಲಿಂಗ್ ವೀರಪ್ಪನ್' ಚಿತ್ರದ ಮೂಲಕ ವರ್ಮಾ ಬಹಿರಂಗ ಪಡಿಸಲಿದ್ದಾರಂತೆ.

ಆನೆಗಳು, ಅನೇಕ ನಿಷ್ಠಾವಂತ ಪೊಲೀಸ್ ಅಧಿಕಾರಿಗಳು, 227ಕ್ಕೂ ಹೆಚ್ಚು ಅಮಾಯಕ ಜನರನ್ನ ಕೊಂದ ಪಾತಕಿ ವೀರಪ್ಪನ್. ಇಂಥ ಅಪಾಯಕಾರಿ ವ್ಯಕ್ತಿಯನ್ನು ಸೆರೆ ಹಿಡಿಯುವ ಉದ್ದೇಶಕ್ಕೆ ಮೂರು ರಾಜ್ಯ ಸರ್ಕಾರಗಳು ಕೋಟಿ ಕೋಟಿ ರೂಪಾಯಿ ಖರ್ಚು ಮಾಡಿದ್ದವು. ದಂತಚೋರನ ಸೆರೆ ಹಿಡಿಯುವುದಕ್ಕೆ ಹದಿನೈದು ವರ್ಷಗಳ ಕಾಲ ನೂರಾರು ಪೊಲೀಸರು ದಟ್ಟವಾದ ಬೃಹತ್ ಅರಣ್ಯದಲ್ಲಿ ವನವಾಸ ಪಡಬೇಕಾಗಿತ್ತು, ಇಷ್ಟೆಲ್ಲಾ ಹರಸಾಹಸದ ನಂತರ ವೀರಪ್ಪನ್‌ನನ್ನು ಕೊಂದದ್ದು ಒಬ್ಬನೇ ಒಬ್ಬ ವ್ಯಕ್ತಿ, ಆ ವ್ಯಕ್ತಿಯ ಕುರಿತಾದ ಚಿತ್ರವೇ 'ಕಿಲ್ಲಿಂಗ್ ವೀರಪ್ಪನ್'. ವೀರಪ್ಪನ್ ಕೊಂದ ವ್ಯಕ್ತಿಯ ಪಾತ್ರದಲ್ಲಿ ಹ್ಯಾಟ್ರಿಕ್ ಹೀರೋ ಶಿವರಾಜ್ ಕುಮಾರ್ ಅಭಿನಯಿಸಲಿದ್ದಾರೆ. ಇದುವರೆಗೂ ಅದೆಷ್ಟೋ ನೈಜ ಕಥೆ ಆಧರಿಸಿರುವ ಸಿನಿಮಾಗಳನ್ನು ತೆರೆಗೆ ತಂದು ಸೈ ಅನಿಸಿಕೊಂಡಿರುವ ಆರ್.ಜಿ.ವಿ ಈಗ ವೀರಪ್ಪನ್ ಕುರಿತ ಸಿನಿಮಾದಲ್ಲಿ ಕನ್ನಡಿಗರ ಆರಾಧ್ಯದೈವ ಡಾ.ರಾಜ್ ಸುಪುತ್ರ ಶಿವಣ್ಣನಿಗೆ ವಿಶೇಷ ಪಾತ್ರ ನೀಡಿರುವುದು ಎಲ್ಲರ ಕಣ್ಣರಳಿಸಿದೆ. ಅಣ್ಣಾವ್ರ 87ನೇ ಜನ್ಮದಿನದಂದು ಈ ಚಿತ್ರದ ಫಸ್ಟ್ ಲುಕ್ ಬಿಡುಗಡೆಯಾಗಿದ್ದು, ಶಿವಣ್ಣನವರ ಗೆಟಪ್ ಪ್ರಮುಖ ಆಕರ್ಷಣೆಯಾಗಿತ್ತು, ಕಡತಗಳ ಜೊತೆಗೆ ಕಾಫಿ ಕಪ್ ಹಿಡಿದು ಗಾಢವಾಗಿ ಮಗ್ನವಾಗಿರುವ ಶಿವಣ್ಣನನ್ನು ನೋಡಿಯೇ ಅಭಿಮಾನಿಗಳು ಪುಳಕಗೊಂಡಿದ್ದಾರೆ. ಚಿತ್ರದ ಬಗೆಗಿನ ಕೆಲವು ಸಂಗತಿಗಳನ್ನು ಟ್ವಿಟರ್ ಮೂಲಕ ಹಂಚಿಕೊಂಡಿರುವ ಆರ್.ಜಿ.ವಿ. "ವೀರಪ್ಪನ್ ಭೇಟೆಯ ಹಿಂದಿನ ರಹಸ್ಯ ಆಪರೇಷನ್ ಹಾಲಿವುಡ್‌ನ Zero Dark Thirty ಚಿತ್ರಕ್ಕಿಂತಲೂ ಹೆಚ್ಚು ಥ್ರಿಲ್ಲಿಂಗ್ ಆಗಿದೆ. ಒಸಾಮಾ ಬಿನ್ ಲಾಡೆನ್‌ನನ್ನು ಸಾಯಿಸಲು 10 ವರ್ಷ ತೆಗೆದುಕೊಳ್ಳಲಾಯಿತು, ಅದೇ ವೀರಪ್ಪನನ್ನು ಸಾಯಿಸಲು 25 ವರ್ಷ ಬೇಕಾಯಿತು. ಫೂಲನ್ ದೇವಿ ಕುರಿತ 'ಬ್ಯಾಂಡಿಟ್ ಕ್ವೀನ್' ಚಿತ್ರದಷ್ಟೇ 'ಕಿಲ್ಲಿಂಗ್ ವೀರಪ್ಪನ್' ಚಿತ್ರವೂ ಎಲ್ಲಾ ವರ್ಗದ ಪ್ರೇಕ್ಷಕರನ್ನು ಮುಟ್ಟಲಿದೆ" ಎಂದಿದ್ದಾರಲ್ಲದೆ "ಇದು ಚತುರ್ಭಾಷಾ ಚಿತ್ರವಾಗಿದ್ದು ಕನ್ನಡ, ತೆಲುಗು, ತಮಿಳು ಹಾಗೂ ಹಿಂದಿ ಭಾಷೆಯಲ್ಲಿ ಬಿಡುಗಡೆ ಆಗುತ್ತದೆ" ಎಂದಿದ್ದಾರೆ ಆರ್.ಜಿ.ವಿ.

ಆದರೇ ಕೆಲವು ಗಾಂಧೀನಗರದ ಮಂದಿ ಶಿವಣ್ಣ ಬೇರೆ ಭಾಷೆಯಲ್ಲಿ ಅಭಿನಯಿಸುತ್ತಿರುವುದಕ್ಕೆ ಬೇಸರ ವ್ಯಕ್ತ ಪಡಿಸುತ್ತಿದ್ದಾರೆ. ಅವರ ಪ್ರಕಾರ ರಾಜ್‌ಕುಮಾರ್ ತಮ್ಮ ಸೇವೆಯನ್ನು ಕನ್ನಡಕ್ಕೆ ಮೀಸಲಾಗಿಟ್ಟಿದ್ದವರು. ಬೇರೆ ಭಾಷೆಗಳಿಂದ ದೊಡ್ಡ ದೊಡ್ಡ ನಿರ್ದೇಶಕರು ಅಭಿನಯಿಸುವಂತೆ ಕೇಳಿಕೊಂಡರೂ ಅದನ್ನು ನಯವಾಗಿಯೇ ತಿರಸ್ಕರಿಸಿದ್ದವರು. ಅದರಲ್ಲೂ ಅಮಿತಾಬ್ ಬಚ್ಚನ್ ಅಭಿನಯಿಸಿದ್ದ 'ಕೂಲಿ' ಚಿತ್ರದಲ್ಲಿ ಅಭಿಮಾನಕ್ಕಾದರೂ ಒಮ್ಮೆ ಅಭಿನಯಿಸಿ ಎಂದು ಕೇಳಿಕೊಂಡರೂ ಅವರು ಒಪ್ಪಿಗೆ ನೀಡಿರಲಿಲ್ಲ, ಆದರೇ ಇದೀಗ ಶಿವಣ್ಣ 'ಕಿಲ್ಲಿಂಗ್ ವೀರಪ್ಪನ್' ಚಿತ್ರದಲ್ಲಿ ಕನ್ನಡ ಹೊರತುಪಡಿಸಿ ಬೇರೆ ಭಾಷೆಗಳಲ್ಲಿ ನಟಿಸುತ್ತಿರುವುದು ಹೇಗೆ ಸರಿ? ಎಂದು ಪ್ರಶ್ನಿಸುತ್ತಿದ್ದಾರೆ.

ಅದೇನೆ ಇರಲಿ, ಶಿವಣ್ಣ ಕರ್ನಾಟಕದ ಆಚೆಗೂ ಹೆಸರು ಮಾಡಿದರೆ ನಮ್ಮ ನಾಡಿಗೆ ಹೆಮ್ಮೆ ಅಲ್ಲಾವೇ. ಇದನ್ನ ಅರಿತುಕೊಂಡು ಗಾಂಧೀನಗರದ ಮಂದಿ ಬೇಸರ ವ್ಯಕ್ತ ಪಡಿಸುವ ಬದಲು ಶಿವಣ್ಣನಿಗೆ ಮತ್ತು ಶಿವಣ್ಣನ ಈ ಚಿತ್ರಕ್ಕೆ ಒಳ್ಳೆದಾಗಲಿ ಎಂದು ಆಶಿಸಲಿ. ■


ಸಿಂಧೂ ನಾಗರಿಕತೆ ಹೋಗಿ ಸರಸ್ವತಿ ನಾಗರಿಕತೆ ಆಗುವ ದಿನ ದೂರವಿಲ್ಲ



ಮೋದಿ ಸರ್ಕಾರ ತನ್ನನ್ನು ದಿಲ್ಲಿ ಗದ್ದುಗೆಗೇರಿಸಿದ ಕಾರ್ಪೋರೇಟು ಕುಳಗಳು, ಎನ್ನಾರೈಗಳು ಮತ್ತು ಆರೆಸ್ಸೆಸ್‌ನ ಋಣ ಸಂದಾಯ ಮಾಡುವುದರಲ್ಲೇ ನಿರತವಾಗಿದೆ ಹೊರತು ಅದರ ಬಳಿ ಸರ್ವ ಜನಹಿತದ ಯಾವುದೇ ಕಾರ್ಯಕ್ರಮಗಳು ಇಲ್ಲ, ಅದೀಗ ವಿವಿಧ ಕಾರ್ಮಿಕ ವಿರೋಧಿ, ರೈತ ವಿರೋಧಿ, ಅಲ್ಪಸಂಖ್ಯಾತ ವಿರೋಧಿ ಕಾಯ್ದೆಗಳನ್ನು ಹೇರುತ್ತಾ ದೇಶದ ರೈತರು, ಕಾರ್ಮಿಕರು, ಬಡವರು, ಅಲ್ಪಸಂಖ್ಯಾತರನ್ನು ತೀವ್ರ ಸಂಕಷ್ಟಕ್ಕೀಡುಮಾಡುತ್ತಿದೆ. ಮತ್ತೊಂದೆಡೆ ಹಿಂದೂ ರಾಷ್ಟ್ರ ಸ್ಥಾಪನೆಗೆ ಏನೆಲ್ಲ ಸಿದ್ಧತೆಗಳಾಗಬೇಕೋ ಅವೆಲ್ಲವನ್ನೂ ಕಟಿಬದ್ಧವಾಗಿ ಮಾಡುತ್ತಿದೆ. ಜನರಲ್ಲಿ ಹುಸಿ ರಾಷ್ಟ್ರೀಯತೆಯನ್ನು ಬೆಳೆಸುವುದಕ್ಕಾಗಿ ಭಗವದ್ಗೀತೆಗೆ ರಾಷ್ಟ್ರೀಯ ಧರ್ಮಗ್ರಂಥದ ಸ್ಥಾನಮಾನ, ಸಂಸ್ಕೃತ ಭಾಷೆಗೆ ಅನಗತ್ಯ ಪ್ರಾಮುಖ್ಯತೆ, ಪಠ್ಯಪುಸ್ತಕಗಳ ಕೇಸರೀಕರಣ, ಇತಿಹಾಸದ ತಿರುಚುವಿಕೆಗಳಂತಹ ನಾನಾ ಕಾರ್ಯಕ್ರಮಗಳಿಗೆ ಚಾಲನೆ ನೀಡಲಾಗಿದೆ.

ಇತಿಹಾಸವನ್ನೇ ತೆಗೆದುಕೊಳ್ಳಿ, ಇತಿಹಾಸದ ರಚನೆ ಒಂದು ಊಹಾತ್ಮಕ ಕಾರ್ಯವಲ್ಲ, ನಿರ್ದಿಷ್ಟ ಸ್ಥಾಪಿತ ಮಾನದಂಡಗಳು ಮತ್ತು ಈಗಾಗಲೆ ಸ್ಥಿರೀಕೃತವಾದ ಕಾರ್ಯವಿಧಾನಗಳ ಆಧಾರದಲ್ಲಿ ಸಂಶೋಧನೆಗಳನ್ನು ನಡೆಸಿ ಇತಿಹಾಸವನ್ನು ಕಟ್ಟಲಾಗುತ್ತದೆ. ಪುರಾಣಗಳ ಮೂಲಕ ಸಾಧಿಸಲು ಸಾಧ್ಯವಿರುವ ಸತ್ಯಾಂಶಗಳು ಮತ್ತು ಶುದ್ಧ ಮಿಥ್ಯೆಗಳ ನಡುವಿನ ಮುಖ್ಯ ವ್ಯತ್ಯಾಸಗಳನ್ನು ಈ ರೀತಿಯಾಗಿ ಗುರುತಿಸಲಾಗುತ್ತದೆ ಎಂದು ಇತಿಹಾಸಕಾರ ಎರಿಕ್ ಹಾಬ್ಸ್‌ಬಾಮ್ ಹೇಳುತ್ತಾನೆ. ಆದರೆ ಮೋದಿ ಸರ್ಕಾರದ ಕೃಪಾಶ್ರಯದಲ್ಲಿ ಪುರಾಣವನ್ನೇ ಇತಿಹಾಸವೆಂದು ಬಿಂಬಿಸಿ ಅದನ್ನು ಜನರ ಮನಸ್ಸಲ್ಲಿ ತುರುಕುವ ಯತ್ನಗಳು ಆರಂಭವಾಗಿವೆ. ದೇಶದ ಅತ್ಯುಚ್ಚ ಪ್ರತಿಷ್ಠಿತ ಸಂಸ್ಥೆಗಳಲ್ಲೊಂದಾದ ಭಾರತೀಯ ಇತಿಹಾಸ ಸಂಶೋಧನಾ ಮಂಡಳಿಯ ಅಧ್ಯಕ್ಷ ಸ್ಥಾನ ಮತ್ತು ಸದಸ್ಯತ್ವವನ್ನು ತಮ್ಮದಾಗಿಸಿಕೊಂಡಿರುವ ಹಲವಾರು ಚಿಲ್ರೆ ಇತಿಹಾಸಕಾರರು ಇಂದು ಆ ಸಂಸ್ಥೆಯನ್ನು ತಮ್ಮ ಅಜೆಂಡಾದ ಜಾರಿಗಾಗಿ ದುರುಪಯೋಗಪಡಿಸಲು ಮುಂದಾಗಿದ್ದಾರೆ. ಪರಿಣಾಮವಾಗಿ ಇತಿಹಾಸ ಸಂಶೋಧನಾ ಮಂಡಳಿ ವೇದಕಾಲವೇ ಭಾರತದ ಸುವರ್ಣಯುಗ, ಹಿಂದೂ ಧರ್ಮವೇ ಅತ್ಯಂತ ಶ್ರೇಷ್ಠ ಧರ್ಮವೆಂದು [illegible] ಸಾಧಿಸಲು ಹೊರಟಿದೆ. ಇತ್ತೀಚೆಗೆ ನಡೆದ ಮಂಡಳಿಯ ಸ್ಥಾಪನಾ ದಿನಾಚರಣೆ ಅದರ ಬದಲಾದ ಆದ್ಯತೆಗಳಿಗೆ ಸಾಕ್ಷಿಯಾಗಿದೆ. ಹಿಂದೆಲ್ಲ ಖ್ಯಾತ ಇತಿಹಾಸಕಾರರು ಪ್ರಧಾನ ಭಾಷಣ ಮಾಡುವ ಸಂಪ್ರದಾಯವಿದ್ದರೆ ಈ ಬಾರಿ ಆ ಅವಕಾಶವನ್ನು 'ಆಚಾರ್ಯ' ಡೇವಿಡ್ ಫ್ರಾಲಿ ಎಂಬ ಚಿಲ್ರೆ ಶಿಕ್ಷಕನಿಗೆ ದಯಪಾಲಿಸಲಾಯಿತು. ಈತನಿಗೆ ಈ ಬಾರಿ ಪದ್ಮ ಭೂಷಣ ಪ್ರಶಸ್ತಿ ದಕ್ಕಿರುವ ವಿಚಾರ ನಿಮಗೆ ತಿಳಿದಿರಲಿ. ಈತ ಮೋದಿ ಸರ್ಕಾರಕ್ಕೆ ಆಪ್ತ ಎಂಬುದನ್ನು ಸೂಚಿಸಲು ಇಷ್ಟು ಸಾಕಲ್ಲವೇ? ಈ 'ವೈದಿಕ ಸಂಪ್ರದಾಯದ ಗುರು' ಡೇವಿಡ್ ಫ್ರಾಲಿ ಜೊತೆ 'ನಾಸಾ ವಿಜ್ಞಾನಿ' ನವರತ್ನ ರಾಜಾರಾಮ್ ಎಂಬಾತನನ್ನು ಸೇರಿಸಿರುವ ಸಂಘ ಪರಿವಾರ ಈ ಜೋಡಿಗೆ ಸಿಂಧೂ ಕಣಿವೆಯ ನಾಗರಿಕತೆಯನ್ನು ಸರಸ್ವತಿ ನಾಗರಿಕತೆ ಎಂದು ಬದಲಾಯಿಸುವ ಯೋಜನೆಯ ನೇತೃತ್ವವನ್ನು ವಹಿಸಿದೆ. ಫ್ರಾಲಿ, ರಾಜಾರಾಮ್ ಜೋಡಿ ಪ್ರಸಕ್ತವಾಗಿ ಹರಿಯಾಣದ ಬಿಜೆಪಿ ಸರ್ಕಾರದ ಹೊಚ್ಚಹೊಸ ಯೋಜನೆಯೊಂದರ ಮೇಲೆ ಕೇಂದ್ರೀಕರಿಸಿದೆ. ಅಂದಹಾಗೆ ರಾಜಾರಾಮ್ ಸಿಂಧೂ ನಾಗರಿಕತೆಯ ಸೀಲಿನಲ್ಲಿ ಇಲ್ಲದ ಕುದುರೆಯ ಚಿತ್ರವನ್ನು 'ಸಂಶೋಧಿಸಿ' ಅದು ಆರ್ಯ ನಾಗರಿಕತೆ ಎಂದು ಸಾಧಿಸಲು ಹೊರಟು ಅಂತಾರಾಷ್ಟ್ರೀಯ ಮಟ್ಟದ ಇತಿಹಾಸಕಾರರಿಂದ ಅಪಹಾಸ್ಯಕ್ಕೊಳಗಾದ ವ್ಯಕ್ತಿ!

ಕಣ್ಮರೆಯಾಗಿರುವ ಸರಸ್ವತಿ ನದಿಯನ್ನು ಮತ್ತೆ ಹರಿಸಲು ಹೊರಟಿರುವ ಹರಿಯಾಣ ಸರ್ಕಾರ ಸರಸ್ವತಿ ಉಗಮಿಸಿದ್ದೆನ್ನಲಾದ ಸ್ಥಳವನ್ನು ಶೋಧಿಸುವ ಸಲುವಾಗಿ ಉತ್ಖನನಕ್ಕೆ ಕೂಡ ಶುರು ಮಾಡಿದೆ! ಒಂದು ವೇಳೆ ಈ ಪ್ರಯತ್ನಗಳು ಯಶಸ್ವಿಯಾದವೆಂದು ಇಟ್ಟುಕೊಂಡರೂ ನದಿಯನ್ನು ಪೂರ್ವಕ್ಕೆ ಹರಿಸುವುದೇ ಅಥವಾ ಪಶ್ಚಿಮಕ್ಕೆ ಹರಿಸುವುದೇ ಎಂಬ ಬಗ್ಗೆ ಭಿನ್ನಾಭಿಪ್ರಾಯಗಳು ಏಳುವ ಸಾಧ್ಯತೆಗಳಿವೆ. ಏಕೆಂದರೆ ಸ್ಥಳ ಪುರಾಣದ ಪ್ರಕಾರ ಪ್ರಯಾಗವು (ಈಗಿನ ಅಲಹಾಬಾದ್) ಗಂಗಾ, ಯಮುನಾ ಮತ್ತು ಅದೃಶ್ಯ ಸರಸ್ವತಿ ನದಿಗಳ ಸಂಗಮ ಆಗಿರುವುದರಿಂದ ಸರಸ್ವತಿಯನ್ನು ಪ್ರಯಾಗದ ಕಡೆ ಹರಿಸಬೇಕೆಂದು ಹೇಳುವವರು ಸಾಕಷ್ಟಿದ್ದಾರೆ. ಆದರೆ ಫ್ರಾಲಿ, ರಾಜಾರಾಮ್‌ರ ಬೆಂಬಲಕ್ಕಿರುವ ದೊಡ್ಡ ಗುಂಪು ಸರಸ್ವತಿಯನ್ನು ಪಶ್ಚಿಮ ದಿಕ್ಕಿಗೆ ತಿರುಗಿಸಿ ಸಿಂಧೂ ನದಿಗೆ ಸಮಾನಾಂತರವಾಗಿ ಹರಿಯಿಸಿ ಅರಬೀ ಸಮುದ್ರವನ್ನು ಸೇರುವಂತೆ ಮಾಡಬೇಕು ಎನ್ನುತ್ತಿದೆ. ಸಿಂಧೂ ಕಣಿವೆಯ ನಾಗರಿಕತೆಯನ್ನು ಸರಸ್ವತಿ ನಾಗರಿಕತೆ ಎಂದು ಬದಲಾಯಿಸಿ ಅದು ವೈದಿಕರ ನಾಗರಿಕತೆ; ಆದುದರಿಂದ ಆರ್ಯರೇ ಭಾರತದ ಮೂಲನಿವಾಸಿಗಳು ಎಂದು ಸಾಧಿಸುವುದೇ ಇವರ ಅಂತಿಮ ಉದ್ದೇಶವಾಗಿದೆ. ಈ ದಿಕ್ಕಿನಲ್ಲಿ ಸುಮಾರು 20 ವರ್ಷಗಳಿಂದಲೂ ಕೆಲಸ ಮಾಡುತ್ತಿರುವ ಸಂಘ ಪರಿವಾರ ಈಗಾಗಲೆ ಕೆಲವು "ಸಂಶೋಧನಾ" ಪ್ರಬಂಧ ಮತ್ತು ಕೃತಿಗಳನ್ನೂ ಹೊರತಂದಿದೆ. ಅಂತಿಮವಾಗಿ ಇದೆಲ್ಲವೂ ಇತಿಹಾಸ ಸಂಶೋಧನಾ ಮಂಡಳಿಯನ್ನು ದುರ್ಬಳಕೆ ಮಾಡಿ ಇತಿಹಾಸವನ್ನು ತಿರುಚುವ ಮೂಲಕ ಹಿಂದೂ ಧರ್ಮಕ್ಕೆ ಇಲ್ಲದ ಶ್ರೇಷ್ಠತೆಯನ್ನು ತಂದುಕೊಟ್ಟು ಜನರಲ್ಲಿ ಹುಸಿ ರಾಷ್ಟ್ರೀಯತೆಯನ್ನು ಉದ್ದೀಪಿಸುವ ದೊಡ್ಡ ಹುನ್ನಾರವೊಂದರ ಭಾಗವಾಗಿದೆ. ■



ಅಣ್ಣಾವ್ರ ಗೆಟಪ್‌ನಲ್ಲಿ ಅಪ್ಪು

ಇತ್ತೀಚೆಗೆ ಪುನೀತ್ ರಾಜ್ ಕುಮಾರ್ ಅಭಿನಯದ ಚಿತ್ರಗಳು ಒಂದರ ಹಿಂದೆ ಒಂದರಂತೆ ಘೋಷಣೆಯಾಗುತ್ತಲೇ ಇವೆ. ಇಲ್ಲಿಯತನಕ ಒಂದು ಸಿನಿಮಾ ಸಂಪೂರ್ಣವಾದ ನಂತರ



ಮತ್ತೊಂದು ಸಿನಿಮಾದ ಚಿತ್ರೀಕರಣದಲ್ಲಿ ತೊಡಗಿಸಿಕೊಳ್ಳುತ್ತಿದ್ದ ಪುನೀತ್ ಈಗ ಸರಣಿ ರೀತಿಯಲ್ಲಿ ಚಿತ್ರಗಳನ್ನು ಒಪ್ಪಿಕೊಂಡಿದ್ದಾರೆ. ಜೊತೆಗೆ ಹೊಸ ನಿರ್ದೇಶಕರುಗಳಿಗೆ ಅವಕಾಶ ನೀಡುತ್ತಿದ್ದಾರೆ.

ಕನ್ನಡದ ವರನಟ ಡಾ.ರಾಜ್‌ಕುಮಾರ್ ಅವರ 87ನೇ ಹುಟ್ಟುಹಬ್ಬ (ಏ.24) ದಂದು ಪುನೀತ್ ರಾಜ್‌ಕುಮಾರ್ ಅಭಿನಯದ ಹೊಸ ಚಿತ್ರ 'ರಾಜಕುಮಾರ' ಚಿತ್ರದ ಫಸ್ಟ್ ಲುಕ್ ಬಿಡುಗಡೆಯಾಯಿತು. 'ಕಸ್ತೂರಿ ನಿವಾಸ' ಚಿತ್ರದಲ್ಲಿನ ರಾಜ್‌ಕುಮಾರ್ ಅವರ ಅಮೋಘ ಅಭಿನಯಕ್ಕೆ ಮನಸೋಲದವರಿಲ್ಲ, ಇಂದಿಗೂ ಜನಮಾನಸದಲ್ಲಿ ಅಚ್ಚಳಿಯದ ನೆನಪುಗಳನ್ನು ಉಳಿಸಿರುವ ಚಿತ್ರ 'ಕಸ್ತೂರಿ ನಿವಾಸ'. ಚೆಂಕಿಪೊಟ್ಟಣ ಉದ್ಯಮಿಯ ವಿಫಲ ಪ್ರೇಮಕಥೆಯೇ ಈ ಚಿತ್ರದ ಕಥಾವಸ್ತು.

ಕಪ್ಪು ಬಿಳುಪಿನಲ್ಲಿದ್ದ 'ಕಸ್ತೂರಿ ನಿವಾಸ' ಚಿತ್ರ ಇತ್ತಿಚೆಗಷ್ಟೇ ಕಲರ್‌ನಲ್ಲಿ ಬಿಡುಗಡೆಯಾಗಿ ಭರ್ಜರಿ ಯಶಸ್ಸು ದಾಖಲಿಸಿದ್ದು ಗೊತ್ತೇ ಇದೆ. ಈ ಕ್ಲಾಸಿಕ್ ಚಿತ್ರದಲ್ಲಿ ಬಳಸಿಕೊಂಡಿರುವ ಬಿಳಿ ಪಾರಿವಾಳವೂ ಅಷ್ಟೇ ಹೈಲೈಟ್ ಕೂಡ ಆಗಿದೆ. ಇದೀಗ ಪುನೀತ್ ಅವರು ತಮ್ಮ ಹೊಸ ಚಿತ್ರ 'ರಾಜಕುಮಾರ' ಚಿತ್ರದಲ್ಲಿ ಅದೇ ಗೆಟಪ್‌ನಲ್ಲಿ ಕಾಣಿಸಿಕೊಂಡು ಕುತೂಹಲ ಮೂಡಿಸಿದ್ದಾರೆ. ಹೌದು ಪುನೀತ್ ಅವರು ಥೇಟ್ 'ಕಸ್ತೂರಿ ನಿವಾಸ' ಚಿತ್ರದ ಅಣ್ಣಾವ್ರ ತರಹ ಕಂಗೊಳಿಸುತ್ತಿದ್ದಾರೆ. ಅದೇ ಬಿಳಿ ಪಾರಿವಾಳ, ಅದೇ ಕಪ್ಪು ಕೋಟಿನ ಗೆಟಪ್ ಅಭಿಮಾನಿಗಳನ್ನು ಸೆಳೆಯುತ್ತಿದೆ. 'ಮಿಸ್ಟರ್ ಅಂಡ್ ಮಿಸಸ್ ರಾಮಾಚಾರಿ' ಚಿತ್ರದ ಭರ್ಜರಿ ಯಶಸ್ಸಿನ ಬಳಿಕ ಸಂತೋಷ್ ಆನಂದ್ ರಾಮ್ ಅವರು ಆಕ್ಷನ್ ಕಟ್ ಹೇಳುತ್ತಿರುವ ಚಿತ್ರ ಇದಾಗಿದೆ. ಹೊಂಬಾಳೆ ಫಿಲಂಸ್ ಲಾಂಛನದಲ್ಲಿ ವಿಜಯ್ ಕಿರಗಂದೂರು ಅವರು ಇದನ್ನು ನಿರ್ಮಿಸುತ್ತಿದ್ದಾರೆ. ಅಂದಹಾಗೆ ನಿರ್ಮಾಪಕ ವಿಜಯ್ ಕಿರಂಗದೂರು ಈ ಹಿಂದೆ ಪುನೀತ್ ರಾಜ್‌ಕುಮಾರ್ ಅಭಿನಯದ 'ನಿನ್ನಿಂದಲೇ' ಚಿತ್ರವನ್ನು ನಿರ್ಮಿಸಿದ್ದರು. 'ಕಸ್ತೂರಿ ನಿವಾಸ'ದಂತೆ 'ರಾಜಕುಮಾರ' ಚಿತ್ರವೂ ಸೂಪರ್ ಡೂಪರ್ ಹಿಟ್ ಆಗಲಿ ಎಂದು ಆಶಿಸೋಣ.

ಅಲ್ಲು ಅರ್ಜುನ್‌ಗೆ ಪವನ್ ಒಡೆಯರ್ ನಿರ್ದೇಶನ

ಪವನ್ ಒಡೆಯರ್ ಅವರಿಗೆ ಟಾಲಿವುಡ್‌ನಿಂದ ಮತ್ತೊಂದು ಬಂಪರ್ ಆಫರ್ ಬಂದಿದೆ. ಈಗಾಗಲೆ ತೆಲುಗಿನಲ್ಲಿ ಒಂದು ಚಿತ್ರಕ್ಕೆ ಆಕ್ಷನ್ ಕಟ್ ಹೇಳಿರುವ ಪವನ್ ಅವರಿಗೆ ಇದು ಮತ್ತೊಂದು ಭರ್ಜರಿ ಚಾನ್ಸ್. ತೆಲುಗಿನಲ್ಲಿ ಮೋಸ್ಟ್ ಡಿಮ್ಯಾಂಡ್‌ನಲ್ಲಿರುವ ಸ್ಟಾರ್ ಎನ್ನಿಸಿಕೊಂಡಿರುವ ಅಲ್ಲು ಅರ್ಜುನ್ ಚಿತ್ರಕ್ಕೆ ಪವನ್ ಆಕ್ಷನ್ ಕಟ್ ಹೇಳಲು ಸಿದ್ಧತೆ ನಡೆಸಿದ್ದಾರೆ. ಈ ಹಿಂದೆ 'ಗೋವಿಂದಾಯ ನಮಃ' ಚಿತ್ರವನ್ನು ತೆಲುಗುವಿನಲ್ಲಿ 'ಪೋಟುಗಾಡು' ಎಂದು ರೀಮೇಕ್ ಮಾಡಿದ್ದರು ಪವನ್. ಹೊಸ ಚಿತ್ರದ ವಿವರಗಳು ಇನ್ನಷ್ಟೇ ಹೊರಬೀಳಬೇಕು. ತಮ್ಮ 'ಪೋಟುಗಾಡು' ಚಿತ್ರಕ್ಕೆ ಬಂಡವಾಳ ಹೂಡಿದ್ದ ನಿರ್ಮಾಪಕ ಲಗಡಪತಿ ಬಾಬು ಈ ಬಾರಿಯೂ ಹಣ ಹಾಕುತ್ತಿದ್ದಾರೆ. ಆದರೆ ಇದು ರೀಮೇಕ್ ಅಲ್ಲ ಎಂಬುದು ವಿಶೇಷ.

ನಡು ರಾತ್ರಿ ಲಾಂಚ್ ಆದ ವಿನಯ್ ರಾಜ್‌ಕುಮಾರ್ ಚಿತ್ರ

ತಮ್ಮ ಚೊಚ್ಚಲ ಚಿತ್ರ 'ಸಿದ್ಧಾರ್ಥ'ದ ಮೂಲಕ ಸ್ಯಾಂಡಲ್‌ವುಡ್‌ನ ಗಮನ ಸೆಳೆದ ಅಣ್ಣಾವ್ರ ಕುಟುಂಬದ ಕುಡಿ ವಿನಯ್ ರಾಜ್‌ಕುಮಾರ್ ಅವರ ಹೊಸ ಚಿತ್ರದ ಶೀರ್ಷಿಕೆ ಲಾಂಚ್ ಆಗಿದೆ. ಜೋಗಿ ಪ್ರೇಮ್ ಆಕ್ಷನ್ ಕಟ್‌ನಲ್ಲಿ ಮೂಡಿಬರುತ್ತಿರುವ ಈ ಚಿತ್ರಕ್ಕೆ 'R The King' ಎಂದು ಹೆಸರಿಡಲಾಗಿದೆ. ವರನಟ ಡಾ.ರಾಜ್‌ಕುಮಾರ್ ಅವರ ಹುಟ್ಟುಹಬ್ಬದ ದಿನ ನಡುರಾತ್ರಿ 12.15ಕ್ಕೆ ಕಂಠೀರವ ಸ್ಟುಡಿಯೋದಲ್ಲಿನ ಅಣ್ಣಾವ್ರ ಸಮಾಧಿ ಬಳಿ ಚಿತ್ರದ ಶೀರ್ಷಿಕೆಯನ್ನು ಲಾಂಚ್ ಮಾಡಲಾಯಿತು. ಆ ಲಾಂಚ್‌ಗೆ ಶಿವರಾಜ್‌ಕುಮಾರ್, ರಾಘವೇಂದ್ರ ರಾಜ್‌ಕುಮಾರ್, ಪುನೀತ್ ರಾಜ್‌ಕುಮಾರ್, ವಿನಯ್ ರಾಜ್‌ಕುಮಾರ್ ಸಾಕ್ಷಿಯಾದರು. ಸಂಗೀತ ನಿರ್ದೇಶಕ ಅರ್ಜುನ್ ಜನ್ಯ ಕೂಡ ಉಪಸ್ಥಿತರಿದ್ದರು. "ರಾಜ್‌ಕುಮಾರ್ ಅವರ ಹುಟ್ಟುಹಬ್ಬಕ್ಕೆ ಟೈಟಲ್ ಬಿಡುಗಡೆ ಮಾಡಿದ್ದೇವೆ, ಮೇ.7ರಂದು ವಿನಯ್ ರಾಜ್‌ಕುಮಾರ್ ಅವರ ಹುಟ್ಟುಹಬ್ಬದ ದಿನ ಚಿತ್ರದ ಟೀಸರ್ ಬಿಡುಗಡೆ ಮಾಡುತ್ತೇನೆ. ಜೊತೆಗೆ ಅಣ್ಣಾವ್ರ ಕುಟುಂಬದ 86ನೇ ಚಿತ್ರ ನಿರ್ದೇಶಿಸುವ ಅವಕಾಶ ಸಿಕ್ಕಿದ್ದು ನನ್ನ ಭಾಗ್ಯ" ಎಂದು ನಿರ್ದೇಶಕ ಪ್ರೇಮ್ ಹೇಳಿದರು. ಬಳಿಕ ಮಾತನಾಡಿದ ಶಿವಣ್ಣ "ಎಂಬತ್ತಾರು ಕೂಡಿದರೆ 14 ಬರುತ್ತದೆ, 14+14=28. ಆ 28 ಕೂಡಿದರೆ ಒಂದು ಆಗುತ್ತದೆ. ಅದೇ ರೀತಿ ವಿನಯ್ ನಂಬರ್ ಒನ್ ಆಗಲಿ" ಎಂದು ಹಾರೈಸಿದ್ದರು. ರಾಜ್‌ಕುಮಾರ್ ಸಂಸ್ಥೆ ಅರ್ಪಿಸಲಿರುವ ಈ ಚಿತ್ರವನ್ನು ವಜ್ರೇಶ್ವರಿ ಕಂಬೈನ್ಸ್ ಬದಲಾಗಿ 'ವಜ್ರೇಶ್ವರಿ ಹಾಸ್ಪಿಟಾಲಿಟೀಸ್' ಲಾಂಛನದಲ್ಲಿ ನಿರ್ಮಿಸಲಾಗುತ್ತಿದೆ ಎಂದು ಹೇಳಿದ ರಾಘಣ್ಣ "ರಾಜ್ ಸಂಸ್ಥೆಯ ಚಿತ್ರ ಎಂದರೆ ಕುಟುಂಬ ಸಮೇತ ನೋಡುವ ಚಿತ್ರ ಎಂದೇ ಹೆಸರುವಾಸಿ. ಅದಕ್ಕಾಗಿಯೇ ಪ್ರೇಮ್ ಅವರು ಪ್ರೀತಿ ಮತ್ತು ಶ್ರದ್ಧೆಯಿಂದ ಒಳ್ಳೆ ಕಥೆ ಮಾಡಿದ್ದಾರೆ, ಈ ಚಿತ್ರದಲ್ಲಿ ಬರುವ ಪಾತ್ರಕ್ಕೆ ವಿನಯ್ ಮುಂಬೈನಲ್ಲಿ ತಯಾರಿ ತೆಗೆದುಕೊಂಡು ಬಂದಿದ್ದಾನೆ. ಅಪ್ಪಾಜಿ ಹೇಳುವಂತೆ ಅಭಿಮಾನಿಗಳೇ ಅನ್ನದಾತರು, ಅವರಿಂದಲೇ ನಾವು. ಅಭಿಮಾನಿಗಳು ಒಪ್ಪಿಕೊಂಡು ಸಿನಿಮಾ ನೋಡಿದರೆ ಚಿತ್ರವು ಖಂಡಿತಾ ಹಿಟ್ ಆಗುತ್ತದೆ" ಎಂದು ಹೇಳಿದರು.

ಸಿನಿಮಾ ಸುದ್ದಿ
ಕಾರ್ತಿಕ್ ಸಿ.ಎಸ್



ನಾಗರಕಟ್ಟೆ
ಶ್ರಾವ್ಯ



ವಿವಾದದಲ್ಲಿ ನಟಿ ಮೈತ್ರಿಯಾ ಗೌಡ ಚಿ

ಕೇಂದ್ರ ಕಾನೂನು ಸಚಿವ ಸದಾನಂದ ಗೌಡರ ಪುತ್ರ ಕಾರ್ತಿಕ್ ಗೌಡ ಮ ಮೈತ್ರಿಯಾ ವಿವಾದ ಈಗ ಸ್ಯಾಂಡಲ್‌ವುಡ್‌ಗೆ ವರ್ಗಾವಣೆಯಾಗಿದೆ. ಇದೇನ ಇವರ ವಿವಾದಕ್ಕೂ ಸ್ಯಾಂಡಲ್‌ವುಡ್‌ಗೂ ಏನು ಸಂಬಂಧ ಎಂದುಕೊಂಡ ವಿಷಯ ಏನಪ್ಪ ಅಂದರೆ ನಟಿ ಮೈತ್ರಿಯಾ ಗೌಡ ಹಾಗೂ ನಟ ಕಾರ್ತಿಕ್ ಅಭಿನಯದ 'ಅಕ್ಷತೆ' ಚಿತ್ರದ ಚಿತ್ರೀಕರಣವನ್ನು ನಿಲ್ಲಿಸುವಂತೆ ನಿಷೇಧ ಹೇರಿ ಎಂ ಕಾರ್ತಿಕ್ ಗೌಡ ಫಿಲ್ಮ್ ಚೇಂಬರ್‌ಗೆ ಮನವಿ ಮಾಡಿದ್ದಾರೆ. 'ಅಕ್ಷತೆ' ಚಿತ್ರದ ಐಎಎಸ್ ಅಧಿಕಾರಿ ಡಿ.ಕೆ.ರವಿ ಅವರ ಸಾವಿನ ಸುತ್ತಾ ಹೆಣೆದಿರುವ ಕಥಾ ಹೊಂದಿದೆ ಎಂಬ ಕಾರಣಕ್ಕೆ ವಿವಾದಕ್ಕೆ ಕಾರಣವಾಗಿತ್ತು, ಇದಾದ ಬಳಿಕ ಮೈತ್ರಿಯಾ ಅವರ ಜೀವನ ಕಥೆ ಹೊಂದಿದೆ; ಇದರಲ್ಲಿ ಆಕೆ ಮತ್ತು ಕಾರ್ತಿಕ್ ಗ ನಡುವಿನ ಪ್ರೇಮ ಪ್ರಕರಣ ಎಳೆ ಎಳೆಯಾಗಿ ಬಿಚ್ಚಿಡಲಾಗುತ್ತದೆ ಎಂಬ ಗಾಂಧಿನಗರದ ಗಲ್ಲಿಗಲ್ಲಿಯಲ್ಲಿ ಗಿರಕಿ ಹೊಡೆಯ ತೊಡಗಿತು.

ಈ ಸುದ್ದಿ ಹಾಗೂ ಹೀಗೂ ಕಾರ್ತಿಕ್ ಗೌಡನ ಕಿವಿಗೂ ಬಿದ್ದಿದೆ ತಕ್ಷಣವೇ ಫಿಲ್ಮ್ ಚೇಂಬರ್‌ಗೆ ಪತ್ರ ಬರೆದು ಚಿತ್ರದ ಶೂಟಿಂಗ್‌ಗೆ ಅನು ನೀಡಬಾರದೆಂದು ಮನವಿ ಮಾಡಿಕೊಂಡಿದ್ದಾರೆ. ಜೊತೆಗೆ ಈ ಚಿತ್ರ ಬಿಡುಗಡೆಯಾ ನಮ್ಮ ಕುಟುಂಬದ ಮರ್ಯಾದೆ ಹಾಳಾಗುತ್ತದೆ ಎಂದಿದ್ದಾರೆ. ಇದಕ್ಕೆ ವಾ ಮಂಡಳಿ ಕಾರ್ಯದರ್ಶಿ ಭಾ.ಮಾ.ಹರೀಶ್ ಅವರು "ಸರಿಯಾದ ಕಾರಣವಿ ಸಿನಿಮಾ ನಿಷೇಧ ಅಸಾಧ್ಯ, ಈ ಬಗ್ಗೆ ಚಿತ್ರದ ನಿರ್ದೇಶಕ ರಾಜು ದೇವ ಅವರನ್ನು ಕರೆಸಿಕೊಂಡು ಮಾತನಾಡುತ್ತೇವೆ" ಎಂದು ಸ್ಪಷ್ಟವಾಗಿ ಹೇಳಿದ ಆದರೆ 'ಅಕ್ಷತೆ' ಚಿತ್ರದ ನಿರ್ದೇಶಕ ರಾಜು ಹೇಳುವ ಪ್ರಕಾರ ಇದು ಮೈತ್ರಿ ಗೌಡ ಹಾಗೂ ಕಾರ್ತಿಕ್ ಗೌಡ ಅವರ ಪ್ರೇಮ ಪ್ರಕರಣದ ಕಥೆಯೇ ಅಲ್ಲವ "ನಮ್ಮ ದುಡ್ಡು ಖರ್ಚು ಮಾಡಿಕೊಂಡು ಅವರ ಕಥೆಯನ್ನು ನಾನ್ಯಾಕೆ ಮಾಡ ಚೇಂಬರ್ ಕರೆದರೆ ಅಲ್ಲಿ ನನ್ನ ಕಥೆ ಹೇಳುವೆ. ಇಷ್ಟಕೂ ಕಾರ್ತಿಕ್ ಗೌಡ ಚಿತ್ರದ ಕಥೆಯನ್ನು ಪೂರ್ತಿ ಓದಿದ್ದಾರೆಯೇ? ಚಿತ್ರೀಕರಣ ಆರಂಭಕ್ಕೂ ಪೂರ್ವಾಗ್ರಹ ಪೀಡಿತರಾಗಿ ಚಿತ್ರಕ್ಕೆ ನಿಷೇಧ ಹೇರುವುದು ಎಷ್ಟು ಸರಿ? ಊ ಪೋಹ ಸುದ್ದಿಗಳಿಗೆ ಕಿವಿಗೊಟ್ಟು ನನ್ನ ಕನಸಿನ ಚಿತ್ರಕ್ಕೆ ಕೊಡಲಿ ಪೆಟ್ಟು ನೀಡಬೇ ಎಂದಿದ್ದಾರೆ ನಿರ್ದೇಶಕ ರಾಜು. ಇದಕ್ಕೆ ಪ್ರತಿಕ್ರಿಯಿಸಿರುವ ನಟಿ ಮೈತ್ರಿಯಾ ಚಿತ್ರದಲ್ಲಿ ನನ್ನದು ಗೌಡರ ಹುಡುಗಿಯ ಪಾತ್ರ. ನಾಯಕನ ಪಾತ್ರ ಐ.ಎ. ಅಧಿಕಾರಿಯದ್ದು, ಕಾರ್ತಿಕ್ ಗೌಡ ಐಎಎಸ್ ಅಧಿಕಾರಿಯೇ? ಅಷ್ಟೇ ಅಲ್ಲ ಚಿತ್ರದಲ್ಲಿ ನಾಯಕ ಹಾಗೂ ನಾಯಕಿಗೆ ಚಿಕ್ಕಂದಿನಿಂದಲೂ ಪರಿಚಯ ಇರು ಆದರೆ ಕಾರ್ತಿಕ್ ಮತ್ತು ನನಗೆ ಪರಿಚಯ ಆಗಿದ್ದು ಕೆಲವು ವರ್ಷಗಳ ಹಿ ಸಿನಿಮಾದ ಕಥೆಗೂ ನನ್ನ ಜೀವನದಲ್ಲಿ ನಡೆದ ಘಟನೆಗೂ ಯಾವ ಸಂಬಂಧ ಇಲ್ಲ, ಈ ಬಗ್ಗೆ ಹಬ್ಬಿರುವ ಸುದ್ದಿಗಳೆಲ್ಲವೂ ನಿಜವಲ್ಲ" ಎಂದಿದ್ದಾಳೆ.

ಘರ್‌ವಾಲಿಯಾಗಿ ಸಂಜನಾ

ಸಂಜನಾ ಘರ್‌ವಾಲಿಯಾಗಲಿದ್ದಾರಾ? ಈ ಪ್ರಶ್ನೆಗೆ ಹೌದು ಎನ್ನುತ್ತಿದ್ದಾರೆ ಸಂಜನಾ. ವಿಷಯ ಏನಪ್ಪಾ ಅಂದರೆ ಶಿವಣ್ಣ ಅಭಿನಯದ 'ಕಬೀರ' ಚಿತ್ರ ಸಂಜನಾ ಘರ್‌ವಾಲಿ ಪಾತ್ರದಲ್ಲಿ ಕಾಣಿಸಿಕೊಳ್ಳಲಿದ್ದಾರೆ. ಸಂಜನಾಳ ಪ್ರಕಾರ ಘರ್‌ವಾಲಿ ನರ್ತಕಿಯಾಗಿದ್ದರೂ, ಕಬೀರ್ ದಾಸರನ್ನು ಪ್ರೀತಿಸುವ, ದೇವ ಆರಾಧಿಸುವ ಮತ್ತು ದಾಸ ಪದಗಳನ್ನು ಹಾಡುತ್ತಾ ಜೀವನ ಸಾಗಿಸುವ ಅಪರೂ ಪಾತ್ರವಂತೆ. ಶಿವಣ್ಣನ ಜೊತೆ ನಟಿಸೋದು ಸಂಜನಾಳ ಪಾಲಿಗೆ ಅದೃಷ್ಟ ಯಾಕೆಂದರೆ 'ಮೈಲಾರಿ' ಚಿತ್ರದಲ್ಲಿ ನಟಿಸಿದ ಮೇಲೆ ಆಕೆಗೆ ಒಳ್ಳೆ ಹೆಸರು ಬ ಆಕೆಯ ಇಮೇಜ್ ಬದಲಾಯಿತಂತೆ. "'ಉಮ್ರಾವ್ ಜಾನ್' ಚಿತ್ರದಲ್ಲಿ ರ ಮಾಡಿದ್ದ ಪಾತ್ರದಂತೆ ನನ್ನ ಪಾತ್ರವಿದೆ ಮತ್ತು ಕಬೀರರ ಮೇಲಿನ ಪ್ರೀತಿ ಹೇಳುವ ಹಾಡು ಕೂಡ ಇದೆ" ಎಂದು ಸಂಜನಾ ಹೇಳಿದ್ದಾರೆ.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com